ಪುಸ್ತಕ ಪ್ರಪಂಚ



ಪುಸ್ತಕ ಪ್ರಪಂಚ

ಮಾಸಿಕ

27.1.89

ಪರಿವಿಡಿ

ಪುಸ್ತಕ ವಿಭಾಗ

ಸಂಪುಟ : ೪೩ ಸಂಚಿಕೆ–೬

PUSTAKA PRAPANCHA : Monthly

Published and printed by Karnataka State Adult Eductaion Council, Mysore-4. Price : Rupees five

ಬಿಡಿಪ್ರತಿ : ರೂ. 5

ವಾರ್ಷಿಕ ಚಂದಾ : ರೂ. 30

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 300

ಸಂಸ್ಥೆಗೆ : ರೂ. 500

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು-570 004

ಶ್ರೀಕೃಷ್ಣ ಆಲನಹಳ್ಳಿಗೆ ನುಡಿ ಸ್ಮಾರಕ

ದೇಜಗೌ

ವಿಧಿ ನಿರ್ದಯಿಯೆಂಬುದಂತು ನಿಜ!

ಕನ್ನಡ ಸಾಹಿತ್ಯಾಕಾಶದಲ್ಲಿ ವಿದ್ಯುಲ್ಲೇಖೆಯಂತೆ ಮಿಂಚಿ, ದಕ್ಷಿಣಾನಿಲದಂತೆ ಬೀಸಿ, ಸುಮಭರಿತ ಸುಕೋಮಲ ವಲ್ಲಿಯಂತೆ ಪರಿಮಳವನ್ನೆರಚಿ, ಹೋದೆಡೆ ಬಂದೆಡೆಯಲ್ಲೆಲ್ಲ ಮಧುರ ಸ್ನೇಹದ ಚಂದ್ರಿಕೆಯನ್ನು ಪಸರಿಸುತ್ತಿದ್ದ ಶ್ರೀಕೃಷ್ಣ ಆಲನಹಳ್ಳಿ ಹಠಾತ್ತನೆ ಇಲ್ಲವಾಗಿದ್ದಾನೆ; ಇಹಲೋಕದ ಕರ್ತವ್ಯವನ್ನು ಪೂರೈಸಿ ಕೃತ ಕೃತ್ಯನಾದವನಂತೆ ಅದೃಶ್ಯನಾಗಿದ್ದಾನೆ; ಕಾಣದ ಕೈಗಳು ಆ ಮಂದಾರವನ್ನು ಹಾರಿಸಿಕೊಂಡು ಹೋಗಿವೆ.

ಅದಮ್ಯ ಉತ್ಸಾಹದಿಂದ, ನವೋನವ ಕಾವ್ಯ ಪ್ರತಿಭೆಯಿಂದ, ನಿರಂತರವಾಗಿ ಉಕ್ಕುತ್ತಿದ್ದ ಚೈತನ್ಯದ ಚಿಲುಮೆಯಿಂದ, ಸದಾ ರಂಗುರಂಗಾಗಿ ಪುಟಿಯುತ್ತಿದ್ದ ಉಲ್ಲಾಸದಿಂದ, ಪರರ ಮುಂದೆ ಕುಗ್ಗದ, ಸಗ್ಗದ, ಕುನಿಯದ ಆತ್ಮಪ್ರತ್ಯಯದಿಂದ, ಅನೂನ ಜೀವನ ಶ್ರದ್ಧೆಯಿಂದ ವಿದ್ಯಾರ್ಥಿ ಜೀವನದಲ್ಲಿಯೇ ನಾಡಿನಲ್ಲಿ ಹೆಸರು ಮಾಡಿದ ಫಲ್ಗುಣ ಚೇತನ ಅವನದು. ಸಮಕಾಲೀನ ವಿದ್ಯಾರ್ಥಿ ಸಮೂಹದಲ್ಲಿ ಅತ್ಯಂತ ಉನ್ನತವಾಗಿ ಕಾಣುತ್ತಿದ್ದ ಧೀರ ಧೀಮಂತ ವ್ಯಕ್ತಿಯವನು. ಯಾವ ಸಭೆಯಲ್ಲಾದರೂ ಅವನು ಎತ್ತರವಾಗಿ ಕಾಣುತ್ತಿದ್ದನಲ್ಲದೆ, ಸರ್ವರ ದೃಷ್ಟಿಕೇಂದ್ರ ವಾಗಿರುತ್ತಿದ್ದನು. ಆ ಹೊತ್ತಿಗಾಗಲೇ ಅವನು 'ಮಣ್ಣಿನ ಹಾಡು' ಕವನ ಸಂಕಲನದ ಮೂಲಕ ಸರ್ವಾದರಣೀಯನಾಗಿದ್ದನಲ್ಲದೆ, ಭರವಸೆಯ ಸಾಹಿತಿ ಎಂಬ ಮನ್ನಣೆಗೆ ಪಾತ್ರನಾಗಿದ್ದನು.

ಕೃಷ್ಣನಂಥ ಸೃಜನಶೀಲ ವಿದ್ಯಾರ್ಥಿಗಳಿಗೆ ಎಂ. ಎ. ತರಗತಿಯ ಪಠ್ಯಕ್ರಮ ಬೋಳಾಗಿ, ಬೇಸರವಾಗಿ ಕಂಡರೆ ಆಶ್ಚರ್ಯಪಡ ಬೇಕಾಗಿಲ್ಲ. ಸೃಜನಶೀಲ ಪ್ರತಿಭೆ ಮತ್ತು ಪಾಂಡಿತ್ಯ ಪ್ರಜ್ಞೆಗಳ ನಡುವೆ ಪರಸ್ಪರ ವಿರೋಧವಿರದಿದ್ದರೂ, ಅವು ಒಂದೇ ಶಕ್ತಿಯ ಎರಡು ಮುಖಗಳೆನ್ನಬಹುದಾದರೂ, ಅವುಗಳ ನಡುವೆ ದೊಡ್ಡ

ದೊಂದು ಕಂದರವಿದೆಯೆನ್ನುವುದನ್ನು ಮರೆಯುವಂತಿಲ್ಲ. ಸೃಜನಶೀಲ ಪ್ರತಿಭಾವಂತರ ಬದುಕಿನಲ್ಲಿ ದ್ರಾವಿಡ ಭಾಷಾ ವಿಜ್ಞಾನವಾಗಲಿ, ಸಾಂಸ್ಕೃತಿಕ ಚರಿತ್ರೆಯಾಗಲಿ ನೆರವಾಗು ವಂತಿಲ್ಲ. ಅವುಗಳಿಗೆ ಪರ್ಯಾಯವಾಗಿ ಹೆಚ್ಚು ಸಾಹಿತ್ಯ ಕೃತಿಗಳ ಅಧ್ಯಯನಕ್ಕೆ ಅವಕಾಶ ಕಲ್ಪಿಸುವುದು ಮೇಲು. ಕೃಷ್ಣನಂಥ ವಿದ್ಯಾರ್ಥಿಗಳ ಸಂಪರ್ಕದಿಂದ ತಡವಾಗಿಯಾದರೂ ನಾನು ಈ ನಿರ್ಧಾರಕ್ಕೆ ಬಂದದ್ದುಂಟು. ಯಾವ ಮುಲಾಜೂ ಇಲ್ಲದೆ ಕೃಷ್ಣ ಹಲವು ಸಾರಿ ಪಠ್ಯಕ್ರಮದ ಬಗ್ಗೆ ಬೇಸರ ವ್ಯಕ್ತಪಡಿಸಿದ್ದುಂಟು. 'ಈ ಭಾಷಾವಿಜ್ಞಾನ ನನ್ನ ಮುಂದಿನ ಕಾವ್ಯ ಜೀವನಕ್ಕೆ ಹೇಗೆ ಅನುಕೂಲವಾಗುತ್ತದೆ, ಸಾರ್? ಶಬ್ದಮಣಿ ದರ್ಪಣವೂ ಅಷ್ಟೇ. ನಮ್ಮಂಥವರಿಗೆ ನಾಲ್ಕಾರು ಗಂಟೆಗಳಲ್ಲಿ ಕೆಲವು ಮೂಲಭೂತ ವಿಷಯಗಳನ್ನು ಪರಿಚಯಿಸಿ ಕೊಟ್ಟರೆ ಸಾಕಾಗಿದೆ. ಎಂ. ಎ. ತರಗತಿಯಲ್ಲಿ ಸ್ವಂತಾಧ್ಯಯನಕ್ಕೆ ಸಾಕಷ್ಟು ಅವಕಾಶವಿರಬೇಕು' ಎನ್ನುವ ಅವನ ಮಾತಿನಲ್ಲಿ ವಾಸ್ತವ ಸತ್ಯವಿದ್ದರೂ, ಸಂಪ್ರದಾಯಬದ್ಧರೂ ಪೂರ್ವಗ್ರಹ ಸಿದ್ಧರೂ ಆದ ಪ್ರಾಧ್ಯಾಪಕರು ಅವನ ಮಾತಿಗೆ ಸೊಪ್ಪು ಹಾಕುತ್ತಿರಲಿಲ್ಲ. ದಡಗಳನ್ನು ಕೊಚ್ಚುವ ವರ್ಷ ಋತುವಿನ ಪ್ರವಾಹಕ್ಕೆಣೆಯಾದದ್ದು ಅವನ ಭೀಮ ಭೀಷಣ ಶಕ್ತಿ. ಪಾತ್ರವನ್ನು ಮೀರಿದ ಶಕ್ತಿ ಹತ್ತಾರು ಕಡೆ ಗೊತ್ತುಗುರಿಯಿಲ್ಲದೆ ಹರಿಯುತ್ತಿತ್ತು, ಚೆದರುತ್ತಿತ್ತು. ದುಂದುದುಂದಾಗಿ ವ್ಯಯವಾಗುತ್ತಿತ್ತು. ಸಾಹಿತ್ಯ ರೂಪದಲ್ಲಿ ಉಳಿದಿರುವಂಥವು ಅವನ ಶಕ್ತಿಯಲ್ಲಿ ಕೆಲವು ಹನಿಗಳು ಮಾತ್ರ.

ತನ್ನಲ್ಲಿ ಕೊಳಗೊಂಡಿದ್ದ ಶಕ್ತಿಯ ಅಪಾರತೆಯ ಅರಿವು ಅವನಲ್ಲಿದ್ದದ್ದರಿಂದಲೇ ಅವನ ಆತ್ಮಪ್ರತ್ಯಯ ಪ್ರಚಂಡವಾಗಿತ್ತು. ಒಮ್ಮೊಮ್ಮೆ ಅದು ಅತಿರೇಕಕ್ಕೂ ಹೋಗುತ್ತಿದ್ದದ್ದು ನಿಜ. ಅಂಥ ಸಂದರ್ಭದಲ್ಲವನು ಯಾರ ಮಾತಿಗೂ ಸೊಪ್ಪು ಹಾಕುತ್ತಿರಲಿಲ್ಲ. ಅಧ್ಯಾಪಕರಿರಲಿ, ಯಾವ ಪ್ರಸಿದ್ಧ ಸಾಹಿತಿಯನ್ನಾದರೂ ಮೀರಿಸಬಲ್ಲೆನೆಂಬ ಕೆಚ್ಚು ನೆಚ್ಚುಗಳು ಅವನ ನಡೆನುಡಿಗಳಲ್ಲಿ ವ್ಯಕ್ತಗೊಳ್ಳುತ್ತಿದ್ದುವು. ಸೃಜನ ಕ್ರಿಯೆಯಲ್ಲಿ ಇತರರಿಗಿಂತ ತಾನು ಕಡಮೆಯಲ್ಲವೆಂದು ಹೇಳಿಕೊಳ್ಳುವ ರನ್ನ ಧೈರ್ಯ ಅವನದು. ಇದರಿಂದಾಗಿ ಸಂಪ್ರದಾಯ ಶರಣರು ನಿರೀಕ್ಷಿಸುತ್ತಿದ್ದ ಕೃತ್ರಿಮ ವಿಧೇಯತೆಗೆ ಅವನು ಹೊರಗು. ಹಿರಿಯರ ಬಗ್ಗೆ ಅವನಿಗೆ ಆದರ ಗೌರವಗಳಿದ್ದುವು. ಆದರೆ ಅವೆಂದೂ ಸೋಗುತನವನ್ನು ಮೆರೆಯುತ್ತಿರಲಿಲ್ಲ. ಅವನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದ ಸ್ವಾಭಿಮಾನಿ ಅಧ್ಯಾಪಕರು ಅವನಿಗೆ ಅಹಂಕಾರ ಆರೋಪಿಸುತ್ತಿದ್ದರು. ಆದರವನು ನಿಜಕ್ಕು ಅಹಂಕಾರಿಯಾಗಿರಲಿಲ್ಲ. ಮುನ್ನಣಿಯಿಲ್ಲದ ಮಾತಾಳಿತನದಿಂದಾಗಿ ಅವನು ಆ ಅಪಪ್ರಥೆಗೆ ಗುರಿಯಾಗಿದ್ದನು. ಅವನ ಮಾತಿನಲ್ಲಾಗಲಿ, ಟೀಕೆಯಲ್ಲಾಗಲಿ ಕಹಿಯೊಗರುಗಳಿರಲಿಲ್ಲ; ರೂಕ್ಷ ನಿಷ್ಕಾಪಟ್ಯವಿರುತ್ತಿತ್ತು. ಚಾಡಿಕೋರತನವಾಗಲಿ, ತಂದುಹಾಕುತನವಾಗಲಿ, ಸಂಚು ಹೊಂಚುಗಳಾಗಲಿ ಅವನಲ್ಲಿರಲಿಲ್ಲ. ಹಿಂದೆ ತೆಗಳಿ, ಮುಂದೆ ಹೊಗಳುವ ಅಸಹ್ಯ ವರ್ತನೆಯಂತು ಅವನಲ್ಲಿ ಸೊನ್ನೆ. ಮಾತಾಳಿತನದಿಂದಾಗಿ, ಶಕ್ತಿಯ ದುಂದುವ್ಯಯದಿಂದಾಗಿ ಅವನು ಒಮ್ಮೊಮ್ಮೆ ಇಕ್ಕಟ್ಟಿಗೆ ಸಿಕ್ಕಿಕೊಂಡಾಗ, ನನ್ನ ಬಳಿ ಬಂದು ನಿರ್ಭಯವಾಗಿ ನಿಸ್ಸಂಕೋಚವಾಗಿ ತನ್ನ ಸಮಸ್ಯೆಗೆ ಪರಿಹಾರ ನಿರೀಕ್ಷಿಸುತ್ತಿದ್ದನು.

ನಾನವನ ಭವಿಷ್ಯದ ಬಗ್ಗೆ ಭಾರಿಕನಸು ಕಟ್ಟಿಕೊಂಡವನಾದ್ದರಿಂದ ನನ್ನ ಸಹೋದ್ಯೋಗಿಗಳ ಮಾತನ್ನು ಸಹ ಲೆಕ್ಕಿಸದೆ, ಅವನ ಸಮಸ್ಯೆಗೆ ಪರಿಹಾರ ಕಂಡು ಹಿಡಿಯುತ್ತಿದ್ದೆ.

ಎಂ. ಎ. ಪರೀಕ್ಷೆ ಮುಗಿಸಿದ ನಂತರ ಅವನು ಕೆಲವು ದಿನ ಭಾರತೀಯ ಭಾಷಾ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದು, ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜಿನಲ್ಲಿ ಹಂಗಾಮಿಯಾಗಿ ಕನ್ನಡ ಅಧ್ಯಾಪನ ಕಾರ್ಯ ನಡೆಸುತ್ತಿದ್ದನು. ಆದರೆ ಆ ಹುದ್ದೆಯಲ್ಲಿ ಖಾಯಂಗೊಳಿಸಲು ಸಾಧ್ಯವಾಗದಿದ್ದುದರಿಂದ ಇಂದಿಗೂ ನನಗೆ ಪಶ್ಚಾತ್ತಾಪವಾಗುತ್ತಿದೆ. ನಮಗಿಂತ ಬುದ್ಧಿವಂತರಾದವರನ್ನು ಹತ್ತಿರ ಸೇರಿಸಿಕೊಂಡದ್ದಾದರೆ, ನಮ್ಮ ಕೀರ್ತಿ ಮಸುಳಿಸಬಹುದೆಂಬ ಶಂಕೆ ನಮ್ಮಂಥ ಪ್ರಾಧ್ಯಾಪಕರಲ್ಲಿ ನೆಲೆಗೊಂಡಿರುತ್ತದೆಂಬುದಕ್ಕೆ ಹಲವಾರು ನಿದರ್ಶನಗಳನ್ನು ನೀಡಬಹುದು. ಈ ಶಂಕೆಯ ಜತೆಗೆ ವೈಯಕ್ತಿಕ ದ್ವೇಷ ಪೂರ್ವಾಗ್ರಹಗಳೂ ಇದ್ದೇ ಇರುತ್ತವೆ. ಇವೆಲ್ಲಕ್ಕಿಂತ ಮಿಗಿಲಾಗಿ ಪ್ರಬಲ ಮಹತ್ವಾಕಾಂಕ್ಷಿಗಳನ್ನು ಹತ್ತಿರ ಸೇರಿಸಲು ಮಹತ್ವಾಕಾಂಕ್ಷಿಗಳು ಹೆದರುತ್ತಾರೆ. ಆದರೆ ಒಂದು ವಿಷಯವಂತು ನಿಜ. ಅಧ್ಯಾಪಕ ಹುದ್ದೆ ಅವನಿಗೆ ಖಾಯಮ್ಮಾಗಿ ದೊರೆತಿದ್ದರೆ ಅದರಲ್ಲವನು ಕೊನೆಯತನಕ ಉಳಿಯುತ್ತಿದ್ದನೆ ಎಂಬ ಪ್ರಶ್ನೆ ಅವನ ಜಾಯಮಾನ ಬಲ್ಲವರಿಗೆ ಎದುರಾಗದಿರಲಾರದು. ಅವನು ಯಾವೊಂದು ಕಟ್ಟುಪಾಡಿಗೂ ಮಣಿಯುವ ವ್ಯಕ್ತಿಯಲ್ಲ. ಸಾಮೂಹಿಕ ಶಿಸ್ತಿಗೆ ತನ್ನನ್ನು ವಶಪಡಿಸಿಕೊಳ್ಳುವ ಜಾಯಮಾನ ಅವನದಲ್ಲ. ಅವನಿಗೆ ತನ್ನದೇ ಕಟ್ಟುನಿಟ್ಟು, ನೀತಿ ನಿಯಮವುಂಟು, ರೀತಿ ರಿವಾಜುಗಳುಂಟು. ಆದರೆ ಅವಕ್ಕಾದರೂ ಅವನು ಅಂಟಿಕೊಳ್ಳುತ್ತಾನೆಯೆ? ಇಲ್ಲ. ಬೆಳೆಯುವ ಚೇತನಕ್ಕೆ ಕಟ್ಟುಪಾಡು ಗುದುಮುರಿಗೆಯಾದೀತೆಂಬ ಭಯ ಅವನದು. ಸದಾ ನವೋನವವಾಗಿ ವಿಕಾಸಗೊಳ್ಳಬೇಕಾದ ಬದುಕಿಗೆ ನಿಯಮವೊಂದು ಗುದಿಗೆಯಾಗುತ್ತದೆಂಬ ಶಂಕೆಯೂ ಅವನಿಗುಂಟು. ಕಾಡಿನ ಹಕ್ಕಿಯಂತೆ ನಿರಾತಂಕವಾಗಿ, ನಿರ್ವಿಘ್ನವಾಗಿ, ಸ್ವೇಚ್ಛೆಯಾಗಿ ಹಾರಾಡುವ, ಕುಕಿಲುವ, ಆಟವಾಡುವ ಇಚ್ಛೆ ಅವನ ಸಹಜ ಧರ್ಮ. ಕಲಾವಿದ ಮಿತ್ರರು ಬರುತ್ತಾರೆ, ಅವರೊಡನೆ ಮಾತುಕತೆ ತಿಂಡಿತೀರ್ಥಗಳಲ್ಲಿ ಪಾಲ್ಗೊಳ್ಳಬೇಕು; ದೇಶವಿದೇಶಿಯ ಪ್ರವಾಸಿಗರು ಬರುತ್ತಾರೆ, ಅವರೊಡನಿದ್ದು ಅನುಭವ ವಿನಿಮಯ ಮಾಡಿಕೊಳ್ಳಬೇಕು ; ದೂರದೂರಿನ ಮಿತ್ರರು ಕರೆದಾಗ ಅವರಲ್ಲಿಗೆ ಹೋಗಬೇಕು, ಹೊರಗಣ ಪ್ರಪಂಚವನ್ನು ಮರೆತು ಅವರೊಡನೆ ಸಂತೋಷವಾಗಿ ಕಾಲ ಕಳೆಯಬೇಕು ; ಸ್ಫೂರ್ತಿ ಬಂದಾಗ ಪಾಠಪ್ರವಚನಗಳನ್ನು ಮರೆತು ಬರವಣಿಗೆಯಲ್ಲಿ ತಲ್ಲೀನನಾಗಬೇಕು ; ಮಂತ್ರಿಗಳು ಬಂದು ಹೇಳಿಕಳಿಸಿದರೆ, ತನ್ನ ಕೆಲಸವನ್ನು ಸಹ ಮರೆತು ಅವರ ಬಳಿಗೆ ಹೋಗಬೇಕು–ಇದು ಅವನ ಮರ್ಜಿ. ಇಂಥ ಸಂದರ್ಭದಲ್ಲಿ ಕಾಲೇಜಿನ ನೀತಿ ನಿಯಮಗಳಾಗಲಿ, ಪ್ರಾಂಶುಪಾಲರ ಆಜ್ಞೆಯಾಗಲಿ, ಪ್ರಾಧ್ಯಾಪಕರ ಆದೇಶವಾಗಲಿ ಅವನಿಗೊಗ್ಗುವುದುಂಟೆ? ಈ ಎಲ್ಲ ಕಾರಣಗಳಿಂದಾಗಿ ಅವನು ಅಧ್ಯಾಪಕ ಹುದ್ದೆಯಲ್ಲಿ ಮುಂದುವರಿಯದಿದ್ದುದೇ ಸರಿಯಾಯಿತೆಂದು ತೋರುತ್ತದೆ.

ಕೃಷ್ಣನಂಥ ಮಹತ್ವಾಕಾಂಕ್ಷೆಯ ಸಮರ್ಥ ಸಾಹಸಾರ್ಜುನನನ್ನು, ಗಗನ ವಿಹಾರಾಕಾಂಕ್ಷಿ ಗರುಡನನ್ನು ಗೂಡಿನಲ್ಲಿ ಕೂಡಿಡುವುದೇ ಅವನಿಗೊಂದು ಕ್ರೂರ ಶಿಕ್ಷೆ

ಯಾಗುತ್ತದೆ; ನಾಡುನುಡಿಗಳ ಅಭ್ಯುದಯದ ದೃಷ್ಟಿಯಿಂದ ಅಪರಿಹಾರ್ಯ ನಷ್ಟವಾಗುತ್ತದೆ. ಅಧ್ಯಾಪನ ವೃತ್ತಿ ಅವನನ್ನು ವರಿಸದಿದ್ದರೂ, ಕುಲಕ್ರಮಾಗತವಾಗಿ ಬಂದಿದ್ದ ವ್ಯವಸಾಯ ಅವನಿಗೊಲಿಯುತ್ತದೆ, ಭೂಮಾತೆಯೇ ಕೈಬೀಸಿ, ಕರೆದು, ಅವನನ್ನು ಆಶೀರ್ವದಿಸುತ್ತಾಳೆ, ಅವನನ್ನು ತನ್ನ ಮಡಿಲಲ್ಲಿ ಹಾಕಿಕೊಳ್ಳುತ್ತಾಳೆ. ಸೃಜನ ಶೀಲ ಪ್ರತಿಭಾವಂತ ಕೈಯಿಟ್ಟ ಕ್ಷೇತ್ರ ಹೊನ್ನಾಗುತ್ತದೆ. ಬೇಸಾಯವೂ ಒಂದು ಸೃಜನ ಕಾರ್ಯ, ನಾಡನ್ನು ಪೋಷಿಸುವ ದೇವಕಾರ್ಯ. ಅಚ್ಚುಕಟ್ಟಿನ ಅವನ ತೋಟವನ್ನು ನೋಡಿದಾಗ, ಆ ತೋಟದಲ್ಲಿ ಬೆಳೆದುನಿಂತಿರುವ ಕಲ್ಪವೃಕ್ಷಗಳನ್ನು ದರ್ಶಿಸಿದಾಗ ನಂದನವೆ ಧರೆಗಿಳಿದಂತೆ ಭಾಸವಾಗುತ್ತದೆ; ಸರ್ವಾವಯವಗಳು ಕಣ್ಣಲ್ಲಿ ಒಂದಾಗಿ, ಮನಸ್ಸಿನ ಮೂಲಕ ಆನಂದವನ್ನನುಭವಿಸುತ್ತವೆ, ಒಂದೊಂದು ತರುವೂ ಅವನ ಒಂದೊಂದು ಕವಿತೆಯಂತೆ ಮೆರೆಯುತ್ತಿವೆ.

ರಾಜಕೀಯ ಕ್ಷೇತ್ರವೂ ಅವನನ್ನು ಕೈಬೀಸಿ ಕರೆಯುತ್ತಿತ್ತು; ಅದು ಅವನಿಗೊಂದು ಹವ್ಯಾಸವಾಗಿತ್ತೇಹೊರತು, ವೃತ್ತಿಯಾಗಿರಲಿಲ್ಲ. ಪ್ರಾಯಶಃ ಸೂಕ್ತ ಸಂದರ್ಭಕ್ಕಾಗಿ ಕಾಯುತ್ತಿದ್ದನೆಂದು ತೋರುತ್ತದೆ. ಅವನು ಪ್ರಾರಂಭಕಾಲದಿಂದ ಕಾಂಗ್ರೆಸ್ ಸದಸ್ಯ. ಆದರೆ ಅವನು ಸಾಹಿತಿಯಾದ್ದರಿಂದ ಎಲ್ಲ ಪಕ್ಷಗಳ ನಾಯಕರೂ ಅವನನ್ನು ಪ್ರೀತಿಸುತ್ತಿದ್ದರು, ಅವನ ಮಾತಿಗೆ ಬೆಲೆ ಕೊಡುತ್ತಿದ್ದರು. ಆಡಳಿತ ಪಕ್ಷದ ಕಡೆಗೆ ಜಾರುವ ಅಧಿಕಾರ ಮೋಹಿ ಪಕ್ಷಾಂತರ ರೋಗಕ್ಕೆ ಅವನೆಂದೂ ಬಲಿಯಾದದ್ದಿಲ್ಲ.

ಹರಟೆ ಅವನ ಪ್ರಿಯವಾದ ಹವ್ಯಾಸ. ಒಮ್ಮೊಮ್ಮೆ ಅವನು ಅತಿಶಯೋಕ್ತಿ ಸ್ವಭಾವೋಕ್ತಿಗಳ ನಡುವೆ ತಾರತಮ್ಯ ಮಾಡುತ್ತಿರಲಿಲ್ಲ. ಅವರಿವರ ಸಾಹಿತ್ಯ ಕೃತಿಗಳನ್ನು ಕುರಿತ ಅವನ ಟೀಕೆಯಲ್ಲಿ ಹುಡುಗಾಟಿಕೆಯಿರುತ್ತಿತ್ತಾದರೂ, ಲವಲೇಶವೂ ಮಾತ್ಸರ್ಯ ದ್ವೇಷಗಳಿರುತ್ತಿರಲಿಲ್ಲ. ಅವನ ವಿಮರ್ಶೆಯಲ್ಲಿ ಸ್ವೋಪಜ್ಞತೆಯ ಲಕ್ಷಣಗಳನ್ನು ಗುರುತಿಸಬಹುದಾದರೂ, ಲೋಕಸಮ್ಮತವಾದ ಕಾವ್ಯಮೀಮಾಂಸಾ ಸೂತ್ರಗಳ ಅಧ್ಯಯನದ ಪ್ರಭಾವವನ್ನು ದಟ್ಟವಾಗಿ ಕಾಣಲಾಗದು. ಎಲ್ಲ ಸಾಹಿತಿಗಳಂತೆ ಅವನೂ ಸ್ತೋತ್ರಪ್ರಿಯ. ಆದ್ದರಿಂದ ಸ್ತುತಿಪಾಠಕರ ಕಡೆಗೆ ಅವನು ವಾಲುತ್ತಿದ್ದುದುಂಟು. ಅದು ಅಸಹಜವೇನಲ್ಲ. ಆದರೆ ರಾಜಕೀಯದಲ್ಲಂತೂ ಸಾಹಿತ್ಯಕ್ಷೇತ್ರದಲ್ಲಿಯೂ ಅವನು ಗುಂಪುಗಾರಿಕೆಗೆ ತನ್ನ ಆತ್ಮವನ್ನು ತೆತ್ತುಕೊಂಡವನಲ್ಲ. ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ ಮೊದಲಾದ ಯಾವುದೇ ಹಣೆಪಟ್ಟಿಯನ್ನು ಅವನು ಪ್ರದರ್ಶಿಸಿಕೊಂಡವನಲ್ಲ. ಯಾವುದು ಹೃದಯವನ್ನು ಸೂರೆಗೊಳ್ಳುತ್ತದೆಯೋ, ಯಾವುದು ಮನಸ್ಸನ್ನು ರಮಿಸುತ್ತದೆಯೋ ಅದು ಸಾಹಿತ್ಯ; ಯಾವುದು ಸಮಾಜದ ಲೋಪದೋಷಗಳನ್ನು ಬಯಲುಮಾಡಿ ತಿದ್ದುತ್ತದೆಯೋ ಅದು ಸಾಹಿತ್ಯವೆಂಬ ಸೂತ್ರ ಅವನಿಗೆ ರಕ್ತಗತವಾಗಿತ್ತು; ಆದ್ದರಿಂದ ಅವನು ಯಾವ ಪಂಥಕ್ಕೂ ಅಂಟಿಕೊಳ್ಳದೆ, ಕಾಡೆಲ್ಲವೂ ತನ್ನದೆನ್ನುವ ಸಲಗನಂತೆ ವಿಹರಿಸುತ್ತಿದ್ದನು. ಇತರರ ಕೃತಿಗಳನ್ನು ತನಗೆ ತೋಚಿದಂತೆ ಖಂಡಿಸುವಾಗ, ವ್ಯಕ್ತಿ ಗೌರವವನ್ನು ಮರೆಯುತ್ತಿರಲಿಲ್ಲ. 'ಕವಿ ಕವಿಗೆ ಮುನಿವಂ' ಎಂಬ ಹಳೆಯಗಾದೆ ಅವನ ಜಾಯಮಾನಕ್ಕೆ ತೀರ ವ್ಯತಿರಿಕ್ತವಾಗಿತ್ತು. ಕನ್ನಡ ನಾಡಿನ ಹಿರಿಯ ಕಿರಿಯ ಸಾಹಿತಿಗಳೆಲ್ಲರ ನಿಕಟಸಂಪರ್ಕ ಅವನಿಗಿತ್ತು. ಸಾಹಿತ್ಯ ಕ್ಷೇತ್ರದಲ್ಲಿ ಅದೇತಾನೆ ಅರಳುತ್ತಿದ್ದ

ಮೊಗ್ಗುಗಳನ್ನು ಸಹ ಅವನು ಬಲ್ಲವನಾಗಿದ್ದನು. ಎಲ್ಲರನ್ನು ಏಕ ಪ್ರಕಾರವಾಗಿ ಪ್ರೀತಿಸುವ ವಿಶಾಲ ಮನೋಭಾವ ಅವನದು. 'ಕವಿಗೆ ಕವಿ ಮಣಿವಂ' ಎಂಬೊಂದು ಹೊಸ ಯುಗದ ಹೊಸಗಾದೆಗೆ ಅವನು ಸ್ಫೂರ್ತಿಶಕ್ತಿ ಎನ್ನಬೇಕಾಗಿದೆ.

ಕೃಷ್ಣನಲ್ಲಿ ನಾನು ಕಂಡಿರುವ ಮತ್ತೊಂದು ಉಜ್ವಲಾದರ್ಶ ಗುಣವೆಂದರೆ ನಿರ್ಜಾತೀಯತೆ. ಅವನು ಜಾತೀಯತೆಯ ವಿರುದ್ಧವಾಗಿ ಎಂದೂ ಭಾಷಣ ಬಿಗಿಯಲಿಲ್ಲ, ಲೇಖನ ಬರೆಯಲಿಲ್ಲ; ಆದರೆ ಜಾತ್ಯತೀತನಾಗಿ, ಎಲ್ಲ ಜಾತಿಗಳಲ್ಲೊಂದಾಗಿ, ಎಲ್ಲರಿಗೂ ಬೇಕಾದವನಾಗಿ, ಎಲ್ಲರಿಗೂ ಲೇಸನ್ನು ಬಯಸುತ್ತಿದ್ದ ಪ್ರಾಮಾಣಿಕ ಉದಾರವಾದಿ. ಸ್ವಾರ್ಥಕ್ಕಾಗಿ ಅವನು ನಿರ್ಜಾತೀಯತೆಯ ಸೋಗುಹಾಕಿದವನಲ್ಲ. ಅದು ಅವನ ರಕ್ತದಲ್ಲಿ ರಕ್ತವಾಗಿ, ಅಸ್ಥಿಯೊಳಗಣ ಮೂಲದ್ರವ್ಯವಾಗಿ ಬೆರೆತುಕೊಂಡು ಬಂದಗುಣ. ಮತೀಯತೆಯ ಬಗ್ಗೆಯೂ ಅವನದು ಅಂಥದೇ ನಿಲವು. ಅವನ ಲೆಕ್ಕದಲ್ಲಿ ಮತವೆಂಬುದೇ ಇಲ್ಲದಿರುವಾಗ, ಅದರ ಬಗ್ಗೆ ದಿವ್ಯ ನಿರ್ಲಕ್ಷ್ಯವಿರುವಾಗ, ಯಾವ ಮತವೂ ಅವನ ಹತ್ತಿರ ಸುಳಿಯುತ್ತಿರಲಿಲ್ಲ. ವಿಚಾರವಾದಿಯೆಂದು ಘೋಷಿಸಿಕೊಳ್ಳದೆ ಅವನು ಮೌಢ್ಯ ಸಂಪ್ರದಾಯಗಳನ್ನೆಲ್ಲ ತಿರಸ್ಕರಿಸಿದ್ದನು ; ಮಠ ಆಶ್ರಮ ದೇವಾಲಯಗಳ ಕಡೆಗೆ ಮರೆತು ಕೂಡ ಮುಖ ತಿರುಗಿಸುತ್ತಿರಲಿಲ್ಲ ; ಜಾತೀಯತೆ ಮತೀಯತೆಗಳನ್ನು ಪೋಷಿಸಿ, ದೇಶವನ್ನು ವಿಪತ್ತಿನೆಡೆಗೆ ನೂಕುತ್ತಿರುವ ಕಾವಿಧಾರಿಗಳಿಗೆ ಎಂದೂ ಮಣಿದವನಲ್ಲ.

ಅವನ ಸಾಹಸ ಪ್ರವೃತ್ತಿಗೆ ಹಾಗೂ ಮಿತಿಮೀರಿದ ಉತ್ಸಾಹಕ್ಕೆ ಹಲವಾರು ನಿದರ್ಶನಗಳನ್ನು ನೀಡಬಹುದು. ಇತ್ತೀಚಿನ ಪುಸ್ತಕ ಪ್ರಪಂಚದ ಕೆಲವು ಸಂಚಿಕೆಗಳೇ ಈ ನಿದರ್ಶನಗಳಲ್ಲೊಂದು. ಪ್ರಾರಂಭದಲ್ಲಿ ರೂಪಿಸಿಕೊಂಡ ನಿಯಮೋದ್ದೇಶಗಳಿಗನುಗುಣವಾಗಿ, ಸಮಿತಿಯ ಆರ್ಥಿಕ ಶಕ್ತಿಯನ್ನು ಗಮನದಲ್ಲಿರಿಸಿಕೊಂಡು, ಗ್ರಾಹಕರ ಆಶಯಕ್ಕೆ ಭಂಗಬರದಂತೆ ಪುಸ್ತಕ ಪ್ರಪಂಚ ಸಕ್ರಮವಾಗಿ ಪ್ರಕಟಗೊಳ್ಳುತ್ತಿತ್ತಷ್ಟೆ. ಹೊಸ ಕಾಲಕ್ಕೆ ತಕ್ಕಂತೆ ಅದರ ಗುಣಗಾತ್ರಗಳಲ್ಲಿ ತಕ್ಕಮಟ್ಟಿಗೆ ಬದಲಾವಣೆಯಾಗಬೇಕೆಂಬುದು ಅಂದಿನ ಸಂಪಾದಕ ಮಂಡಲಿಯ ಆಕಾಂಕ್ಷೆಯಾಗಿತ್ತು. ಹೊಸ ಆಡಳಿತ ಅಸ್ತಿತ್ವಕ್ಕೆ ಬಂದು, ಕೃಷ್ಣ ಪುನರ್‌ರಚನೆಗೊಂಡ ಮಂಡಲಿಯ ಗೌರವ ಸಂಪಾದಕನಾದ ನಂತರ ಆ ಪತ್ರಿಕೆಯ ಸ್ವರೂಪವನ್ನೆ ಆಮೂಲಾಗ್ರವಾಗಿ ಬದಲಿಸಬೇಕೆಂದು ಹಠಮಾಡಿದನು. ತನ್ನ ಉತ್ಸಾಹದಭರದಲ್ಲಿ ಅದು ವಯಸ್ಕರ ಶಿಕ್ಷಣ ಸಮಿತಿಯ ಪತ್ರಿಕೆಯೆಂಬುದನ್ನು ಮರೆತು, ಪ್ರಬುದ್ಧ ಕರ್ಣಾಟಕ, ಕರ್ಣಾಟಕ ಭಾರತಿಗಳಿಗೆ ಸಮಾನಾಂತರವಾದ ಪತ್ರಿಕೆಯಾಗಬೇಕೆಂದು ಅವನು ಬಗೆದನು. ಹೊಸದಾಗಿ ನೇಗಿಲಿಗೆ ಹೂಡಿದ ಹೋರಿಗರುಗಳಂತೆ ಅವನ ಉತ್ಸಾಹದ ಉಬ್ಬರ ನಾಲ್ಕಾರು ತಿಂಗಳ ಕಾಲ ಏರುಮುಖವಾಗಿತ್ತು. ಅಂಥ ಪತ್ರಿಕೆಯನ್ನು ನಡಸುವುದರ ಕಷ್ಟ ಏನೆಂಬುದು ಐದಾರು ತಿಂಗಳ ನಂತರ ಅವನಿಗೆ ಮನವರಿಕೆಯಾಗಿರಬೇಕು. ಅದರ ಬಗ್ಗೆ ಅವನ ಉತ್ಸಾಹ ಇಳಿಮುಖವಾಯಿತು. ಒಂದು ಯೋಜನೆಯನ್ನು ರೂಪಿಸಿ, ಅನುಷ್ಠಾನಕ್ಕೆ ತರುತ್ತಿದ್ದಂತೆಯೇ ಅದು ಅವನ ಪಾಲಿಗೆ ಹಳತಾಗುತ್ತದೆ. ಅವನ ಉತ್ಸಾಹ ಸದಾ ಏರುಮುಖವಾಗಿರಬೇಕಾಗಿದ್ದರೆ, ಹೊಸ ಹೊಸ ಸವಾಲುಗಳನ್ನು ಮೇಲಿಂದ ಮೇಲೆ ಅವನೆದುರಿಗೆ ಎಸೆಯುತ್ತಿರಬೇಕು. ಉತ್ಸಾಹ ಅವನ ಬದುಕಿನ ನೆಲೆ ಬೆಲೆ, ಅಂತೆಯೇ ಸೆಲೆ.

ಸಾಹಿತ್ಯ ಲೋಕದಲ್ಲಿ ಅವನ ಹೆಸರು ಅಜರಾಮರವಾಗಿ ಉಳಿಯುತ್ತದೆಂಬುದಂತು
ಸತ್ಯ. ತನ್ನ ಬದುಕಿನ ಇಪ್ಪತ್ತೊಂದನೆಯ ವಯಸ್ಸಿನಲ್ಲಿ (೪–೧–೧೯೮೯ ರಂದು
ತೀರಿಕೊಂಡಾಗ ಅವನ ವಯಸ್ಸು ೪೪ ರ ಸಂಖ್ಯೆಯನ್ನು ಮುಟ್ಟುವುದರಲ್ಲಿತ್ತು)
ಪ್ರಾರಂಭವಾದ ಅವನ ಸಾಹಿತ್ಯಕೃಷಿ ಎರಡು ದಶಕಗಳಿಗು ಮಿಗಿಲಾಗಿ ನಿರಂತರವಾಗಿ
ಸಾಗಿದೆ. ವಿದ್ಯಾರ್ಥಿಯಾಗಿದ್ದಾಗಲೇ ಅವನು ಪ್ರಕಟಿಸಿದ 'ಮಣ್ಣಿನ ಹಾಡು' ಕವನ
ಸಂಕಲನಕ್ಕೆ ರಾಜ್ಯ ಅಕಾಡೆಮಿಯ ಪ್ರಶಸ್ತಿ ದೊರೆತದ್ದು ಸಾಮಾನ್ಯ ಸಂಗತಿಯಲ್ಲ.
ಅವನ ಮುಂದಿನ ಸಾಹಿತ್ಯಕ್ಕೆ ಆ ಸಂಕಲನ ನಾಂದಿಯಂತಿದೆ. ಅವನಿಗರಿವಿದ್ದೋ,
ಇಲ್ಲದೆಯೋ ಅವನ ಸಾಹಿತ್ಯವೆಲ್ಲ ಮಣ್ಣಿನ ಹಾಡಾಗಿದೆ. ಅವನ ಎಲ್ಲ ಕೃತಿಗಳ ವಸ್ತು,
ನಿರೂಪಣಾ ವಿಧಾನ, ಭಾಷೆ, ಪಾತ್ರರಚನೆ–ಎಲ್ಲವೂ ಮಣ್ಣಿನಿಂದ ಮೂಡಿದುವಾಗಿವೆ.
ಹೇಳಿಕೊಳ್ಳದಿದ್ದರೂ, ಅವನ ಎಲ್ಲ ಕೃತಿಗಳಲ್ಲಿ ಮುಂಗಾರಿನ ಮಣ್ಣಿನ ವಾಸನೆ ಎರಚು
ತ್ತದೆ. ಅವನು ನೂರಾರು ಕವಿತೆಗಳನ್ನು ರಚಿಸಿದರೂ, ಅವನ ಹೆಸರನ್ನು ನಾಡಿನಲ್ಲೆಲ್ಲ
ಡಂಗುರಿಸಿದ ಚಿಕ್ಕ ಚೊಕ್ಕ ಕಾದಂಬರಿ 'ಕಾಡು'; ವಾಸ್ತವತೆಯೆ ಅದರ ನೆಲಗಟ್ಟು ;
ಅಲ್ಲಿಯ ಪಾತ್ರಗಳೆಲ್ಲ ಜೀವಂತ ವ್ಯಕ್ತಿಗಳು ; ಓದುಗರ ನೆರೆ ಹೊರೆಯವರು ;
ನಿರೂಪಣೆಯ ಗುರಿ ನೇರ. ಅದರಷ್ಟು ಖ್ಯಾತಿಗಳಿಸಿದ, ಗಳಿಸಿದ ಖ್ಯಾತಿಯನ್ನುಳಿಸಿ
ಕೊಂಡಿರುವ ಕಾದಂಬರಿಗಳು ತೀರ ವಿರಳ. ಮಹತ್ವಾಕಾಂಕ್ಷೆಯ ಅವನ ಮತ್ತೊಂದು
ಕಾದಂಬರಿ 'ಭುಜಂಗಯ್ಯನ ದಶಾವತಾರ' ಓದುಗರ ಮನಸ್ಸನ್ನು ಸೆರೆಹಿಡಿಯುವ
ಸತ್ಕೃತಿಯಾದರೂ 'ಕಾಡು' ವಿನಷ್ಟು ಜನಪ್ರಿಯವಾಗದಿದ್ದುದೇ ಆಶ್ಚರ್ಯ. ಅವನ
ಜ್ವಲಂತ ಪ್ರತಿಭೆಗೆ ಜೀವಸಾಕ್ಷಿಯಾಗಿರುವ ಮತ್ತೊಂದು ಕೃತಿ 'ಪರಸಂಗದ ಗೆಂಡೆತಿಮ್ಮ'.
ಇವುಗಳ ಜತೆಗೆ ಅವನು ರಚಿಸಿರುವ ಹಲವಾರು ಕತೆಗಳು ಅವನ ಹೆಸರನ್ನು ಅಮರ
ಗೊಳಿಸುವ, ಸರ್ವತ್ರ ಬೆಳಗುವ ರತ್ನದೀಪ್ತಿಗಳಾಗಿವೆ.

ಅವನ ಹಲವಾರು ಕತೆ ಕಾದಂಬರಿಗಳು ಸಿನಿಮಾಕರಣಗೊಂಡು, ಜನಮನವನ್ನು ಗೆದ್ದುಕೊಂಡಿವೆಯೆಂಬುದು ಹೆಮ್ಮೆಯ ಸಂಗತಿ. ಬಹು ಜನರ ಮನವನ್ನು ಕುಣಿಸಿ, ಮಣಿಸಿ, ತಣಿಸಿ, ಅಲ್ಲಿ ನೆಲೆಯೂರಿದಾಗಲೇ ಸಾಹಿತ್ಯ ಕೃತಿಗೆ ಸಾರ್ಥಕತೆಯೊದಗುತ್ತದೆ. ಜನಮನದಲ್ಲಿ ನೆಲೆಕಾಣವ ಕೃತಿ ಹುಟ್ಟಿದಾಗಲೇ ಸಾವನುಭವಿಸಿದಂತಾಗುತ್ತದೆ. ಈ ದೃಷ್ಟಿಯಿಂದ ಆಲನಹಳ್ಳಿಯ ಕೃತಿಗಳು ಚಿರಜಾಜ್ವಲ್ಯಮಾನವಾಗಿ ರಾರಾಜಿಸುತ್ತ ವೆಂಬುದರಲ್ಲಿ ಸಂದೇಹವಿಲ್ಲ. ಅವುಗಳಲ್ಲಿ ವಿಶಿಷ್ಟಗುಣವಿದ್ದದ್ದರಿಂದಲೇ ಅವು ಅನ್ಯ ಭಾಷೆಗಳಲ್ಲಿಯೂ ಜನಪ್ರಿಯವಾಗಿವೆ. ಸರಿಸುಮಾರು ಅವನ ಎಲ್ಲ ಕೃತಿಗಳು—ಕವನ ಸಂಕಲನ ಹೊರತಾಗಿ–ಮಲಯಾಳಿ, ತಮಿಳು, ಹಿಂದಿ ಭಾಷೆಗಳಿಗೆ ಅನುವಾದಗೊಂಡಿವೆ. ಕೇರಳದಲ್ಲಂತು ಮಲೆಯಾಳಿ ಭಾಷೆಯ ಅವನ ಕತೆಕಾದಂಬರಿಗಳು ಸಹಸ್ರ ಸಂಖ್ಯೆಯಲ್ಲಿ ಅಚ್ಚಾಗಿವೆ. ಅಲ್ಲಿ ಅವನಷ್ಟು ಪ್ರಸಿದ್ಧಿ ಪಡೆದಿರುವ ಹೊರಗಿನ ಸಾಹಿತಿಗಳು ಇಲ್ಲವೆಂದೇ ಹೇಳಬಹುದು. ಅವನ 'ಕಾಡು' ಇಂಗ್ಲಿಷಿಗೆ ಮಾತ್ರವಲ್ಲ, ಇತ್ತೀಚೆಗೆ ರಷ್ಯನ್ ಭಾಷೆಗೂ ಪರಿವರ್ತನೆಗೊಂಡಿದೆಯೆಂಬುದು ಕನ್ನಡಿಗರು ಹೆಮ್ಮೆಪಡಬಹುದಾದ ಸಂಗತಿ.

ಕೃಷ್ಣ ನನ್ನ ಅಚ್ಚುಮೆಚ್ಚಿನ ಶಿಷ್ಯ, ಮಿತ್ರ ಹಾಗೂ ನನ್ನ ಹಿತೈಷಿ. ಅವನು ಅಭ್ಯುದಯ ಶ್ರೇಣಿಯಲ್ಲಿ ಮೇಲೇರುತ್ತಿದ್ದಂತೆಲ್ಲ ನಾನು ಹೆಮ್ಮೆಗೊಂಡಿದ್ದೇನೆ. ನನ್ನಲ್ಲವನಿಗ

ಅಪಾರ ಗೌರವ. ಯಾವ ಸಭೆಯಲ್ಲಾಗಲಿ ತನ್ನ ಮಾತೇ ನಡೆಯಬೇಕೆಂಬ ಭಾವನೆ ಅವನದು. ಹಲವು ಸಲ ಸಹಪದಸ್ಥರ ಮೇಲೆ ಬೀಳುತ್ತಿದ್ದುದುಂಟು. ಅಂಥ ಸಂದರ್ಭದಲ್ಲಿ 'ಇದೇನು, ಕೃಷ್ಣ? ನಿನ್ನ ಮಾತೇ ನಡೆಯಬೇಕೇನು? ಬೇರೆಯವರಿಗೂ ತಲೆಯಿದೆ ಎಂಬುದನ್ನು ಮರೆಯಬೇಡ' ಎಂದು ನಾನೊಮ್ಮೆ ಗುಡುಗಿದಾಗ, ಗಾರುಡಮಂತ್ರಕ್ಕೆ ಬೆಚ್ಚಿದ ಸರ್ಪದಂತೆ, ಅವನು ತಲೆ ತಗ್ಗಿಸುತ್ತಿದ್ದನು. ಅಂಥ ಕೆಲವು ಸಂದರ್ಭಗಳನ್ನು ನೆನೆದಾಗ, ಅವನ ರಾಜಸಿಕ ಸ್ವಭಾವದ ಹಿನ್ನೆಲೆಯಲ್ಲಿ ಅವಿತುಕೊಂಡಿದ್ದ ಸಾತ್ವಿಕ ಭಾವವನ್ನು ಸ್ಮರಿಸಿಕೊಂಡಾಗ, ಅವನ ರಜೋಗುಣ ಮಂದಸ್ಮಿತ ಅಟ್ಟಹಾಸಗಳಲ್ಲಿ ಪರ್ಯವಸಾನವಾಗುತ್ತಿದ್ದ ಬಗೆಯನ್ನು ಜ್ಞಾಪಿಸಿಕೊಂಡಾಗ ಈ ದುರಂತ ಸನ್ನಿವೇಶದಲ್ಲಿ ದುಗುಡ ಒತ್ತರಿಸುತ್ತದೆ, ಕಣ್ಣಲ್ಲಿ ನೀರು ಉಕ್ಕುತ್ತದೆ. 'ಯುದ್ಧ ಮತ್ತು ಶಾಂತಿ' ಧಾರಾವಾಹಿಯಾಗಿ ಪುಸ್ತಕ ಪ್ರಪಂಚದಲ್ಲಿ ಬರಬೇಕೆಂದು ಹಟ ಹಿಡಿದವನು ಅವನು; ಆ ಮಹಾಕಾದಂಬರಿಯನ್ನು ಪೂರ್ಣವಾಗಿ ಪ್ರಕಟಿಸಬೇಕೆಂದು ಶ್ರೀ ದೇವನೂರು ಶಿವಮಲ್ಲು ಅವರ ಮೇಲೆ ಸ್ನೇಹದ ಒತ್ತಾಯ ತಂದವನು ಅವನು; ರಷ್ಯನ್ ರಾಯಭಾರಿ ಕಚೇರಿಯಿಂದ ಗಣ್ಯ ವ್ಯಕ್ತಿಯೊಬ್ಬರನ್ನು ಬಿಡುಗಡೆ ಸಮಾರಂಭಕ್ಕೆ ಕರೆಸಿ, ಆ ಸಮಾರಂಭವನ್ನು ಕಣ್ಣಾರೆ ನೋಡಬೇಕೆಂದು ಆಶಾಗೋಪುರವನ್ನು ನಿರ್ಮಿಸಿಕೊಂಡಿದ್ದವನು ಅವನು! ಆ ಸಮಾರಂಭ ನಡೆಯುವ ಮುನ್ನವೇ ಕಾಣದ ಕೈಯೊಂದು ಅವನನ್ನು ಕಸಿದುಕೊಂಡು ಹೋಗುತ್ತದೆಂದು ನಾನಂತು ಕನಸುಮನಸಿನಲ್ಲಿ ಊಹಿಸಿಕೊಂಡಿರಲಿಲ್ಲ. ಕೃಷ್ಣನ ಸಾವಿನಿಂದ ಕನ್ನಡ ಸಾರಸ್ವತಲೋಕಕ್ಕೆ ಅಪಾರ ನಷ್ಟವೊದಗಿದೆ; ವೈಯಕ್ತಿಕವಾಗಿ ನನಗಾದ ನಷ್ಟ ಅಳೆಯಲಾಗದ್ದು!

ಗುಣಗಾತ್ರಗಳಲ್ಲಿ ವ್ಯತ್ಯಾಸವಿರಬಹುದೇ ಹೊರತು, ದೌರ್ಬಲ್ಯ ಮುಕ್ತರಾದ ಮಾನವರೆ ವಿರಳ; ಇಲ್ಲವೆಂದರೂ ಸಲ್ಲುತ್ತದೆ. ಕೃಷ್ಣನಲ್ಲಿಯೂ ದೌರ್ಬಲ್ಯಗಳಿದ್ದುವು; ಗುಣ ಗಾತ್ರಗಳಲ್ಲಿಯೂ ಅವು ಮಿಗಿಲಾಗಿದ್ದಿರಬಹುದು. ಆದರೆ ಅವುಗಳನ್ನು ಮೆಟ್ಟಿ, ಪಾತಾಳಕ್ಕೆ ನೂಕುವ ಕಲ್ಯಾಣಗುಣಗಳು ಸಹ ಸಮಪ್ರಮಾಣದಲ್ಲಿದ್ದುವು.

> Let not his frailities be remembered;
> He was a very great man.

ಎಂದು ಸ್ಯಾಮ್ಯುಯಲ್ ಜಾನ್‌ಸನ್ ಗೋಲ್ಡ್‌ಸ್ಮಿತ್‌ನನ್ನು ಕುರಿತು ಹೇಳುವ ಮಾತು ಈ ಸಂದರ್ಭದಲ್ಲಿ ನೆನಪಿಗೆ ಬರುತ್ತವೆ.

> ಬಿಡು ನನ್ನ...ಬಿಡು ನನ್ನ...
> ನಾನೆ ನಾನಾಗುವೆ
> ನನ್ನ ಪಾಡಿಗೆ ನನ್ನ ಬಿಟ್ಟುಬಿಡು.

ಎಂದು ಕೃಷ್ಣ ಎಂದೋ ನುಡಿದ; ಆ ನುಡಿ ಇಂದು ನಿಜವಾಗಿದೆ; ತನ್ನ ಕಾವ್ಯಾರಂಭದಲ್ಲಿಯೇ ಈ ಕಾಣ್ಕೆ ಅವನ ಅರಿವಿಗೆ ಬಂದಿತ್ತೋ ಏನೋ! ಅದೇನೇ ಇರಲಿ,

ತಾನು ಸತ್ತಾಗ, ನನ್ನ ಹೃದಯದಲ್ಲಾಗಬಹುದಾದ, ತನ್ನ ಮಿತ್ರರ ಮನಸ್ಸಿನಲ್ಲಾಗಬಹುದಾದ ತಳಮಳವನ್ನು ಊಹಿಸಿಕೊಂಡು ಅವನು ಕೆಲವು ಪಂಕ್ತಿಗಳನ್ನು ಎಂದೋ ಕವನಿಸಿದಂತಿದೆ. ಆ ಪಂಕ್ತಿಗಳೊಡನೆ ಈ ನುಡಿ ಸ್ಮಾರಕವನ್ನು ಮುಗಿಸುತ್ತೇನೆ.

ಇದುವರೆಗೂ—
ನಿನ್ನಂತೆಷ್ಟೋ ಪ್ರಿಯವಸ್ತುಗಳ ಕಳೆದುಕೊಂಡಿದ್ದರೂ
ನನಗಂತಹ ನೋವು ನಷ್ಟವೇನೂ ಆದಂತೆನಿಸಿರಲಿಲ್ಲ.
ನಿನ್ನಗಲಿದ ಬಳಿಕ ಏಕೊ ನನ್ನೊಳಗೆ ದುಃಖ
ಗೂಡು ಕಟ್ಟಿ, ನೂರು ನೆನಪಿನ ಮೊಟ್ಟೆಗಳನಿಟ್ಟು
ಕಾವು ಕುಳಿತಿದೆ.

ಎಂಥ ವಿಶ್ವಕತ್ತಲೆಯಾದರೂ, ಒಂದು ಹಣತೆಯ ಪ್ರಕಾಶವನ್ನು ನಾಶಗೊಳಿಸಲಾರದು. ಎಂಥ ದುಷ್ಟಶಕ್ತಿಯಾದರೂ ಸತ್ಯದ ಪ್ರಕಾಶವನ್ನು ನಾಶಗೊಳಿಸಲಾರದು.

ಧೈರ್ಯವು ನಮ್ಮ ದೃಷ್ಟಿಯಲ್ಲಿ ಕಟ್ಟಿರಬೇಕು. ಧಾರ್ಮಿಕ ಶಿಕ್ಷಣವಿಲ್ಲದೇ ನಮ್ಮ ನಡೆನುಡಿಗಳಲ್ಲಿ ನೀತಿ ತುಂಬಲಿಕ್ಕಿಲ್ಲ. ನಾಸ್ತಿಕತೆ ನಮಗುಚಿತವಲ್ಲ. ಧಾರ್ಮಿಕ ದೃಷ್ಟಿಗೆ ನಾವು ಮಹತ್ವ ಕೊಡಬೇಕು.

ಗಾಂಧೀಜಿ

ಜೋಸೆಫ್ ಬ್ರಾಡ್‌ಸ್ಕಿ—ಒಂದು ಪರಿಚಯ

ಎ. ಆರ್. ನಾಗಭೂಷಣ

೧೯೮೭ರಲ್ಲಿ ಸಾಹಿತ್ಯಕ್ಕಾಗಿ ನೊಬೆಲ್ ಪ್ರಶಸ್ತಿಯನ್ನು ಗಳಿಸಿದ ಜೋಸೆಫ್ ಬ್ರಾಡ್‌ಸ್ಕಿ ರಷ್ಯಾದ ಲೆನಿನ್‌ಗ್ರಾಡಿನ ಒಂದು ಯೆಹೂದ್ಯ ಕುಟುಂಬದಲ್ಲಿ ೧೯೪೦ರಲ್ಲಿ ಜನಿಸಿದರು. ವ್ಯವಸ್ಥಿತವಾದ ವಿದ್ಯಾಭ್ಯಾಸ ಪದ್ಧತಿ ಇವರಿಗೆ ಬಾಲ್ಯದಿಂದಲೂ ಸರಿಹೋಗಲಿಲ್ಲ. ಮುಂದೆ ಯಾವ ಕೆಲಸವೂ ಇವರ ಮನಸ್ಸಿಗೆ ಒಗ್ಗಲಿಲ್ಲ. ಹೀಗಾಗಿ ಸಮಾಜಕ್ಕೆ ಇವರು ಹೊರೆಯಾಗಿದ್ದಾರೆ ಎಂಬ ಸರ್ಕಾರದ ಆರೋಪವನ್ನು ಇವರು ಹೊರಬೇಕಾಯಿತು. ೧೯೬೪ರಲ್ಲಿ ಈ ಸಂಬಂಧದಲ್ಲಿ ವಿಚಾರಣೆ ನಡೆದು ಐದು ವರ್ಷಗಳ ಕಾಲದ ಶಿಕ್ಷೆಗೆ ಇವರನ್ನು ಗುರಿಪಡಿಸಲಾಯಿತು. ಆದರೆ ಸುಮಾರು ಒಂದೂ ಮುಕ್ಕಾಲು ವರ್ಷದ ನಂತರ ಬಿಡುಗಡೆಗೊಳಿಸಲಾಯಿತು. ರಷ್ಯಾದ ಸಾಮಾಜಿಕ ರಾಜಕೀಯ ವ್ಯವಸ್ಥೆಗೆ ಎದುರು ನಿಂತಿದ್ದರಿಂದ ೧೯೭೨ರಲ್ಲಿ ಇವರು ದೇಶದಿಂದ ಹೊರಬೀಳಬೇಕಾಯಿತು. ಯೂರೋಪಿನಲ್ಲಿ ಕೆಲಕಾಲ ಕಳೆದು ನಂತರ ಅಮೆರಿಕಾಕ್ಕೆ ವಲಸೆ ಹೋಗಿ ಇಂದಿನವರೆಗೂ ಅಲ್ಲೇ ನೆಲೆಸಿದ್ದಾರೆ.

ತಾಯಿನಾಡನ್ನು ಬಿಟ್ಟು ಬೇರೊಂದು ದೇಶದಲ್ಲಿ ಬೇರು ಬಿಡಬೇಕಾದ ಅನಿವಾರ್ಯ ಪರಿಸ್ಥಿತಿ ಉಂಟಾದ್ದರಿಂದಲೇ ಬ್ರಾಡ್‌ಸ್ಕಿ ಅವರ ಕಾವ್ಯದಲ್ಲಿ ಒಬ್ಬ ವಲಸೆಗಾರನ ನೋವು, ನೆನಪು, ಮೌನಗಳೇ ತುಂಬಿವೆ. ದುಃಖ ತುಂಬಿದ ಜೀವನದ ಅನುಭವಗಳೊಡನೆ ಕಾವ್ಯ ಮಾಧ್ಯಮದ ಮುಖೇನ ಇವರು ಮುಖಾಮುಖಿಯಾಗಿದ್ದಾರೆ. ಆದರೆ ಇವರಿಗೆ ಕಾವ್ಯ ಕೇವಲ ವೈಯಕ್ತಿಕ ಕೊರಗನ್ನು ಅಭಿವ್ಯಕ್ತಿಸುವ ಮಾರ್ಗವಾಗಿ ಕಂಡಿಲ್ಲ. ಕಾವ್ಯಕ್ಕೂ, ಸಂಸ್ಕೃತಿಗೂ ನಿಕಟವಾದ ಸಂಬಂಧವಿದೆ ಎಂಬುದು ಇವರ ನಿಲುವು. "ವಾಸ್ತವದಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಕಲೆಯಲ್ಲ. ಬದಲಾಗಿ, ವಾಸ್ತವವನ್ನು ಜೀವಿಸುವಂತೆ ಪ್ರಯತ್ನಿಸುವುದೇ ಕಲೆ" ಎಂದು ಒಂದೆಡೆ ಹೇಳಿದ್ದಾರೆ. ಈ ತಿಳಿವಳಿಕೆಯಿಂದಾಗಿ ಇವರಿಗೆ ತಮ್ಮ ಸಾಂಸ್ಕೃತಿಕ

ಪರಂಪರೆ ಮತ್ತು ಆವರಣಗಳನ್ನು ಚೆನ್ನಾಗಿ ಬಲ್ಲ ಒಳಗಿನವನಂತೆಯೂ, ವಸ್ತುನಿಷ್ಠ ಧೋರಣೆ ತಳೆಯಬಲ್ಲ ಹೊರಗಿನವನಂತೆಯೂ ಏಕಕಾಲಕ್ಕೆ ಗ್ರಹಿಸಲು ಸಾಧ್ಯವಾಗಿದೆ.

ಒಂದು ನಾಗರಿಕತೆ ಶಿಥಿಲವಾದಾಗಲೂ ಅದು ಸಂಪೂರ್ಣವಾಗಿ ಕುಸಿಯದಂತೆ ಕಲೆ, ಸಾಹಿತ್ಯ, ಭಾಷೆಗಳು ಕಾಪಾಡುತ್ತವೆ ಎಂಬುದು ಬ್ರಾಡ್‌ಸ್ಕಿ ಅವರ ದೃಢ ನಂಬಿಕೆ. ಆದ್ದರಿಂದಲೇ ಕಲೆ ಕೇವಲ ಕಲೆ ಅಷ್ಟೇ ಎಂಬುದನ್ನಾಗಲೀ ಅಥವಾ ಕಲೆ ರಾಜಕೀಯ ಉದ್ದೇಶಗಳಿಗೆ ಅನುಗುಣವಾಗಿರಬೇಕೆಂಬುದನ್ನಾಗಲೀ ಇವರು ತಿರಸ್ಕರಿಸುತ್ತಾರೆ. ಕಲೆ, ಇವರ ಪ್ರಕಾರ ಚರಿತ್ರೆಗಿಂತ ಸದಾ ಮುಂದೆ ಇರುತ್ತದೆ.

ಬ್ರಾಡ್‌ಸ್ಕಿ ಅವರ ಮನಸ್ಸಿನ ಮೇಲೆ ಮೊದಲು ಪ್ರಭಾವ ಬೀರಿದವರು ಕಾಫ್ಕಾ, ಪ್ರೂಸ್ಟ್ ಮತ್ತು ವರ್ಜೀನಿಯಾ ವುಲ್ಫ್. ಬೇರೆ ಬೇರೆ ಭಾಷೆಗಳಲ್ಲಿ ಹೆಚ್ಚು ಹೆಚ್ಚು ಓದುತ್ತಾ ಹೋದಂತೆ ಇವರ ಅಭಿಪ್ರಾಯಗಳು ಬದಲಾದವು. ಈಗ ಇವರಿಗೆ ಇಂಗ್ಲಿಷ್‌ನ ಆಡೆನ್ ಮತ್ತು ರಷ್ಯನ್‌ನ ಆ್ಯನಾ ಅಖ್ಮತೋವಾ ತುಂಬ ಪ್ರಿಯರಾದವರು. "ಆಡೆನ್ ೨೦ನೆಯ ಶತಮಾನದ ಅತ್ಯಂತ ಶ್ರೇಷ್ಠ ಮನಸ್ಸು" ಎಂದು ತುಂಬಾ ವಿವಾದಾಸ್ಪದವಾದ ಆದರೆ ಅವರ ಮಟ್ಟಿಗೆ ತೀವ್ರವಾದ ಮಾತನ್ನು ಹೇಳಿದ್ದಾರೆ.

ಬ್ರಾಡ್‌ಸ್ಕಿ ಅವರು ತೀರಾ ಅಮೂರ್ತವಾದ ಅಲೌಕಿಕ ಕವಿಯೂ ಅಲ್ಲ, ಒಣ ಲೌಕಿಕ ಕವಿಯೂ ಅಲ್ಲ. ಈ ಎರಡು ಧ್ರುವಗಳ ಸಮತೋಲನ ಇವರ ವಿಶಿಷ್ಟ ಗುಣವಾಗಿದೆ. ವೈಯಕ್ತಿಕವಾಗಿ ವಿಶ್ಲೇಷಣೆಗಿಂತ ಅಂತರ್ದೃಷ್ಟಿಗೆ ಇವರ ಕಾವ್ಯ ಧರ್ಮ ಒಗ್ಗಿಕೊಂಡಿದೆ. ಇವರಿಗೆ ಬೈಬಲ್ ಒಂದು ಶಕ್ತಿ ಪ್ರಭಾವದ ಮೂಲವಾದರೂ ತಮ್ಮ ಕಾವ್ಯ ಬೋಧಪ್ರದವಾಗಿ ಸೊರಗದಂತೆ ಕಾಯ್ದುಕೊಂಡಿದ್ದಾರೆ. ಇವರ ಇನ್ನೊಂದು ವಿಶೇಷವೆಂದರೆ ಇವರಿಗೆ ರಷ್ಯನ್, ಇಂಗ್ಲಿಷ್, ಸ್ಪ್ಯಾನಿಷ್, ಪೋಲಿಷ್ ಭಾಷೆಗಳ ಜ್ಞಾನ ಆಳವಾಗಿದ್ದರೂ ಸಾಮಾನ್ಯವಾಗಿ ಕಾವ್ಯವನ್ನು ರಷ್ಯನ್‌ನಲ್ಲೂ, ವಿಮರ್ಶೆಯನ್ನು ಇಂಗ್ಲಿಷ್‌ನಲ್ಲೂ ಬರೆಯುತ್ತಾರೆ. ಜೊತೆಗೆ ಹಲವು ಮೆಟಫಿಸಿಕಲ್ ಪದ್ಯಗಳನ್ನು ಇಂಗ್ಲಿಷ್‌ನಿಂದ ರಷ್ಯನ್‌ಗೆ ಅನುವಾದಿಸಿದ್ದಾರೆ.

ಕಳೆದ ವರ್ಷ ಇವರಿಗೆ ಕೇವಲ ೪೭ ವರ್ಷಗಳಾಗಿದ್ದಾಗ ನೊಬೆಲ್ ಸಾಹಿತ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ದೈಹಿಕ ಸಖ್ಯದ ಮೂಲಕ ಆತ್ಮ ಸಖ್ಯವನ್ನು ಸಾಧಿಸುವುದೇ ವಿವಾಹದ ಗುರಿ.

ಗಾಂಧೀಜಿ

ಕಾವ್ಯದ ರಾಜಕೀಯ

ಜೋಸೆಫ್ ಬ್ರಾಡ್‌ಸ್ಕಿ

ಸರ್ವಾಧಿಕಾರತ್ವದಲ್ಲಿ ಹುತಾತ್ಮನೋ, ಪ್ರಖ್ಯಾತನೋ ಆಗುವುದಕ್ಕಿಂತ ಪ್ರಜಾಪ್ರಭುತ್ವದಲ್ಲಿ ಪೂರ್ಣ ಸೋಲನ್ನು ಅನುಭವಿಸುವುದು ಒಳ್ಳೆಯದು. ತನ್ನನ್ನು ತಾನು ಅರಿತುಕೊಳ್ಳಲು ತಾಯಿನಾಡಿನಿಂದ ಹೊರಹೋದ ಸಂಕೋಚದ ವ್ಯಕ್ತಿಯೊಬ್ಬನಿಗೆ ಇದ್ದಕ್ಕಿದ್ದಂತೆ ಈ ವೇದಿಕೆಯ ಮೇಲೆ ಬರಬೇಕಾಗಿರುವುದು ಮುಜುಗರದ ಮತ್ತು ಕಷ್ಟದ ಅನುಭವ.

ನನ್ನಂತಹವನಿಗೆ ವ್ಯವಸ್ಥಿತವಾಗಿ ಚಿಂತಿಸುವುದು ಸಾಧ್ಯವಿಲ್ಲ. ಒಂದು ವೇಳೆ ಸಾಧ್ಯವಿದ್ದರೂ ಆ ವ್ಯವಸ್ಥೆ ಒಂದು ಸಾಮಾಜಿಕ ಆವರಣದಿಂದಲೋ, ಬಾಲ್ಯದಲ್ಲಿ ಓದಿದ ತತ್ತ್ವಶಾಸ್ತ್ರದಿಂದಲೋ ಎರವಲು ಪಡೆದುಕೊಂಡದ್ದಾಗಿರುತ್ತದೆ. ಒಬ್ಬ ಕಲಾವಿದನಿಗೆ ತನ್ನ ಗುರಿಯನ್ನು ಸಾಧಿಸಲು ತಾನು ಬಳಸುವ ಮಾರ್ಗದ ನಿರಂಕುಶತೆಯನ್ನು ಸೃಜನಶೀಲ ಪ್ರಕ್ರಿಯೆ ಮತ್ತು ಬರೆಯುವ ಪ್ರಕ್ರಿಯೆಗಳಷ್ಟು ಇನ್ನಾವುದೂ ದೃಢೀಕರಿಸುವುದಿಲ್ಲ. ಆ್ಯನಾ ಅಖ್ಮತೋವಾ ಹೇಳುವಂತೆ ಕಾವ್ಯ ಬೆಳೆಯುವುದು ಕೊಳಚೆಯಿಂದ; ಗದ್ಯದ ಮೂಲವೂ ಇದಕ್ಕಿಂತ ಹೆಚ್ಚಿನ ಗೌರವಾನ್ವಿತವಾದದ್ದೇನಲ್ಲ.

ಕಲೆ ಏನನ್ನಾದರೂ ಬೋಧಿಸುತ್ತಾದರೆ ಅದು ಮನುಷ್ಯಸ್ಥಿತಿಯ ಖಾಸಗಿತನ. ಮನುಷ್ಯನ ಖಾಸಗಿ ಪ್ರಯತ್ನದ ಅತ್ಯಂತ ಹಳೆಯ ಮತ್ತು ಅತ್ಯಂತ ಸಹಜ ರೂಪವೇ ಕಲೆ. ತಿಳಿದೋ ತಿಳಿಯದೆಯೋ ಇದು ಮನುಷ್ಯನ ಅನನ್ಯತೆಯನ್ನೂ ವ್ಯಕ್ತಿತ್ವವನ್ನೂ ಭಿನ್ನತೆಯನ್ನೂ ಪೋಷಿಸುತ್ತದೆ. ಹೀಗಾಗಿ ಇದು ಅವನ ಸಾಮಾಜಿಕತೆಯನ್ನು 'ನಾನು' ಎಂಬುದಕ್ಕೆ ತಿರುಗಿಸುತ್ತದೆ. ಅನೇಕ ವಸ್ತುಗಳನ್ನು ಮನುಷ್ಯರು ಹಂಚಿಕೊಳ್ಳಬಹುದು ; ಹಾಸಿಗೆ, ಬ್ರೆಡ್‌ನ ತುಣುಕು, ತಾತ್ವಿಕ ನಂಬಿಕೆಗಳು, ಹೆಣ್ಣು ; ಆದರೆ ಒಂದು ಪದ್ಯವನ್ನು ಹೀಗೆ ಹಂಚಿಕೊಳ್ಳಲಾಗುವುದಿಲ್ಲ. ಯಾವುದೇ ಕಲೆ,

ಮುಖ್ಯವಾಗಿ ಸಾಹಿತ್ಯ, ಇನ್ನೂ ನಿರ್ದಿಷ್ಟವಾಗಿ ಕಾವ್ಯ ಮನುಷ್ಯನನ್ನ ಉದ್ದೇಶಿಸು ತ್ತದೆ, ಅವನೊಡನೆ ನೇರ ಸಂಬಂಧದಲ್ಲಿ ತೊಡಗುತ್ತದೆ.

ಭಾಷೆ ಮತ್ತು ಸಾಹಿತ್ಯ ಸಾಮಾಜಿಕ ವ್ಯವಸ್ಥೆಯ ಯಾವುದೇ ರೂಪಕ್ಕಿಂತ ಹೆಚ್ಚು ಪ್ರಾಚೀನವಾದವು, ಅನಿವಾರ್ಯವಾದವು ಮತ್ತು ಹೆಚ್ಚು ಕಾಲ ಉಳಿಯುವವು. ಸರ್ಕಾರದ ಬಗ್ಗೆ ಸಾಹಿತ್ಯ ವ್ಯಕ್ತಪಡಿಸುವ ಹೇಸಿಗೆ, ವ್ಯಂಗ್ಯ ಮತ್ತು ನಿರ್ಲಕ್ಷ್ಯಗಳು ಮೂಲಭೂತವಾಗಿ ಕ್ಷಣಿಕ ಮತ್ತು ಪರಿಮಿತವಾದದ್ದರ ವಿರುದ್ಧ ಶಾಶ್ವತ ಮತ್ತು ಅನಂತ ವಾದದ್ದು ತೋರಿಸುವ ಪ್ರತಿಕ್ರಿಯೆ. ಎಲ್ಲಿಯ 'ತನಕ ಸಾಹಿತ್ಯದಲ್ಲಿ ಸರ್ಕಾರ ಮಧ್ಯ ಪ್ರವೇಶಿಸುತ್ತದೋ ಅಲ್ಲಿಯತನಕ ಸರ್ಕಾರದಲ್ಲಿ ಮಧ್ಯ ಪ್ರವೇಶಿಸಲು ಸಾಹಿತ್ಯಕ್ಕೆ ಹಕ್ಕಿದೆ.

ಸರ್ಕಾರದ ತಾತ್ತ್ವಿಕತೆ ಮತ್ತು ನೀತಿ (ಅದರ ಸೌಂದರ್ಯ ತತ್ತ್ವವನ್ನು ಬಿಟ್ಟು ಬಿಡೋಣ) ಯಾವತ್ತೂ 'ನಿನ್ನೆ'; ಭಾಷೆ ಮತ್ತು ಸಾಹಿತ್ಯ ಯಾವತ್ತೂ 'ಇಂದು'; ಸಾಂಪ್ರದಾಯಿಕ ರಾಜಕೀಯ ವ್ಯವಸ್ಥೆ ಇರುವೆಡೆ ಇವು 'ನಾಳೆ' ಕೂಡಾ. ಸಾಹಿತ್ಯದ ಒಂದು ಮುಖ್ಯ ಗುಣವೆಂದರೆ ಮನುಷ್ಯನಿಗೆ ತನ್ನ ಅಸ್ತಿತ್ವದ ಕಾಲವನ್ನು ಹೆಚ್ಚು ಖಚಿತಗೊಳಿಸುವುದು ಮತ್ತು ಅವನನ್ನು ತನ್ನ ಪೂರ್ವಿಕರ ಗುಂಪಿನಿಂದ ಪ್ರತ್ಯೇಕಿಸು ವುದು.

ಕಲೆ–ನಿರ್ದಿಷ್ಟವಾಗಿ ಸಾಹಿತ್ಯ–ಮಹತ್ತರವಾಗಿರುವುದು ಮತ್ತು ಜೀವನದಿಂದ ಭಿನ್ನವಾಗಿರುವುದು ಏಕೆಂದರೆ ಅದು ಪುನರಾವರ್ತನೆಯನ್ನು ತಿರಸ್ಕರಿಸುತ್ತದೆ. ಒಂದು ಜೋಕನ್ನು ಮೂರು ಸಲ ಹೇಳಿ ಪ್ರತಿಯೊಂದು ಸಲವೂ ನಗುವನ್ನು ಉಕ್ಕಿಸಿ, ಒಬ್ಬ ಒಂದು ಪಾರ್ಟಿಯ ಜೀವವಾಗಿಬಿಡಬಹುದು. ಆದರೆ ಇದು ಕಲೆಯಲ್ಲಿ 'ಕ್ಲೀಷೆ'ಯಾಗು ತ್ತದೆ. ಕಲೆ ಎಂದೂ ಹಿಮ್ಮೆಟ್ಟದ ಒಂದು ಅಸ್ತ್ರ; ಇದರ ಬೆಳವಣಿಗೆಯನ್ನು ನಿರ್ಧರಿಸು ವುದು ವಸ್ತುವಿನ ಕ್ರಿಯಾಶೀಲತೆ ಮತ್ತು ತರ್ಕವೇ ಹೊರತು ಕಲಾವಿದನ ವ್ಯಕ್ತಿತ್ವವಲ್ಲ. ತನ್ನದೇ ಆದ ಪರಂಪರೆ ಕ್ರಿಯಾಶೀಲತೆ, ತರ್ಕ ಮತ್ತು ಭವಿಷ್ಯವನ್ನು ಹೊಂದಿರುವ ಕಲೆ ಚರಿತ್ರೆಗೆ ಸಮಾಂತರವಾಗಿರಬಹುದೇ ವಿನಃ ಪರ್ಯಾಯವಲ್ಲ. ಆದ್ದರಿಂದಲೇ ಇದು ಪ್ರಗತಿಗಿಂತ ಎಂದೂ ಮುಂದಿರುತ್ತದೆ; ಕ್ಲೀಷೆಯನ್ನೇ ಸಾಧನವಾಗಿಟ್ಟುಕೊಳ್ಳುವ ಚರಿತ್ರೆ ಗಿಂತಲೂ ಮುಂದಿರುತ್ತದೆ.

ಬರಹಗಾರ, ಅದರಲ್ಲೂ ಕವಿ, ಬೀದಿಯ ಭಾಷೆಯನ್ನು ಬಳಸಬೇಕೆಂಬ ವಿಚಾರ ಈಚೀಚೆಗೆ ಪ್ರತಿಪಾದನೆಯಾಗುತ್ತಿದೆ. ಮೇಲ್ನೋಟಕ್ಕೆ ಜನಪರವಾಗಿ ತೋರುವ ಈ ಮಾತು ಅರ್ಥಹೀನವಾದುದು. ಇದು ಕಲೆಯನ್ನು, ಈ ಸಂದರ್ಭದಲ್ಲಿ ಸಾಹಿತ್ಯವನ್ನು ಚರಿತ್ರೆಗೆ ಅಡಿಯಾಳಾಗಿಸುವ ಪ್ರಯತ್ನ. ಮನುಷ್ಯನಿಗೆ ಇನ್ನು ಬೆಳವಣಿಗೆಯ ಅಗತ್ಯವೇ ಇಲ್ಲವೆಂಬ ತೀರ್ಮಾನಕ್ಕೆ ಬಂದ ಮೇಲಷ್ಟೇ ಸಾಹಿತ್ಯ ಜನರ ಭಾಷೆಯನ್ನಾಡಬೇಕು. ಇಲ್ಲವಾದಲ್ಲಿ, ಜನರೇ ಸಾಹಿತ್ಯದ ಭಾಷೆಯನ್ನಾಡಬೇಕು.

ಒಟ್ಟಿನಲ್ಲಿ ರಸಾಭಿಜ್ಞ ವಾಸ್ತವತೆ (ಈಸ್ಥೆಟಿಕ್ ರಿಯಲಿಸಂ) ಮನುಷ್ಯನ ನೈತಿಕ ವಾಸ್ತವವನ್ನು ಹೆಚ್ಚು ನಿರ್ದಿಷ್ಟಗೊಳಿಸುತ್ತದೆ. ಏಕೆಂದರೆ ರಸಾಭಿಜ್ಞತೆ ನೈತಿಕತೆಯ ತಾಯಿ. ನೈತಿಕತೆಯಲ್ಲಿ ಯಾವುದಕ್ಕಾದರೂ ನಿಷೇಧವಿದ್ದ ಅವಕ್ಕೆ ಕಾರಣ, ರಸಾಭಿಜ್ಞತೆ

ಯಲ್ಲೂ ಅವಕ್ಕೆ ನಿಷೇಧವಿರುತ್ತದೆ. ಚಿಕ್ಕಮಗು ಅಪರಿಚಿತನನ್ನು ಕಂಡಾಗ ಸಹಜವಾಗಿಯೆ ಅಳುತ್ತದೆ, ಹಿಂಜರಿಯುತ್ತದೆ. ಇದು ಮಗುವಿನ ರಸಾಭಿಜ್ಞ ಆಯ್ಕೆ, ನೈತಿಕ ಆಯ್ಕೆ ಅಲ್ಲ.

ಒಬ್ಬ ವ್ಯಕ್ತಿಯ ರಸಾಭಿಜ್ಞ ಅನುಭವ ಗಟ್ಟಿಯಾಗಿದ್ದಷ್ಟೂ ಅವನ ಅಭಿರುಚಿಯ ಮಟ್ಟ, ನೈತಿಕತೆಯ ಮೊನಚು, ಸ್ವಾತಂತ್ರ್ಯ (ಈ ಪಟ್ಟಿಗೆ ಸಂತೋಷ ಸೇರದಿರಬಹುದಾದರೂ) ಹೆಚ್ಚಾಗಿರುತ್ತದೆ. ಈ ಅರ್ಥದಲ್ಲಿ–ದಾರ್ಶನಿಕ ಅರ್ಥದಲಲ್ಲ–ದಾಸ್ತೊವಸ್ಕಿಯ "ಸೌಂದರ್ಯ ಪ್ರಪಂಚವನ್ನು ಕಾಪಾಡುತ್ತದೆ" ಎಂಬ ಮಾತನ್ನೂ ಮ್ಯಾಥ್ಯೂ ಅರ್ನಾಲ್ಡನ "ಕಾವ್ಯ ನಮ್ಮನ್ನು ಕಾಯುತ್ತದೆ" ಎಂಬ ನಂಬಿಕೆಯನ್ನೂ ನಾವು ತಿಳಿದುಕೊಳ್ಳಬೇಕು. ಪ್ರಾಯಶಃ ಜಗತ್ತಿಗೆ ಈಗಾಗಲೇ ನಿಧಾನವಾಗಿ ಹೋಗಿದೆಯಾದರೂ ವ್ಯಕ್ತಿಗೆ ಇನ್ನೂ ಅವಕಾಶವಿದೆ. ವ್ಯಕ್ತಿಯಲ್ಲಿ ರಸಾಭಿಜ್ಞ ಅಭಿರುಚಿ ಶೀಘ್ರವಾಗಿ ಬೆಳೆಯುತ್ತದೆ. ತಾನು ಯಾರೆಂಬ, ತನ್ನ ಅಗತ್ಯಗಳೇನೆಂಬ ಪೂರ್ಣ ತಿಳುವಳಿಕೆ ಇಲ್ಲದಿದ್ದರೂ ಅವನಿಗೆ ತಾನು ಏನು ಇಷ್ಟಪಡುವುದಿಲ್ಲ, ತನಗೆ ಏನು ಹೊಂದಿಕೊಳ್ಳುವುದಿಲ್ಲ ಎಂಬುದು ತೀರ ಸಹಜವಾಗಿ ಗೊತ್ತಾಗುತ್ತದೆ. ಪುನಃ ಹೇಳಬಯಸುತ್ತೇನೆ: ಮನುಷ್ಯ ನೈತಿಕ ಜೀವಿಗಿಂತ ಮೊದಲು ರಸಾಭಿಜ್ಞ ಜೀವಿ.

ಆದ್ದರಿಂದಲೇ ಕಲೆ ಮನುಷ್ಯ ಜನಾಂಗದ ಬೆಳವಣಿಗೆಯ ಉಪೋತ್ಪನ್ನವಲ್ಲ; ಇದು ತಿರುಗುಮುರುಗಾಗಬೇಕು. ಇತರ ಪ್ರಾಣಿಗಳಿಗಿಂತ ನಮ್ಮನ್ನು ಭಿನ್ನವಾಗಿಸುವುದು ಭಾಷೆ ಮತ್ತು ಸಾಹಿತ್ಯ. ಭಾಷೆಯ ಅತ್ಯಂತ ಶ್ರೇಷ್ಠ ರೂಪವಾದ ಕಾವ್ಯವೇ ಮನುಷ್ಯ ಜನಾಂಗದ ಗುರಿ.

ಕಲೆ ಒಂದು ಸಮಾಜದ ಅಲ್ಪಸಂಖ್ಯಾತರ ವಿಶೇಷ ಅಧಿಕಾರವಾಗಿಬಿಟ್ಟರೆ ಆ ಸಮಾಜದ ಸ್ಥಿತಿ ಅನಾರೋಗ್ಯಕರವಷ್ಟೇ ಅಲ್ಲ, ಅಪಾಯಕಾರಿಯೂ ಆಗಿರುತ್ತದೆ. ಒಂದು ಸರ್ಕಾರವನ್ನು ಗ್ರಂಥಾಲಯದಿಂದ ಪಲ್ಲಟಗೊಳಿಸಬೇಕೆಂದು (ಆಗಾಗ ಈ ಯೋಚನೆ ನನಗೆ ಬಂದಿದ್ದರೂ) ನಾನು ಹೇಳುತ್ತಿಲ್ಲ. ಆದರೆ ನಾವು ನಮ್ಮ ನಾಯಕರನ್ನು ಅವರ ರಾಜಕೀಯ ಕಾರ್ಯಕ್ರಮಗಳಿಗೆ ಬದಲಾಗಿ ಅವರ ಓದಿನ ವಿಸ್ತಾರದ ಆಧಾರದ ಮೇಲೆ ಆಯ್ಕೆ ಮಾಡಿದ್ದರೆ ಪ್ರಪಂಚದಲ್ಲಿ ಇಷ್ಟು ದುಃಖ ಇರುತ್ತಿರಲಿಲ್ಲವೆಂದು ನನ್ನ ದೃಢ ನಂಬಿಕೆ. ನಮ್ಮ ಭವಿಷ್ಯವನ್ನು ರೂಪಿಸುವ ಸಾಮರ್ಥ್ಯವುಳ್ಳ ಯಾವುದೇ ನಾಯಕನನ್ನು ಅವನ ವಿದೇಶಾಂಗ ನೀತಿಯ ಬಗ್ಗೆ ಕೇಳಬಾರದು; ಸ್ತೆಂದಾಲ್, ಡಿಕನ್ಸ್ ದಾಸ್ತೊವಸ್ಕಿಯವರ ಬಗ್ಗೆ ಅವನ ದೃಷ್ಟಿಕೋನಗಳು ಏನು ಎಂಬುದನ್ನು ನಾವು ಕೇಳಬೇಕು. ಮನುಷ್ಯ ಜನಾಂಗದ ವೈವಿಧ್ಯತೆ ಮತ್ತು ವಕ್ರತೆಗಳೇ ಸಾಹಿತ್ಯದ ಜೀವ. ಮನುಷ್ಯನ ಅಸ್ತಿತ್ವದ ಸಮಸ್ಯೆಗಳಿಗೆ ಸಾರಾಸಗಟು ಪರಿಹಾರವನ್ನು ನೀಡುವ ಪ್ರಯತ್ನಕ್ಕೆ ಇದು ಸರಿಯಾದ ಔಷಧಿ. ನೈತಿಕತೆಯ ರಕ್ಷಕನಾಗಿ ನಂಬಿಕೆಗಳ ಒಂದು ವ್ಯವಸ್ಥೆಗಿಂತ, ತಾತ್ವಿಕ ಸಿದ್ಧಾಂತಕ್ಕಿಂತ ಸಾಹಿತ್ಯವೇ ಹೆಚ್ಚು ನಂಬಲರ್ಹವಾದದ್ದು. ಯಾವುದೇ ಕಾನೂನು ನಮ್ಮನ್ನು ನಮ್ಮಿಂದ ರಕ್ಷಿಸಲು ಸಾಧ್ಯವಿಲ್ಲವಾದ್ದರಿಂದ. ಸಾಹಿತ್ಯದ ವಿರುದ್ಧ ಮಾಡುವ ಅಪರಾಧವನ್ನು ಯಾವ ದಂಡಶಾಸನವೂ ತಪ್ಪಿಸಲಾರದು. ಸಾಹಿತ್ಯವನ್ನು ತುಳಿಯುವುದನ್ನು, ಬರಹಗಾರರನ್ನು ಹಿಂಸಿಸುವುದನ್ನು, ಸೆನ್ಸಾರ್‌ಶಿಪ್ ಅನ್ನು,

ಪುಸ್ತಕಗಳನ್ನು ಸುಡುವುದನ್ನು ನಾವು ವಿರೋಧಿಸಬಹುದು. ಆದರೆ ಅತ್ಯಂತ ಹೀನವಾದ ಒಂದು ಕ್ರಿಯೆಯ ಮುಂದೆ ನಾವು ನಿಶ್ಯಸ್ತ್ರರಾಗುತ್ತೇವೆ. ಪುಸ್ತಕಗಳನ್ನು ಓದದಿರುವುದೇ ಆ ಹೀನ ಕ್ರಿಯೆ. ಈ ಅಪರಾಧವನ್ನು ಎಸಗುವ ವ್ಯಕ್ತಿ ತನ್ನ ಇಡೀ ಜೀವಮಾನವನ್ನು ಬೆಲೆಯಾಗಿ ತೆರುತ್ತಾನೆ. ಈ ಕೃತ್ಯವನ್ನು ಒಂದು ದೇಶ ಮಾಡಿದರೆ ಅದು ಚರಿತ್ರೆಯ ಮೂಲಕ ಬೆಲೆಯನ್ನು ತೆರುತ್ತದೆ. ರಷ್ಯಾದ ದುರಂತವೆಂದರೆ ಅಲ್ಲಿ ಸಾಹಿತ್ಯ ಅಲ್ಪ ಸಂಖ್ಯಾತರ, ಪ್ರಖ್ಯಾತ ಬುದ್ಧಿಜೀವಿಗಳ ವಿಶೇಷ ಅಧಿಕಾರವಾಗಿಬಿಟ್ಟಿದೆ.

ಡಿಕನ್ಸ್‌ನನ್ನು ಓದಿದ ವ್ಯಕ್ತಿಗೆ ತನ್ನ ಸ್ವಂತ ಇಚ್ಛೆಯನ್ನು ಒಂದು ವಿಚಾರದ ನೆಪದಲ್ಲಿ ಮಂಡಿಸುವುದು ಡಿಕನ್ಸ್‌ನನ್ನು ಓದದ ವ್ಯಕ್ತಿಗಿಂತ ಕಷ್ಟಕರವಾದದ್ದೆಂದೇ ನನ್ನ ನಂಬಿಕೆ. ಡಿಕನ್ಸ್, ಸ್ಟರ್ನ್, ಸ್ಟೆಂದಾಲ್, ದಾಸ್ತೊವಸ್ಕಿ, ಫ್ಲಾಬೆ, ಬಾಲ್ಸಾಕ್, ಮೆಲ್‌ವಿಲ್, ಪ್ರೂಸ್, ಮ್ಯೂಸಿಲ್ ಮುಂತಾದವರನ್ನು ಓದುವುದರ ಬಗ್ಗೆ ಹೇಳುತ್ತಿದ್ದೇನೆ; ಅರ್ಥಾತ್, ಸಾಹಿತ್ಯದ ಬಗ್ಗೆ ಹೇಳುತ್ತಿದ್ದೇನೆಯೇ ಹೊರತು ಅಕ್ಷರಜ್ಞಾನ ಅಥವಾ ಶಿಕ್ಷಣದ ಬಗ್ಗೆ ಅಲ್ಲ. ಅಕ್ಷರ ಬಲ್ಲ ವಿದ್ಯಾವಂತ ಒಂದು ರಾಜಕೀಯ ಅಥವಾ ಧಾರ್ಮಿಕ ಗ್ರಂಥವನ್ನು ಓದಿದ ಮೇಲೆ ತನ್ನ ವೈಯುಕ್ತಿಕ ಇಚ್ಛೆಯನ್ನು ಕೊಲ್ಲಬಹುದು. ಹೀಗೆ ಮಾಡುವಾಗ ಅವನು ಒಂದು ತಾತ್ತ್ವಿಕ ನಿರ್ಧಾರವನ್ನು ತೆಗೆದುಕೊಳ್ಳುತ್ತಿರುವ ಭಾವಾವೇಶದ ಸ್ಥಿತಿಯಲ್ಲಿರಬಹುದು. ಲೆನಿನ್, ಸ್ಟಾಲಿನ್, ಹಿಟ್ಲರ್ ಎಲ್ಲರೂ ಅಕ್ಷರ ಜ್ಞಾನ ಉಳ್ಳವರೇ; ಮಾವೋ ಪದ್ಯಗಳನ್ನು ಸಹಾ ಬರೆದ. ಆದರೆ ಇವರೆಲ್ಲರೂ ತಮ್ಮ ಪುಸ್ತಕಗಳ ಪಟ್ಟಿಗಿಂತ ಉದ್ದವಾದ ಹೊಡೆಪಟ್ಟಿಯನ್ನು (Hit list) ಇಟ್ಟುಕೊಂಡಿದ್ದರು.

ಈಗಾಗಲೇ ಸರ್ವವೇದ್ಯವಾಗಿರುವ ವಿಷಯದ ಬಗ್ಗೆ ಪ್ರವಚನಗಳನ್ನು ನೀಡುವುದರ ಅಪಾಯವೆಂದರೆ ಅವು ತಮ್ಮ ಸುಲಭತೆಯ ಮೂಲಕ ಆತ್ಮಸಾಕ್ಷಿಯನ್ನು ಕೆಡಿಸುತ್ತವೆ. ನಾವು ಸರಿಯಾಗಿದ್ದೇವೆಂಬ ಮನೋಸ್ಥಿತಿಯನ್ನು ಉಂಟುಮಾಡಿ ನಮಗೆ ನೈತಿಕ ನೆಮ್ಮದಿಯನ್ನು ಕೊಡುತ್ತವೆ. ಇದೇ ಇವುಗಳ ಪ್ರಲೋಭನೆ. ಈ ಪ್ರಲೋಭನೆಯ ಸ್ವರೂಪ ಸಾಮಾಜಿಕ ಸುಧಾರಣಾವಾದಿಗಿರುವ ಪ್ರಲೋಭನೆಯ ಸ್ವರೂಪದಂತೆಯೇ ಇರುತ್ತದೆ. "ಆಶ್‌ವಿಟ್ಜ್‌ನಂತೆ ಸಂಗೀತವನ್ನು ರಚಿಸುವುದು ಯಾರಿಂದಾದರೂ ಸಾಧ್ಯವೇ?" ಎಂದು ಆಡಾರ್ನೊ ಕೇಳುತ್ತಾನೆ. ರಷ್ಯಾದ ಚರಿತ್ರೆಯನ್ನು ಬಲ್ಲವರು ಹೆಸರುಗಳನ್ನು ಬದಲಾಯಿಸಿ ಇದೇ ಪ್ರಶ್ನೆಯನ್ನು ಪುನಃ ಪುನಃ ಕೇಳಬಹುದು. ಏಕೆಂದರೆ ಜರ್ಮನಿಯ ಕ್ಯಾಂಪ್‌ಗಳಲ್ಲಿ ಸತ್ತವರಿಗಿಂತ ಹೆಚ್ಚು ಜನ ಸ್ಟಾಲಿನ್ ಕಾಲದಲ್ಲಿ ಸತ್ತರು. ಅಮೆರಿಕಾದ ಕವಿ ಮಾರ್ಕ್ ಸ್ಟ್ರ್ಯಾಂಡ್ ಒಮ್ಮೆ ಕೇಳಿದ: "ಊಟ ಮಾಡುವುದು ಹೇಗೆ ಸಾಧ್ಯ?"

ಒಂದು ಪದ್ಯವನ್ನು ಬರೆಯಲು ಕವಿಗೆ ಹಲವಾರು ಕಾರಣಗಳಿರುತ್ತವೆ: ತನ್ನ ಪ್ರಿಯತಮೆಯನ್ನು ಒಲಿಸಿಕೊಳ್ಳಲು, ಸುತ್ತಣ ವಾಸ್ತವದ ಬಗ್ಗೆ (ಅದು ಪ್ರಕೃತಿಯೇ ಆಗಿರಲಿ, ಸರ್ಕಾರವೇ ಆಗಿರಲಿ) ತನ್ನ ದೃಷ್ಟಿಕೋನವನ್ನು ಅಭಿವ್ಯಕ್ತಿಸಲು, ಒಂದು ನಿರ್ದಿಷ್ಟ ಗಳಿಗೆಯಲ್ಲಿದ್ದ ತನ್ನ ಮಾನಸಿಕ ಸ್ಥಿತಿಯನ್ನು ಸೆರೆಹಿಡಿಯಲು ಮತ್ತು ಪ್ರಪಂಚದಲ್ಲಿ ತನ್ನ ಗುರುತನ್ನು ಬಿಟ್ಟು ಹೋಗಲು. ಅವನು ಪದ್ಯದ ಮೊರೆ ಹೋಗುವುದಕ್ಕೆ

ಪ್ರಾಯಶಃ ಅನುಕರಣೆಗೆ ಸಂಬಂಧಪಟ್ಟ ಸುತ್ತು ಕಾರಣಗಳಿವೆ. ಬಿಳಿ ಹಾಳೆಯ ಮೇಲೆ ಮೇಲಿಂದ ಕೆಳಗೆ ಮೂಡುವ ಪದಗಳು ಅವನಿಗೆ ಪ್ರಪಂಚದಲ್ಲಿ ತನ್ನ ಸ್ಥಿತಿಯನ್ನು ನೆನಪಿಸುತ್ತವೆ. ಪದ್ಯ ಬರೆಯುವ ಪ್ರಯತ್ನದ ತತ್‌ಕ್ಷಣದ ಪರಿಣಾಮವೆಂದರೆ ಪದ್ಯದ ಮೇಲೆಯೇ ಅವಲಂಬಿತನಾಗಿಬಿಡುವ ಮನೋಸ್ಥಿತಿ ಕವಿಗೆ ಉಂಟಾಗುವುದು. ಈ ಅವಲಂಬನೆ ಸಮಗ್ರವಾದದ್ದು ಮತ್ತು ಯಾವ ಅಡೆತಡೆ ಇಲ್ಲದ್ದು. ಏಕೆಂದರೆ ಭಾಷೆಗೆ ಪ್ರಾಪಂಚಿಕ ಸಾಮರ್ಥ್ಯದಿಂದ ಪ್ರಾಪ್ತವಾದ ಅಗಾಧ ಶಕ್ತಿ ಇರುತ್ತದೆ. ಈ ಸಾಮರ್ಥ್ಯ ಪದ್ಯದ ಗುಣಮಟ್ಟದ ಆಧಾರದ ಮೇಲೆ ನಿಲ್ಲುತ್ತದೆಯೇ ಹೊರತು ಆ ಭಾಷೆಯನ್ನಾಡುವ ದೇಶದ ಮೇಲಲ್ಲ.

ಯಾವುದೇ ಭಾಷೆಯಲ್ಲಿ ಇವತ್ತು ಬರೆಯುವುದರಿಂದ ಭವಿಷ್ಯದಲ್ಲಿ ಆ ಭಾಷೆಗೆ ಅಸ್ತಿತ್ವ ದಕ್ಕುತ್ತದೆ. ಆ ಭಾಷೆಯ ಅಸ್ತಿತ್ವದ ಸಾಧನವೇ ಕವಿ ಅಥವಾ ನನ್ನ ಪ್ರಿಯ ಆಡೆನ್ ಹೇಳಿದಂತೆ, ಕವಿಯಿಂದ ಭಾಷೆ ಬದುಕುತ್ತದೆ.

ಕವಿಗೆ ತನ್ನನ್ನು ಮೀರಿ ತನ್ನ ಕಾವ್ಯ ಉಳಿಯುತ್ತದೆ ಎಂಬ ಭರವಸೆ ಇದ್ದರೂ ಭವಿಷ್ಯದಲ್ಲಿ ತನಗೆ ಖ್ಯಾತಿ ಸಿಗಬಹುದೆಂಬುದು ಅವನು ಬರೆಯುವುದಕ್ಕೆ ಕಾರಣವಲ್ಲ. ಅವನ ಭಾಷೆ ಅವನ ಪದ್ಯದ ಸಾಲುಗಳನ್ನು ಪ್ರೇರಿಸುತ್ತದೆ ಅಥವಾ ಆಜ್ಞಾಪಿಸುತ್ತದೆ. ಪದ್ಯ ಹೇಗೆ ಮುಕ್ತಾಯವಾಗಬಹುದೆಂದು ಪ್ರಾರಂಭದಲ್ಲಿ ಅವನಿಗೇ ಗೊತ್ತಿರುವುದಿಲ್ಲ. ಅವನು ಅಂದುಕೊಂಡಿದ್ದಕ್ಕಿಂತ ಉತ್ತಮವಾದ ಮುಕ್ತಾಯ ಪದ್ಯಕ್ಕೆ ಸಿಕ್ಕಿಬಿಡಬಹುದು ; ಇದರಿಂದ ಅವನು ಚಕಿತನಾಗಬಹುದು. ಒಮ್ಮೊಮ್ಮೆ ಅವನ ಚಿಂತನೆಗಳು ಅವನು ಎಣಿಸಿದ್ದಕ್ಕಿಂತ ಮುಂದೆ ಹೋಗಿಬಿಡಬಹುದು. ಇಂತಹ ಗಳಿಗೆಗಳಲ್ಲಿ ಭಾಷೆಯ ಭವಿಷ್ಯ ಅದರ ವರ್ತಮಾನದ ಮೇಲೆ ಧಾಳಿ ಮಾಡುತ್ತದೆ.

ಎಲ್ಲರಿಗೂ ತಿಳಿದಿರುವಂತೆ ಮೂರು ರೀತಿಯ ಗ್ರಹಿಕೆಗಳಿವೆ: ವಿಶ್ಲೇಷಣೆ, ಅಂತರ್ದೃಷ್ಟಿ ಮತ್ತು ಬೈಬಲ್ಲಿನ ಪ್ರವಾದಿಗಳಿಗೆ ತಿಳಿದಿದ್ದ ದಿವ್ಯಜ್ಞಾನ. ಕಾವ್ಯ ಈ ಮೂರನ್ನು ಒಟ್ಟಾಗಿ ಉಪಯೋಗಿಸುವುದರಿಂದ ಸಾಹಿತ್ಯದ ಇತರ ಪ್ರಕಾರಗಳಿಗಿಂತ ಭಿನ್ನವಾಗಿರುತ್ತದೆ. ಎಲ್ಲಾ ಭಾಷೆಗಳಲ್ಲೂ ಈ ಮೂರು ರೀತಿಯ ಗ್ರಹಿಕೆಗಳಿರುತ್ತವೆ. ಕೆಲವು ಸಲ ಒಂದು ಪದ ಪ್ರಯೋಗದಿಂದ, ಒಂದು ಪ್ರಾಸದಿಂದ ಯಾರೂ ಕಾಣದಂತಹ ಮತ್ತು ತಾನೇ ಅಪೇಕ್ಷೆಪಟ್ಟಿರದಂತಹ ಸ್ಥಿತಿಯನ್ನು ಕವಿ ತಲುಪುತ್ತಾನೆ. ಕಾವ್ಯ ರಚನೆ ಅವನ ಆತ್ಮಸಾಕ್ಷಿಯನ್ನೂ ಅವನು ಜಗತ್ತನ್ನು ಪರಿಭಾವಿಸುವುದನ್ನೂ ತೀವ್ರಗೊಳಿಸುವ ಅಸಾಧಾರಣ ಪ್ರಕ್ರಿಯೆ. ಈ ತೀವ್ರತೆಯನ್ನು ಒಮ್ಮೆ ಅನುಭವಿಸಿದವನು ಇನ್ನೊಮ್ಮೆ ಅನುಭವಿಸುವ ಅವಕಾಶವನ್ನು ಬಿಡಲಾರ. ಈ ಪ್ರಕ್ರಿಯೆಯ ಮೇಲೆ ಅವನು ಅವಲಂಬಿತನಾಗುತ್ತಾನೆ, ಮಾದಕದ್ರವ್ಯ ಮತ್ತು ಮದ್ಯದ ಮೇಲೆ ಹಲವರು ಅವಲಂಬಿತರಾಗುವಂತೆ. ಭಾಷೆಯ ಮೇಲೆ ಹೀಗೆ ಅವಲಂಬಿತನಾಗುವವನೇ ಕವಿ.

(ಇದು ನೊಬೆಲ್ ಪ್ರಶಸ್ತಿ ಸ್ವೀಕಾರ ಸಮಾರಂಭದಲ್ಲಿ ಮಾಡಿದ ಭಾಷಣ)

ಅನು : ಎ. ಆರ್. ನಾಗಭೂಷಣ

ಆರ್ಕಿಮಿಡೀಸ್

ಎಚ್. ಸಂಜೀವಯ್ಯ

ವೈಜ್ಞಾನಿಕ ಸತ್ಯವನ್ನು ಪ್ರಯೋಗಗಳಿಂದ ಸಮರ್ಥಿಸಬೇಕೆಂದು ಮೊದಲು ಸಾರಿದವನು ಆರ್ಕಿಮಿಡೀಸ್. ಎಲ್ಲ ಘಟನೆಗಳೂ ಒಂದಲ್ಲ ಒಂದು ನಿಯಮಕ್ಕೆ ಬದ್ಧವಾಗಿ ನಡೆಯುತ್ತವೆ ಎಂದು ಅವನು ನಂಬಿದ್ದ. ವಿಜ್ಞಾನವನ್ನು ಜನಹಿತಕ್ಕೆ ಬಳಸಬೇಕೆಂದು ತಿಳಿಸಿ ಅವನು ತಂತ್ರಜ್ಞಾನಕ್ಕೆ ಅಡಿಪಾಯ ಹಾಕಿದ. ಅವನು ಕ್ರಿ. ಪೂ. ೨೮೭ ರಲ್ಲಿ ಸಿಸಿಲಿ ದ್ವೀಪದ ಸಿರಾಕ್ಯೂಸ್ ನಗರದಲ್ಲಿ ಜನಿಸಿದ. ಅವನ ತಂದೆ ಫಿಡಿಯಾಸ್ ಖಗೋಳಶಾಸ್ತ್ರ ಪಂಡಿತನಾಗಿದ್ದ. ಆದರೆ ಮಗನ ಒಲವು ಚಿಗುರಿದ್ದು ಗಣಿತ ಮತ್ತು ತಂತ್ರಜ್ಞಾನದಲ್ಲಿ. ಅಲೆಕ್ಸಾಂಡ್ರಿಯದಲ್ಲಿ ಆರ್ಕಿಮಿಡೀಸ್ ಉನ್ನತ ವ್ಯಾಸಂಗ ಮಾಡುತ್ತಿದ್ದಾಗ ಯೂಕ್ಲಿಡನ ಶಿಷ್ಯ ಸೆನಾನ್ ಅವನ ಗುರುವಾಗಿದ್ದ. ಇತಿಹಾಸಕಾರರು ಆರ್ಕಿಮಿಡೀಸನನ್ನು 'ಗಣಿತ ಶಾಸ್ತ್ರದ ರಾಜ', 'ರೇಖಾಗಣಿತದ ಹೋಮರ್' ಎಂದೆಲ್ಲಾ ಹೊಗಳಿದ್ದಾರೆ; ಅವನನ್ನು ನ್ಯೂಟನ್ ಮತ್ತು ಗೌಸನ ಸಾಲಿನಲ್ಲಿ ಅವರು ನಿಲ್ಲಿಸುತ್ತಾರೆ.

ಆರ್ಕಿಮಿಡೀಸ್ ದೊರೆ ಹೀರೊನೊ ಸಂಬಂಧಿಯಾಗಿದ್ದ. ಆದರು ಅವನ ಆಸಕ್ತಿ ರಾಜಕಾರಣದ ಕಡೆಗೆ ತಿರುಗಲಿಲ್ಲ; ವೃತ್ತ, ಗೋಳ, ವರ್ತುಲ ಸ್ತಂಭ ಇವುಗಳಲ್ಲಿ ಅದು ನೆಲೆಸಿತ್ತು. ವೃತ್ತದ ಸುತ್ತಳತೆಯನ್ನು ಅದರ ವ್ಯಾಸದಿಂದ ಭಾಗಿಸಿದರೆ ದೊರೆಯುವ ಸಂಖ್ಯೆ ಮೂರು ಏಳನೆಯ ಒಂದು ಮತ್ತು ಮೂರು ಎಪ್ಪತ್ತೊಂದನೇ ಹತ್ತರ ನಡುವಿನ ಒಂದು ಅನಿರ್ದಿಷ್ಟ ಸಂಖ್ಯೆ ಎಂದು ಅವನು ತೋರಿಸಿದ. ಈ ಸಂಖ್ಯೆಗೆ ಪೈ (π) ಎಂದು ಹೆಸರು. ಇದನ್ನು ನಿರ್ಧರಿಸಲು ಆರ್ಕಿಮಿಡೀಸ್ ಒಂದು ಸುಲಭ ಮಾರ್ಗವನ್ನು ಅನುಸರಿಸಿದ. ಅವನು ಒಳಗಡೆ ಹಾಗು ಹೊರಗಡೆ ವೃತ್ತಕ್ಕೆ ತಾಗಿರುವಂತೆ ಎರಡು ಬಹುಭುಜಗಳನ್ನು ರಚಿಸಿ ಅವುಗಳ ಭುಜ ಸಂಖ್ಯೆಯನ್ನು ಹೆಚ್ಚಿಸುತ್ತಾ ಹೋದ. ಮಿತಿಯಲ್ಲಿ

ಒಳಗಿನ ಬಹುಭುಜದ ಸುತ್ತಳತೆ ಮತ್ತು ಹೊರಗಿನ ಬಹುಭುಜದ ಸುತ್ತಳತೆ ವೃತ್ತದ ಸುತ್ತಳತೆಯನ್ನು ಒಳಗಿನಿಂದಲೂ ಮತ್ತು ಹೊರಗಿನಿಂದಲೂ ಸಮೀಪಿಸುತ್ತವೆ. ಆಂದರೆ ವೃತ್ತದ ಸುತ್ತಳತೆ ಈ ಬಹುಭುಜಗಳ ಸುತ್ತಳತೆಗಳ ನಡುವೆ ಇದೆ ಎಂದಾಯಿತು. ಈ ಮಿತಿಯಲ್ಲಿ ಒಂದು ಭುಜದ ಉದ್ದಕ್ಕೂ ವೃತ್ತದ ವ್ಯಾಸದ ಉದ್ದಕ್ಕೂ ಇರುವ ಸಂಬಂಧವನ್ನು ಗುರುತಿಸಿ ಪೈನ ಬೆಲೆಯನ್ನು ನಿರ್ಧರಿಸಬಹುದು. ಆರ್ಕಿಮಿಡೀಸ್ ಒಂದು ವರ್ತುಲ ಸ್ತಂಭ ಮತ್ತು ಅದರಲ್ಲಿ ಸಮವಾಗಿ ಅಡಗುವ ಗೋಳ ಇವುಗಳ ಹೊರಮೈ ಸಲೆಗಳ ಮತ್ತು ಗಾತ್ರಗಳ ಪ್ರಮಾಣಗಳು ಎರಡನೆ ಮೂರು ಎಂದು ತೋರಿಸಿದ. ಇದು ಅವನ ಅತ್ಯಂತ ಪ್ರಿಯವಾದ ಸಮಸ್ಯೆಯಾಗಿತ್ತು.

ಆರ್ಕಿಮಿಡೀಸ್ ಚಿಕ್ಕವನಾಗಿದ್ದಾಗ ಹಡಗಿಗೆ ಭಾರವಾದ ವಸ್ತುಗಳನ್ನು ಸಾಗಿಸಲು ಕೆಲಸಗಾರರು ಸನ್ನೆಗಳನ್ನು ಬಳಸುತ್ತಿದ್ದುದನ್ನು ನೋಡಿದ್ದ. ಸನ್ನೆ ಕೀಲ ಒಂದರಮೇಲೆ ಸುತ್ತುವಂತೆ ಅಳವಡಿಸಿರುವ ಒಂದು ಹಾರೆ ಅಥವ ಬಡಿಗೆ. ಹಾರೆಯ ಒಂದು ತುದಿ ಜರುಗಿಸಬೇಕಾಗಿರುವ ವಸ್ತುವಿಗೆ ತಾಗಿರುತ್ತದೆ. ಕೀಲದಿಂದ ಈ ತುದಿಯವರೆಗಿನ ಹಾರೆಯ ಭಾಗಕ್ಕೆ ಭಾರಬಾಹು ಎಂದು ಹೆಸರು; ಇನ್ನೊಂದು ಭಾಗಕ್ಕೆ ಯತ್ನ ಬಾಹು ಎಂದು ಹೆಸರು. ಯತ್ನಬಾಹುವಿನ ಉದ್ದ ಭಾರಬಾಹುವಿನ ಉದ್ದಕ್ಕಿಂತ ಹೆಚ್ಚಾಗಿರುತ್ತದೆ. ಒಂದು ವಸ್ತುವನ್ನು ನೇರವಾಗಿ ಕೈಗಳಿಂದಲೆ ಎತ್ತಲು ಐದು ಮಂದಿ ಕೆಲಸಗಾರರು ಬೇಕು ಎಂದಿಟ್ಟುಕೊಳ್ಳೋಣ. ಯತ್ನಬಾಹು ಭಾರಬಾಹುವಿಗಿಂತ ಐದು ಪಟ್ಟು ಹೆಚ್ಚು ಉದ್ದವಾಗಿದ್ದರೆ ಸನ್ನೆಯ ನೆರವಿನ ಒಬ್ಬ ಕೆಲಸಗಾರನೆ ಆ ವಸ್ತುವನ್ನು ಎತ್ತಬಹುದು. ಯತ್ನಬಾಹುವಿನ ತುದಿಯಲ್ಲಿ ಅವನು ಬಲವನ್ನು ಆರೋಪಿಸಿದರೆ ಭಾರಬಾಹುವಿನ ತುದಿ ವಸ್ತುವನ್ನು ಎತ್ತುತ್ತದೆ. ಅಂದರೆ ಯತ್ನ



ಚಿತ್ರ ೧. ಸನ್ನೆ

ಬಾಹು ಮತ್ತು ಭಾರ ಬಾಹುಗಳ ಉದ್ದಗಳು ಹೊಂದಿರುವ ಪ್ರಮಾಣ ಒಂದನೆ ಐದು ವಸ್ತುವಿನ ತೂಕ ಮತ್ತು ಆರೋಪಿಸುವ ಬಲಗಳ ಪ್ರಮಾಣಕ್ಕೆ ಸಮವಾಗಿರುತ್ತದೆ ಎಂದಹಾಗಾಯಿತು. ಈ ಸೂತ್ರವನ್ನು ಆರ್ಕಿಮಿಡೀಸ್ ಕಂಡುಹಿಡಿದ. ಇದರಿಂದ ಭಾರ ಬಾಹುವಿನ ಉದ್ದ ಕಡಿಮೆಯಿದ್ದಷ್ಟೂ ಸನ್ನೆಯ ಪ್ರಯೋಜನ ಹೆಚ್ಚೆಂದು ತಿಳಿಯಬಹುದು. ಸನ್ನೆ ದೃಢವಾಗಿದ್ದು, ಕೀಲ ಗಟ್ಟಿಯಾಗಿದ್ದರೆ ಸನ್ನೆಯ ಯತ್ನ ಬಾಹುವಿನ ಉದ್ದವನ್ನು ಹೆಚ್ಚಿಸುತ್ತ ಎಷ್ಟು ಭಾರವಾದ ವಸ್ತುವನ್ನೆ ಆಗಲಿ ಒಬ್ಬನೆ ಕೆಲಸಗಾರ ಎತ್ತಬಹುದೆಂದು ಆರ್ಕಿಮಿಡೀಸ್ ತರ್ಕಿಸಿದ. ಈ ಗ್ರಹಿಕೆಯಿಂದ ಉತ್ತೇಜಿತನಾಗಿ ಅವನು ಹೀರೊ ಜೊತೆ ಮಾತಾಡುವಾಗ, "ನನಗೆ ನಿಲ್ಲಲು ತಕ್ಕ ಸ್ಥಳವನ್ನು ತೋರಿಸು, ಭೂಮಿಯನ್ನು

(ಬೇಕಾದರು) ಎತ್ತುತ್ತೇನೆ", ಎಂದು ಹೇಳುತ್ತಿದ್ದ. ಆದರೆ ದೊರೆ ಇದು ಜಂಬದ ಮಾತೆಂದುಕೊಳ್ಳುತ್ತಿದ್ದ. ಆರ್ಕಿಮಿಡೀಸ್ ಬಹಳ ಸಾಮಾನು ತುಂಬಿದ ಒಂದು ದೊಡ್ಡ ಹಡಗನ್ನು ಸನ್ನೆಯಿಂದ ಹೀರೊನೆ ಸರಿಸುವಂತೆ ಮಾಡಿದಾಗಲೆ ಅವನ ಮಾತಿಗೆ ಬೆಲೆ ಬಂದದ್ದು. ಆ ಮಾತಿನ ಹಿಂದೆ ಇದ್ದ ಅವನ ಉದ್ದಿಶ್ಯ 'ಸನ್ನೆ ಸಾವಿರ ಕಾಲಾಳುಗಳ ಬಲಕ್ಕೆ ಸಮ' ಎಂದು ತಿಳಿಸುವುದಾಗಿತ್ತು ಅಷ್ಟೆ.

ಒಮ್ಮೆ ದೊರೆ ಹೀರೊ ಅಕ್ಕಸಾಲಿಯೊಬ್ಬನಿಗೆ ಚಿನ್ನವನ್ನು ಕೊಟ್ಟು ಒಂದು ಕಿರೀಟವನ್ನು ಮಾಡಿಸಿದ. ಅಕ್ಕಸಾಲಿ ಚಿನ್ನದ ಜೊತೆಗೆ ಬೇರೆಯಾವುದಾದರು ಕೀಳು ಲೋಹವನ್ನು ಬೆರೆಸಿರಬಹುದೆಂದು ಅವನಿಗೆ ಅನುಮಾನ ಉಂಟಾಯಿತು. ಕಿರೀಟ ಲಕ್ಷಣವಾಗಿತ್ತು. ಹಾಳುಮಾಡದೆ ಅದು ಶುದ್ಧವಾದುದೊ ಅಥವ ಅಶುದ್ಧವಾದುದೊ ಎಂಬುದನ್ನು ಕಂಡುಹಿಡಿಯಬೇಕೆಂದು ಅವನು ಆರ್ಕಿಮಿಡೀಸನನ್ನು ಕೇಳಿಕೊಂಡ. ಈ ಸಮಸ್ಯೆ ಆರ್ಕಿಮಿಡೀಸನ ಬುದ್ಧಿಶಕ್ತಿಗೆ ತಕ್ಕ ಸವಾಲಾಯಿತು. ಅವನು ಇದನ್ನು ಕುರಿತು ಬಹಳವಾಗಿ ಯೋಚಿಸಿದ. ಈ ಯೋಚನೆ ತಲೆಯಲ್ಲಿ ತುಂಬಿರುವಾಗ ಒಂದು ದಿನ ಅವನು ಸ್ನಾನಕ್ಕಾಗಿ ನೀರು ತುಂಬಿದ ತೊಟ್ಟಿಗೆ ಇಳಿದ. ಅವನು ಇಳಿಯುತ್ತಿದ್ದಂತೆ ತೊಟ್ಟಿಯಿಂದ ನೀರು ಹೊರಗೆ ಚೆಲ್ಲಿತು. ತಟ್ಟನೆ ತಲೆಯಲ್ಲಿ ತುಂಬಿಕೊಂಡಿದ್ದ ಸಮಸ್ಯೆಗೆ ಉತ್ತರ ಸಿಕ್ಕಿತು. ಮೈಮೇಲೆ ಬಟ್ಟೆಯಿಲ್ಲದ್ದನ್ನೂ ಗಮನಿಸದೆ ಅವನು, "ಯುರೀಕ, ಯುರೀಕ", (ನಾನು ಕಂಡುಹಿಡಿದೆ, ನಾನು ಕಂಡುಹಿಡಿದೆ) ಎಂದು ಕೂಗುತ್ತಾ ಮನೆಯಕಡೆಗೆ ಓಡಿದ.

ಆರ್ಕಿಮಿಡೀಸನಿಗೆ ತಿಳಿದ ವಿಷಯ ಇದು : ನೀರಿನಲ್ಲಿ ಒಂದು ವಸ್ತು ಮುಳುಗಿದರೆ ಅದರ ಗಾತ್ರಕ್ಕೆ ಸಮವಾದಷ್ಟು ನೀರನ್ನು ಸ್ಥಳಾಂತರಿಸುತ್ತದೆ. ಒಂದೆ ತೂಕದ ಬೇರೆ ಬೇರೆ ಲೋಹದ ಗಟ್ಟಿಗಳು ಬೇರೆ ಬೇರೆ ಗಾತ್ರವನ್ನು ಹೊಂದಿರುತ್ತವೆ. ಆದುದರಿಂದ ಚಿನ್ನದ ಜೊತೆಗೆ ಬೇರೆ ಲೋಹ ಬೆರೆತಿದ್ದರೆ ಕಿರೀಟವನ್ನೂ, ಅದರ ತೂಕದ ಚಿನ್ನದ ಗಟ್ಟಿಯನ್ನು ಪ್ರತ್ಯೇಕವಾಗಿ ಮುಳುಗಿಸಿದಾಗ ಹೊರಕ್ಕೆ ಚೆಲ್ಲುವ ನೀರಿನ ಗಾತ್ರಗಳು ಒಂದೆ ಆಗಿರುವುದಿಲ್ಲ. ಇದರಿಂದ ಕಿರೀಟದ ಶುದ್ಧತೆಯನ್ನು ಪರೀಕ್ಷಿಸುವ ವಿಧಾನ ಅವನಿಗೆ ತಟ್ಟನೆ ಹೊಳೆದಂತಾಯಿತು.

ಚಿನ್ನದ ಕಿರೀಟದ ಪರೀಕ್ಷೆಯಲ್ಲಿ ತೊಡಗಿದ್ದ ಆರ್ಕಿಮಿಡೀಸ್ ಜಲಸ್ಥಾಯಿ ವಿಜ್ಞಾನದ ಒಂದು ಮುಖ್ಯ ತತ್ವವನ್ನು ಸ್ಥಾಪಿಸಿದ. ನೀರಿನಲ್ಲಿ ಮುಳುಗಿರುವ ಒಂದು ಕಲ್ಲುಗುಂಡನ್ನು ನಾವು ಸುಲಭವಾಗಿ ಎತ್ತಬಹುದು. ಅದೇ ಕಲ್ಲುಗುಂಡನ್ನು ನೀರಿನ ಹೊರಗೆ ಎತ್ತುವುದು ಸುಲಭವಾಗಿರುವುದಿಲ್ಲ. ನೀರಿನಲ್ಲಿ ಮುಳುಗಿರುವಾಗ ಗುಂಡಿನ ಮೇಲೆ ಊರ್ಧ್ವಮುಖವಾದ ಒಂದು ಬಲ ಆರೋಪವಾಗಿರುತ್ತದೆ. ಹಗುರವಾದ ವಸ್ತುಗಳು ನೀರಿನಲ್ಲಿ ತೇಲುತ್ತವೆ. ಹಾಗೆ ತೇಲುವ ಒಂದು ವಸ್ತುವನ್ನು ಅದುಮಿ ನೀರಿನಲ್ಲಿ ಮುಳುಗಿಸಿ ನಂತರ ಬಿಟ್ಟರೆ ಊರ್ಧ್ವಮುಖವಾಗಿ ಅದರ ಮೇಲೆ ಆರೋಪವಾದ ಬಲದಿಂದ ಅದು ಮೇಲೆ ಪುಟಿದು ಬರುತ್ತದೆ. ಅದನ್ನು ನೀರಿನ ಒಳಗೆ ಇರುವಂತೆ ಅದುಮಿ ಹಿಡಿದಿರುವಾಗ ಮೇಲ್ಮುಖವಾದ ಬಲ ಅದರ ಮೇಲೆ ಆರೋಪವಾಗುವುದರ ಅನುಭವವೂ ನಮಗಾಗುತ್ತದೆ. ಅಂದರೆ ಒಂದು ಕಾಯ ಪೂರ್ತಿಯಾಗಿ ಮುಳುಗಿರಲಿ

ಅಥವ ಆಂಶಿಕವಾಗಿ ಮುಳುಗಿರಲಿ ಅದರ ಮೇಲೆ ಊರ್ಧ್ವಮುಖವಾದ ಬಲ ಆರೋಪ ವಾಗುತ್ತದೆ ಎಂದಹಾಗಾಯಿತು. ಆರ್ಕಿಮಿಡೀಸ್ ಪ್ರಯೋಗಗಳನ್ನು ಮಾಡಿ ಹೀಗೆ ಆರೋಪವಾಗುವ ಬಲ ಸ್ಥಳಾಂತರಗೊಳ್ಳುವ ನೀರಿನ ತೂಕಕ್ಕೆ ಸಮವಾಗಿರುತ್ತದೆ ಎಂಬುದನ್ನು ಕಂಡುಹಿಡಿದ. ನೀರಿಗೆ ಬದಲು ಬೇರೆ ಯಾವುದೆ ದ್ರವವನ್ನು ತೆಗೆದು ಕೊಂಡರೂ ಇಂಥದೆ ನಿರ್ಧಾರಕ್ಕೆ ಬರುತ್ತೇವೆಂಬುದನ್ನೂ ಅವನು ಕಂಡುಕೊಂಡ.

ಆರ್ಕಿಮಿಡೀಸನ ಶೋಧನೆಗಳಲ್ಲಿ ಗುರುತ್ವಕೇಂದ್ರದ ವಿಷಯವೂ ಮುಖ್ಯ ವಾದುದು. ಒಂದು ಕಾಯವು ಅನೇಕ ಕಣಗಳಿಂದ ಆಗಿದೆ ಎಂದಿಟ್ಟುಕೊಳ್ಳೋಣ. ಪ್ರತಿಯೊಂದು ಕಣದ ತೂಕವನ್ನು ಒಂದು ಅಂಗ ಬಲವೆಂದು ಪರಿಗಣಿಸಬಹುದು. ಕಾಯದ ಒಟ್ಟು ತೂಕ ಈ ಅಂಗಬಲಗಳ ಫಲಿತ. ಪ್ರತಿಯೊಂದು ಕಣಗಳ ಸ್ಥಾನ ಅವು ಗಳಿಗೆ ಸಂಬಂಧಪಟ್ಟ ಅಂಗಬಲಗಳು ಪ್ರಯೋಗವಾಗುವ ಬಿಂದುಗಳು. ಈ ಅಂಗಬಲಗಳ ಫಲಿತ ಪ್ರಯೋಗವಾಗುವ ಬಿಂದುವೆ ಕಾಯದ ಗುರುತ್ವಕೇಂದ್ರ. ಈ ಬಿಂದುವಿನಲ್ಲಿ ಕಾಯವನ್ನು ನೇತುಹಾಕಿದರೆ ಅದು ಸಮಸ್ಥಿತಿಯಲ್ಲಿ ಇರುತ್ತದೆ. ಗುರುತ್ವಕೇಂದ್ರ ಕಾಯದ ತೂಕ ಪ್ರಯೋಗವಾಗುವ ಬಿಂದು. ಉದಾಹರಣೆಗೆ ಏಕರೀತಿಯಾದ ಪಟ್ಟಿಯ ಗುರುತ್ವಕೇಂದ್ರವನ್ನು ಗಮನಿಸಬಹುದು. ಇದು ಪಟ್ಟಿಯ ಮಧ್ಯಬಿಂದು. ವೃತ್ತಾಕಾರದ ಹಲಗೆಯ ಗುರುತ್ವಕೇಂದ್ರ ಅದರ ಕೇಂದ್ರ. ಗೋಳದ ಗುರುತ್ವಕೇಂದ್ರ ಅದರ ಕೇಂದ್ರ. ಇವುಗಳನ್ನು ಆಧಾರವಾಗಿಟ್ಟುಕೊಂಡು ಉಳಿದ ಬಗೆಯ ಕಾಯಗಳ ಗುರುತ್ವಕೇಂದ್ರ ಗಳನ್ನು ಕಂಡುಹಿಡಿಯಬಹುದು. ಗುರುತ್ವಕೇಂದ್ರದ ಲೆಕ್ಕಾಚಾರದಲ್ಲಿ ಅಡಗಿರುವ ಒಂದು ಮುಖ್ಯ ಅಂಶವನ್ನು ನಾವು ಗಮನಿಸಬೇಕು. ಇದು ಕಾಯವೊಂದರ ಅಂಗಕಣಗಳ ಮೇಲೆ ಆರೋಪವಾಗುವ ಪ್ರತಿಯೊಂದು ಬಲವೂ ಸ್ವತಂತ್ರವೆಂಬುದು, ಒಂದು ಅಂಗ ಬಲದ ದಿಕ್ಕಾಗಲಿ, ಪ್ರಮಾಣವಾಗಲಿ ಉಳಿದ ಅಂಗಬಲಗಳು ವರ್ತಿಸುವುದರಿಂದ ಬದ ಲಾಗುವುದಿಲ್ಲ. ಸದಿಶ ಪರಿಮಾಣಗಳ ಲೆಕ್ಕಾಚಾರ ಈ ಕಲ್ಪನೆಯಲ್ಲಿ ಬೆಳೆದದ್ದು. ಸಮಾಸ ಕಲನದ ಮೊಳಕೆಯನ್ನು ನಾವು ಗುರುತ್ವಕೇಂದ್ರದ ಲೆಕ್ಕಾಚಾರದಲ್ಲಿ ಕಾಣಬಹುದು.

ಕಾಯಗಳ ಸಮಸ್ಥಿತಿ ಅವುಗಳ ಗುರುತ್ವಕೇಂದ್ರಗಳ ಸಾಪೇಕ್ಷ ಸ್ಥಾನಗಳನ್ನು ಅವಲಂಬಿಸಿರುತ್ತದೆ. ಒಂದು ಕಾಯ ನೆಲದ ಮೇಲೆ ಇದೆ ಎಂದುಕೊಳ್ಳೋಣ. ಕಾಯಕ್ಕು ನೆಲಕ್ಕು ಇರುವ ಸಂಪರ್ಕ ಜಾಗಕ್ಕೆ ಆಧಾರತಲ ಎಂದು ಹೆಸರು. ಗುರುತ್ವಕೇಂದ್ರದ ಮೂಲಕ ಹಾಯುವ ಭೂಲಂಬರೇಖೆ ಆಧಾರತಲದಲ್ಲಿದ್ದರೆ ಕಾಯ ಸಮಸ್ಥಿತಿಯಲ್ಲಿರು ತ್ತದೆ. ಇಲ್ಲದಿದ್ದರೆ ಅದು ಉರುಳಿ ಸಮಸ್ಥಿತಿಗೆ ಬರುತ್ತದೆ. ಕಾಯ ಇರುವ ಪರಿಸ್ಥಿತಿಯಲ್ಲಿ ಭೂಮಟ್ಟ ತಲದಿಂದ ಗುರುತ್ವಕೇಂದ್ರಕ್ಕಿರುವ ದೂರ ಕನಿಷ್ಠವಾಗಿದ್ದರೆ ಅದು ಸ್ಥಿರ ಸಮಸ್ಥಿತಿಯಲ್ಲಿರುತ್ತದೆ. ಅರಿಸ್ಟಾಟಲನಿಗೆ ಈ ವಿಚಾರ ತಿಳಿದಿರಲಿಲ್ಲ. ಆದುದರಿಂದ ಅವನು ಕಾಯಗಳ ಸಮಸ್ಥಿತಿಯನ್ನು ವಿವರಿಸಲು ಅವುಗಳಿಗೂ ಅವುಗಳು ಇರುವ ಸ್ಥಳಗಳಿಗೂ ಸಂಬಂಧವನ್ನು ಕಲ್ಪಿಸುತ್ತಿದ್ದ.

ನೀರನ್ನು ಹಳ್ಳದಿಂದ ಮೇಲಕ್ಕೆ ಹರಿಸಲು ಆರ್ಕಿಮಿಡೀಸ್ ಒಂದು ಸುಲಭ ಯಂತ್ರ ವನ್ನು ನಿರ್ಮಿಸಿದ. ಇದು ಒಂದು ಕೊಂತವನ್ನು ಸುರುಳಿಯಂತೆ ಬಳಸಿಕೊಂಡಿರುವ ಒಂದು ಕೊಳವೆ. ಈ ಕೊಳವೆಯ ಒಂದು ತುದಿ ನೀರಿನಲ್ಲಿ ಮುಳುಗಿರುತ್ತದೆ. ಇನ್ನೊಂದು

ತುದಿ ಎತ್ತರದಲ್ಲಿರುವಂತೆ ಕೊಂತವನ್ನು ಅಳವಡಿಸಬಹುದು. ಈಗ ಕೊಂತವನ್ನು ತಿರುಗಿಸಿದರೆ ನೀರು ಕೊಳವೆಯ ಮೂಲಕ ಹರಿದು ಇನ್ನೊಂದು ತುದಿಯಲ್ಲಿ ಹೊರಗೆ ಬರುತ್ತದೆ. ಈ ಯಂತ್ರಕ್ಕೆ ಆರ್ಕಿಮಿಡೀಸನ ತಿರುಪು ಎಂದು ಹೆಸರು. ಇದನ್ನು ನೈಲು ನದಿ ಉಕ್ಕಿ ಬಂದಾಗ ಜಮೀನಿನಲ್ಲಿ ತುಂಬಿಕೊಳ್ಳುತ್ತಿದ್ದ ನೀರನ್ನು ಹೊರಗೆ ಹಾಕಲು ಈಜಿಪ್ಟಿನ ರೈತರು ಉಪಯೋಗಿಸುತ್ತಿದ್ದರು.

ಆರ್ಕಿಮಿಡೀಸ್ ಯಂತ್ರ ವಿದ್ಯೆಯಲ್ಲಿ ನಿಪುಣನಾಗಿದ್ದ ಎಂಬುದಕ್ಕೆ ಇನ್ನೊಂದು ನಿದರ್ಶನವನ್ನು ಕೊಡಬಹುದು. ರೋಮನರು ಸಿರಾಕ್ಯೂಸ್ ನಗರಕ್ಕೆ ಮುತ್ತಿಗೆಹಾಕಿದಾಗ ಅವನು ಉರಿಯುವ ಕನ್ನಡಿಗಳನ್ನು ಬಳಸಿ ಸೂರ್ಯನ ಬೆಳಕು ವೈರಿಗಳ ಹಡಗುಗಳನ್ನು ಸುಡುವಂತೆ ಮಾಡಿದ. ಸನ್ನೆಗಳನ್ನು ಚಿಮ್ಮಿಸಿ ವೈರಿ ಸೈನ್ಯದ ಮೇಲೆ ದೊಡ್ಡ ದೊಡ್ಡ ಬಂಡೆಗಳನ್ನು ಬೀರಿ ಸೈನಿಕರು ದಿಕ್ಕುಗೆಡುವಂತೆ ಮಾಡಿದ. ಆರ್ಕಿಮಿಡೀಸನ ಬುದ್ಧಿಶಕ್ತಿಯೆ ಒಂದು ದೊಡ್ಡ ಸೈನ್ಯಕ್ಕೆ ಸಮವಾಗಿ ಕೆಲಸಮಾಡಿತು; ರೋಮನರ ಸೈನ್ಯ ಹಿಮ್ಮೆಟ್ಟಿತು.

ಮೂರು ವರ್ಷಗಳ ನಂತರ ಮತ್ತೆ ದಂಡೆತ್ತಿಬಂದ ರೋಮನರು ಸಿರಾಕ್ಯೂಸ್ ನಗರವನ್ನು ವಶಪಡಿಸಿಕೊಂಡರು. ಅವರ ದಂಡನಾಯಕನಾಗಿದ್ದ ಮಾರ್ಸೆಲಸ್ಸನಿಗೆ ಆರ್ಕಿಮಿಡೀಸನ ಬಗ್ಗೆ ಗೌರವವಿತ್ತು. ಅವನು ಸೈನಿಕರಿಗೆ ಆರ್ಕಿಮಿಡೀಸನನ್ನು ಕೊಲ್ಲಬಾರದೆಂದೂ, ಅವನನ್ನು ಗೌರವದಿಂದ ಕಾಣಬೇಕೆಂದೂ ಅಪ್ಪಣೆಮಾಡಿದ್ದ. ಆದರೆ ನಡೆದದ್ದು ಬೇರೆ. ಆರ್ಕಿಮಿಡೀಸ್ ಗಣಿತ ಚಿತ್ರವೊಂದನ್ನು ಬಿಡಿಸಿ ಅದರ ಮುಂದೆ ಯೋಚಿಸುತ್ತ ಕುಳಿತಿದ್ದ. ಆಗ ಒಬ್ಬ ಸೈನಿಕ ಒಳನುಗ್ಗಿ ಬಂದು ಮಾರ್ಸೆಲಸ್ಸನನ್ನು ಕಾಣಲು ಬರಬೇಕೆಂದು ಅಬ್ಬರಿಸಿದ. ಇದರಿಂದ ವಿಚಲಿತನಾದ ಆರ್ಕಿಮಿಡೀಸ್, "ಮೂಢ, ನನ್ನ ಆಲೋಚನೆಗಳನ್ನು ಕೆಡಿಸಬೇಡ. ಸುಮ್ಮನೆ ಹೋಗು", ಎಂದು ಗದರಿಸಿದ. ಕೋಪಗೊಂಡ ಸೈನಿಕ ಆರ್ಕಿಮಿಡೀಸನನ್ನು ಇರಿದುಕೊಂದ (ಕ್ರಿ. ಪೂ. ೨೧೨). ಮಾರ್ಸೆಲಸ್ಸನಿಗೆ ಇದರಿಂದ ತುಂಬ ನೋವಾಯಿತು. ಅವನು ಆರ್ಕಿಮಿಡೀಸನ ಶವಸಂಸ್ಕಾರವನ್ನು ರಾಜಮರ್ಯಾದೆಗಳೊಂದಿಗೆ ನೆರವೇರಿಸಿದ, ಅವನ ಗೋರಿಯ ಮೇಲೆ ಸ್ತಂಭ ಮತ್ತು ಅದರಲ್ಲಿ ಸಮವಾಗಿ ಅಡಕವಾದ ಗೋಳವಿರುವ ಆಕೃತಿಯನ್ನು ಸ್ಥಾಪಿಸಿದ. ಈ ಆಕೃತಿ ಆರ್ಕಿಮಿಡೀಸನಿಗೆ ಬಹಳ ಪ್ರಿಯವಾದುದೆಂಬ ಸಂಗತಿ ಮಾರ್ಸೆಲಸ್ಸನಿಗೆ ತಿಳಿದಿತ್ತು.

ನನಗೆ ಜೀವ ಉಳಿಸುವ ಮಾರ್ಗಕ್ಕಿಂತಲೂ, ಹೃದಯ ಪರಿವರ್ತನೆಯೇ ಮುಖ್ಯವಾಗಿದೆ.

ಗಾಂಧೀಜಿ

ಬದುಕಿಗಿಂತಲೂ ಭವ್ಯವಾದ ಸಾಕ್ರಟೀಸನ ಸಾವು

ಅಜಯೇಂದ್ರನಾಥ ತ್ರಿವೇದಿ

ಸಾಕ್ರಟೀಸ್ ಮಡಿದು ಸುಮಾರು ಎರಡೂಕಾಲು ಸಾವಿರ ವರ್ಷಗಳೇ ಸಂದು ಹೋಗಿವೆ. ಆತ ನಡೆಸಿದ ಭವ್ಯ ಬದುಕಿಗಿಂತ ಕಡಿಮೆ ಆಕರ್ಷಕವಾಗಿ ಮತ್ತು ಗೌರವಾನ್ವಿತವಾಗಿರಲಿಲ್ಲ. ಆತನ ಸಾವು ಎಂಬ ಅಂಶ ಈವರೆಗೆ ನಡೆದಿರುವ ಅಧ್ಯಯನದಿಂದ ಚೆನ್ನಾಗಿ ವ್ಯಕ್ತವಾಗುತ್ತದೆ. ಯಾವ ಬಗೆಯ ನಿಷ್ಠುರವಾದ ನಿಲುವುಗಳನ್ನು ಇಟ್ಟುಕೊಂಡು ಆತ ಧಾರ್ಮಿಕ ಬದುಕನ್ನು ನಡೆಸಿದನೊ, ಆತನ ಸಾವು ಸಹ ಅಂತಹ ನಿಲುವುಗಳಿಗೇ ಮುಡುಪಾಗಿತ್ತೇನೊ ಎನ್ನುವಂತಿತ್ತು. ಇಂದು ಕೂಡ ಪ್ರಪಂಚದ ಅನೇಕಮಂದಿ ದಾರ್ಶನಿಕರು ಮತ್ತು ಬುದ್ಧಿಜೀವಿಗಳು ಸಾಕ್ರಟೀಸನ ಬದುಕಿನಿಂದ ಪಡೆಯುವುದಕ್ಕಿಂತ ಮಿಗಿಲಾದ ಪ್ರೇರಣೆಯನ್ನು ಆತನ ಸಾವಿನಿಂದ ಪಡೆಯುತ್ತಿದ್ದಾರೆ. ವಾಸ್ತವವಾಗಿ ಬದುಕು ಮತ್ತು ಸಾವು ಇವೆರಡನ್ನು ಬೇರೆಬೇರೆಯೆಂದು ಭಾವಿಸುವುದು ನಮ್ಮ ತಿಳಿವಳಿಕೆ ಎಷ್ಟು ಸೀಮಿತವಾಗಿದೆ ಎಂಬುದಕ್ಕೆ ಒಂದು ನಿದರ್ಶನ. ಗಂಭೀರವಾದ ಆಧ್ಯಾತ್ಮಿಕ ದೃಷ್ಟಿಯುಳ್ಳವರ ಪಾಲಿಗೆ ಅನಂತದವರೆಗೆ ವ್ಯಾಪಿಸಿರುವ ಬದುಕಿನ ಮಸುಕಾದ ಭಾಗವೇ ಸಾವು. ನೀಳವಾಗಿ ಚಾಚಿಕೊಂಡಿರುವ ರೈಲುಕಂಬಿಗಳನ್ನು ದೂರದವರೆಗೆ ನೋಡುತ್ತಿದ್ದರೆ ಅವೆರಡೂ ಸೇರಿ ಒಂದು ಬಿಂದುವಾಗಿ ಕಾಣುತ್ತವೆ ಹಾಗೂ ಅಲ್ಲಿಂದ ಮುಂದೆ ಕಂಬಿ ಕಾಣುವುದಿಲ್ಲ; ಆದರೆ ವಾಸ್ತವವಾಗಿ ಕಂಬಿ ಇನ್ನೂ ಮುಂದೆ ಮುಂದೆ ಸಾಗಿಹೋಗಿರುತ್ತದೆ. ಇದೇ ರೀತಿಯಲ್ಲಿ ಬದುಕಿನ ವ್ಯಾಪ್ತಿಯೂ ಅನಂತವಾದುದು. ಯಾವ ಬಿಂದುವಿಗಿಂತ ಮುಂದೆ ನಮಗೆ ಅದು ಕಂಡುಬರುವುದಿಲ್ಲವೋ, ಅದನ್ನೇ ನಾವು ಬದುಕಿನ ಕೊನೆ ಎಂದು ಕರೆದುಬಿಡುತ್ತೇವೆ.

೧೯೮೮ ಜೂನ್ ತಿಂಗಳ 'ನವನೀತ'ದಲ್ಲಿ ಪ್ರಕಟವಾದ ಶ್ರೀ ಅಜಯೇಂದ್ರನಾಥ ತ್ರಿವೇದಿ ಅವರ 'ಸುಕರಾತ್ ಕೀ ಮೃತ್ಯು ಜೀವನ್ ಸೇ ಭೀ ಶಾನದಾರ್' ಲೇಖನದ ಕನ್ನಡ ಅನುವಾದ.

ಅಥೆನ್ಸಿನ (ಗ್ರೀಸ್ ದೇಶ) ಒಬ್ಬ ಶಿಲ್ಪಿಯ ಮಗನಾಗಿ ಸಾಕ್ರಟೀಸ್ ಈಗ ಸಾಧಾರಣವಾಗಿ ಒಪ್ಪಲಾಗಿರುವ ಅಂದಾಜಿನಂತೆ ಕ್ರಿ.ಪೂ ೪೬೯ರಲ್ಲಿ ಜನಿಸಿದ. ಅಥೆನ್ಸಿನ ಸೇನೆಗೆ ಸೇರಿ ಮೂರುಬಾರಿ ಆತ ಹೊರಬಿದ್ದ. ಸಾಕ್ರಟೀಸನ ಅನಂತರದ ಬದುಕೆಲ್ಲ ದರ್ಶನ ಶಾಸ್ತ್ರಕ್ಕೇ ಮುಡಿಪು. ಆತನ ದಾರ್ಶನಿಕ ಬದುಕು ಸಾಕಷ್ಟು ವಿಚಿತ್ರವಾಗಿತ್ತು. ಸಾಕ್ರಟೀಸನ ಯಾವ ಬರವಣಿಗೆಯೂ ಇಂದು ನಮಗೆ ದೊರೆಯಲಾರದು. ಆತನ ವಿಚಾರವಾಗಿ ಜಿನೊಫೇಸ್ ಮತ್ತು ಪ್ಲೇಟೊ ಅವರ ಪುಸ್ತಕಗಳಿಂದ ಕೆಲವು ಮಾಹಿತಿಗಳು ದೊರೆಯುತ್ತವೆ ಅಷ್ಟೆ.

ಪ್ಲೇಟೊ ಸಂವಾದಗಳನ್ನೊಳಗೊಂಡ ತನ್ನ ಗ್ರಂಥದಲ್ಲಿ ಸಾಕ್ರಟೀಸನನ್ನೇ ಪ್ರಧಾನ ವಕ್ತೃ ಎಂದು ಕರೆದಿದ್ದಾನೆ. ಸಾಕ್ರಟೀಸನ ಬೋಧನೆಗಳೆಲ್ಲ ಮೌಖಿಕವಾಗಿರುತ್ತಿದ್ದವು. ಆತ ಯುವಜನರನ್ನು ಮಾತುಕತೆಗಳಲ್ಲಿ ತೊಡಗಿಸಿ ತಾನೂ ಅವರೊಡನೆ ಬೆರೆಯುತ್ತಿದ್ದ. ಈ ಸಂಭಾಷಣೆಗಳಲ್ಲಿ ಪ್ರತಿಯೊಬ್ಬ ಯುವಕನಿಗೂ ಸತ್ಯದ ಅನುಭವ ಒಂದು ವಿಶಿಷ್ಟ ಪ್ರಕಾರದಲ್ಲಿ ಆಗುತ್ತಿತ್ತು. ನ್ಯಾಯ, ಧರ್ಮ, ಸಂಯಮ, ಜ್ಞಾನ ಇತ್ಯಾದಿಗಳ ಬಗ್ಗೆ ವಿವೇಚನೆಯನ್ನು ಅನಂತರ ಸಾಕ್ರಟೀಸ್ ಅಂಥ ಅನುಭವಗಳ ಹಿನ್ನೆಲೆಯಲ್ಲಿ ನಡೆಸುತ್ತಿದ್ದ. ಆತ ಮನೆಯಿಂದ ಹೊರಟು ಜನನಿಬಿಡವಾದ ಸ್ಥಳಕ್ಕೆ ಬಂದು ವಿವಿಧ ವಿಚಾರಗಳನ್ನು ಕುರಿತಂತೆ ಚರ್ಚೆ ನಡೆಸಲು ಜನರಿಗೆ ಪ್ರೇರಣೆ ನೀಡುತ್ತಿದ್ದ. ಅವರ ಚರ್ಚೆಗಳಿಗೆ ಸೂತ್ರಧಾರನ ಕೆಲಸವನ್ನು ತಾನೇ ವಹಿಸುತ್ತಿದ್ದ. ಕ್ರಮೇಣ ಯುವಕರ ಗುಂಪು ಗೊತ್ತಾದ ಸ್ಥಳದಲ್ಲಿ ಅವನಿಗಾಗಿ ಕಾಯುವ ಪರಿಪಾಟ ಪ್ರಾರಂಭವಾಯಿತು. ಹರಯದ ಹುಡುಗರಲ್ಲಿ ಎಲ್ಲ ವಿಚಾರವಾಗಿ ತಿಳಿದುಕೊಳ್ಳುವ ಜಿಜ್ಞಾಸೆ ಗರಿಗೆದರಿತು. ಮೂಢ ನಂಬಿಕೆಗಳಿಗೆ ಸುಮ್ಮನೆ ತಲೆಬಾಗಲು ಅವರ ಮನಸ್ಸು ಒಡಂಬಡುತ್ತಿರಲಿಲ್ಲ. ಈ ಕಾರಣದಿಂದಾಗಿ ಅಂದಿನ ಸಾಮಾಜಿಕ ವ್ಯವಸ್ಥೆ ಭಯದ ಸುಳಿಗೆ ಸಿಲುಕಿತು. ಪರಿಣಾಮವಾಗಿ ಸಾಕ್ರಟೀಸನಿಗೆ ಅನೇಕ ಮಂದಿ ಶತ್ರುಗಳು ಹುಟ್ಟಿಕೊಂಡರು.

ಎಪ್ಪತ್ತು ವರ್ಷ ವಯಸ್ಸಿನ ಸಾಕ್ರಟೀಸನ ಮೇಲೆ ಮೊಕದ್ದಮೆ ಹೂಡಿ ವಿಚಾರಣೆ ನಡೆಸಲಾಯಿತು. ಆತನ ವಿರುದ್ಧ ಮೂರು ಪ್ರಮುಖ ಆರೋಪಗಳಿದ್ದವು— ೧) ಸಾಕ್ರಟೀಸ್ ನಾಡಿನ ದೇವತೆಯನ್ನು ಪುರಸ್ಕರಿಸುವುದಿಲ್ಲ, ೨) ಅವನು ಹೊಸ ದೇವತೆಗಳಲ್ಲಿ ಶ್ರದ್ಧೆ ಬೆಳೆಸಿಕೊಂಡಿದ್ದಾನೆ ಹಾಗೂ ೩) ಅವನು ಅಥೆನ್ಸಿನ ನವಯುವಕರನ್ನು ಆಡಳಿತದ ವಿರುದ್ಧವಾಗಿ ಎತ್ತಿಕಟ್ಟುತ್ತಿದ್ದಾನೆ. ವಿಚಾರಣೆಯಾದ್ಯಂತ ಈ ಆರೋಪಗಳನ್ನು ಸಾಬೀತುಪಡಿಸಲಾಯಿತು. ಕಡೆಯಲ್ಲಿ ಸಾಕ್ರಟೀಸನನ್ನು ಮರಣದಂಡನೆಯ ಶಿಕ್ಷೆಗೆ ಒಳಪಡಿಸಬೇಕೆಂದು ಶಿಫಾರಸುಮಾಡಲಾಯಿತು. ಆತನ ತಪ್ಪೊಪ್ಪಿಗೆಯನ್ನು ಅವಲಂಬಿಸಿ ಮೂರು ಆಯ್ಕೆಗಳನ್ನು ಕೊಡಲಾಯಿತು. ಮೊದಲನೆಯದರ ಪ್ರಕಾರ ಸಾಕ್ರಟೀಸ್ ಅಥೆನ್ಸ್ ಬಿಟ್ಟುಹೋಗಬೇಕು. ಎರಡನೆಯದರ ಪ್ರಕಾರ ಆತ ಮುಂದೆ ಏನೂ ಮಾತನಾಡಬಾರದು. ಮೂರನೆಯದು ಮರಣದಂಡನೆ. ಅಥೆನ್ಸ್ ಬಿಟ್ಟು ಹೋಗಲು ಅಥವಾ ಬಾಯಿಗೆ ಬೀಗ ಹಾಕಿಕೊಂಡು ಕೂಡುವುದು ತನ್ನ ಮೇಲೆ ತಾನೇ ಮಾಡಿಕೊಳ್ಳುವ ಅಪಚಾರವೆಂದು ಬಗೆದ ಸಾಕ್ರಟೀಸ್ ಮರಣದಂಡನೆಗೇ ತಲೆಬಾಗಿದ. ವಿಷತುಂಬಿದ ಬಟ್ಟಲನ್ನು ಅವನಿಗೆ ಕುಡಿಸಿ ಮರಣದಂಡನೆ ಜಾರಿಮಾಡಿದ ಅಥೆನ್ಸ್ ಆ

ಮೂಲಕ ತನ್ನ ಮುಖಕ್ಕೆ ತಾನೇ ಮಸಿ ಬಳಿದುಕೊಂಡಿತು. ಆದರೆ ಸಾಕ್ರಟೀಸ್ ಮಾನವತೆಯ ಇತಿಹಾಸದಲ್ಲಿ ಪ್ರೇರಣ ಮೂಲವಾಗಿ ಸ್ಥಾಯಿಗೊಂಡ.

ತನಗೆ ವಿಧಿಸಲಾದ ಮರಣದಂಡನೆಯ ವಿರುದ್ಧವಾಗಿ ನ್ಯಾಯಾಲಯದ ಮುಂದೆ ಸಾಕ್ರಟೀಸ್ ಒಂದು ದೀರ್ಘವಾದ ಭಾಷಣವನ್ನೇ ಮಾಡಿದ. ಅವನು ನ್ಯಾಯಾಧೀಶರನ್ನು ಉದ್ದೇಶಿಸಿ ಹೀಗೆ ಹೇಳಿದ—

"ನಿರ್ಣಯಕಾರರೆ! ಮೃತ್ಯುವನ್ನು ನೀವು ಕೂಡ ಸಾಹಸದೊಂದಿಗೆ ಬರಮಾಡಿಕೊಳ್ಳಬೇಕಾಗುತ್ತದೆ. ಒಬ್ಬ ಒಳ್ಳೆಯ ಮನುಷ್ಯನಿಗೆ ಅವನು ಬದುಕಿರುವಾಗಲಾಗಲಿ ಅಥವಾ ಅವನು ಮರಣಹೊಂದಿದ ವೇಳೆಯಾಗಲಿ ಯಾವ ಬಗೆಯ ಆಪತ್ತೂ ಬಂದೊದಗಲಾರದು. ದೇವತೆಗಳು ಅಂಥವನ ಅದೃಷ್ಟದ ಬಗೆಗೆ ಎಂದೂ ಉದಾಸೀನದೃಷ್ಟಿಯಿಂದ ನೋಡಲಾರರು. ಈ ದಿವಸ ನನಗೆ ವಿಧಿಸಲಾಗಿರುವ ದಂಡನೆ ಆಕಸ್ಮಿಕವಂತೂ ಅಲ್ಲ ಎಂಬುದು ನನ್ನ ನಂಬಿಕೆ. ಈಗ ಸಾವಿನ ತೆಕ್ಕೆಗೆ ಸೇರಿ ಕ್ಲೇಶಗಳಿಂದ ಮುಕ್ತನಾಗುವುದೇ ಒಳ್ಳೆಯದೆನಿಸುತ್ತದೆ. ಈ ಕಾರಣದಿಂದಲೇ ನನ್ನನ್ನು ಕೈಹಿಡಿದು ನಡೆಸುತ್ತಿರುವ ತತ್ತ್ವಗಳು ಬದುಕುಳಿಯುವಂತೆ ನನಗೆ ಪ್ರೇರಣೆ ನೀಡಲಿಲ್ಲ. ನನ್ನ ಮೇಲೆ ಆರೋಪ ಮಾಡಿದವರ ಬಗೆಗೆ ನನಗೆ ರೋಷವಿಲ್ಲ. ನನ್ನನ್ನು ದೋಷಿಯೆಂದು ತೀರ್ಮಾನಿಸಿದವರ ಬಗ್ಗೆ ನನಗೆ ಸಿಟ್ಟಿಲ್ಲ....ಈಗ ನಾವು ಇಲ್ಲಿಂದ ಹೊರಡುವ ಸಮಯ ಸನ್ನಿಹಿತವಾಗಿದೆ—ನೀವು ಬದುಕುವುದಕ್ಕೆ ಹೊರಡಿ, ನಾನು ಸಾಯಲು ತೆರಳುತ್ತೇನೆ. ಆದರೆ ಸಾವು ಮತ್ತು ಬದುಕುಗಳ ನಡುವೆ ಶ್ರೇಷ್ಠ ಯಾವುದು ಎಂಬುದನ್ನು ದೇವರೇ ಬಲ್ಲ."

ಸಾಕ್ರಟೀಸನ ಬದುಕಿಗಿಂತ ಅವನ ಸಾವೇ ಶ್ರೇಷ್ಠವಾಗಿತ್ತೆಂಬುದನ್ನು ಕಾಲವೇ ಸಿದ್ಧಪಡಿಸಿ ತೋರಿಸಿತು.

ಸಾಕ್ರಟೀಸ್ ಪ್ರಮುಖವಾಗಿ ಜಿಜ್ಞಾಸು, ಜನರಲ್ಲಿ ಜಿಜ್ಞಾಸೆ ಮತ್ತು ಕುತೂಹಲಗಳನ್ನು ಹುಟ್ಟಿಸಲು ಆತ ಪ್ರಯತ್ನಮಾಡಿದ. ತನ್ನನ್ನು ಫಿಲಾಸಫರ್ ಅಥವಾ ಜ್ಞಾನಪ್ರೇಮಿ ಎಂದು ಕರೆದುಕೊಂಡ. ಆತನ ಪ್ರಕಾರ ಈ ಮಾತಿನಲ್ಲಿ ನಮ್ರತೆ ತುಂಬಿ ತುಳುಕುತ್ತದೆ. ಸತ್ಯವನ್ನು ಕಂಡುಕೊಳ್ಳುವುದರಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮದೇ ಆದ ವಿಧಾನಗಳನ್ನೂ ಸಾಧನಗಳನ್ನೂ ಬಳಸಬೇಕೆಂದು ಆತ ಆಗ್ರಹಿಸುತ್ತಿದ್ದ. ಈ ಕಾರಣದಿಂದಲೇ ಆತ ಯಾವುದೇ ಸಂಪ್ರದಾಯವನ್ನು ಹುಟ್ಟು ಹಾಕಲಿಲ್ಲ. ನಾವೇ ಕಂಡುಕೊಂಡ ಸತ್ಯದ ಬಗೆಗೆ ನಮ್ಮಲ್ಲಿ ಸಮರ್ಪಣಭಾವ ಹೆಚ್ಚಾಗಿರುತ್ತದೆ, ಹಾಗಾಗಿ ಅದು ಕಲ್ಯಾಣಕಾರಿಯಾಗಬಲ್ಲದು ಎಂಬುದು ಆತನ ಅಭಿಮತವಾಗಿತ್ತು. ಉಪದೇಶಗಳ ಮೂಲಕ ಜ್ಞಾನದಾನಮಾಡುವ ಪದ್ಧತಿಯಲ್ಲಿ ಸಾಕ್ರಟೀಸನಿಗೆ ನಂಬಿಕೆಯಿರಲಿಲ್ಲ. ಆತ ನಡೆಸುತ್ತಿದ್ದ ಚರ್ಚೆಗಳಲ್ಲಿ ಹೆಚ್ಚಾಗಿ ನೀತಿಗೆ ಸಂಬಂಧಪಟ್ಟ ಮಾತುಗಳು ಇರುತ್ತಿದ್ದವು. ಪದರ ಪದರವಾಗಿ ಆತ ತನ್ನ ಪ್ರಶ್ನೆಗಳನ್ನು ಜನರ ಎದುರಿಗೆ ಬಿಚ್ಚಿಡುತ್ತಿದ್ದ. ಹಾಗಾಗಿ ಸಹಜವಾಗಿಯೆ ವಿವಾದಗಳು, ತರ್ಕವಿತರ್ಕಗಳು ನಡೆದಾಗ ಡಂಬಾಚಾರಿಗಳ ಮತ್ತು ಪಾಖಂಡಿಗಳ ಬೆನ್ನೆಲುಬಿಗೆ ಹೊಡೆದಂತಾಗುತ್ತಿತ್ತು. ಈ ಕಾರಣದಿಂದಲೇ ಆ ಕಾಲದ ಮಠಾಧೀಶರಲ್ಲಿ ತಮ್ಮ ಅಸ್ತಿತ್ವದ ಬಗ್ಗೆಯೆ ಚಿಂತೆ ಆವರಿಸಿತು, ಏಕೆಂದರೆ ಪಾಖಂಡತನವೇ ಅವರ ಉಳಿವಿನ ಮೂಲದ್ರವ್ಯವಾಗಿತ್ತು.

ಸಾಕ್ರೆಟೀಸ್ ಅಥೆನ್ಸ್ ಬಿಟ್ಟುಹೋಗಲು ಇಲ್ಲವೆ ಬಾಯಿ ಮುಚ್ಚಿಕೊಂಡು ಕುಳಿತಿರಲು ಸುತರಾಂ ಒಪ್ಪಲಿಲ್ಲ. ಆದ್ದರಿಂದ ಆತನನ್ನು ಕಾರಾಗೃಹದಲ್ಲಿಟ್ಟರು. ಆತನ ಶಿಷ್ಯರು ತಮ್ಮ ಗುರುವನ್ನು ರಹಸ್ಯಮಾರ್ಗದಿಂದ ಬಿಡಿಸಿಕೊಂಡು ಹೋಗಬೇಕೆಂದು ಯೋಜನೆಮಾಡಿ ಜೈಲಿನಲ್ಲಿ ಆತನನ್ನು ಭೇಟಿಮಾಡಿದರು. ಸಾಕ್ರಟೀಸ್ ಓಡಿಹೋಗಲು ವಿನಯದಿಂದಲೇ ನಿರಾಕರಿಸಿದ. ಈ ರೀತಿಯಾಗಿ ಓಡಿಹೋದಲ್ಲಿ ಅಥೆನ್ಸ್ ಸರ್ಕಾರದ ಕಾನೂನು ವ್ಯವಸ್ಥೆಗೆ ಮತ್ತು ಜನತೆಗೆ ದ್ರೋಹ ಬಗೆಯುವ ಆರೋಪಕ್ಕೆ ತಾನು ಗುರಿಯಾಗುವುದಾಗಿಯೂ ಸರ್ವಥಾ ತನಗೆ ಅದು ಒಪ್ಪಿಗೆಯಿಲ್ಲವೆಂದು ಸಾಕ್ರಟೀಸ್ ಅವರನ್ನು ಸಮಾಧಾನಪಡಿಸಿ ಹಿಂದಕ್ಕೆ ಕಳುಹಿಸಿದ. ಜನತೆ ಮತ್ತು ಸರ್ಕಾರ ಮಾನ್ಯಮಾಡಿರುವ ಕಾನೂನುಗಳಿಗೆ ಮೋಸಮಾಡಲು ಆತ ಒಪ್ಪಲಿಲ್ಲ. ಈ ನಿಲುವನ್ನು ಕಾಪಾಡಿಕೊಳ್ಳುವ ಸಲುವಾಗಿ ಆತ ತನ್ನ ಪ್ರಾಣವನ್ನೇ ಒತ್ತೆಯಾಗಿಟ್ಟ.

ಧರ್ಮ ಮತ್ತು ನೀತಿನಿಯಮಗಳನ್ನು ಸಂರಕ್ಷಿಸಲು ಸಾಕ್ರೆಟೀಸ್ ತನ್ನ ಇಡೀ ಬದುಕನ್ನೇ ಮುಡುಪಾಗಿಟ್ಟ. ಆತ ಅಥೆನ್ಸ್ ಬಿಟ್ಟುಹೋಗಿದ್ದರೆ ಆತ್ಮ ಸಮರ್ಪಣೆ ಮಾಡಿಕೊಂಡ ಹಾಗಾಗುತ್ತಿತ್ತು. ಮೌನವಾಗಿಬಿಟ್ಟಿದ್ದರೆ ಪರೋಕ್ಷವಾಗಿಯಾದರೂ ತಪ್ಪನ್ನು ಒಪ್ಪಿಕೊಂಡಹಾಗಾಗುತ್ತಿತ್ತು. ತನ್ನ ನಿಲುವುಗಳನ್ನು ಮಾರಾಟಕ್ಕಿಟ್ಟು ಬದುಕನ್ನು ಪಡೆದುಕೊಳ್ಳಲು ಆತ ಖಂಡಿತ ಸಮ್ಮತಿಸಲಿಲ್ಲ. ಧ್ಯೇಯಸಾಧನೆ ಮಾಡಲು ಬದುಕನ್ನೇ ಅದಕ್ಕಾಗಿ ಮೀಸಲಿಟ್ಟ. ಈ ಲಕ್ಷ್ಯವನ್ನು ಸಾಧಿಸಲು ಸಾವು ಯಾವ ರೀತಿಯಲ್ಲೂ ಆತನನ್ನು ಎದೆಗುಂದಿಸಲಿಲ್ಲ. ಹಾಗಾಗಿಯೆ ಮರಣದಂಡನೆಯ ವಿರುದ್ಧವಾಗಿ ಸಾಕ್ರಟೀಸ್ ಸೊಲ್ಲೆತ್ತಲಿಲ್ಲ. ಪೂರ್ಣ ಶಾಂತವಾದ ಹಾಗೂ ಕುಂದದ ಮನಸ್ಥೈರ್ಯದಿಂದ ಸಾವಿಗೆ ಎದೆಯೊಡ್ಡಿದ ಸಾಕ್ರಟೀಸನ ವ್ಯಕ್ತಿತ್ವ ಇಂದು ಪ್ರಪಂಚದ ಸತ್ಯಾಗ್ರಹಿಗಳ ಮುಂದೆ ಧ್ರುವತಾರೆಯಂತೆ ಆಪ್ಯಾಯಮಾನವಾಗಿದೆ. ಸೆರೆಮನೆಯಿಂದ ತಪ್ಪಿಸಿಕೊಂಡು ಓಡಲು ಪ್ರತಿಭಟಿಸಿದ ಸಾಕ್ರಟೀಸನ ಗುರು ಆತನ ಒಳಮನಸ್ಸು ಮತ್ತು ಒಳಪ್ರಜ್ಞೆಯೇ ಆಗಿತ್ತು. ಧ್ಯೇಯಕ್ಕಾಗಿ ಬದುಕನ್ನೇ ಬಲಿಗೊಡುವ ಅತ್ಯುನ್ನತ ಆದರ್ಶವನ್ನು ಪ್ರಪಂಚದ ಮುಂದಿಟ್ಟ ಮಹಾನುಭಾವ ಆತ.

ಒಂದು ವೇಳೆ ಸಾಕ್ರಟೀಸ್ ಮರಣದಂಡನೆಗೆ ಭಯಪಟ್ಟು ಓಡಿಹೋಗಿದ್ದಿದ್ದರೆ ಪ್ರಪಂಚ [illegible] ಅನೇಕ ಆದರ್ಶಗಳಿಂದ ವಂಚಿತವಾಗುತ್ತಿತ್ತು. ಹಾಗೆ ಹೋಗಿದ್ದರೂ ಒಂದಲ್ಲ ಒಂದು ದಿನ ಆತ ಸಾಯಲೇಬೇಕಾಗಿತ್ತು. ಆದರೆ ನೀತಿ ನಿಲುವುಗಳು ಮತ್ತು ಅಂತಃಪ್ರಜ್ಞೆಯ ಹಿರಿಮೆಯನ್ನು ಪ್ರಪಂಚದ ಮುಂದೆ ಎತ್ತಿತೋರಿಸಿದ ಆತ ನೀಡಿದ ಶಿಕ್ಷಣ ಪ್ರಾಯಶಃ ಮರಣದಂಡನೆಯಿಂದ ತಪ್ಪಿಸಿಕೊಂಡು ಹೋಗಿದ್ದರೆ ಕೊಡಲಾಗುತ್ತಿರಲಿಲ್ಲವೇನೋ. ಸಾಕ್ರಟೀಸನಿಗೆ ಕೊಟ್ಟ ಮರಣದಂಡನೆಯ ಶಿಕ್ಷೆ ಅನಾದಿಕಾಲದಿಂದ ಸತ್ಯದ ಬಾಯಿಮುಚ್ಚಿಸುವ ನಿರಂತರ ಪ್ರಯತ್ನದ ಮುಂದುವರಿಕೆ ಮಾತ್ರವಾಗಿತ್ತು ಅಷ್ಟೆ. ವಿಷ ಕುಡಿದು ಸಾವಿನ ತೆಕ್ಕೆಗೆ ಬಿದ್ದ ಕ್ರಿಯೆ ಸತ್ಯಕ್ಕಾಗಿ ಒಬ್ಬ ವ್ಯಕ್ತಿ ತೆರಬೇಕಾಗಿದ್ದ ಅತ್ಯಂತ ಹೆಚ್ಚಿನ ಬೆಲೆಯಾಗಿತ್ತು. ಸತ್ಯವನ್ನು ರಕ್ಷಿಸಲು ಕೇವಲ ಸುಖ ಸೌಕರ್ಯಗಳ [illegible] ಮಾತ್ರವಲ್ಲ, ಪ್ರಾಣವನ್ನು ತ್ಯಾಗಮಾಡ

ಬೇಕಾಗುತ್ತದೆ ಎಂದು ಅವನು ಮನುಷ್ಯ ಜನಾಂಗಕ್ಕೆ ತೋರಿಸಿಕೊಟ್ಟ. ಆ ಪ್ರಾಣ ಕೂಡ ಸಾಮಾನ್ಯ ಪ್ರಾಣವಲ್ಲ, ಸಾಕ್ರಟೀಸನಂಥ ಮೇಧಾವಿಯದು.

ಸಾಕ್ರಟೀಸನ ಸಾವು ಬದುಕಿನಲ್ಲಿ ಆತ ಕಂಡುಕೊಂಡ ಎಲ್ಲ ಆದರ್ಶಗಳ ಪರಾಕಾಷ್ಠೆಯಾಗಿತ್ತು. ಬದುಕಿನುದ್ದಕ್ಕೂ ಆತ ನಡೆಸಿದ ಸತ್ಯಾನ್ವೇಷಣ ಪ್ರಯತ್ನಗಳಿಗೆ, ಪಡೆದ ಯಶಸ್ಸಿಗೆ ಆತನ ಸಾವು ಒಂದು ಪ್ರಮಾಣಪತ್ರದಂತಿತ್ತು. ಬದುಕನ್ನು ಕೇವಲ ಉಸಿರಾಟ ನಡೆಯುವ ಕ್ರಿಯೆಯಷ್ಟೆ ಎಂದು ಭಾವಿಸಿದರೆ ಸಾಕ್ರಟೀಸನ ಬದುಕು ನಿಜಕ್ಕೂ ಮಹತ್ವಪೂರ್ಣವಾಗಿತ್ತು. ಪ್ರಪಂಚವನ್ನೇ ಬದಲಾಯಿಸುವ ಒಂದು ಶಕ್ತಿಯಾಗಿ ನಾವು ಬದುಕನ್ನು ನೋಡುವುದಾದರೆ ಸಾಕ್ರಟೀಸ್ ಮೃತ್ಯುವನ್ನು ಅಪ್ಪಿ ನಡೆಸಿದ ಸಾಧನೆಯನ್ನು ಬದುಕಿ ಸಾಧಿಸಲಿಲ್ಲ. ಪ್ರಪಂಚದ ನಾಗರಿಕತೆಯ ಹಿರಿಮೆಯಲ್ಲಿ ಅತ್ಯಂತ ಪ್ರಾಚೀನವೆಂದೆನಿಸಿಕೊಂಡಿರುವ ಗ್ರೀಸ್ ದೇಶ ಅಂದು ಸಾಕ್ರಟೀಸನಿಗೆ ಮರಣದಂಡನೆ ವಿಧಿಸಿದ ದೊಡ್ಡ ತಪ್ಪನ್ನು ಇಂದು ಮನವರಿಕೆಮಾಡಿಕೊಂಡಿದೆ. ಆದರೆ ಹೇಗೋ ಏನೋ ನಡೆದುಹೋದ ಈ ತಪ್ಪು ಪ್ರಪಂಚಕ್ಕೆ ಒಂದು ಅದ್ಭುತವಾದ ಪ್ರೇರಣೆಯನ್ನು ಒದಗಿಸಿತು. ಈ ಕಾರಣಕ್ಕಾಗಿಯಾದರೂ ಪ್ರಪಂಚ ಗ್ರೀಸಿಗೆ ಆಭಾರಿಯಾಗಿರಬೇಕು.

ಸಾಕ್ರಟೀಸನಿಗೆ ಪ್ರಪಂಚದ ದಾರ್ಶನಿಕರ ಸಾಲಿನಲ್ಲಿ ವಿಶೇಷ ಸ್ಥಾನವುಂಟು. ಇದಕ್ಕೆ ಆತನ ಮೇಧಾವಿಶಕ್ತಿ ಮಾತ್ರ ಕಾರಣವಲ್ಲ ಪ್ರಾಯಃ ಆತನ ಬೋಧನೆ ಮತ್ತು ನಡವಳಿಕೆಗಳ ನಡುವೆ ಕಂಡು ಬರುವ ಏಕರೂಪತೆಯೆ ಇದಕ್ಕೆ ಮುಖ್ಯ ಕಾರಣವಾಗಿರಬೇಕು. ಪ್ರಪಂಚದ ಬಹಳಷ್ಟು ದಾರ್ಶನಿಕರು ಚಿಂತನೆ ಮನನಗಳಿಂದ ತಾವು ಕಂಡುಕೊಂಡ ವಿಚಾರಗಳಿಗೆ ಸಿದ್ಧಾಂತದ ಸ್ವರೂಪ ಕೊಟ್ಟರು. ಉಪದೇಶ ಮತ್ತು ಬರವಣಿಗೆಗಳ ಮೂಲಕ ಅದನ್ನು ಜನರ ಪ್ರಯೋಜನಕ್ಕಾಗಿ ಮುಂದಿಟ್ಟರು. ಆದರೆ ಸಾಕ್ರಟೀಸ್ ಹೆಚ್ಚೇನೂ ಹೇಳಲಿಲ್ಲ, ಹೆಚ್ಚೇನೂ ಬರೆಯಲಿಲ್ಲ. ಅಷ್ಟಾದರೂ ಆತನ ವ್ಯಕ್ತಿತ್ವ ಇಂದು ಜಿಜ್ಞಾಸು ಸಂಶೋಧಕರ ಪಾಲಿಗೆ ಅನಂತ ಪ್ರೇರಣೆಯ ಮೂಲವಾಗಿದೆ. ಇದು ಹೇಗಾಯಿತು? ಸಾಕ್ರಟೀಸನಿಗೆ ಮರಣದಂಡನೆ ವಿಧಿಸುವಂತಹ ಸಂದರ್ಭವಾದರೂ ಹೇಗೆ ಎದುರಾಯಿತು? ಆತನ ಸಾವಿನ ರೂಪದಲ್ಲಿ ಇದಕ್ಕೆ ಉತ್ತರ ನಮ್ಮ ಮುಂದೆ ಉಂಟು. ಆತನ ಈ ಗೂಢ ಸ್ವರೂಪದ ವೈಶಿಷ್ಟ್ಯವನ್ನು ಕಂಡುಕೊಳ್ಳಲು ಶತಮಾನಗಳುದ್ದಕ್ಕೂ ಚಿಂತನೆ ನಡೆಯುವುದರಲ್ಲಿ ಸಂದೇಹವಿಲ್ಲ. ಈ ನಿಗೂಢತೆಯನ್ನು ಹಲವಾರು ದಿಕ್ಕುಗಳಿಂದ ನೋಡಿದಾಗ ಎಲ್ಲವೂ ಸತ್ಯದತ್ತ ಬೆರಳುಮಾಡಿ ತೋರಿಸುತ್ತಿರುವುದು ಗಮನಕ್ಕೆ ಬರುತ್ತದೆ.

ಬದುಕಿನ ಸಾಧನೆಗಳು ಕೊನೆಗಾಣುವುದು ಸಾವಿನಲ್ಲಿ ಎಂಬುದು ಹಲವರ ಅಭಿಪ್ರಾಯ. ಹಾಗಾಗಿಯೆ ಸಾವು ಬದುಕಿಗಿಂತ ತುಂಬ ಕೀಳು ಎಂಬುದಾಗಿ ಜನ ಭಾವಿಸುವುದುಂಟು. ಆದರೆ ಸಾಕ್ರಟೀಸನಂಥ ವ್ಯಕ್ತಿಯ ಸಾವಿನಲ್ಲೇ ಒಂದು ವಿಶಿಷ್ಟ ಸಾಧನೆ ಎದ್ದು ಕಾಣುತ್ತದೆ. ಸತ್ಯಾನ್ವೇಷಣೆಗಾಗಿ ಅವನಿಗೆ ಸಂದ ಮಹದಾನ ಬಳುವಳಿ ಅದು. ಎದುರಾಳಿಗಳ ಎದುರಿನಲ್ಲಿ ಸಾವನ್ನು ಅಪ್ಪಿದರೂ ತಲೆ ಬಗ್ಗಿಸದಂತೆ ಇರುವುದನ್ನು ಅದು ನಮಗೆ ಹೇಳಿಕೊಟ್ಟಿದೆ. ಮೌಲ್ಯಗಳನ್ನು ಆದರದಿಂದ ನೋಡುವುದನ್ನು ಕಲಿಸಿ

ಕೊಟ್ಟಿದೆ, ಬಂದದ್ದನ್ನೆಲ್ಲ ಶಿಸ್ತಿನಿಂದ ಎದುರಿಸುವುದಕ್ಕೆ ಪ್ರೇರಣೆ ನೀಡಿದೆ. ಇಂಥ ಸಾವು ಬದುಕಿಗಿಂತ ಯಾವ ಬಗೆಯಲ್ಲಿ ಕಡಮೆ ಮಹತ್ವಪೂರ್ಣವಾದುದು? ನಮ್ಮ ಭಾರತ ದಲ್ಲಿ ನಚಿಕೇತನ ವ್ಯಕ್ತಿತ್ವವನ್ನು ಇದೇ ರೀತಿಯಲ್ಲಿ ಗುರುತಿಸಬಹುದು. ಯಜ್ಞದಲ್ಲಿ ತಂದೆ ಮುದಿ ಹಸುಗಳನ್ನು ದಾನವಾಗಿ ನೀಡುತ್ತಿದ್ದುದನ್ನು ಹುಡುಗ ನಚಿಕೇತ ವಿರೋಧಿಸಿದ. ಅದರ ಪರಿಣಾಮವಾಗಿ ಅವನು ಮೃತ್ಯುವನ್ನೇ ಎದುರಿಸಬೇಕಾಯಿತು. ತನ್ನ ಮನೋದಾರ್ಢ್ಯ, ಜಿಜ್ಞಾಸೆ ಮತ್ತು ಸಂಯಮಶೀಲತೆಯ ಬಲದಿಂದ ಯಮನ ಮೇಲೆಯೆ ಪ್ರಭಾವ ಬೀರಿದ ಆ ಬಾಲಕ ಅತ್ಯಂತ ಗೂಢವೆನಿಸಿದ ಜ್ಞಾನವನ್ನು ಸಂಪಾದಿಸಿಕೊಂಡ. ಸಾಕ್ರಟೀಸನ ಸಾವಿನಲ್ಲೂ ಇದೇ ಬಗೆಯ ಪರಿಣತೆಯನ್ನು ಕಾಣ ಬಹುದು. ಆತನ ಸಾವಿನ ಮಹತ್ವ ಬದುಕಿಗಿಂತ ಯಾವ ರೀತಿಯಲ್ಲೂ ಕಡಮೆ ಯಾಗಿರಲಿಲ್ಲ.

ಅನು : ಲಕ್ಷ್ಮೀನಾರಾಯಣ ಅರೋರ

ಮನುಷ್ಯ ಎಷ್ಟರ ಮಟ್ಟಿಗೆ ಇತರರ ಒಳ್ಳಿಯದಕ್ಕೆ ದುಡಿಯುತ್ತಾನೆಯೊ ಅಷ್ಟರ ಮಟ್ಟಿಗೆ ಅವನು ದೊಡ್ಡವನಾಗುತ್ತಾನೆ.

ನೀನೇನು ಕೊಡಬಲ್ಲೆ ಎನ್ನುವುದರ ಮೇಲೆ ನಿನ್ನ ಸುಖ ನಿಂತಿದೆಯೇ ಹೊರತು ನೀನೇನು ತೆಗೆದುಕೊಳ್ಳಬಲ್ಲೆ ಎನ್ನುವುದರ ಮೇಲಲ್ಲ.

ಗಾಂಧೀಜಿ

ಭೂಜಲ (ಅಂತರ್ಜಲ)ದ ವೈಶಿಷ್ಟತೆ

ಡಾ|| ಹೆಚ್. ಎಸ್. ನಾಗಭೂಷಣಯ್ಯ

ಭೂಜಲದ ಪರಿಚಯ ಮೊನ್ನೆಯವರೆಗೂ ಗೂಢವಾಗಿಯೇ ಉಳಿದಿತ್ತು. ಆದರೆ ಮಿತಿ ಇಲ್ಲದೆ ಹೆಚ್ಚುತ್ತಿರುವ ಜನಸಂಖ್ಯೆಯ ನೀರಿನ ಅವಶ್ಯಕತೆಯನ್ನು ಈಡೇರಿಸಲು ಮತ್ತು ಸಕಾಲಕ್ಕೆ ಬಾರದಿರುವ ಮಳೆಯಿಂದ ಉಂಟಾಗುವ ಅನಾವೃಷ್ಟಿ ಕೊರತೆಗಳನ್ನು ನಿವಾರಿಸಲು ಸರ್ಕಾರವಲ್ಲದೆ ಸಾಮಾನ್ಯ ಜನರ ದೃಷ್ಟಿಯೂ ಭೂಜಲದ ಕಡೆಗೆ ಹರಿದಿದೆ.

ಪ್ರತಿ ಗ್ರಾಮದಲ್ಲೂ ಕುಡಿಯುವ ನೀರಿಗೆ ಒಂದು ಬಾವಿ, ಬಟ್ಟೆ ಮತ್ತು ಜಾನವಾರುಗಳನ್ನು ತೊಳೆಯುವುದಕ್ಕೆ ಒಂದು ಕೆರೆ ಇಲ್ಲವೇ ನದಿಸೋಪಾನ ಇವು ತಲೆತಲಾಂತರದಿಂದ ಸಮಾಜದ ಕೊಡುಗೆಯಾಗಿ ಬಂದಿತ್ತು. ಭೂಜಲ, ಸಾಮಾನ್ಯ ಜನರ ವಾಡಿಕೆಯಲ್ಲಿ ಭೂಗರ್ಭದಲ್ಲಿ ಅಡಗಿರುವ ಲೋಹ ಸಂಪನ್ನಗಳ ಗುಂಪಿಗೆ ಸೇರಿರುವುದೆಂಬ ಭಾವನೆ ಇತ್ತು. ಕ್ರಯಪತ್ರ ಮುಂತಾದ ಕ್ರಿಯೆಗಳಲ್ಲಿ ಭೂಕ್ಷೇತ್ರ ಅಷ್ಟೇ ಅಲ್ಲದೆ ಅದರ ವಿಸ್ತೀರ್ಣದ ತಳಭಾಗದಲ್ಲಿ ಅಡಕವಾಗಿರಬಲ್ಲ ಖನಿಜ ಮತ್ತು ಜಲ ಸಂಪತ್ತನ್ನು ಒಪ್ಪಿಸಿರುವುದಾಗಿ ನಮೂದಿಸಲಾಗುತ್ತಿತ್ತು. ಭೂಜಲ ಸ್ವಸ್ಥಳದಲ್ಲಿ ಖನಿಜಾಂಶಗಳಂತೆ ಸ್ಥಿರವಾಗಿ ನೆಲಸಿರುವುದೆಂಬ ನಂಬಿಕೆ ಇನ್ನೂ ಅನೇಕರಲ್ಲಿದೆ. ಚಿಲುಮೆ, ಬುಗ್ಗೆ, ಕಾರಂಜಿಗಳು, ಜೌಗು, ಕೊಳ್ಳೇದೆವ್ವ ಮುಂತಾದ ಪ್ರತೀಕಗಳು ಜನಸಮೂಹದಲ್ಲಿ ಇಂದಿಗೂ ಗೂಢವಾದ ಒಗಟೆಗಳಾಗಿ ಉಳಿದಿರುತ್ತವೆ.

ಕೆಲವು ದೇಶಗಳಲ್ಲಿ ಭೂಜಲದ ಬಳಕೆ ಬಹಳ ಹಿಂದೆಯೇ ಉನ್ನತ ಮಟ್ಟದಲ್ಲಿ ಏರ್ಪಟ್ಟಿತ್ತೆಂಬುದನ್ನು ಭೂಜಲದ ಇತಿಹಾಸದಿಂದ ತಿಳಿಯಬಹುದು. ನಮ್ಮ ದೇಶದಲ್ಲೂ ಪುರಾತನ ಕೋಟೆ ಕೊತ್ತಲುಗಳಲ್ಲಿ ನಿರ್ಮಿತವಾಗಿದ್ದ ಕಂದಕಗಳು ಇದಕ್ಕೆ ಸಾಕ್ಷಿಗಳಾಗಿರುತ್ತವೆ. ಅಲ್ಲದೆ ಬೆಟ್ಟಗಳಲ್ಲಿ ಏರ್ಪಟ್ಟ ಚಿಲುಮೆಗಳನ್ನೊಳಗೊಂಡ ಕೊಳಗಳೂ ಮತ್ತು ಮಹಾ ಕ್ಷೇತ್ರಗಳಲ್ಲಿರುವ

ಪುಷ್ಕರಣಿಗಳೂ ಈಗಲೂ ಬಳಕೆಯಲ್ಲಿವೆ. ಭೂಜಲದ ಪೂರ್ಣ ಪರಿಚಯ, ಇದರ ಉಪಯುಕ್ತತೆ, ಗುಣ ಅವಗುಣ, ನಿರೂಪಣೆಗಳು ದೇಶವಿದೇಶಗಳಲ್ಲಿ ಪರಿಶೀಲಿಸಲ್ಪಟ್ಟಿದ್ದರೂ ಅವುಗಳ ಪೂರ್ಣ ವಿವರ ಮತ್ತು ಸಮಸ್ಯೆಗಳ ವಿಮರ್ಶೆ ಪೂರ್ಣವಾಗಿಯಾಗಲೀ ಅಥವಾ ಅರ್ಥಗರ್ಭಿತ ಸರಣಿಯಲ್ಲಾಗಲೀ ನಮ್ಮಲ್ಲಿ ಸ್ಥಿರಪಟ್ಟಿಲ್ಲ. ಮುಂದಿನ ಸರಣಿಯಲ್ಲಿ ಭೂಜಲ ವಿಜ್ಞಾನದ ಪರಿಚಯವನ್ನು ಸರಳ ರೀತಿಯಲ್ಲಿ ಹೊಂದಿಸಿರುತ್ತದೆ.

ಭೂಮಿಯಲ್ಲಿ ಪ್ರವೇಶಿಸುವ ನೀರೆಲ್ಲವೂ ಭೂಜಲವೇ?

ಮಳೆ, ನದಿ, ನಾಲೆ, ಚರಂಡಿ, ನೀರಾವರಿ ಪ್ರದೇಶ ಮುಂತಾದ ಜಲಮೂಲಗಳಿಂದ ಪ್ರವಹಿಸಿದ ನೀರು ಅಲ್ಲಿನ ಭೂಮಿಯ ಸಂಪರ್ಕಗೊಂಡು ಅದರ ಸಚ್ಛಿದ್ರ ರಂಧ್ರಗಳ ಮೂಲಕ ಭೂಮಿಯ ಒಳಕ್ಕೆ ಪ್ರವೇಶಿಸಬಲ್ಲದು. ಹೀಗೆ ಭೂಮಿಯಲ್ಲಿ ತಂಗಿದ ನೀರೆಲ್ಲವೂ ಭೂಜಲವೆನ್ನಿಸಿಕೊಳ್ಳುವುದಿಲ್ಲ. ಭೂಮಿಯನ್ನು ಪ್ರವೇಶಿಸಿದ ನೀರು ಭೂಮಿಯ ಗುರುತ್ವ ಕೇಂದ್ರದತ್ತ ಮುಂದುವರಿದರೂ ಭಾಗಶಃ ಮೇಲ್ಭಾಗದ ಮಣ್ಣಿನ ತಳದಲ್ಲಿಯೇ ಉಳಿಯುವುದು. ಕ್ರಮೇಣ ಭೂಮಿಯ ಗುರುತ್ವ ಆಕರ್ಷಣಾ ಶಕ್ತಿಯಿಂದ ಮತ್ತು ಮಣ್ಣಿನ ಕಣಗಳಲ್ಲಿ ಏರ್ಪಟ್ಟ ರಂಧ್ರಗಳ ಅಳನಡಿಕೆಯನ್ನು ಅನುಸರಿಸಿ ತಂಗುತ್ತಾ ಹೋಗಿ ಪೂರ್ಣಭರಿತ ಪ್ರದೇಶವನ್ನು ಪ್ರವೇಶಿಸುವುದು. ಅಂದರೆ ಭೂಮಿಯ ತಳದ ಮೇಲ್ಭಾಗ ಪ್ರದೇಶದಲ್ಲಿ ಪಾರ್ಶ್ವತಃ ಮತ್ತು ಕೆಳಗೆ ಪೂರ್ಣ ಜಲಭರಿತ ಪ್ರದೇಶಗಳು ಏರ್ಪಟ್ಟಿರುತ್ತವೆ. ಪೂರ್ಣ ಜಲಭರಿತದ ಮೇಲ್ಮೈಯನ್ನು ನೀರುಜಾರು ಎಂದು ಕರೆಯುತ್ತೇವೆ. ಭೂಮಿಯನ್ನು ಪ್ರವೇಶಿಸಿದ ನೀರು ಮೊದಮೊದಲು ಶುಷ್ಕ ಇಲ್ಲವೇ ಪಾರ್ಶ್ವತಃ ಜಲಭರಿತ ಪ್ರಾಂತದಲ್ಲಿ ಹರಿದು ಅಲ್ಲಿನ ಅವಶ್ಯಕತೆಯನ್ನು ಪೂರೈಸಿ ನಂತರ ಉಳಿದ ಭಾಗ ಅಂತಿಮವಾಗಿ ತಂಗಿ ಜಲಭರಿತ ಪ್ರಾಂತ್ಯವನ್ನು ಸೇರುವುದು. ಈ ರೀತಿ ಪೂರ್ಣ ಜಲಭರಿತ ಪ್ರಾಂತ್ಯವನ್ನು ಸೇರಿ ಅಲ್ಲಿ ಶೇಖರಣೆಯಾದ ನೀರನ್ನು ಮಾತ್ರ ನಾವು ಭೂಜಲವೆಂದು ಕರೆಯುತ್ತೇವೆ. ಸ್ವಲ್ಪವೇ ಮಳೆಯಾದಾಗ ಭೂಮಿಯಲ್ಲಿ ತಂಗಿದ ನೀರು ತಳದ ಮೇಲ್ಭಾಗದಲ್ಲಿಯೇ ಉಳಿದು ಅಲ್ಲಿಯ ಮಣ್ಣಿನ ಭಾಗವನ್ನು ಪಾರ್ಶ್ವತಃ ಜಲಭರಿತಗೊಳಿಸಲಲ್ಲದು. ಈ ನೀರು ಅಲ್ಲಿ ನಿರ್ಮಿತವಾದ ಸಸ್ಯಗಳ ಬೇರಿಗೆ ಆಶ್ರಯವಾಗಬಲ್ಲದು. ಹೆಚ್ಚಿನ ಮಳೆ ಅಥವಾ ಸತತ ಮಳೆಯಿಂದ ತಂಗಿದ ನೀರು ಆಳ ಪ್ರದೇಶಕ್ಕೆ ಹರಿದು ನೀರುಜಾರು ಗಡಿಯನ್ನು ಪ್ರವೇಶಿಸಿ ಪೂರ್ಣ ಜಲಭರಿತ ಪ್ರದೇಶದಲ್ಲಿ ಮಿಲಿನವಾಗಿ ಭೂಜಲವಾಗಬಲ್ಲದು.

ಭೂಜಲ ಶೇಖರಣೆಯ ಪರಿ

ಭೂಮಿಯಲ್ಲಿ ಪ್ರಕೃತಿ ನಿರ್ಮಿತವಾದ ವಿವಿಧ ಮಣ್ಣಿನ ಪಂಗಡಗಳೆಂದರೆ—ಜೇಡಿ, ಮೆಕ್ಕಲು, ಮರಳು, ಗ್ರಾವಲ್, ಶಿಲೆಗಳು, ಬಂಡೆ ಮುಂತಾದುವು. ಇವುಗಳೆಲ್ಲವೂ ತಮ್ಮ ರಚನೆಗೆ ಅನುಗುಣವಾಗಿ ಸಚ್ಛಿದ್ರತಾ ರಂಧ್ರಗಳನ್ನು ಪಡೆದಿರುತ್ತವೆ. ಈ ರಂಧ್ರಗಳಲ್ಲಿ ಭೂಜಲವು ಶೇಖರವಾಗಿ ಚಲನೆಗೂ ಅನುಕೂಲಕಾರಿಯಾಗಿರುತ್ತದೆ. ಭೂಜಲದ ಶೇಖರಣೆ, ವಿಸ್ತರಣೆ ಮತ್ತು ಚಲನೆಗಳು ಮಣ್ಣಿನ ಕಣಗಳ ಗಾತ್ರ, ಆಕಾರ, ಒತ್ತಾದ ಜೋಡಣೆ ರಂಧ್ರಗಳ ಪ್ರಮಾಣ (ಸಂಖ್ಯೆ) ಇವುಗಳನ್ನು ಅವಲಂಬಿಸಿರುತ್ತದೆ. ಈ ಕೆಳಗಿನ ಪಟ್ಟಿ ಸಾಮಾನ್ಯ ಮಣ್ಣಿನ ವರ್ಗಗಳ ಲಕ್ಷಣವನ್ನು ಸೂಚಿಸುತ್ತವೆ.

ಮಣ್ಣಿನ ರಚನೆ	ರಂಧ್ರಗಳ ಪ್ರಮಾಣ (ಮಣ್ಣಿನ ಪ್ರಮಾಣದ ಹೋಲಿಕೆಯಲ್ಲಿ ನೂರರಲ್ಲಿಯ ಅಂಶ)
೧. ಮೆಕ್ಕಲು ಮತ್ತು ಜೇಡಿ	೪೫ ರಿಂದ ೫೦
೨. ಸಣ್ಣ ಮರಳು	೪೦ ರಿಂದ ೫೦
೩. ಮರಳು ಮತ್ತು ಗ್ರಾವಲ್ ಮಿಶ್ರ	೧೦ ರಿಂದ ೬೦
೪. ಗಟ್ಟಿ ಬಂಡೆ	೧ಕ್ಕೂ ಕಡಿಮೆ
೫. ಒಡಕು ಬಂಡೆ	೨ ರಿಂದ ೧೨
೬. ಪೊಠರುಗಳಿಂದ ಕೂಡಿರುವ ಸಣ್ಣ ಕಲ್ಲು	೧೦ ರಿಂದ ೨೦

ಹೆಚ್ಚಿನ ಸಚ್ಛಿದ್ರತಾ ರಂಧ್ರಗಳಿಂದ ಕೂಡಿದ ರಚನೆಯಾವುದು? ಮರಳೋ ಅಥವಾ ಜೇಡಿಯೋ? ಇವುಗಳಲ್ಲಿ ಯಾವ ರಚನೆ ಭೂಜಲದ ಶೇಖರಣೆ ಮತ್ತು ಚಲನೆಗೆ ಅನುಕೂಲಕಾರಿ?

ಸಚ್ಛಿದ್ರತಾ ರಂಧ್ರಗಳಿಂದ ಕೂಡಿರುವ ರಚನೆ ಮಣ್ಣಿನ ಅಥವಾ ಬಂಡೆಯ ಒಂದು ಲಕ್ಷಣ. ಈ ರಂಧ್ರಗಳ ಗಾತ್ರ ಮತ್ತು ಅವುಗಳ ಸಂಖ್ಯೆ ಹಾಗೂ ವಿತರಣೆ ಆ ಮಣ್ಣಿನ ಕಣಗಳ ಗಾತ್ರ, ಆಕಾರ, ಜೋಡಣೆಗಳನ್ನು ಅವಲಂಬಿಸಿರುತ್ತದೆ. ಮಣ್ಣಿನ ಸಚ್ಛಿದ್ರತಾ ರಂಧ್ರಗಳ ಪ್ರಮಾಣವನ್ನು ಅದಕ್ಕೆ ಸಂಬಂಧಿಸಿದ ಮಣ್ಣಿನ ಗಾತ್ರಕ್ಕೆ ಹೋಲಿಸಿ ಶೇಕಡಾವಾರು ಮಟ್ಟದಲ್ಲಿ ವ್ಯಕ್ತಪಡಿಸಬಹುದು. ಭೂಜಲ ಶೇಖರಣೆ ಮತ್ತು ಚಲನೆ ಮಣ್ಣಿನ ರಂಧ್ರಗಳ ರಚನೆಯನ್ನು ಹೊಂದಿಕೊಂಡಿರುತ್ತದೆ. ನಿರ್ದಿಷ್ಟ ವ್ಯಾಪಕ ಅಂಶವು ತನ್ನಲ್ಲಿರುವ ನೀರನ್ನು ಬಿಟ್ಟು ಕೊಡಬಲ್ಲ ಇಲ್ಲವೇ ಹರಿಯಬಿಡಬಲ್ಲ ಲಕ್ಷಣವನ್ನು ಸೂಚಿಸುತ್ತದೆ. ಹಾಗೆಯೇ ನಿರ್ದಿಷ್ಟ ರೋಧಕ ಅಂಶ ತಡೆಹಿಡಿಯ ಬಲ್ಲ ಅಂಶವನ್ನು ಸೂಚಿಸುತ್ತದೆ.

$$\text{ನಿರ್ದಿಷ್ಟ ವ್ಯಾಪಕ ಅಂಶ (ಜಲಪೂರಿತ ಸ್ಥಿತಿಯಲ್ಲಿ)} = \frac{\text{ಪ್ರಯೋಗದಲ್ಲಿರುವ ಮಣ್ಣು ಬಿಟ್ಟು ಕೊಡಬಲ್ಲ ನೀರಿನ ಪ್ರಮಾಣ (ಗಾತ್ರ)}}{\text{ಪ್ರಯೋಗದಲ್ಲಿರುವ ಮಣ್ಣಿನ ಪ್ರಮಾಣ (ಗಾತ್ರ)}} \times ೧೦೦$$

$$\text{ನಿರ್ದಿಷ್ಟ ರೋಧಕ ಅಂಶ (ಜಲಪೂರಿತ ಸ್ಥಿತಿಯಲ್ಲಿ)} = \frac{\text{ಪ್ರಯೋಗದಲ್ಲಿರುವ ಮಣ್ಣು ತಡೆ ಹಿಡಿದಿರುವ ನೀರಿನ ಪ್ರಮಾಣ (ಗಾತ್ರ)}}{\text{ಪ್ರಯೋಗದಲ್ಲಿರುವ ಮಣ್ಣಿನ ಪ್ರಮಾಣ (ಗಾತ್ರ)}} \times ೧೦೦$$

ಜೇಡಿ ಮತ್ತು ಮೆಕ್ಕಲುಗಳ ರಚನೆ, ಗ್ರಾವಲ್ ಮತ್ತು ಮರಳುಗಳ ರಚನೆಗಳಿಗಿಂತ ಹೆಚ್ಚಿನ ರಂಧ್ರಗಳನ್ನು ಪಡೆದಿರುತ್ತವೆ. ಒಡಕು ಬಂಡೆಗಳು ಮತ್ತು ಸಣ್ಣ ಕಲ್ಲು

ಗಳು ತಮ್ಮಲ್ಲಿನ ಬಿರುಕು, ಸಂದಿ ಮತ್ತು ಸಂಘಟಿತ ಕೊಳವೆ, ಪೊಠರುಗಳ, ಹೊಂದಾಣಿಕೆಯಿಂದ ಭೂಜಲ ಶೇಖರಣೆಗೆ ಅನುಕೂಲಕಾರಿಗಳಾಗಿರುತ್ತವೆ.

ಜೇಡಿ ಮತ್ತು ಮೆಕ್ಕಲು ರಚನೆ ಹೆಚ್ಚಿನ ಪ್ರಮಾಣದ ರಂಧ್ರಗಳನ್ನು ಪಡೆದಿದ್ದರೂ,ಆ ರಂಧ್ರಗಳ ಗಾತ್ರ ತುಂಬಾ ಕಿರಿದಾಗಿರುವುದು. ರಂಧ್ರಗಳಿಂದ ಏರ್ಪಟ್ಟ ಲೋಮನಾಳಗಳಲ್ಲಿ ನೀರು ಮತ್ತು ಮಣ್ಣಿನ ಪರಸ್ಪರ ಆಂತರಿಕ ಆಕರ್ಷಣೆಯಿಂದಾಗಿ ಅಲ್ಲಿಯ ಜಲವು ಭದ್ರವಾಗಿ ಹಿಡಿದಿರಲಾಗುವುದು. ಆದರೆ ಮರಳು, ಗ್ರಾವಲ್‌ಗಳಲ್ಲಿ ಏರ್ಪಟ್ಟ ರಂಧ್ರಗಳ ಹಾಗೂ ಲೋಮನಾಳಗಳ ಗಾತ್ರ ದೊಡ್ಡದಾದ್ದರಿಂದ ನೀರು ಮತ್ತು ಮಣ್ಣಿನ ಅಂತರಿಕ ಆಕರ್ಷಣೆ ಕುಸಿದು ತನ್ನಲ್ಲಿನ ನೀರನ್ನು ಸುಲಭವಾಗಿ ಬಿಟ್ಟುಕೊಡುತ್ತವೆ. ಆದ್ದರಿಂದ ಜೇಡಿ ಮತ್ತು ಮೆಕ್ಕಲುಗಳು ಹೆಚ್ಚಿನ ರಂಧ್ರಗಳನ್ನು ಪಡೆದಿದ್ದರೂ ಜಲಪೂರಿತ ಸ್ಥಿತಿಯಲ್ಲಿ ಕೂಡ ನಿರ್ದಿಷ್ಟ ವ್ಯಾಪಕ ಅಂಶವನ್ನು ಕಡಿಮೆ ಹೊಂದಿರುವುವು. ಆದರೆ ಮರಳು, ಗ್ರಾವಲ್‌ಗಳ ರಚನೆ ತಮ್ಮಲ್ಲಿ ಅಡಕವಾದ ನೀರನ್ನು ಸುಲಭವಾಗಿ ಬಿಟ್ಟುಕೊಡುವುದಲ್ಲದೆ ಭೂಜಲದ ಚಲನೆಗೆ ಅನುಕೂಲಕಾರಿಯಾಗಿರುತ್ತದೆ. ಈ ಕೆಳಗಿನ ಪಟ್ಟಿಯಿಂದ ವಿವಿಧ ಮಣ್ಣಿನ ರಚನೆಗಳ ವ್ಯಾಪಕ ಗುಣ ಲಕ್ಷಣಗಳನ್ನು ತಿಳಿಯಬಹುದು.

ವಿವಿಧ ಮಣ್ಣಿನ ರಚನೆಯಲ್ಲಿ ದೊರೆಯುವ ಭೂಜಲದ ಪ್ರಮಾಣ

ಮಣ್ಣಿನ ರಚನೆ	ಮಣ್ಣಿನ ರಂಧ್ರಗಳ ಪ್ರಮಾಣ (ನೂರಕ್ಕೆ)	ನಿರ್ದಿಷ್ಟ ವ್ಯಾಪಕ ಅಂಶ	ನಿರ್ದಿಷ್ಟ ರೋಧಕ ಅಂಶ
ಗ್ರಾವಲ್	೩೫	೨೫	೧೦
ಮರಳು	೪೦	೨೦	೨೦
ಮೆಕ್ಕಲು	೪೫	೧೦	೩೫
ಜೇಡಿ	೫೦	೮	೪೨
ಗಟ್ಟಿಬಂಡೆ	೪	೨	೨
ಒಡಕು ಬಂಡೆ	೬	೪	೨
ಪೊಡರುಗಳಿಂದ ಕೂಡಿದ ಸುಣ್ಣಕಲ್ಲು	೧೫	೮	೭

ಭೂಜಲ ಜಲಧರ (ಜಲಾಶಯ)ಗಳ ರಚನೆ

ಭೂಜಲ ಶೇಖರಣೆ, ಚಲನೆ ಮತ್ತು ವಿಸ್ತರಣೆಗಳಿಗೆ ಅನುಕೂಲವಾದ ಮಣ್ಣಿನ ರಚನೆ ಮತ್ತು ಶಿಲಾಸ್ತರಗಳನ್ನು ಜಲಧರಗಳೆಂದು ಕರೆಯುತ್ತೇವೆ. ಅತ್ಯುತ್ತಮ ಜಲಧರಗಳಾದ ಮರಳು ಮತ್ತು ಗ್ರಾವಲ್ ಮಿಶ್ರಗಳ ರಚನೆಯನ್ನು ನದಿ ಕಣಿವೆಗಳಲ್ಲಿ ಕಾಣಬಹುದು. ಒಡಕು ಮತ್ತು ಬಿರುಕುಗಳಿಂದ ಕೂಡಿನ ಬಂಡೆಗಳೂ ಮತ್ತು ಸಂದಿ, ಪೊಡರುಗಳಿಂದ ಕೂಡಿದ ಸುಣ್ಣಕಲ್ಲಿನ ಸರಣಿಯೂ ಭೂಜಲ ಶೇಖರಣೆ ಮತ್ತು ಚಲನೆಗೆ ಅನುಕೂಲಕಾರಿಯಾಗಿರುತ್ತದೆ. ಜಲಧರಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು.

೧) ತೆರೆದ ಅಥವಾ ನೀರು ಜಾರಿನ ಜಲಧರಗಳು.
೨) ಸುರಂಗ ಜಲಧರಗಳು.

ತೆರೆದ ಜಲಧರಗಳು : ಭೂಮಿಯನ್ನು ಪ್ರವೇಶಿಸಿದ ನೀರು ನೇರವಾಗಿ ತಂಗಿ ನೀರು ಜಾರನ್ನು ದಾಟಿ ಜಲಪೂರಿತ ಪ್ರಾಂತ್ಯವನ್ನು ಸೇರಿ ಭೂಜಲವಾಗುವುದು. ಈ ಜಲ ಪ್ರಾಂತ್ಯವನ್ನು ತೆರೆದ ಜಲಧಾರೆಗಳೆಂದು ಕರೆಯುತ್ತೇವೆ. ಸ್ವಾಭಾವಿಕವಾಗಿ ನೆಲಬಾವಿಗಳು ತೆರೆದ ಜಲಧರಗಳಲ್ಲಿ ಏರ್ಪಟ್ಟಿರುತ್ತದೆ.

ಸುರಂಗ ಜಲಧರಗಳು : ಭೂಮಿಯ ಮೇಲಿನ ನೀರು ಬಂಡೆಗಳ ಮತ್ತು ಇತರೆ ಅವ್ಯಾಪ್ತಿ ಗಡಿಗಳ ಮಧ್ಯೆ ಬಿರುಕುಗಳಲ್ಲಿ ಹರಿದು ಸುರಂಗ ಜಲಾಶಯಗಳಾಗಿ ಏರ್ಪಟ್ಟ ರಚನೆಗೆ ಸುರಂಗ ಜಲಧರಗಳೆನ್ನುತ್ತೇವೆ. ಇವುಗಳಿಗೆ ನೀರಿನ ಸರಬರಾಜು ದೂರದ ಎಲ್ಲೆಯಿಂದ ಹೊಂದಿಸಲ್ಪಟ್ಟಿರುತ್ತದೆ. ಸುರಂಗ ಜಲಧರಗಳ ವೈಶಿಷ್ಟವೆಂದರೆ ಇದರಲ್ಲಿ ಅಡಕವಾಗಿರುವ ಭೂಜಲ ಪ್ರಮಾಣ ಸಾಕಷ್ಟಿದ್ದು ಹೆಚ್ಚಿನ ಒತ್ತಡವನ್ನು ಪಡೆದಿರುತ್ತದೆ.

ಭೂಜಲದ ಮೂಲ—ಜಲಪರಿವರ್ತನ ಚಕ್ರ

ಸಮುದ್ರ ಹಾಗೂ ಭೂಮಿಯ ಮೇಲೆ ಸಂಗ್ರಹವಾಗಿರುವ ನೀರು ಸೌರಶಕ್ತಿಯಿಂದ ಪರಿವರ್ತನೆ ಹೊಂದಿ ಆವಿಯಾಗಿ ಹೊರಪಟ್ಟು ತುಂತುರಾಗಿ ವಾಯುಮಂಡಲವನ್ನು ಸೇರುವುದಷ್ಟೆ. ಗಾಳಿಗಿಂತಲೂ ಈ ತುಂತುರು ಹಗುರವಾದ್ದರಿಂದ ಗಾಳಿಯಲ್ಲಿ ಅಡಕವಾಗಿ ಗಗನದಲ್ಲಿ ತೇಲುತ್ತಿರಲು ಸಾಧ್ಯ. ಗಾಳಿಯಲ್ಲಿ ಶೈತ್ಯಾಂಶ ಕಡಿಮೆಯಾದಂತೆಲ್ಲಾ ತೇವದ ಅಂಶ ಪೂರ್ಣಭರಿತವಾಗಬಲ್ಲದು. ಗಾಳಿಯಲ್ಲಿರುವ ಧೂಳಿನ ಇಲ್ಲವೇ ರಸಾಯನಿಕ ವಸ್ತುಗಳ ಕಣಗಳ ಸುತ್ತ ತುಂತುರಗಳು ಕಲೆತು ಬೆಳೆದು ಮೋಡಗಳಾಗಿ ಪರಿಣಮಿಸುವುವು. ಸೂರ್ಯನ ಶಾಖದ ಪ್ರಭಾವದಿಂದ ತಯಾರಾದ ಬಿರುಸಿನ ಮಾರುತಗಳ ಝುಂಜಾಟಕ್ಕೆ ಸಿಕ್ಕಿ ಮೋಡಗಳು ಸ್ಥಳಾಂತರ ಹೊಂದುವುದಲ್ಲದೆ ಮೋಡದಲ್ಲಿನ ಕಣಗಳು ಗಗನದಲ್ಲಿ ಹೆಚ್ಚು ಹೆಚ್ಚು ಮೇಲಕ್ಕೆ ತಲುಪಿ ಅಲ್ಲಿ ಹೆಚ್ಚಿನ ಶೈತ್ಯಕ್ಕೆ ಒಳಪಟ್ಟು ಘನೀಕೃತವಾಗಿ ಮಂಜಿನ ಗಡ್ಡೆಗಳಾಗಬಲ್ಲವು. ಮೋಡಗಳ ಚಲನೆ ಮತ್ತು ಘರ್ಷಣೆಗಳು ಈ ಕಾರ್ಯವನ್ನು ಇನ್ನೂ ತ್ವರಿತಗೊಳಿಸುವುವು. ಈ ರೀತಿ ಸಾಂದ್ರೀಕೃತವಾದ ಭಾರವಾದ ಮಳೆ ಹನಿಗಳಿಂದ ಕೂಡಿದ ಮೋಡಗಳು ಮಳೆ ಸುರಿಸಲು ಶಕ್ಯವಾಗುವುವು.

ಭೂಮಿಯನ್ನು ತಲುಪಿದ ಮಳೆ ನೀರು ಹರಿಯತೊಡಗಿದಾಗ ಸುಮಾರು ನೂರರಲ್ಲಿ ೫೦ ರಿಂದ ೬೦ ಭಾಗ ಆವಿಯಾಗಿ ವಾಯುಮಂಡಲಕ್ಕೆ ಹಿಂತಿರುಗುವುದು. ಉಳಿದ ಭಾಗ ಭೂಮಿಯ ಮೇಲೆ ಹರಿಯುತ್ತಾ ಹಳ್ಳ, ಕೊಳ್ಳ, ನದಿಗಳ ಮೂಲಕ ಸಮುದ್ರವನ್ನು ಸೇರುವುದು. ಭೂಮಿಯ ಮೇಲೆ ಹರಿಯುವಾಗ ಕೆಲವು ಭಾಗ ಸಚ್ಛಿದ್ರತೆಯಿಂದ ಕೂಡಿದ ಭೂಮಿಯನ್ನು ಪ್ರವೇಶಿಸಿ ಭೂಮಿಯ ಗುರುತ್ವಾಕರ್ಷಣ ಶಕ್ತಿಗೆ ಒಳಪಟ್ಟು ಭೂತಳದಲ್ಲಿ ಎಲ್ಲಾ ದಿಕ್ಕುಗಳಿಗೂ ಪಸರಿಸಲು ತೊಡಗುವುದು. ಈ ಚಲನೆಯಲ್ಲಿ ತಂಗಿ ನೀರುಜಾರನ್ನು ಸೇರಿದ ನೀರು ಭೂಜಲವಾಗಿ ಏರ್ಪಡುವುದು. ಹಾಗೆ ಶೇಖರಣೆಯಾಗುವುದಲ್ಲದೆ ಚಲಿದು ಕೊನೆಯಲ್ಲಿ ಸಮುದ್ರ ಸೇರಬಲ್ಲದು. ಸಂಕ್ಷಿಪ್ತ

ವಾಗಿ ಹೇಳುವುದಾದರೆ 'ಜಲ ಪರಿವರ್ತನ ಚಕ್ರ'ಕ್ಕೆ ಒಳಪಟ್ಟ ನೀರು ವಿವಿಧ ರೂಪಗಳಲ್ಲಿ ಜಲ, ವಾಯು ಮತ್ತು ಭೂಮಂಡಲಗಳಲ್ಲಿ ಸತತವಾದ ಚಲನೆಯಲ್ಲಿ ತೊಡಗಿದ್ದು ಅಂತಿಮವಾಗಿ ಮೂಲಸ್ಥಾನವಾದ ಸಮುದ್ರವನ್ನು ಸೇರುವುದು. ಆದ್ದರಿಂದ ಭೂಜಲದ ಕಾರ್ಯಾಚರಣೆ ಜಲಪರಿವರ್ತನ ಚಕ್ರದ ಒಂದು ಅಂಗವಾಗಿರುತ್ತದೆ. ವಾಯುಮಂಡಲ ದಿಂದ ಭೂಮಂಡಲಕ್ಕೆ ತಲುಪುವ ಮಳೆ ನೀರೇ ಭೂಜಲದ ಮೂಲಾಧಾರ.

ಭೂ, ವಾಯು, ಜಲಮಂಡಲಗಳಲ್ಲಿ ಅಡಕವಾಗಿರುವ ನೀರಿನ ಪ್ರಮಾಣ ಮತ್ತು ಭೂಜಲದ ಅಂಶ:

ವಿಭಾಗ	ನೀರಿನಪ್ರಮಾಣ (೧೦೦೦ ಘನ ಕಿಲೋಮೀಟರ್‌ಗಳಲ್ಲಿ)	ನೂರರಲ್ಲಿನ ಅಂಶ
೧. ವಾಯುಮಂಡಲದ ನೀರು	೧೩	೦.೦೦೧
೨. ಭೂಮಿಯ ಮೇಲಿನ ನೀರು		
ಅ) ಸಮುದ್ರದ ಉಪ್ಪು ನೀರು	೧೩,೨೨,೨೪೦	೯೭.೨೨೪
ಆ) ಭೂ ಮಧ್ಯ ಸಮುದ್ರ ಮತ್ತು ಇತರೆ ಉಪ್ಪು ನೀರಿನ ಸರೋವರಗಳು	೧೦೪	೦.೦೦೮
ಇ) ಸಿಹಿನೀರಿನ ಸರೋವರಗಳು	೧೨೫	೦.೦೦೯
ಈ) ನದಿ ಕಾಲುವೆಗಳಲ್ಲಿ ಸಂಗ್ರಹವಾದ [ನೀರು	೧.೨೫	೦.೦೦೦೧
ಉ) ಹಿಮ ಪರ್ವತಗಳಲ್ಲಿ ಸಂಗ್ರಹವಾದ [ನೀರು	೨೯,೦೦೦	೨.೧೩೨
ಊ) ಸಸ್ಯ ಮತ್ತು ಜೀವಾಣುಗಳಲ್ಲಿನ [ನೀರು ಅಂಶ	೫೦	೦.೦೦೪
೩. ಭೂ ತಳದಲ್ಲಿ ಏರ್ಪಟ್ಟ ನೀರು		
ಅ) ಪಾರ್ಶ್ವತಹ ಜಲ ಪೂರಿತ ನೀರು	೬೭	೦.೦೦೫
ಆ) ಭೂಜಲ ೦.೮ ಕಿಲೋಮೀಟರ್ ಆಳದೊಳಗೆ	೪,೨೦೦	೦.೩೦೯
ಭೂಜಲ ೦.೮–೪ ಕಿಲೋಮೀಟರ್ ಆಳದಲ್ಲಿ	೪,೨೦೦	೦.೩೦೯
ಒಟ್ಟು	೧೩,೬೦,೦೦೦	೧೦೦.

ಭೂಜಲ ಪ್ರಪಂಚದ ಜಲ ಸಂಪತ್ತಿನ ಕೇವಲ ನೂರರಲ್ಲಿ ೦.೬ ಭಾಗ ಅಂದರೆ ನೂರಕ್ಕೆ ೧ ಭಾಗಕ್ಕಿಂತ ಕಡಿಮೆ ಇರುವುದು. ಇದರಲ್ಲಿ ಅರ್ಧಭಾಗ ೦.೮ ಕಿಲೋಮೀಟರ್‌ಗಳಿಗಿಂತ ಆಳವಾಗಿದ್ದು ಹೊರ ತೆಗೆಯಲು ಕಷ್ಟಕರವೂ ಹಾಗೂ ಉಪ್ಪು ನೀರಿನಿಂದಲೂ ಕೂಡಿರುತ್ತದೆ. ಆದಾಗ್ಯೂ ಉಪಯುಕ್ತವಾದ ಭೂಜಲದ ಪ್ರಮಾಣ ಭೂಮಿಯ ಮೇಲೆ ಶೇಖರವಾಗಿರುವ ಕೆರೆಕಟ್ಟೆ ಸಿಹಿನೀರಿನ ಸರೋವರಗಳ ಪ್ರಮಾಣಕ್ಕಿಂತ ೩೫ ರಷ್ಟು ಹೆಚ್ಚಾಗಿರುತ್ತದೆ.

ಭೂಜಲದ ಆಳದ ಮಿತಿ ಮತ್ತು ಪ್ರಮಾಣ

ಭೂಜಲವನ್ನು ಭೂಮಿಯಲ್ಲಿ ಎಷ್ಟು ಆಳದಲ್ಲಿ ಮತ್ತು ಎಷ್ಟು ಆಳದವರೆಗೆ ಪಡೆಯಲು ಸಾಧ್ಯ ಮತ್ತು ಯಾವ ಪ್ರಮಾಣದಲ್ಲಿ ದೊರೆಯುವುದೆಂಬುದನ್ನು ಖಚಿತವಾಗಿ ನಿರ್ಧರಿಸಲು ಸಾಧ್ಯವಾಗಲಾರದು. ಭೂಜಲದ ಮೇಲಿನ ಗಡಿ, ಜೌಗು ಪ್ರದೇಶಗಳಲ್ಲಿ ಕೇವಲ ಭೂ ಮಟ್ಟದಲ್ಲಿದ್ದರೆ ಮರಳುಗಾಡಿನ ಪ್ರದೇಶದಲ್ಲಿ ಅದು ಸುಮಾರು ೮೦೦ ಮೀಟರುಗಳಿಗಿಂತ ಅಧಿಕ ಆಳದಲ್ಲಿ ಕಾಣಿಸಿಕೊಳ್ಳಬಹುದು. ಈ ಗಡಿಯ ಮಿತಿ ಆ ಪ್ರಾಂತ್ಯದ ಮೇಲ್ಮೈ ಸ್ವರೂಪ, ಲಕ್ಷಣ, ಭೂಮಿಯ ಮಣ್ಣಿನ ರಚನೆ, ಭೂಜಲ ಉತ್ಪಾದನೆ, ಶೇಖರಣೆ ಮತ್ತು ವಿತರಣೆಗಳನ್ನು ಅವಲಂಭಿಸಿರುತ್ತದೆ. ೮೦೦ ಮೀಟರುಗಳಿಗಿಂತ ಹೆಚ್ಚಿನ ಆಳದಲ್ಲಿ ದೊರೆಯುವ ಭೂಜಲ ಲಾಭದಾಯಕವೂ ಅಲ್ಲ. ಅಲ್ಲದೆ ಉಪಯೋಗಕ್ಕೆ ಯೋಗ್ಯವಾದುದೂ ಅಲ್ಲ. ಆ ಭೂಜಲ ಕ್ರಮೇಣ ಭೂಗರ್ಭವನ್ನು ಸೇರುವುದೇ ಹೊರತು ಜಲಪರಿವರ್ತನ ಚಕ್ರಕ್ಕೆ ಸೇರಲಾರದು.

ಭೂಜಲ ಎಷ್ಟು ಪುರಾತನವಾದದ್ದು

ಹಿಂದೆ ತಿಳಿಸಿರುವಂತೆ ಜಲಪರಿವರ್ತನ ಚಕ್ರಕ್ಕೆ ಒಳಪಟ್ಟು ವಾಯುಮಂಡಲದಿಂದ ಭೂಮಿಗೆ ಇಳಿದು ಬರುವ ಮಳೆ ನೀರು ಭೂಜಲದ ಮೂಲವಾಗಿರುತ್ತದೆ. ಜಲ ಪರಿವರ್ತನ ಚಕ್ರದಲ್ಲಿ ಭೂಮಿಯನ್ನು ಪ್ರವೇಶಿಸಿ ಭೂಜಲವಾದ ಈ ನೀರು ಜಲವಾಹಕಗಳ ಮೂಲಕ ಮಂದಗಮನದಿಂದ ಚಲಿಸಿ ತನ್ನ ಅಂತಿಮ ಪ್ರಯಾಣದ ಗುರಿಯಾದ ಸಮುದ್ರವನ್ನು ಸೇರಲು ಕೆಲವು ವೇಳೆ ಸಾವಿರಾರು ವರ್ಷಗಳನ್ನು ತೆಗೆದುಕೊಳ್ಳುವುದು. ಕೆಲವು ಭಾಗ ಮಾರ್ಗದಲ್ಲಿ ಚಿಲುಮೆ, ಬಾವಿ, ನದಿ, ಸರೋವರ ಮುಂತಾದುವನ್ನು ಸಂಧಿಸಿದಾಗ ಹೊರಬಂದು ಉಪಯೋಗಿಸಲ್ಪಡಬಹುದು.

ಪುರಾತನ ಅಥವಾ ಪ್ರಾಥಮಿಕ ಭೂಜಲ ಭೂರಚನೆಯಷ್ಟೇ ಪ್ರಾಚೀನವಾದದ್ದು. ಭೂಗರ್ಭದಲ್ಲಿ ರೂಪಿತವಾದ ನೀರು ಜ್ವಾಲಾಮುಖಿಗಳ ಮೂಲಕ ಹೊರಕ್ಕೆ ಉದ್ಭವಿಸಿ ಭೂಮಂಡಲವನ್ನು ತಲುಪುವ ಮಾರ್ಗದಲ್ಲಿ ಜಲಧಾಯಕಗಳನ್ನು (ಜಲಧರ) ಸೇರಬಹುದು. ಜಲಪರಿವರ್ತನಕ್ಕೆ ಒಳಪಟ್ಟ ಮಳೆನೀರು ಭೂಜಲವಾಗುವುದು ಇನ್ನೊಂದು ಮೂಲ. ಈ ರೀತಿ ವಿಧ ವಿಧವಾಗಿ ಮಾರ್ಪಾಟಾದ ಭೂಜಲವನ್ನು ಪರಿಶೀಲಿಸಿ ಭೂಮಿಯಲ್ಲಿ ಅಡಕವಾಗಿರುವ ಭೂಜಲದ ಕಾಲವನ್ನು ಸುಮಾರು ೧೬೦ ವರ್ಷಗಳಿಂದ ೩೩,೦೦೦ ವರ್ಷಗಳಿಗೂ ಹೆಚ್ಚೆಂದು ಭೂಗರ್ಭ ಶಾಸ್ತ್ರಜ್ಞರು ನಿರ್ಣಯಿಸಿರುತ್ತಾರೆ.

ನನ್ನನ್ನು ಉಳಿಸು, ಆಲ್ಫ್! ನನ್ನನ್ನು ಉಳಿಸು!

ಆಂಥೊನಿ ಪಾಲ್

ಸೆಪ್ಟೆಂಬರ್ ೧೯೮೪ರ ಕೊನೆಭಾಗದ ಆ ವಾರ ಆಲ್‌ಫ್ರೆಡ್ ಕಾಲಿನ್ಸ್‌ನ ಭಾಗಕ್ಕೆ ಸಾಂಕೇತಿಕ ಕಷ್ಟತರದ್ದಾಗಿತ್ತು. ಒಂಬತ್ತು ವರ್ಷದ ಮಗ ಆಲ್ಫ್‌ನ ಸಹಾಯದಿಂದ ಮಂಗಳವಾರದ ದಿನ ಕಾಲಿನ್ಸ್ ಅನೇಕ ಪೂರಕ ಕೆಲಸಗಳನ್ನು ಮುಗಿಸಿದ್ದ. ಬ್ರಿಸ್ಬೇನಿನ ಈಶಾನ್ಯಕ್ಕೆ ಸುಮಾರು ಆರುನೂರು ಕಿಲೋ ಮೀಟರ್‌ನಲ್ಲಿರುವ ಬೇಲಾವ್ಯಾಲಿನಲ್ಲಿ ಈ ಆಸ್ತಿ ಇದೆ. ಅದರ ವಿಸ್ತೀರ್ಣ ೨೧೬೪ ಹೆಕ್ಟೇರ್. ಬುಧವಾರ ಮಧ್ಯಾಹ್ನ ಅವನು ಮತ್ತು ಆಲ್ಫ್ ಬೇಲಿ ಮರಗಳನ್ನು ತಮ್ಮ ಏಳು ಟನ್ನಿನ ಟ್ರಕ್ಕಿಗೆ ತುಂಬಿಸುವ ಕೆಲಸ ವನ್ನು ಆಗಷ್ಟೆ ಮುಗಿಸಿ ಮನೆಯತ್ತ ಹೊರಟಿದ್ದರು. ಟ್ರಕ್ಕಿನಲ್ಲಿ ಅವರಿಬ್ಬರ ನಡುವೆ ಕಾಲಿನ್ಸ್‌ನ ಮೂವರು ಚಿಕ್ಕ ಹೆಣ್ಣುಮಕ್ಕಳು ಕೂತಿದ್ದರು—ನಾಲ್ಕು ವರ್ಷದ ವಷ್ಟಿ ಮೂರು ವರ್ಷದ ಡಲಾಸ್ ಹಾಗೂ ಒಂದು ವರ್ಷದ ಜೆಮ್ಮಾ.

ಅವರು ಪ್ರಯಾಣದ ಕೊನೆಗೆ ಬರುತ್ತಿದ್ದಂತೆ ಕಾಲಿನ್ಸ್‌ಗೆ ಹಠಾತ್ತಾಗಿ ತಾನು ಮತ್ತು ಆಲ್ಫ್ ಹಿಂದಿನ ದಿನ ಮಧ್ಯಾಹ್ನ ನೋಡಿದ್ದ ಕಪ್ಪು ಹಂದಿಯ ನೆನಪಾಯಿತು. ತೋಟಕ್ಕೆ ಸೇರಿದ ತುರ್ತು ವಿಮಾನ ಇಳಿದಾಣದಲ್ಲಿ ಕೆಲಸ ಮಾಡುತ್ತಿದ್ದ ವರ್ಗದಾರ ಎಸೆದಿದ್ದ ಹುಲ್ಲು ಮತ್ತು ಕಸದಲ್ಲಿ ಅದು ಮೂತಿ ಹಾಕುತ್ತಿತ್ತು. ಹಿಂದೆಂದೂ ಆ ಭಾಗದ ಕಣಿವೆಯಲ್ಲಿ ಕಾಲಿನ್ಸ್ ಕಾಡುಹಂದಿ ಯನ್ನು ನೋಡಿರಲಿಲ್ಲ. ಈ ತಕ್ಕ ಹಂದಿ ಬರುವುದು ಅನಪೇಕ್ಷಣೀಯ ವಾಗಿತ್ತು.

"ಹಂದಿಗಳು ಕಾಯಿಲೆ ಹರಡುತ್ತವೆ. ನೀರಿನ ಆಸರೆಗಳನ್ನು ಉರುಳಿಸು ವುದು, ಬೇದಿಗಳನ್ನು ಹಾಳುಗೆಡುವುದು ಹಾಗೂ ಕುಡಿಯುವ ನೀರನ್ನು ಕಲುಷಿತಗೊಳಿಸುವುದು ಇವುಗಳೇ. ಅದನ್ನು ನಾಳೆ ಗುಂಡಿಟ್ಟು ಕೊಲ್ಲಬೇಕಾಗುತ್ತದೆ"–ಎಂದವನು ಮಗನಿಗೆ ಹೇಳಿದ್ದ.

೧೯೮೭ರ ಜುಲೈ ತಿಂಗಳಿನ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾಗಿರುವ "ಸೇವ್ ಮಿ ಆಲ್ಫ್! ಸೇವ್ ಮಿ!" ಲೇಖನದ ಅನುವಾದ.

ಈಗ ಕಾಲಿನ್ಸ್‌ಗೆ ಒಂದು ಕಲ್ಪನೆ ಬಂತು. ಇತ್ತೀಚೆಗಷ್ಟೆ ಹಸುವೊಂದು ಅವರ ಮನೆಯ ಹತ್ತಿರ ಮೃತಪಟ್ಟಿತ್ತು.

"ಆ ಹಂದಿ ಅಲ್ಲಿ ಶವವನ್ನು ತಿನ್ನುತ್ತಾ ಇರುತ್ತದೆಂದು ನಾನು ಪ್ರಮಾಣಪೂರ್ವಕವಾಗಿ ಹೇಳುತ್ತೇನೆ. ನಾವು ಹೋಗಿ ಒಮ್ಮೆ ನೋಡೋಣ"—ಕಾಲಿನ್ಸ್ ಮಗನಿಗೆ ಹೇಳಿದ.

ಮೂರು ಹುಡುಗಿಯರನ್ನೂ ಟ್ರಕ್ಕಿನಲ್ಲೇ ಬಿಟ್ಟು, ಕಾಲಿನ್ಸ್ ಮತ್ತು ಅಲ್ಫ್ ದಟ್ಟವಾದ ಮುಳ್ಳುಪೊದೆಗಳನ್ನು ಸರಿಸುತ್ತಾ ಹಸುವಿನ ಶವವನ್ನು ಪರೀಕ್ಷಿಸಲು ಮುನ್ನಡೆದರು. ಪ್ರಾಣಿಯನ್ನು ವಿಕಾರಮಾಡಲಾಗಿತ್ತು.

"ನಾವು ಆ ಹಂದಿಯನ್ನು ಹುಡುಕಿಕೊಂಡು ಆಮೇಲೆ ಬಂದರೆ ಅದು ಎಲ್ಲಿರುತ್ತದೆಂಬುದು ನಮಗೆ ಗೊತ್ತಾಗಿರುತ್ತದೆ"—ಕಾಲಿನ್ಸ್ ಹೇಳಿದ.

ಹಠಾತ್ತಾಗಿ ಕಾಲಿನ್ಸ್‌ಗೆ ಸಣ್ಣಗಿಡಗಳ ಕಡೆಯಿಂದ ಸರಸರ ಶಬ್ದ ಕೇಳಿಸಿತು. ಒಂದು ಕ್ಷಣ ಆತನಿಗೆ ಕೇವಲ ಮುಸುಕು ಕಾಣಿಸಿತು. ಅನಂತರ ಮುಸುಕು ಮುಖವಾಯಿತು—ಕಪ್ಪು, ಮಣಿಯಂತಹ ಕಣ್ಣುಗಳು, ಕಿರಿದ ಹಲ್ಲುಗಳು, ದಾಳಿಗೆ ಸಿದ್ಧವಾಗಿ ನಿಂತ ಕೋರೆಹಲ್ಲು. ನೂರೈವತ್ತು ಕಿಲೋ ತೂಕದ ಹಂದಿ ತನ್ನೆಲ್ಲಾ ರೋಷಾವೇಶದಿಂದ ಕಾಲಿನ್ಸ್ ಮತ್ತು ಅಲ್ಫ್‌ರತ್ತ ನುಗ್ಗಿತು.

ಮೊದಲು ಅದು ನನ್ನತ್ತ ಬರುತ್ತಿಲ್ಲ, ಮುಂದೋಡುತ್ತಿದೆ ಅಂದುಕೊಂಡ ಕಾಲಿನ್ಸ್. ಆದರೆ ಹಂದಿ ಅವನ ಕಡೆಯೇ ಮುಂದುವರಿಯ ತೊಡಗಿತು. ಕಾಲಿನ ಮೂಳೆಗೆ ಫಿರಂಗಿಯಂತೆ ಗುದ್ದಿ ಅವನು ಹೆದರುವಂತೆ ಮಾಡಿತು. ಅದು ತನ್ನ ಕೋರೆ ಹಲ್ಲು, ಹಲ್ಲುಗಳಿಂದ ಕಾಲನ್ನು ಕಚ್ಚುತ್ತಿದ್ದಾಗ ಕಾಲಿನ್ಸ್ ಅದರ ಆಕ್ರಮಣವನ್ನು ತಡೆಗಟ್ಟಬಹುದು ಎಂದುಕೊಂಡ. ಶಾಂತವಾಗಿರು ಎಂದು ಅವನು ತನಗೆ ತಾನೇ ಹೇಳಿಕೊಂಡ. ಕಾಡುಹಂದಿಗಳು ಗಂಡಸರಿಗೆ ಹೆದರುತ್ತವೆ. ನೀನು ಸೋಲುವುದಿಲ್ಲವೆಂಬುದನ್ನು ಕಂಡುಕೊಂಡಾಗ ಅದು ಹೊರಟುಹೋಗುತ್ತದೆ.

ಆದರೆ ಹಂದಿ ಹಿಮ್ಮೆಟ್ಟುವ ಸೂಚನೆಯೇನೂ ತೋರಿಸಲಿಲ್ಲ. ಅದರ ಬೃಹತ್ ತಲೆ ಮೇಲಕ್ಕೂ ಕೆಳಕ್ಕೂ, ಮೇಲಕ್ಕೂ ಕೆಳಕ್ಕೂ ಜಗ್ಗಾಡುತ್ತಿತ್ತು. ಕತ್ತರಿಯಂತೆ ಹರಿಯುತ್ತಾ ಅದರ ಕೋರೆಹಲ್ಲು ಮತ್ತು ಹಲ್ಲುಗಳು ಕಾಲಿನ್ಸ್‌ನ ಎಡಗಾಲಿನ ಜೋಡನ್ನು ಚೂರು ಚೂರು ಮಾಡಿತು. ಮತ್ತೊಂದು ಥಟ್ಟನೆ ಎಳೆತ! ಒಂದು ಕೋರೆ ಹಲ್ಲು ಅವನ ಬಲಗೈ ಹಿಂಬದಿಯನ್ನು ಸೀಳಿತು. ಇನ್ನೊಂದು ರೇಜರಿನಂತಹ ಹೊಡೆತ ಎಡಗಡೆಯ ಕಣಕಾಲಿನ ಹಿಂಭಾಗದ ಮಾಂಸಖಂಡವನ್ನು ಮೂಳೆಯಿಂದ ಕೊಚ್ಚಿ ಹಾಕಿತು. ದನದ ದೊಡ್ಡಿಯ ಮಾಲೀಕ ಹಾಕಿಕೊಂಡಿದ್ದ ಜೀನ್ಸ್‌ನಿಂದ ರಕ್ತ ಚಿಮ್ಮ ತೊಡಗಿತು.

ಅದು ಬಿಡುತ್ತಿಲ್ಲ. ತೊಡೆಗೆ ಬಾಯಿಹಾಕುವಂತಿದೆ ಅಂದುಕೊಂಡ ಕಾಲಿನ್ಸ್.

ಜನಸಂಖ್ಯೆಯಲ್ಲಿ ಶೇಕಡಾ ಎಪ್ಪತ್ತರಷ್ಟಿರುವ ಪಟ್ಟಣದಲ್ಲಿ ಬೆಳೆದ ಆಸ್ಟ್ರೇಲಿಯನ್ನರಿಗೂ ಔಟ್‌ಬ್ಯಾಕ್ ಒಂದು ದಂತಕಥಾ ಪ್ರದೇಶವಾಗಿತ್ತು. ಹಿಂಭಾಗದ ಆಚೆಕಡೆ ಇರುವ ಬುಷ್‌ನಲ್ಲಿ ಜೀವನ ಅದ್ಭುತ ಆದರೆ ಕಷ್ಟಕರ. ಔಟ್‌ಬ್ಯಾಕ್ ಬಹುತೇಕ ಆಸ್ಟ್ರೇಲಿಯನ್ನ

ರಿಗೆ ಕರೆಕೊಡುತ್ತದೆ ಮತ್ತು ಅನೇಕ ಪ್ರಮುಖ ರೀತಿಗಳಲ್ಲಿ ಅವರ ಸ್ವ-ಗ್ರಹಿಕೆಗಳಿಗೆ ರೂಪುಕೊಡುತ್ತದೆ.

ಇದು ಮುಖ್ಯವಾಗಿ ಕಾಲಿನ್ಸರ ಮಾತೃ ಸಂಸ್ಥಾನ ಕ್ವೀನ್ಸ್‌ಲೆಂಡ್‌ನ ವಿಚಾರದಲ್ಲಿ ನಿಜವಾಗಿದೆ. ಔಟ್‌ಬ್ಯಾಕ್‌ನಲ್ಲಿ ಹೊಲ ನಿರ್ಮಿಸುವುದು, ಸಂಸಾರ ಬೆಳೆಸುವುದು ಬಹಳ ಶ್ರಮದಾಯಕವಾದ ಕೆಲಸ, ಆಲ್‌ಫ್ರೆಡ್ ಕಾಲಿನ್ಸ್‌ಗೆ ಹೆಚ್ಚಿನ ಹೊರೆಯೊಂದಿದ್ದಿತು. ಆತ ಅಚ್ಚುಗಟ್ಟುವಂತ. ಮನೆಯವರು ಮತ್ತು ಸ್ನೇಹಿತರು ಆಗಾಗ್ಯೆ ಆತನಿಂದ "ನಾನು ಇದನ್ನು ಕರಾರುವಾಕ್ಕಾಗಿ ಆಗಬೇಕೆಂದು ಅಪೇಕ್ಷಿಸುತ್ತೇನೆ" ಎನ್ನುವ ಅಭಿಪ್ರಾಯವನ್ನು ಕೇಳಬೇಕಾಗಿಬರುವಂತಹ ವ್ಯಕ್ತಿ. ಅಲ್ಲದೆ ಹೆಚ್ಚು ಕಮ್ಮಿ ಯಾವಾಗಲೂ ಅದು ಹಾಗೆಯೇ ಇರುತ್ತಿತ್ತು.

ಆಲ್‌ಫ್ರೆಡ್‌ನ ತಂದೆ ಜಾರ್ವಿಸ್ ಕಾಲಿನ್ಸ್ ಅಸಿದ್ಧ ಪಾಳು ಜಮೀನು ಎರಡು ಸಾವಿರ ಹೆಕ್ಟೇರುಗಳನ್ನು ೧೯೫೫ರಲ್ಲಿ ಹೊಲವಾಗಿ ಊರ್ಜಿತಗೊಳಿಸಿದರು. ಕೆಲವರು ಬಂಜರು ಕಾಡುನೆಲವನ್ನು ಹದಕ್ಕೆ ತರಲು ಪ್ರಯತ್ನಪಟ್ಟರು. ಆದರೆ ಯಾರೂ ಸಫಲ ರಾಗಲಿಲ್ಲ. ಬೇಲಾ ಕಣಿವೆಯಲ್ಲಿ ನೀರಿರಲಿಲ್ಲ. ಅದಕ್ಕೆ ಜಾರ್ವಿಸ್ ಸುತ್ತಮುತ್ತಲಿನ ಪರ್ವತಗಳಿಂದ ಹರಿದುಹೋಗುವ ನೀರನ್ನು ಸಂಗ್ರಹಿಸಲು ಅಣೆಕಟ್ಟುಗಳನ್ನು ರೂಪಿಸಿ ದರು. ಆತ ಎರಡು ಸಾವಿರದನಾನೂರು ಹಸುಗಳಿರುವ ಮುಂದೆ ಕಟ್ಟಿದರು. ೧೯೭೦ರ ಹೊತ್ತಿಗೆ ದನದ ದೊಡ್ಡಿಯ ಗಾತ್ರವನ್ನು ಎರಡರಷ್ಟಕ್ಕೂ ಮೀರಿ ಬೆಳೆಯಿಸಿದ್ದರು. ಆನಂತರ ಆತ ಹಠಾತ್ತಾಗಿ ಪಾರ್ಶ್ವವಾಯುವಿನಿಂದ ಮಡಿದರು.

ಆಗ ಇಪ್ಪತ್ತೆರಡು ವರ್ಷದವನಾಗಿದ್ದ ಆಲ್‌ಫ್ರೆಡ್ ಮನೆತನದ ಹಿರಿಯ ವ್ಯಕ್ತಿ ಯಾಗಿದ್ದು, ಜಮೀನಿನಲ್ಲಿ ದುಡಿಯುತ್ತಿದ್ದ. ೧೯೭೮ರಲ್ಲಿ ಅವನು, ಮತ್ತಿತರ ಮೂವರು ವಾರಸುದಾರರು ಜಮಾನನ್ನು ಹಂಚಿಕೊಳ್ಳಲು ಒಪ್ಪಿಕೊಂಡರು. ಆಸ್ತಿಯಲ್ಲಿನ ತನ್ನ ಪಾಲನ್ನು ಊರ್ಜಿತಗೊಳಿಸಲು ಬೇಕಾದ ಹಣವನ್ನು ಹೊಂದಿಸಿಕೊಳ್ಳಲು ಕಾಲಿನ್ಸ್ ಪಶ್ಚಿಮಕ್ಕೆ ನಾಲ್ಕು ಗಂಟೆಗಳ ಪ್ರಯಾಣದಷ್ಟು ದೂರವಿದ್ದ ಮೊರಾನ್‌ಬಾಹ್‌ನ ಕಲ್ಲಿದ್ದಲು ಗಣಿಯಲ್ಲಿ ನಾಲ್ಕು ವರ್ಷಗಳ ಕಾಲ ಕೆಲಸ ಮಾಡಿದ. ಕೆಲಸದಿಂದ ಬಿಡುವಿದ್ದ ದಿವಸಗಳಲ್ಲಿ ಜಮಾನಿನಲ್ಲಿ ಕೆಲಸ ಮಾಡಲು ಪತ್ನಿ ವೆಂಡಿ ಮತ್ತು ಬೆಳೆಯುತ್ತಿದ್ದ ಸಂಸಾರವನ್ನೂ ಕರೆದುಕೊಂಡು ಬರುತ್ತಿದ್ದ.

ತಂದೆಯ ಹೊಲವನ್ನು ಸಹೋದರ, ಸಹೋದರಿಯರು ಹರಿದು ಹಂಚಿಕೊಂಡು ದನ್ನು ನೋಡಿದ್ದ ಅನುಭವದಿಂದಲೋ ಏನೋ ಕಾಲಿನ್ಸ್ ತನ್ನ ಆರು ಮಕ್ಕಳಿಗೆ ಒಗ್ಗಟ್ಟಾಗಿರುವುದನ್ನು ಕಲಿಸಲು ಉತ್ಸುಕನಾದ. ದನದ ದೊಡ್ಡಿ ಬಹುದೂರದಲ್ಲಿದ್ದುದು ಕೂಡಾ ಗಾಢವಾಗಿ ಮನೆತನದ ಪ್ರಜ್ಞೆ ಮೂಡಿಸುವುದರಲ್ಲಿ ಪಾತ್ರ ವಹಿಸಿತು. ಮುಂಚೆ, ತಾವು ನಡೆದಾಡುವುದು ಸಾಧ್ಯವಾದ ಸುಮಾರಿನಲ್ಲೇ, ಒಟ್ಟಾಗಿ ಕೆಲಸ ಮಾಡುತ್ತಿದ್ದ ಮಕ್ಕಳು, ದನಗಳನ್ನು ಒಗ್ಗೂಡಿಸುವುದನ್ನು ಕಲಿತಿದ್ದರು.

"ಎಲ್ಲರಿಗಿಂತಲೂ ಚಿಕ್ಕವನೂ ಸಹಾಯಕ್ಕೆ ನಿಲ್ಲುವುದನ್ನು ನಾನು ಅಪೇಕ್ಷಿಸುತ್ತೇನೆ. ಪ್ರತಿಯೊಬ್ಬನೂ ಇತರರೆಲ್ಲರ ಮೇಲೆ ಅವಲಂಬಿಸುವುದನ್ನು ಕಲಿಯುತ್ತಾನೆ"—ಕಾಲಿನ್ಸ್ ಹೇಳುವನು. ಎಂಟು ವರ್ಷದವನಾಗಿದ್ದಾಗಲೇ ಮನೆತನದ ಏಳು ಟನ್ನಿನ ಟ್ರಕ್ಕಿನ

ಪೆಡಲ್‌ಗಳು ಎಟಕುವಷ್ಟು ಆಲ್ಫ್‌ನ ಕಾಲುಗಳು ಉದ್ದವಾಗಿಬಿಟ್ಟಿದ್ದುವು. "ಹೊಲದಲ್ಲಿ ಯಾವಾಗ ಚಕ್ರಗಳು ಬೇಕಾಗಬಹುದೆಂಬುದು ನಿನಗೆ ಗೊತ್ತಿಲ್ಲ" ಎಂಬುದಾಗಿ ಹೇಳಿ, ತಂದೆ ಹುಡುಗನಿಗೆ ಟ್ರಕ್ ನಡೆಸುವುದನ್ನು ಕಲಿಸಿದ.

ಆಲ್ಫ್ ಮತ್ತು ಅವನ ಅಕ್ಕ ವಿಕ್ಟೋರಿಯಾ ತಮ್ಮ ಪ್ರಥಮ ವರ್ಷಗಳ ಶಿಕ್ಷಣವನ್ನು ಮೊರಾನ್ ಬಾಹ್‌ನಲ್ಲಿ ಪಡೆದರು. ಒಂದು ದಿನ ಶಾಲೆಯ ಆಟದ ಮೈದಾನದಲ್ಲಿ ಆಲ್ಫ್ ಕೆಲವು ಸಹಪಾಠಿಗಳ ಜೊತೆ ಆಟವಾಡುತ್ತಿದ್ದಾಗ ದೊಡ್ಡ ಹುಡುಗನೊಬ್ಬ ವಿಕ್ಕಿಯ ಟೆನಿಸ್ ಚೆಂಡನ್ನು ತೆಗೆದುಕೊಂಡಿದ್ದನ್ನು ನೋಡಿದ. ಅವಳು ಅದನ್ನು ಹಿಂದಕ್ಕೆ ಕಿತ್ತುಕೊಳ್ಳಲು ಯತ್ನಿಸಿದಾಗ, ಹುಡುಗ ಅವಳನ್ನು ನೂಕಿದ್ದಲ್ಲದೆ ಮುಷ್ಟಿಯಿಂದ ಗುದ್ದಿದ. ಆಲ್ಫ್ ಮಿಂಚಿನಂತೆ ಹುಡುಗನ ಮೇಲೆ ಬಿದ್ದ. ಚಕಿತಗೊಂಡಿದ್ದ ಅವನು ಓಡಿ ಹೋದ. ಆ ಸಮಯದಲ್ಲಿ ಕಾಲಿನ್ಸ್ ಅದಕ್ಕೆ ಅಷ್ಟು ಮಹತ್ವ ಕೊಡಲಿಲ್ಲ. ಶಾಲೆಯ ಮೈದಾನದ ಆ ಸಣ್ಣ ಜಗಳ ಮುಂದೆ ಎಳೆಯ ಆಲ್ಫ್ ತನ್ನ ಮನೆತನದವರಲ್ಲಿ ಒಬ್ಬನನ್ನು ಯಾರಾದರೂ ಅಥವಾ ಏನಾದರೂ ತಗುಲಿಕೊಂಡದ್ದನ್ನು ನೋಡಿದರೆ ಏನಾಗಬಹುದು ಎಂಬುದರ ಸೂಚನೆ ಅನ್ನುವುದನ್ನು ಅನಂತರ ಅವನು ಕಂಡುಕೊಂಡ.

ಗಾಬರಿಯಾಗದಿರುವುದು ಇಲ್ಲಿಯ ರಹಸ್ಯ ಎಂದುಕೊಂಡ ಕಾಲಿನ್ಸ್—ನೀನು ಗಾಬರಿಯಾಗುವುದಿಲ್ಲ. ನಿನ್ನ ತಲೆ ಮತ್ತು ಉದರವನ್ನು ರಕ್ಷಿಸಿಕೊ. ಕಾಲಿನ್ಸ್ ಹಿಂದೆಂದೂ ಕಾಡುಹಂದಿಯನ್ನು ಎದುರಿಸಿರಲಿಲ್ಲ. ಆದರೆ ಅವನು ಅಧಿಕ ಚೈತನ್ಯದ ಕರುಗಳನ್ನು ನಿಭಾಯಿಸಿದ್ದ. ಕರುವಿನ ಕಿವಿ ಹಾಗೂ ಕೆಳದವಡೆ ಹಿಡಿದುಕೊಂಡು, ಅದರ ಕತ್ತನ್ನು ತಿರುಚಿದರೆ ಆಯ್ತು, ಪ್ರಾಣಿ ಅಸಹಾಯಕವಾಗಿ ತನ್ನ ಬೆನ್ನಿನ ಮೇಲೆ ಉರುಳುತ್ತದೆ.

ಹಂದಿ ಅವನನ್ನು ಹರಿಯುತ್ತಿರುವಂತೆಯೇ ಕರುವಿನಂತೆ ಅದನ್ನು ಉರುಳಿಸು ಎಂದು ಉದ್ರೇಕದಿಂದ ತನಗೇ ಹೇಳಿಕೊಂಡ. ಕಾಡುಹಂದಿಯ ತಲೆಯನ್ನು ಹಿಡಿದುಕೊಂಡ. ಆದರೆ ಕಾಡುಹಂದಿಯ ಹಲ್ಲು ಕರುವಿನದಕ್ಕಿಂತ ಚೂಪಾಗಿರುತ್ತದೆ. ರಕ್ತ ಹರಿಯುತ್ತಿದ್ದ ಒಂದು ಕೈಯನ್ನು ಕಾಲಿನ್ಸ್ ಹಿಂದಕ್ಕೆಳೆದುಕೊಂಡ.

ಆದಾಗ್ಯೂ ಭಾರೀ ತಲೆ ಮುಂದೆ ಬರುತ್ತಿತ್ತು. ಅವನ ಮಂಡಿಯನ್ನು ಹಲ್ಲು ಸೀಳುತ್ತಿತ್ತು. ಒಂದು ಕೊಂಬು ಅವನ ತೊಡೆಗೆ ನೆಟ್ಟುಕೊಂಡಿತು. ದಿಗಿಲು ತುಂಬಿ ಬಂತು. ಈಗ ಹತಾಶನಾಗಿ ಹತ್ತಿರ ಇದ್ದ ಏಕಮಾತ್ರ ವ್ಯಕ್ತಿ ಆಲ್ಫ್‌ನನ್ನು ಕೂಗಿ ಕರೆದ.

ಬೃಹತ್ ಕಾಡು ಹಂದಿಯನ್ನು ಕಂಡ ತಕ್ಷಣವೇ ಹತ್ತಿರವಿದ್ದ ಪೊದೆಗಳ ಹಿಂದೆ ಓಡಿದ ಆಲ್ಫ್, ತಂದೆ ನಡೆಸುತ್ತಿದ್ದ ಹೋರಾಟವನ್ನು ಕೇಳುತ್ತಿದ್ದ. ಆಗ ತಂದೆ ನೋವು ಹಾಗೂ ಭೀತಿಯಿಂದ "ನನ್ನನ್ನು ರಕ್ಷಿಸು, ಆಲ್ಫ್ ! ನನ್ನನ್ನು ರಕ್ಷಿಸು" ಎಂತ ಕೂಗಿದ್ದು ಕೇಳಿಸಿತು.

ಬಿದ್ದಿದ್ದ ರೆಂಬೆಯೊಂದನ್ನು ಎತ್ತಿಕೊಂಡು ಹುಡುಗ ಬಯಲಿಗೆ ನುಗ್ಗಿದ. ಕಿರುಚುತ್ತಾ ಆಲ್ಫ್ ಹಂದಿಯ ಮೇಲೆ ಎರಗಿ, ಅದರ ತಲೆಯಮೇಲೆ ಅಪ್ಪಳಿಸತೊಡಗಿದ. ಮುಷ್ಟಿಯಿಂದ ಅದರ ಕಪ್ಪು ಚರ್ಮವನ್ನು ಗುದ್ದಲಾರಂಭಿಸಿದ. ಎಲ್ಲಕ್ಕಿಂತಲೂ ಮಿಗಿಲಾಗಿ ಅವನು ಶಕ್ತಿ ಇದ್ದಷ್ಟು ಎತ್ತರವಾದ ದನಿಯಲ್ಲಿ ಶಪಿಸುತ್ತಿದ್ದ.

ಮುಂದೇನಾಯಿತೋಂತ ಅವನ ತಂದೆ ಆಮೇಲೆ ನೆನಸಿಕೊಳ್ಳುತ್ತಾನೆ; "ಅಬ್ಬ ಅಂದರೆ ಕ್ಷಣಗಳು ಅಥವಾ ಐದು ನಿಮಿಷಗಳು ಆಗಿರಬಹುದು—ಆದರೆ ಜೀವಮಾನವೆಲ್ಲಾ ಎನಿಸಿಬಿಟ್ಟಿತ್ತು".

ಸ್ವಲ್ಪ ಸಮಯ ಹಂದಿ ಆಕ್ರಮಣವನ್ನು ನಿಲ್ಲಿಸಿತ್ತು. ಅದು ಪುನಃ ತನ್ನ ಗಮನವನ್ನು ಕಾಲಿನ್ಸ್‌ನ ತೊಡೆಯ ಕಡೆ ತಿರುಗಿಸಿತು. ಆಲ್ಫ್ ಮತ್ತೆ ಶಪಿಸಿ ಥಳಿಸುವುದನ್ನು ದ್ವಿಗುಣಗೊಳಿಸಿದ. ಹಂದಿ ಕಾಲಿನ್ಸ್‌ನ ಕಚ್ಚುವುದನ್ನು ಬಿಟ್ಟು ಆಲ್ಫ್ ಕಡೆ ತಿರುಗಿತು. ಇಲ್ಲ, ಅದಲ್ಲ. ಅದು ಆಲ್ಫ್‌ನತ್ತ ಹೋಗುತ್ತಿದೆ! ಅಂದುಕೊಂಡ ಕಾಲಿನ್ಸ್.

ಆಲ್ಫ್ ದ್ವಿಗುಣವಾಗಿ ಶಪಿಸತೊಡಗಿದ. ಬೃಹತ್ ಹಂದಿ ತಿರುಗಿಕೊಂಡು, ತನ್ನ ತಲೆಯನ್ನು ಕೊಡವಿ, ನಾಗಾಲೋಟದಿಂದ ಸಣ್ಣ ಗಿಡಗಳ ಮಧ್ಯೆ ತೂರಿ, ಕಣ್ಮರೆಯಾಯಿತು. ಕಾಲಿನ್ಸ್ ಹಿಂದಕ್ಕೆ ಕುಸಿಯುತ್ತಿರುವಂತೆಯೇ ಮೂರ್ಛಿತಾವಸ್ಥೆಗೆ ಹತ್ತಿರ ಹತ್ತಿರವಾಗಿದ್ದ. ಅವನ ತಲೆಯಲ್ಲಿ ಮತ್ತೊಂದು ಎಚ್ಚರಿಕೆ ಗಂಟೆ ಬಾರಿಸಿತು. ಉಳಿದ ಮಕ್ಕಳು! ಅವರಿನ್ನೂ ಟ್ರಕ್ಕಿನಲ್ಲಿಯೇ ಇದಾರೆಯೆ? ಅವನು ಎದ್ದು ಕುಳಿತು ಆಲ್ಫ್‌ನ ಸಹಾಯದಿಂದ ತನ್ನ ಕಾಲಿನ ಮೇಲೆ ನಿಂತುಕೊಂಡ. ಅವರಿಬ್ಬರೂ ಸಂತಪ್ತರಾಗಿ ಪೊದೆಗಳ ಮೂಲಕ ಮರಳಿ ಹೊರಟರು.

ಹುಡುಗಿಯರು ಸುರಕ್ಷಿತವಾಗಿದ್ದರು. ಮುಂದುಗಡೆ ಆಸನದಲ್ಲಿ ಕುಳಿತುಕೊಳ್ಳಲು ಆಲ್ಫ್ ತಂದೆಗೆ ನೆರವಾಗಿ, ಚಾಲಕ ಚಕ್ರವನ್ನು ತಾನು ಹಿಡಿದ. ಐದು ನಿಮಿಷಗಳಲ್ಲಿ ಅವರು ಮನೆಯಲ್ಲಿದ್ದರು. ೧೩೦ ಕಿಲೋಮೀಟರ್ ದೂರದಲ್ಲಿರುವ ಆಸ್ಪತ್ರೆಗೆ ಕರೆದೊಯ್ಯುವ ಮೊದಲು ವೆಂಡಿ ಪ್ರಥಮ ಚಿಕಿತ್ಸೆ ನಡೆಸಿದಳು. ಅಲ್ಲಿ ನರ್ಸ್‌ಗಳು ತುರ್ತು ರಕ್ತಪೂರೈಕೆ ಮಾಡಿದರು. ಶಸ್ತ್ರವೈದ್ಯರು ಕಾಲುಗಳು, ಕೈಗಳಲ್ಲಿ ಆಗಿದ್ದ ಡಜನ್‌ಗಟ್ಟಲೆ ಗಾಯಗಳಿಗೆ ಚಿಕಿತ್ಸೆ ನಡೆಸಿದರು.

ಕಾಡುಹಂದಿ ಆಕ್ರಮಣವಾದ ಕೆಲವು ತಿಂಗಳುಗಳ ಬಳಿಕ ನಾನು ಕಾಲಿನ್ಸ್ ಮನೆಗೆ ಭೇಟಿಕೊಟ್ಟೆ. ನನ್ನ ಕಾರನ್ನು ನೆರಳಿನಲ್ಲಿ ಬಿಡಲು ಆಲ್ಫ್ ತೆಗೆದುಕೊಂಡು ಹೋದಾಗ, ಇನ್ನೂ ಕುಂಟುತ್ತಿದ್ದ ಅವನ ತಂದೆ, ಆಕ್ರಮಣದ ಬಗ್ಗೆ ಮಾತಾಡಿದ. ಈ ಕಥೆಯ ಯಾವುದೋ ಅಂಶ—ನನ್ನ ಎಳೆತನದ ಕಾಲದ ಯಾವುದೋ ಅಂಶ—ನನ್ನ ನೆನಪನ್ನು ಕೆದಕಿತು.

ಸುಮಾರು ನಲ್ವತ್ತು ವರ್ಷಗಳ ಹಿಂದೆ ಬ್ರಿಸ್ಬೇನಿನಲ್ಲಿ ಉಪಾಧ್ಯಾಯರೊಬ್ಬರು ಸಿ.ಇ.ಡಬ್ಲ್ಯು. ಬೀನ್‌ನ ಲೇಖನದ ಒಂದು ಭಾಗವನ್ನು ಕಲಿಯುವಂತೆ ಮಾಡಿದರು. ೧೯೧೪–೧೮ ರ ಯುದ್ಧ ಪತ್ರವ್ಯವಹಾರಕರ್ತನಾಗಿದ್ದ ಬೀನ್ ಒಂದು ಯುವ ದೇಶದ ಸಾಹಸವನ್ನು ನೋಡಿ, ಮುಗ್ಧನಾಗಿ ಅದರ ಕುರಿತು ಬರೆಯುತ್ತಾ ತನ್ನ ಜೀವನದ ಅನೇಕ ವರ್ಷಗಳನ್ನು ಕಳೆದ. ಇತ್ತೀಚೆಗೆ ನಾನು ಆ ಲೇಖನದ ಭಾಗವನ್ನು ಪತ್ತೆ ಮಾಡಿದೆ:

"ಆಸ್ಟ್ರೇಲಿಯನ್ನರು ಏಕಪ್ರಕಾರವಾಗಿ ತಮ್ಮ ಮೆಚ್ಚುಗೆಯನ್ನು ಔಟ್‌ಬ್ಯಾಕ್ ನಲ್ಲಿರುವವರಿಗೆ ಮೀಸಲಾಗಿಟ್ಟಿರುತ್ತಾರೆ. ಬಹುಶಃ, ಇವತ್ತಿನ ದಿನ ಹೇಳಬಹುದಾದರೆ,

ಆಸ್ಟ್ರೇಲಿಯಾದ ಈ ಹೊರಗಡೆಯ ಭಾಗ ದೇಶದ ಬಹು ಬೆಲೆಯ ಜಾಗವಾಗುವ ಸಾಧ್ಯತೆ ಇದೆ. ಉಣ್ಣೆ, ಮಾಂಸ, ಕೊಬ್ಬು, ಚರ್ಮಗಳನ್ನು ಔಟ್‌ಬ್ಯಾಕ್ ಉತ್ಪಾದಿಸುತ್ತದೆ. ನಿಜ, ಆ ಉತ್ಕೃಷ್ಟ ಹಳ್ಳಿ ಕೈಗಾರಿಕೆಗಳ ಮಾರ್ಗದಲ್ಲಿ ಅದು ದೇಶಕ್ಕೇ ಮಹತ್ತರವಾದ ಕೊಡುಗೆಯಾಗಿ ಉಳಿಯುವಂತಹ ಮನುಷ್ಯರನ್ನು ಕೊಟ್ಟಿದೆ...."

ಆಲ್ಫಿ ಇನ್ನೂ ಪುರುಷನಾಗಿಲ್ಲ, ದಿಟ. ಆದರೆ ಒಂದು ದಿನ ಹಾಗಾಗುತ್ತದೆಂದು ಅವನು ಚಿಂತಿಸಬೇಕಾಗಿಲ್ಲ. ಅವನ ತಂದೆ ಹೇಳಬಹುದಾದಂತೆ ಹುಡುಗ ಸರಿಯಾದ ರೀತಿಯಲ್ಲಿ ಹೊಂದುತ್ತಿರುವಂತೆ ಕಾಣುತ್ತದೆ.

ಅನು : ಎಂ. ಎಸ್. ಸುಮಿತ್ರಾ

ಕ್ಷಾತ್ರತೆಯು ಶರೀರ ಪುಷ್ಟ-ಶಕ್ತಿಗಳಲ್ಲಿಲ್ಲ. ಮನೋನಿರ್ಧಾರ ಧೈರ್ಯಗಳಲ್ಲಿದೆ. ನಿರ್ಭಯವಾದ ಮನಸ್ಸಿನಲ್ಲಿದೆ. ಸಹನತೆ, ಕ್ಷಮೆ, ದಯೆ, ಔದಾರ್ಯ, ಪ್ರೇಮ ಇವು ಕ್ಷಾತ್ರಗುಣದ ಪೋಷಕ ಶಕ್ತಿಗಳು. ತೋಪು ಗುಂಡುಗಳ ಶಕ್ತಿಯಿಲ್ಲದಿದ್ದರೂ ಮೇಲಿನ ಶಕ್ತಿಗಳಿಂದ ವೈರಿಗಳನ್ನು ಗೆಲ್ಲಬಹುದು.

ಧರ್ಮ ಧರ್ಮಗಳಲ್ಲಿ ಜಗಳ ಸಲ್ಲದು. ಆದರೆ ಎಲ್ಲ ಧರ್ಮಗಳು ಅಧರ್ಮದ ವಿರುದ್ಧ ಹೋರಾಡಬೇಕು.

ಗಾಂಧೀಜಿ

ಅಂತರ

ಮೀರ್‌ ಕಾಫ್‌ ಮೆಹತಾಬ್

ರಸಾಯನ ಶಾಸ್ತ್ರ ಮತ್ತು ಪ್ರೇಮಗಳ ನಡುವೆ ದೂರದ ಸಂಬಂಧವೂ ಇಲ್ಲ. ನಿಜವೆಂದರೆ ಅವು ಪರಸ್ಪರ ವಿರೋಧಿಗಳು. ರಸಾಯನ ಶಾಸ್ತ್ರದಲ್ಲಿ ಪ್ರತಿ ಮಾತಿಗೂ ಪ್ರಮಾಣ. ಆದರೆ ಪ್ರೇಮದ ಕಣ್ಣು ಕುರುಡು. ಒಂದು ಭಾವನಾರಹಿತ ಇನ್ನೊಂದು ಭಾವಪೂರಿತ. ಇದರಿಂದಾಗಿ ಚಂದ್ರಬಾಬು ತಮ್ಮ ಮಗಳು ಸಿಸಿಯ ರಸಾಯನ ಶಾಸ್ತ್ರ ಪುಸ್ತಕದಲ್ಲಿಟ್ಟಿದ್ದ ಪ್ರೇಮ ಪತ್ರವನ್ನು ಕಂಡು ದಿಗಿಲುಗೊಂಡರು. ಅದನ್ನು ತೆಗೆದು ಜೇಬಿನಲ್ಲಿಟ್ಟುಕೊಂಡರು. ಕೋಣೆಯ ಒಳಗೆ ಹೋಗಿ ಮತ್ತೆ ಮತ್ತೆ ಆ ಕಾಗದವನ್ನು ಓದಿದರು. ಕಾಗದದಿಂದ ಪ್ರೇಮದ ಕಂಪು ಸೂಸಿ ಬರುತ್ತಿತ್ತು.

"ಸಿಸಿ! ಕಾಲೇಜಿನಲ್ಲಿ ಸಂಜೆಯುವರೆಗೆ ನಿನ್ನ ದಾರಿ ನೋಡಿದೆ. ಆದರೆ ನೀನು ಕ್ಲಾಸು ಮುಗಿಸಿ ಅದೆಲ್ಲಿಗೆ ಹೋದಿಯೊ? ಮನೆಗೆ ತಲುಪಿ ನಿನ್ನ ಫೋನಿನ ದಾರಿ ನೋಡುತ್ತಿದ್ದೆ. ರಾತ್ರಿಯಾದರೂ ನಿನ್ನ ಮಧುರಧ್ವನಿ ಕೇಳಬರಲಿಲ್ಲ. ನೀನು ಮಾತುಕೊಟ್ಟು ಪೂರೈಸದಿದ್ದಾಗ, ನನ್ನ ಮೇಲೆ ಏನು ಪರಿಣಾಮವಾಗುತ್ತದೆಂಬುದನ್ನು ನೀನು ತಿಳಿಯಲಾರೆ. ನಾನು ನಾಳೆ ನಾಲ್ಕನೆಯ ಪೀರಿಯಡ್ಡು ಮುಗಿದ ಮೇಲೆ ಫುಟ್‌ಬಾಲ್ ಗ್ರೌಂಡಿನ ಹತ್ತಿರವಿರುವ ಆಲದಮರದ ಕೆಳಗಡೆ ಹಾಕಿದ ಬೆಂಚಿನ ಮೇಲೆ ನಿನ್ನ ದಾರಿ ಕಾಯುತ್ತಿರುತ್ತೇನೆ."

—ಪ್ರಕಾಶ

ಕಾಗದದ ಮೇಲೆ ದಿನಾಂಕವಾಗಲಿ, ದಿವಸವಾಗಲಿ ಬರೆದಿರಲಿಲ್ಲ. ಇದರಿಂದಾಗಿ ಇವರಿಬ್ಬರ ಭೇಟಿಯಾಗಿ ಹೋಗಿದೆಯೋ ಅಥವಾ

೧೯೮೭ರ ಫೆಬ್ರುವರಿ "ಬೀಸ್ವಿಸದಿ" ಸಂಚಿಕೆಯಲ್ಲಿ ಪ್ರಕಟವಾದ ಶ್ರೀ ಮೀರ್ ಕಾಫ್ ಮೆಹತಾಬ್‌ರವರ "ಫಾಸಿಲೆ" ಎಂಬ ಉರ್ದು ಕಥೆಯ ಅನುವಾದ.

ಆಗುವುದಿದೆಯೋ ಯಾವುದೂ ಚಂದ್ರಬಾಬು ಅವರಿಗೆ ತಿಳಿಯುಲಿಲ್ಲ. ಅವರು ಫುಟ್ ಬಾಲ್ ಗ್ರೌಂಡಿನ ಹತ್ತಿರ, ಇವರಿಗೆ ತಿಳಿಯದಂತೆ ಹೋಗಿ ಕುಳಿತು ಅವರಿಗೆ ಸ್ವಲ್ಪ ಸಂಶಯು ಬಾರದ ಅವರ ಅಕ್ಕರೆಯು ಮಗಳು ಯಾವ ಹುಡುಗನ ಜೊತೆಗೆ ಚಕ್ಕಂದ ಹೊಡೆಯುತ್ತ ಸಲ್ಲದ ಭರವಸೆ ಕೊಡುತ್ತ ಕುಳಿತಿರುವಳೋ ನೋಡಬೇಕೆಂದರು. ಅವರು ಆ ಪ್ರೇಮ ಪತ್ರವನ್ನು ಪುಸ್ತಕದಿಂದ ತೆಗೆದುಕೊಂಡು ನಿಷಿಯ ಮನಸ್ಸಿನಲ್ಲಿ, ವಿಷಯ ತಂದೆ ತಾಯಿಗಳಿಗೆ ತಿಳಿದಿದೆಯೆಂಬ ಸಂಶಯುವನ್ನು ಹುಟ್ಟಿಸಬಾರದೆಂದು ಬಗೆದು, ಅದನ್ನು ಎರಡು ಮೂರು ಸಲ ಓದಿ ಟೆಲಿಫೋನ್ ಟೇಬಲ್‌ಮೇಲೆ ನಿಷಿ ಇಟ್ಟು ಮರೆತುಬಿಟ್ಟ ರಸಾಯನಶಾಸ್ತ್ರದ ಪುಸ್ತಕದಲ್ಲಿಯೇ ಇಟ್ಟುಬಿಟ್ಟರು.

ಪತ್ರವನ್ನು ಓದಿ ಚಂದ್ರಬಾಬು ಅವರಿಗೆ ಖೇದವಾಯಿತು. ಅವರ ಆಸ್ತಿ ಅಥವಾ ಹಕ್ಕನ್ನು ಯಾರೋ ಕಿತ್ತುಕೊಂಡಂತೆ ಅವರಿಗನಿಸಿತು. ಅವರ ಮಗಳು ತುಂಬ ಬುದ್ಧಿವಂತೆ. ಕಷ್ಟಪಟ್ಟು ಓದುವವಳು ಮತ್ತು ಚೆಲುವೆಯಾಗಿದ್ದಳು. ಯಾವಾಗಾದರೂ ಮಧ್ಯಾಹ್ನದ ಸಮಯದಲ್ಲಿ ಅವಳು ಗುಲಾಬಿಯು ಬಳ್ಳಿಯು ಹತ್ತಿರ ಕುಳಿತು ತನ್ನ ಕುರುಳನ್ನು ಒಣಗಿಸುತ್ತ ಓದುತ್ತಿದ್ದುದನ್ನು ನೋಡುತ್ತಿದ್ದರೆ, ಅವರಿಗೆ ಸಂತೋಷ. ತಮ್ಮ ಮಗಳು ಲಕ್ಷಕ್ಕೆ ಒಬ್ಬಳು....ದೇವರ ದಿವ್ಯ ಸೃಷ್ಟಿ ಎನಿಸುತಿತ್ತು. ಅವಳ ಕಣ್ಣುಗಳಲ್ಲಿಯು ತಂಪು ನೀಲಿ ಮತ್ತು ಮುಖದ ಗುಲಾಬಿಯು ಬೆಡಗಿನ ಅಸಾಧಾರಣ ಮಿಲನ, ಹಿಮಾಲಯುದ ಸುಂದರ ಸರೋವರದಲ್ಲಿ ದಿನಕರ ಸ್ನಾನ ಮಾಡುತ್ತಿದ್ದಾನೆನಿಸುತಿತ್ತು. ಇಂಥ ಹುಡುಗಿ ಗಾಗಿ ಅದೆಷ್ಟು ನವ ತರುಣರು ಕೈ ಕಟ್ಟಿಕೊಂಡು ಎದುರು ನಿಲ್ಲುವರೋ ಎನಿಸುತ್ತಿತ್ತು. ಪ್ರತಿ ಸಲ ಪ್ರತಿ ಪರೀಕ್ಷೆಗೂ ಅವಳು ಶ್ರಮವಹಿಸಿ ಓದುತ್ತಿದ್ದುದನ್ನು ನೋಡಿದರೆ, ಅವಳು ಎಮ್. ಎಸ್ಸಿ, : ಮುಗಿಸುತ್ತಲೂ ಖಂಡಿತ ಕೆಲಸ ದೊರಕಿಸಿಕೊಳ್ಳುವುದರಲ್ಲಿ ಯಶಸ್ವಿಯಾಗುವಳೆಂದು ಖಾತ್ರಿಯಾಗಿ ಹೇಳುವರು. ನಿಷಿ ಮನೆತನದ ಗೌರವವನ್ನು ಎತ್ತಿ ಹಿಡಿಯುವಳು. ಆಗ ಚಂದ್ರಬಾಬು ಮತ್ತು ಅವರ ಪತ್ನಿ ಅಭಿಮಾನದಿಂದ ತಲೆಯೆತ್ತಿ ನಿಲ್ಲುವರು.

ಆದರೆ ನಿಷಿಯ ಪುಸ್ತಕದಲ್ಲಿ ಪ್ರಕಾಶನ ಈ ಪ್ರೇಮಪೂರಿತ ಪತ್ರವನ್ನು ಕಂಡಾಗ ಚಂದ್ರಬಾಬು ಅವರಿಗೆ ಅವರ ಕಲ್ಪನೆಯ ಕನ್ನಡಿಗೆ ಯಾರೋ ಕಲ್ಲು ಎಸೆದಂತಾಗಿ, ಅದರ ಮೇಲೆ ಮೇಲಿನಿಂದ ಕೆಳಗಿನವರೆಗೆ ಗೆರೆಮೂಡಿದಂತಾಗಿ ಮನಸ್ಸು ವ್ಯಗ್ರವಾಯಿತು.

ಅವರು ಪತ್ರಿಕೆ ಓದು ಓದುತ್ತ ರೂಢಿಗೆ ವಿರುದ್ಧವಾಗಿ ತಮಗರಿಯದಂತೆ ಎರಡು ಮೂರು ಸಲ ಚಹದ ಗ್ಲಾಸನ್ನು ಬರಿದು ಮಾಡಿದರು. ಅವರಿಗೆ ಪತ್ರಿಕೆಯ ಪುಟಗಳ ಮೇಲೆ, ವಿಚಾರ ಪ್ರಚೋದಕ ವಿಷಯದ ಬದಲು ಹುಡುಗ ಹುಡುಗಿಯರ ಚಿತ್ರಗಳು ಮತ್ತು ಪ್ರೇಮ ಪತ್ರಗಳು ವಿಸ್ತಾರವಾಗಿ ಹರಡಿದಂತೆನಿಸಿದವು.

ಅವರ ಮಡದಿ, ನಾಲ್ಕು ಸಲ ಚಹ ತರಿಸಿದುದರ ಕಾರಣವೇನೆಂದು ಕೇಳಿದರು. ಆದರೆ ಅವರು ಕಾಂತಾಳನ್ನು ತಮ್ಮ ಸಂಶಯದಲ್ಲಿ ಪಾಲುಗೊಳ್ಳುವಂತೆ ಮಾಡುವುದು ಅವರಿಗೆ ಉಚಿತವೆನಿಸಲಿಲ್ಲ. ಏಕೆಂದರೆ ಯಾವುದೇ ಮುಂದಿನ ಕ್ರಮ ತೆಗೆದುಕೊಳ್ಳುವ ಮೊದಲು, ಅವರು ತಮ್ಮ ಸಂಶಯುವನ್ನು ವರೆಗೆ ಹಚ್ಚಿನೋಡಿ ನಿಜ ಕಂಡುಕೊಳ್ಳ ಬೇಕೆಂದಿದ್ದರು.

ಇಪ್ಪತ್ತೆಂಟು ಮೂವತ್ತು ವರ್ಷಗಳ ಮೊದಲಿನ ಭೂತವನ್ನು ಅವರೆಷ್ಟೋ ಪ್ರಯತ್ನಿಸಿ ತಮ್ಮ ತಲೆಯಿಂದ ತೆಗೆದೊಗೆದಿದ್ದರೂ, ಮತ್ತೆ ಅದು ಧುತ್ತೆಂದು ಎದುರು ನಿಂತು ಹಲ್ಲು ಕಿರಿದು ಕುಣಿಯುತ್ತಿದ್ದಿತು. ಅವರು, ಆ ಭೂತ ಮತ್ತೊಂದೂ ತಮ್ಮ ಜೀವನದಲ್ಲಿ ಇಣಿಕಿ ನೋಡದಂತೆ ಮನಸ್ಸಿನ ಆಳದಿಂದ ಅದನ್ನು ಕಿತ್ತೊಗೆದಿದ್ದರೂ ಅದು ಮತ್ತೆ ಇಂದು ಅವರೆದುರಿಗೆ ನಿಂತು ಗಹಗಹಿಸಿ ನಗುತ್ತಿತ್ತು.

ತಾವು ಸ್ವತಃ ಇಷ್ಟು ಭಯಾನಕ ನಾಟಕವನ್ನು ನೋಡಿದವರಾದಾಗ್ಯೂ ತಮ್ಮ ಮಗಳನ್ನು ವಿದ್ಯಾರ್ಥಿ ವಿದ್ಯಾರ್ಥಿನಿಯರು ಕೂಡಿಯೇ ಓದುವ ಕಾಲೇಜಿನಲ್ಲಿ ಏಕೆ ಸೇರಿಸಿದರೆಂಬುದಕ್ಕೆ, ಅವರಿಗೆ ತಮ್ಮ ಮೇಲೆಯೇ ಅಸಮಾಧಾನವಾಗಿತ್ತು. ಆದರೆ ಈ ಮಾರ್ಗ ಬಿಟ್ಟರೆ ಅವರಿಗೆ ಬೇರೆ ದಾರಿಯೇ ಇರಲಿಲ್ಲ. ಎಮ್. ಎಸ್‌ಸಿಯಲ್ಲಿ ಹುಡುಗಿಯರಿಗೇ ಪ್ರತ್ಯೇಕ ಅಭ್ಯಾಸಮಾಡಲು ಬೇರೆ ವ್ಯವಸ್ಥೆ ಇರಲಿಲ್ಲ. ವಿಶ್ವವಿದ್ಯಾನಿಲಯದಲ್ಲಿ ವರ್ಗಗಳು ಹುಡುಗ ಹುಡುಗಿಯರಿಗೆ ಒಟ್ಟಾಗಿಯೇ ನಡೆಯುತ್ತಿದ್ದವು.

ಅಪರಾಧದ ಈ ಹಗ್ಗ ದೊಡ್ಡದಾಗುವುದಕ್ಕೆ ಬಿಡಬಾರದು. ಹಕ್ಕಿ ಹಾರುವುದಕ್ಕೆ ಮೊದಲೇ ಅದರ ಪುಕ್ಕ ಕಡಿದು ಹಾಕಬೇಕೆಂದು ಆಲೋಚಿಸಿದರು. ಆದರೆ ಈ ಕ್ರಮವನ್ನು ಅನುಷ್ಠಾನಕ್ಕೆ ತರುವುದಕ್ಕೆ ಬೆದರಿದರು. ಏಕೆಂದರೆ, ಹುಡುಗಿಯ. ಪ್ರತಿಕ್ರಿಯೆಯಿಂದ ಲಾಭದ ಬದಲು ಹಾನಿಯಾದೀತೆಂದು. ಅದಕ್ಕೋಸ್ಕರ ಈ ವಿಷಯವನ್ನು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದೇ ವಿಹಿತವೆಂದೆಣಿಸಿದರು.

ಒಂದು ದಿವಸ ಲಂಚ್ ಬಿಡುವಿನಲ್ಲಿ ಅವರು ಕಛೇರಿಯಿಂದ ಯೂನಿವರ್ಸಿಟಿಗೆ ತೆರಳಿದರು. ನಿಷಿ ಕ್ಲಾಸಿನಲ್ಲಿರಲಿಲ್ಲ. ಅವರು ಕ್ಯಾಂಟೀನಿಗೆ ಹೋದರು. ಅಲ್ಲಿ ನಿಷಿ ಒಂದು ಮೇಜಿನ ಮುಂದೆ ಒಬ್ಬ ಸುಂದರ ತರುಣನೆದುರಿಗೆ ಕುಳಿತು ಮಾತನಾಡುತ್ತಿದ್ದಳು ಹುಡುಗ ಎತ್ತರವಾಗಿ ಸದೃಢವಾಗಿದ್ದ. ಪೂರ್ಣತೋಳಿನ ಕೆಂಪು ಬಣ್ಣದ ಪುಲ್ ಓವ್ಹರ್ ಹಾಕಿ, ಕರಿಯ ಪ್ಯಾಂಟ್ ಧರಿಸಿದ್ದ. ನಿಷಿ, ತಮ್ಮ ತಂದೆ ಕ್ಯಾಂಟಿನ್‌ದ ಒಳಗಡೆಗೆ ಬರುತ್ತಿರುವುದನ್ನು ನೋಡಿದಳು. ಕೂಡಲೇ ಅಲ್ಲಿಂದೆದ್ದು ಅವರಿದ್ದೆಡೆಗೆ ಬಂದು,

"ಪಾಪಾ! ನೀವು ಈ ಕಡೆ ಎಲ್ಲಿಗೆ?"

"....ಆದರೆ, ನೀನು, ಈಗ ಈ ಸಮಯದಲ್ಲಿ ಕ್ಯಾಂಟಿನ್‌ನಲ್ಲಿ ಏನು ಮಾಡುತ್ತಿದ್ದೀಯೆ?"

"ನನ್ನ ಈ ಪೀರಿಯಡ್ಡು ಖಾಲಿ ಇತ್ತು. ಇವರು ನನ್ನ ಕ್ಲಾಸ್ ಫೆಲೊ ಪ್ರಕಾಶ. ಇವರ ಜೊತೆಗೆ ಒಂದು ಕಪ್ ಕಾಫಿ ಕುಡಿಯೋಣವೆಂದು ಕ್ಯಾಂಟೀನ್‌ಗೆ ಬಂದೆ."

ನೋಡಿಯೂ ನೋಡದಂತೆ ಎರಡು ಕ್ಷಣ ಪ್ರಕಾಶನನ್ನು ನೋಡಿ, "ನಾನು ಒಂದು ಮೀಟಿಂಗಿಗೆ ಹೊರಟಿದ್ದೆ. ಇನ್ನೂ ಸ್ವಲ್ಪ ಸಮಯವಿತ್ತು. ಏನೋ ನಿನ್ನ ಮಾತಾಡಿಸಿಕೊಂಡು ಹೋಗೋಣ ಅಂತ ಬಂದೆ" ಎಂದರು.

ಆದರೆ ನಿಷಿಯನ್ನು ಭೇಟಿಯಾದ ಮೇಲೆ ಅವರು ಯಾವ ಮೀಟಿಂಗಿಗೂ ಹೋಗಲಿಲ್ಲ. ದಾರಿಯಲ್ಲಿಯೇ ಯಾವುದೋ ಕಾಫಿ ಹೌಸಿನಲ್ಲಿ ಹೊಕ್ಕು ಕುಳಿತರು. ಅವರಲ್ಲಿ ಅಲ್ಲಿಂದ ಏಳುವ ಶಕ್ತಿಯೂ ಇರಲಿಲ್ಲ. ಮಣಗಟ್ಟಲೇ ಭಾರವನ್ನು ಅವರ

ಭುಜದಮೇಲೆ ಹೇರಿದಂತಿತ್ತು. ಕೆಮಿಸ್ಟ್ರಿ ಪುಸ್ತಕದಲ್ಲಿಟ್ಟ ಪ್ರೇಮಪತ್ರ ಈಗ ಕಟ್ಟು ಕಥೆಯಾಗದೆ ವಸ್ತುಸ್ಥಿತಿಯಾಗಿತ್ತು. ಅವರು ನೀರು ತರಿಸಿದರು. ಮತ್ತೆ ಕಾಫಿ, ಮತ್ತೆ ನೀರು, ಮತ್ತೆ ಕಾಫಿ. ಟೇಬಲ್ಲಿನ ಕರಿಯ ಗ್ಲಾಸಿನಮೇಲೆ ನೀರು ಹನಿಗಳಿಂದ ಅನೇಕ ಗೆರೆಗಳನ್ನು ಕುಂಡಲಿಗಳನ್ನೂ ರಚಿಸಿದ್ದರು. ಯೋಚನಾ ಜಗತ್ತಿನ ಯಾವ ಯಾವ ಊರನ್ನೋ ಸುತ್ತಿ ಬಂದಿದ್ದರು. ಅಮೃತಸರದ ಕಾಲೇಜು, ಪೇಟೆ, ಹುಡುಗರು, ಹುಡುಗಿಯರು ಹಾಗೆಯೇ ಇದ್ದರು. ಮನುಷ್ಯ ಸ್ವಭಾವವೂ ಹಾಗೆಯೇ ಇದ್ದಿತು. ಮುಖಮಾತ್ರ ಬೇರೆಯಾಗಿದ್ದವು. ಹುಡುಗ ಹುಡುಗಿಯರು ಆವಾಗಲೂ ಪರಸ್ಪರ ಹತ್ತಿರ ಬರಲು ಪ್ರಯತ್ನಿಸುತ್ತಿದ್ದರು. ಸಂಶಯದ ಸುಳಿಗಳು ಆವಾಗಲೂ ಇರುತ್ತಿದ್ದವು.

ಕೊನೆಗೆ ಪುಷ್ಪಾಳ ತಪ್ಪಾದರು ಏನಿತ್ತು? ಇದೇ ಅಲ್ಲವೆ? ಅವಳು ಚಂದ್ರಬಾಬು ನಿಂದ ಒಂದು ಪುಸ್ತಕವನ್ನು ಕೇಳಿದ್ದಳು. ಆ ಮೇಲೆ ಇಬ್ಬರೂ ಕೂಡಿ ನಿರ್ಧರಿಸಿದ್ದರು. ಪುಸ್ತಕಗಳನ್ನು ಒಬ್ಬೊಬ್ಬರೂ ಬೇರೆ ಬೇರೆಯಾಗಿ ಖರೀದಿಸುವುದರಿಂದ ಲಾಭವೇನು? ಏಕೆ ಪುಷ್ಪಾ ಅರ್ಧ ಪುಸ್ತಕಗಳನ್ನು ಕೊಂಡು ಇನ್ನರ್ಧ ಪುಸ್ತಕಗಳನ್ನು ತಾನು ಸ್ವತಃ ಏಕೆ ಕೊಳ್ಳಬಾರದು? ಒಬ್ಬರ ಪುಸ್ತಕವನ್ನು ಇನ್ನೊಬ್ಬರು ತೆಗೆದುಕೊಂಡು ಓದಿದ ರಾಯಿತು! ಇದೊಂದು ಚಿಕ್ಕ ಆಸೆ, ಅವರಿಬ್ಬರನ್ನೂ ಹತ್ತಿರ ಬರುವಂತೆ ಮಾಡಿತ್ತು. ಇಷ್ಟಾದರೂ ಅವರು ತಮ್ಮ ಪುಸ್ತಕಗಳ ವಿನಿಮಯವನ್ನು ಬೇರೆ ವಿದ್ಯಾರ್ಥಿಗಳಿಗೆ ತಿಳಿಯದಂತೆ ಖಾಲಿಬಿದ್ದ ಪೀರಿಯಡ್‍ಗಳಲ್ಲಾಗಲೀ, ಆಟದ ಮೈದಾನದಲ್ಲಾಗಲೀ ಮಾಡುತ್ತಿದ್ದರು. ಹೇಗಾದರೂ ಪ್ರಳಯಮಾಡುವ ಕೆಲವರು, ದೊಡ್ಡ ಪ್ರಳಯ ವಾಯಿತೆಂದೇ ಸುದ್ದಿ ಹಬ್ಬಿಸಿದರು. ಯಾರೋ ಪುಷ್ಪಾನ ತಂದೆ ತಾಯಿಗಳಿಗೆ ಈ "ಅವ್ಯವಹಾರದ" ಸಂಬಂಧವನ್ನು ತಿಳಿಸಿಯೇ ಬಿಟ್ಟರು. ಉರಿಯ ಮೇಲೆ ಎಣ್ಣೆ ಸುರಿದ ಕೆಲಸವನ್ನು ಚಂದ್ರನು ಪುಷ್ಪಾನ ಪುಸ್ತಕದಲ್ಲಿ ಬರೆದಿಟ್ಟ ಪತ್ರ ಮಾಡಿತ್ತು. ಅದರಲ್ಲಿ ಹೀಗೆ ಬರೆದಿತ್ತು.

> " ಡೀಯರ್ ಪುಷ್ಪಾ! ನಾನು ಈ ಎಲ್ಲ ಪುಸ್ತಕಗಳನ್ನೂ ಓದಿ ನೋಟ್ಸು ತೆಗೆದು ಕೊಂಡಿದ್ದೇನೆ. ನೀನು ಪುಸ್ತಕಗಳನ್ನು ಓದುವ ಅವಶ್ಯಕತೆ ಇಲ್ಲ. ನೀನು ಆ ನೋಟ್ಸು ನನ್ನಿಂದ ಪಡೆದು ಓದಬಹುದು. ಪರೀಕ್ಷೆಗೆ ಅಷ್ಟು ಸಾಕು. ನೀನು ನನ್ನನ್ನು ಕಾಣಲು ಲೈಬ್ರರಿಗೆ ಬರಬೇಡ. ಅಲ್ಲಿ ಬಹಳಷ್ಟು ಜನರಿರುತ್ತಾರೆ. ಸುಮ್ಮನೇ ಏನಾದರು ಮಾನಸಿಕ ತೊಳಕು ಎರಚುತ್ತಾರೆ. ಹಾಸ್ಟೆಲ್ ಹಿಂಭಾಗ ದಲ್ಲಿ ಆಲದಮರದ ಕೆಳಗೆ ಕುಳಿತುಕೊಳ್ಳಲು ತುಂಬಾ ಚೆನ್ನಾಗಿರುವ ಸ್ಥಳವಿದೆ."
>
> —ನಿನ್ನ ಚಂದ್ರ

ಈ ಪತ್ರ ಅದು ಹೇಗೋ ಇವಳ ಪುಸ್ತಕದಿಂದ ಕೆಳಗೆ ಬಿದ್ದು ಅವಳ ಮಾವನ ಕೈಗೆ ಸಿಕ್ಕಿತು. ಇವಳು ತನ್ನ ಹಳ್ಳಿಯಿಂದ ಓದಲು ಬಂದು ಅವರ ಮಾವನ ಮನೆ ಯಲ್ಲಿದ್ದಳು. ಅಲ್ಲಿಂದ ಆ ಪತ್ರ ಪುಷ್ಪಾನ ತಂದೆ ತಾಯಿಗಳಿಗೂ ಸೋದರರಿಗೂ ಮುಟ್ಟಿತು. ಮತ್ತೆ ಒಂದು ದಿವಸ ಚಂದ್ರ ಸೈಕಲ್ ಮೇಲೆ ಮನೆಗೆ ಹಿಂದಿರುಗುತ್ತಿದ್ದಾಗ,

ಕೆಲವು ಜನ ಅವನನ್ನು ಹಿಡಿದು ಚೆನ್ನಾಗಿ ಥಳಿಸಿದರು. ಇನ್ನೊಂದು ಸಲ ಅವನು ಪುಷ್ಪಾಳನ್ನು ಭೇಟಿಯಾಗಿದ್ದು ಕಂಡರೆ ಜೀವ ಉಳಿಯಲಿಕ್ಕಿಲ್ಲೆಂದು ಎಚ್ಚರಿಕೆ ಕೊಟ್ಟರು.

ಅವನಿಗೆ ಕಣ್ಣು ಭುಜ ಮತ್ತು ಪಕ್ಕಡಿಗಳಲ್ಲಿ ಚೆನ್ನಾಗಿ ಏಟು ಬಿದ್ದಿತ್ತು. ಅವನು ಎರಡುವಾರ ಕಾಲೇಜಿಗೆ ಹೋಗದಾದ. ಮತ್ತೆ ಕಾಲೇಜಿಗೆ ಹೋಗುವುದನ್ನು ಪ್ರಾರಂಭಿಸಿದರೂ ಎಲ್ಲಿ ಏನು ಆಗಿ ಬಿಡುವುದೋ ಎಂಬ ಭಯ. ಅವನು ಕಾಲೇಜಿನಲ್ಲಿ ಯಾರ ಎದುರಿಗೂ ತಾನು ಏಟು ತಿಂದದ್ದನ್ನು ಹೇಳಲಿಲ್ಲ. ಒಂದು ದಿವಸ ಧೈರ್ಯಮಾಡಿ ಹುಡುಗಿಯರ ಕಾಮನ್ ರೂಮಿಗೆ ಹೋಗಿ ಪುಷ್ಪಾಗೆ ಅವಳ ಪುಸ್ತಕವನ್ನು ಹಿಂದಿರುಗಿಸಿದ. ಅವಳು ಅವನ ಜೊತೆಗೇನೇ ಚಹ ಕುಡಿಯಲು ಕ್ಯಾಂಟೀನ್‌ಗೆ ಬಂದಳು. ಅಲ್ಲಿ ಚಂದ್ರ ಅವಳಿಗೆ ತನ್ನನ್ನು ಹಿಡಿದು ಹೇಗೆ ಥಳಿಸಿ ಬೆದರಿಕೆ ಹಾಕಿದರೆಂದು ಹೇಳಿದ. ಪುಷ್ಪಾ ಅವನಿಗೆ ಅದು ತಮ್ಮ ಭೇಟಿಯ ಪರಿಣಾಮವಾಗಿ ಆದದ್ದಲ್ಲವೆಂದು ಅದೆಷ್ಟು ಒತ್ತಿ ಹೇಳಲು ಪ್ರಯತ್ನಿಸಿದರೂ ಅವನಿಗೆ ಖಾತ್ರಿಯಾಗಲಿಲ್ಲ. ಅವನು ಬಹಳ ಭಯಭೀತನಾಗಿದ್ದ. ಹೊಡೆದ ಜನರೊಡನೆ ಅವನಿಗೆ ವೈರತ್ವವಿರಲಿಲ್ಲ. ಆದರೆ ಪುಷ್ಪಾಗೆ ತಮ್ಮ ಭೇಟಿಗಳ ವಿಷಯಕ್ಕೆ ಯಾವ ರೀತಿಯ ಆಕ್ಷೇಪಣೆಗಳೂ ಇರಲಿಲ್ಲ. ಅವಳು ಈ ಭೇಟಿಗಳು ಮುಂದುವರೆಯಲೆನ್ನುತ್ತಿದ್ದಳು.

ಕೆಲವು ದಿವಸಗಳಾದ ಮೇಲೆ ಪುಷ್ಪಾ ಕಾಲೇಜಿಗೆ ಬರುವುದು ಕಡಿಮೆಯಾಯಿತು. ಕಾಯಿಲೆಯ ಕಾರಣದಿಂದ ಕಾಲೇಜು ಬಿಟ್ಟುಬಿಡುವುದಾಗಿ ಅರ್ಜಿ ಬಂದಿತು.

ಚಂದ್ರ ಪುಷ್ಪಾನ ಈ ಗೈರುಹಾಜರಿಯಿಂದಲೂ ವಿಶೇಷವಾಗಿ ಅವಳ ಕಾಯಿಲೆಯ ಸುದ್ದಿಯಿಂದ ಬಹಳ ಅಸಮಾಧಾನಗೊಂಡಿದ್ದ. ಅವನು ಪುಷ್ಪಾನ ಮರ್ಯಾದೆಯ ಮೇಲೆ ಕೈಮಾಡಿರಲಿಲ್ಲ. ಅವರು ಸಮಾಜದ ಇಬ್ಬರು ವ್ಯಕ್ತಿಗಳು ಪರಸ್ಪರ ಭೇಟಿಯಾಗುವಂತೆಯೇ ಭೇಟಿಯಾಗುತ್ತಿದ್ದರು. ಇದರ ಸಲುವಾಗಿ ತನ್ನಿಂದಾಗಿ ಪುಷ್ಪಾನ ಮೇಲೆ ಏನಾದರು ಕ್ರೌರ್ಯ ನಡೆಯುತ್ತಿದೆಯೆ? ಎಂದು ಅವನು ಚಿಂತಿಸಿದ. ಕಾಯಿಲೆ ಸುಮ್ಮನೆ ಒಂದು ನೆಪ. ಓದು ನಿಲ್ಲಿಸುವುದಕ್ಕೋಸ್ಕರ ಅವಳನ್ನು ಅವಳ ಹಳ್ಳಿಗೆ ಕಳಿಸಲಾಗಿದೆ. ಅವಳು ಚೆನ್ನಾಗಿಯೇ ಇದ್ದಳು. ಅದು ಹೇಗೆ ಒಮ್ಮಿಂದೊಮ್ಮಿಗೆ ಕಾಯಿಲೆ ಬಿದ್ದಳು? ಅವನು ಪುಷ್ಪಾನ ಮಾವನ ಹತ್ತಿರ ಹೋಗಿ, ಅವಳ ಕ್ಷೇಮ ಸಮಾಚಾರವನ್ನು ಕೇಳಬೇಕೆಂದಿದ್ದ. ಆದರೆ ತಾನು ಅಲ್ಲಿಗೆ ಹೋಗುವುದರಿಂದ, ಮತ್ತೆ ಅಲ್ಲಿ ಏನಾದರು ಬೇರೆ ಅವಾಂತರ ಉದ್ಭವಿಸಬಹುದೆಂದೂ ಹೆದರಿಕೆ ಇತ್ತು.

ತನ್ನ ಮತ್ತು ಪುಷ್ಪಾನ ನಡುವೆ ಇರುವ ಪರಿಚಯ ಸ್ನೇಹದಲ್ಲಿ ಪರಿವರ್ತನವಾಗುತ್ತಿದೆಯೆಂದು ಅವನಿಗನಿಸಿತು. ಭೇಟಿಗಳು ನಿಂತಮೇಲೆ, ಈ ಸ್ನೇಹ ಒಲವಿನಲ್ಲಿ ಪರಿಯಾವಸಾನವಾಗುತ್ತಿರುವಂತೆನಿಸಿತು. ಅವನು ಪುಷ್ಪಾ ಹೇಗಿದ್ದಾಳೆಂಬುದನ್ನು ತಿಳಿಯ ಬಯಸಿದ್ದ. ಮರಳಿ ಕಾಲೇಜಿಗೆ ಬರುವಳೋ ಇಲ್ಲವೊ? ಕಾಲೇಜಿನ ಆಫೀಸಿನಿಂದ ಅವನಿಗೆ, ಅವಳು ಬಹಳ ಕಾಯಿಲೆಯಿಂದಾಗಿ ಈ ವರ್ಷ ಪರೀಕ್ಷೆಗೆ ಕೂಡುವುದಿಲ್ಲೆಂದು, ಪ್ರಿನ್ಸಿಪಾಲರಿಗೆ ಅವಳ ತಂದೆ ಒಂದು ಅರ್ಜಿ ಕಳಿಸಿದ್ದಾರೆಂದು ತಿಳಿಯಿತು. ಇದಕ್ಕೂ ಹೆಚ್ಚಿನ ಮಾಹಿತಿಯನ್ನು ಅವನು ಸಂಗ್ರಹಿಸಬೇಕೆಂದಿದ್ದ. ಕೊನೆಗೆ ಒಂದು ದಿವಸ ಅವನು ಬಸ್ಸಿನಲ್ಲಿ ಅವಳ ಹಳ್ಳಿಗೆ ಹೋಗಿ ಇಳಿದ. ಅಲ್ಲಿ ವಿಶ್ವಂಭರ ಚೌಧರಿಯವರ

ಕುಟುಂಬ ವಾಸಿಸುತ್ತಿತ್ತು. ಅವನು ಬಸ್ಸಿನಲ್ಲಿ ಕುಳಿತಾಗ ಒಬ್ಬರನ್ನು, ಪುಷ್ಪಾನ ತಂದೆ ವಿಶ್ವಂಭರ ಚೌಧರಿಯವರ ವಿಷಯವನ್ನು ತೆಗೆದು ಅವರ ವಿಳಾಸವನ್ನು ಕೇಳಿದ್ದ. ಮಾತುಮಾತಿನಲ್ಲಿ ವಿಶ್ವಂಭರ ಚೌಧರಿಯ ಕಾಲೇಜಿಗೆ ಓದಲು ಹೋಗುತ್ತಿದ್ದ ಮಗಳ ವಿಷಯವೂ ಬಂದಿತು. ಅದೇ ಮನುಷ್ಯನಿಂದ, ಪುಷ್ಪಾ ಬಹಳ ಕಾಯಿಲೆಯಿಂದ ನರಳು ತ್ತಿದ್ದುದರಿಂದ ಅವಳನ್ನು ಜಮ್ಮು ಹತ್ತಿರವಿರುವ ಒಂದು ಹಳ್ಳಿಗೆ ಅವನ ಮಾವನ ಹತ್ತಿರ ಕಳಿಸಲಾಗಿತ್ತು. ಆದರೆ ಅವಳು ಅಲ್ಲಿ ಬದುಕಿ ಉಳಿಯಲಿಲ್ಲವೆಂದು ತಿಳಿಯಿತು.

ಈ ವಿಷಯ ಕೇಳುತ್ತಲೂ ಚಂದ್ರನಿಗೆ ವಿದ್ಯುತ್ತಿನ ಬಲವಾದ ಷಾಕ್ ಹೊಡೆ ದಂತಾಯಿತು. ಅವನಿಗೆ ಈ ವಿಷಯದ ಬಗ್ಗೆ ನಂಬುಗೆ ಬರುತ್ತಿರಲಿಲ್ಲ. ಅದಕ್ಕಾಗಿ ಅವನು ಇನ್ನೂ ಕೆದಕಿ ಕೆದಕಿ, "ಆ ಹುಡುಗಿ ತುಂಬಾ ಆರೋಗ್ಯವಂತಳಾಗಿದ್ದಳು. ತನ್ನ ಕಾಲೇಜಿನಲ್ಲಿಯೇ ಓದುತ್ತಿದ್ದಳು. ಆಟಗಾರ್ತಿಯಾಗಿದ್ದಳು. ಹೀಗೆ ಅಕಸ್ಮಾತ್ತಾಗಿ ಕಾಯಿಲೆ ಹೇಗೆ ಬಿದ್ದಳು?" ಎಂದು ಕೇಳಿದನು.

"ಊರಿನ ಕೆಲವು ಇತರ ಜನರಿಗೂ ಈ ಬಗ್ಗೆ ಶಂಕೆ ಇದೆ. ಆದರೆ ದೊಡ್ಡವರ ವಿಷಯದಲ್ಲಿ ಯಾರೂ ಕೈಹಾಕರು."

ಚಂದ್ರ ಅತ್ಯಂತ ಸೋತುಹೋಗಿ ಬಸ್‌ಸ್ಟ್ಯಾಂಡಿನ ಹತ್ತಿರ ಚಹದ ಅಂಗಡಿ ಯಲ್ಲಿ ಕುಳಿತು, ವಿಶ್ವಂಭರ ಚೌಧರಿಯ ಮನೆಗೆ ಹೋಗಬೇಕೋ ಬೇಡವೋ ಎಂದು ಆಲೋಚಿಸುತ್ತಿದ್ದ. ಒಂದುವೇಳೆ ನಿಜವಾಗಿಯೂ ಪುಷ್ಪಾ ಜೀವದಿಂದಿರದಿದ್ದರೆ, ಅವಳ ಸ್ನೇಹಿತನಾದ ತಾನು ಒಂದು ಸಹಾನುಭೂತಿಯ ಮಾತನ್ನು ಅವಳ ತಂದೆತಾಯಿಗಳಿಗೆ ಹೇಳುವುದು ತನ್ನ ಕರ್ತವ್ಯವಲ್ಲವೆ?

ಇನ್ನೂ ಅವನು ಯಾವ ನಿರ್ಧಾರಕ್ಕೂ ಬಂದಿರಲಿಲ್ಲ. ಅವನ ಎದುರಿಗಿರುವ ಕುರ್ಚಿಯ ಮೇಲೆ ಬೇರೆ ಒಬ್ಬ ಬಂದು ಕುಳಿತು, "ಏನು ಬಾಬು! ನೀನು ಅಮೃತಸರ ದಿಂದ ಬಂದಿದ್ದೀಯಾ?" ಎಂದು ಕೇಳಿದ.

"ಹೌದು."

"ಏನಾದರು ಕೆಲಸದಲ್ಲಿದ್ದೀಯೋ ಅಥವ ಇನ್ನೂ ಎಲ್ಲಾದರೂ ಓದು ತ್ತಿದ್ದೀಯೊ?"

"ಓದುತ್ತಿದ್ದೇನೆ."

"ಹಾಗಾದರೆ ನಿನಗೆ ಇದೇ ಒಳ್ಳೇದು. ಕೊನೆಯ ಬಸ್ಸಿನಿಂದ ತಿರುಗಿ ಹೊರಟು ಹೋಗು. ಇದು ವಿಶ್ವಂಭರ ಚೌಧರಿಯವರ ಹಳ್ಳಿ. ಇಲ್ಲಿ ಅವರ ಅಪ್ಪಣೆ ಇಲ್ಲದೇ ಯಾರೂ ರಾತ್ರಿಯಲ್ಲಿ ಇರಕೂಡದು."

"ಏಕೆ? ಇಲ್ಲಿಗೆ ಬರುವುದು ತಪ್ಪೆ?"

"ಹೀಗೋ! ಇರುವುದೇ ಆದರೆ, ಬಾ. ವಿಶ್ವಂಭರ ಚೌಧರಿಯವರಿಂದ ಅನುಮತಿ ಕೊಡಿಸುತ್ತೇನೆ" ಎಂದು ಹೇಳಿ ಚಂದ್ರನನ್ನು ಒಂದು ಓಣಿಯಲ್ಲಿರುವ ಮನೆಗೆ ಕರೆದು ಕೊಂಡು ಹೋದ. ಅಲ್ಲಿ ಕೋಣೆಯಲ್ಲಿ ಆರೇಳು ಜನರು ಕುಳಿತಿದ್ದರು. ಅವರೆಲ್ಲ ಚಂದ್ರನನ್ನು ನೋಡುತ್ತಲೂ ಅವನನ್ನು ಸುತ್ತುವರೆದು ಮಳೆಗರಿನಂತೆ ರಪರಪನೇ ಹೊಡೆದರು, ಗುದ್ದಿದರು. ಅವನು ಪ್ರಜ್ಞೆ ತಪ್ಪುತ್ತಲೂ ಅವನನ್ನು ರಾತ್ರಿಯೇ ಅಮೃತಸರಕ್ಕೆ ತಂದು ಒಂದು ಛತ್ರದಲ್ಲಿ ಬಿಟ್ಟುಹೋದರು.

ಅವನಿಗೆ ಪ್ರಜ್ಞೆ ಬಂದಾಗ ಅವನ ಶರೀರವೆಲ್ಲ ನೋವಿನಿಂದ ಜರ್ಝರಿತವಾಗಿತ್ತು. ಒಂದು ಕಾಲೂ ಮುರಿದಿತ್ತು. ಅವರ ತಂದೆ ಈ ವಿಷಯವನ್ನು ಪೋಲೀಸರಲ್ಲಿ ದೂರು ಕೊಟ್ಟರು. ಆದರೆ ಅಪರಾಧಿಗಳ ಪತ್ತೆ ಏನೂ ಆಗಲಿಲ್ಲ. ವಿಷಯ ಹಾಗೆಯೇ ಮುಚ್ಚಲ್ಪಟ್ಟಿತು. ಕಾಲ ಕಳೆದಂತೆಲ್ಲ ನೋವು ಕಡಿಮೆಯಾಯಿತೆಂಬುದು ಸ್ಪಷ್ಟ. ಆದರೆ ಕಾಲಿಗೆ ಬಿದ್ದಿದ್ದ ಹೊಡೆತದಿಂದ ಚಂದ್ರ ಮುಂದೆಂದೂ ಫುಟ್‌ಬಾಲ್ ಆಡದಂತಾದ.

ಈ ವಿಷಯ ನಡೆದು ಅದೆಷ್ಟೋ ವರ್ಷಗಳಾಗಿದ್ದರೂ ಈಗಲೂ ಅವನಿಗೆ ತೀವ್ರ ವಾಗಿ ನಡೆದರೆ ಕಷ್ಟವಾಗುತ್ತಿತ್ತು. ನೋವಿನ ಜೊತೆಗೆ ಗತಕಾಲದ ಭೂತ ಅವನ ಕಣ್ಣೆದುರಿಗೆ ಕುಣಿಯುತ್ತಿತ್ತು. ಅವನ ಅಪರಾಧವಾದರೂ ಏನಿತ್ತು ? ನೋವು ಕೊಡದ ಪತ್ರವೊಂದನ್ನು ಬರೆದಿದ್ದ. ಅದಕ್ಕೆ ಇಷ್ಟು ದೊಡ್ಡ ಶಿಕ್ಷೆಯೆ? ಪುಷ್ಪಾಳ ತಪ್ಪಾದರು ಏನಿತ್ತು? ತನ್ನ ಕ್ಲಾಸಿನಲ್ಲಿ ಓದುತ್ತಿದ್ದವನ ಸ್ವಲ್ಪ ಹತ್ತಿರ ಬಂದಿದ್ದಳು, ಅಷ್ಟೇ. ಅವನಿಂದ ವಿದ್ಯೆಯ ವಿನಿಮಯ ಮಾಡಿಕೊಳ್ಳುತ್ತಿದ್ದಳು. ಇದು ಅವಳ ಪ್ರಾಣವನ್ನೇ ತೆಗೆದುಕೊಳ್ಳುವಷ್ಟು ದೊಡ್ಡ ತಪ್ಪಾಗಿ ಪರಿಣಮಿಸಿತು. ತಂದೆ ತಾಯಿಗಳ ಮರ್ಯಾದೆ ಮತ್ತು ಕುಟುಂಬದ ಗೌರವದ ಹೊದಿಕೆ ಎಲ್ಲೂ ಕಲೆಯಾಗಿ ಮಾಸದಂತೆ ಉಳಿಸಲು, ಅವರಿಗೆ ಅದೆಂಥ ಘನಘೋರ ಕಷ್ಟದಿಂದ ಹಾದು ಬರಬೇಕಾಯಿತು. ಭೂತಕಾಲ ಬರಿಯ ಗತಿಸಿದ ಭೂತಕಾಲವಾಗದೇ ನಿಜವಾದ ಭೂತವಾಗಿ ಅವನನ್ನು ಆಯುಷ್ಯ ದುದ್ದಕ್ಕೂ ಕಾಡುತ್ತಲಿತ್ತು.

ಚಂದ್ರಬಾಬು ಮತ್ತೆ ಈ ನಾಟಕವನ್ನು ಆಡಬಯಸುತ್ತಿರಲಿಲ್ಲ. ಅವರು ತಮ್ಮ ಪುತ್ರಿ ನಿಷಿ, ಈ ಹುಡುಗನ ಜೊತೆಗೆ ಕೂತು ಏಳಲು ಹೇಗೆ ಒಪ್ಪುತ್ತಿದ್ದರು? ಸ್ನೇಹದ ಮುಗ್ಧ ಆಕಾಂಕ್ಷೆ, ಪ್ರೀತಿಯಾಗಿ, ಅನುರಾಗದ ಕಿಡಿಯಾಗಿ ಸಿಡಿಯಲು ಅದೆಷ್ಟು ಹೊತ್ತು ಹಿಡಿದೀತು? ಆಗ ಕುಟುಂಬ ಗೌರವ ಮತ್ತು ಪಾವಿತ್ರತೆಯ ಹೊದಿಕೆ ಕಲೆಕಲೆಯಾಗಿ ಮಸಿಯಾಗಿ ಮಲಿನವಾಗಿ ಹೋಗುವುದು. ಮರ್ಯಾದೆಯಿಂದ ಮುಖ ಮರೆಸಿಕೊಳ್ಳಲು ಎಲ್ಲಿಯೂ ಸ್ಥಳ ಸಿಕ್ಕದು.

ಚಂದ್ರಬಾಬು ಅವರಿಗೆ ತಾವು ಅದೆಷ್ಟು ಸಲ ನೀರು ಮತ್ತು ಕಾಫಿಯನ್ನು ತರಿಸಿ ಕೊಂಡಿದ್ದರೆಂಬುದು ಮತ್ತು ಅದೆಷ್ಟು ಸಲ ಬೆವರಿನ ಸ್ನಾನ ಮಾಡಿದ್ದರೆಂಬುದು ನೆನಪಿರಲಿಲ್ಲ. ಅವರಲ್ಲಿ ತಮ್ಮ ಮಗಳೊಡನೆ ಮಾತಾಡುವುದಕ್ಕಾಗಲೀ ಅಥವ ಹೆಂಡತಿ ಯೊಡನೆ ತಮ್ಮ ಹಳೆಯ ಕಥೆಯನ್ನು ಹೇಳಿಕೊಳ್ಳುವುದಕ್ಕಾಗಲೀ ಧೈರ್ಯವಿರಲಿಲ್ಲ. ಅವರು ಬೆಂಕಿಯ ಈ ಜ್ವಾಲೆಗಳೊಡನೆ ತಾವೇ ಕಾದಾಡಬೇಕೆಂದಿದ್ದರು.

ಹುದುಗಿಕೊಂಡಿರುವ ಈ ಸಂಶಯದ ಬೆಂಕಿ ಯಾವುದೇ ಸಮಯಕ್ಕೆ ಜ್ವಾಲೆ ಯಾಗಿ ಭಗ್ಗನೆ ನಾಲಗೆ ಚಾಚಬಹುದಿತ್ತು.. ಒಂದು ಥರದ ಹೊಗೆ ಯಾವಾಗಲೂ ಅವರ ಹೃದಯದಲ್ಲಿ ಸುತ್ತುತ್ತಿತ್ತು. ಅವರು ನಿಷಿಯನ್ನು ನೋಡಲು ಕಳ್ಳತನದಿಂದ ಅದೆಷ್ಟೋ ಸಲ ಕಾಲೇಜು ಮತ್ತು ಯೂನಿವರ್ಸಿಟಿಗೆ ಹೋಗುತ್ತಿದ್ದರು. ಎಲ್ಲಾದರೂ ನಿಷಿ ಎದುರಿಗೆ ಕಂಡರೆ, ಹೇಳಲು ಅದೆಷ್ಟೋ ನೆಪಗಳನ್ನು ಹುಡುಕಿ ಇಟ್ಟುಕೊಂಡಿರು ತ್ತಿದ್ದರು. ಅವರು ಆ ತರುಣನನ್ನು ಅದೆಷ್ಟೋ ಸಲ ನಿಷಿಯೊಡನೆ ತಿರುಗಾಡುತ್ತಿದ್ದು ದ್ದನ್ನೂ, ಪಾರ್ಕಿನಲ್ಲೂ ಮತ್ತು ಆಟದ ಬೈಲಿನಲ್ಲೂ, ಪೇಟೆಯಲ್ಲೂ ನೋಡಿದ್ದರು.

ಪ್ರಸಂಗ ಬರಬರುತ್ತ ಮುಂದುವರೆದು, ಪ್ರಕಾಶ ಈಗೀಗ ಅವರ ಮನೆಗೆ ಬರುವುದಕ್ಕೂ ಪ್ರಾರಂಭಿಸಿದ್ದ. ಚಂದ್ರಬಾಬು ಈಗ ಯಾವಾಗಲೂ ನಿಶಿ, ಪ್ರಕಾಶನೊಡನೆ ಪರಾರಿಯಾಗಿ ಹೋಗುವ ದಿವಸದ ನಿರೀಕ್ಷೆ ಅಥವ ಅವರ ಸಂಬಂಧದ ಈ ಹಗ್ಗವನ್ನು ಉದ್ದವಾಗದಂತೆ ಕತ್ತರಿಸಿ ಬಿಡುವ ಬಗ್ಗೆ ಯೋಚಿಸುತ್ತಿದ್ದರು.

ಕೊನೆಗೆ ಒಂದು ದಿವಸ ಅವರು ತಮ್ಮ ಹೆಂಡತಿಗೆ, "ನನಗೆ ಈ ನಿಶಿ, ಈ ತರುಣನ ಜೊತೆಗೂಡಿ ಓಡಾಡುವುದು ಮನಸ್ಸಿಗೆ ಬರುವುದಿಲ್ಲ. ಅವನು ನಮ್ಮ ಮನೆಗೆ ಬರುವುದಂತೂ ಕಿಂಚಿತ್ತೂ ಹಿಡಿಸುವುದಿಲ್ಲ. ನೆರೆಹೊರೆಯವರು ಏನೆಂದುಕೊಂಡಾರು? ನೀನೊಳ್ಳೇ ತಾಯಿ! ಒಬ್ಬ ಅಪರಿಚಿತ ತರುಣ ಯಾವ ಅಡೆತಡೆಯಿಲ್ಲದೇ ಮನೆಯೊಳಗೆ ಬರಲು ಆಸ್ಪದ ಕೊಡುತ್ತೀ? ಗೊತ್ತಿಲ್ಲವೆ! ಯೌವನ ಮರುಳು ಎನ್ನುವುದು? ಎಲ್ಲವನ್ನೂ ಸುಟ್ಟು ಬೂದಿಮಾಡುವುದೆಂದು? ಹುಡುಗಿಗೆ ಕಡಿವಾಣವನ್ನು ಏಕೆ ಹಾಕುವುದಿಲ್ಲ? ಅವಳ ಕತ್ತನ್ನು ಏಕೆ ಹಿಸಕುವುದಿಲ್ಲ?" ಎಂದು ಕೇಳಿದರು.

"ಹೇ ದೇವರೇ! ನೀವೆಂಥ ಮಾತನ್ನಾಡುತ್ತೀರಿ? ಪ್ರಕಾಶ ಇವಳ ಕಾಲೇಜಿನ ಗೆಳೆಯ. ಓದಿನಲ್ಲಿ ಅವಳಿಗೆ ಎಷ್ಟು ಸಹಾಯ ಮಾಡುತ್ತಾನೆ. ಯಾರಾದರು ಸ್ನೇಹ ಹಸ್ತವನ್ನು ಮುಂದೆ ಚಾಚಿದರೆ ಅದನ್ನು ತಿರಸ್ಕರಿಸುವುದಕ್ಕಾಗುತ್ತದೆಯೆ?"

"ನನಗೆ ಎಲ್ಲಾ ಗೊತ್ತು. ಸ್ನೇಹ ಮತ್ತು ಅನುರಾಗದಲ್ಲಿ ಎಷ್ಟು ಅಂತರವಿದೆಯೆಂದು. ಸ್ನೇಹ ಅನುರಾಗದಲ್ಲಿ, ಅನುರಾಗ ಬೆಂಕಿಯಲ್ಲಿ ಬದಲಿಸಲು ಅದೆಷ್ಟು ಹೊತ್ತು ಹಿಡಿಯುವುದು? ನಾನು ನಿನಗೆ ಎಚ್ಚರಿಕೆ ಕೊಡುತ್ತೇನೆ. ಹಾರುವ ಮೊದಲೇ ಹಕ್ಕಿಯ ರೆಕ್ಕೆಯನ್ನು ಕತ್ತರಿಸು. ಇಲ್ಲದಿದ್ದರೆ ಯಾರದಾದರೂ ಕಾಲು ಮುರಿದೀತು; ಯಾರದಾದರೂ ಹೆಣ ಬಿದ್ದೀತು. ಮತ್ತೆ ಒಂದು ಭೂತ ಜೀವನಾದ್ಯಂತ ಇಲ್ಲಿ ಕುಣಿಯುತ್ತಿದ್ದೀತು."

ಈ ವಿಚಾರವನ್ನು ಪ್ರಕಟಿಸಿದನಂತರವೂ ಚಂದ್ರಬಾಬು ಒಬ್ಬರೇ ತಮ್ಮ ಮೆದುಳಲ್ಲಿರುವ ಭೂತದೊಡನೆ ಗುದ್ದಾಡುತ್ತಿದ್ದರು. ನೆರಳಿನಂತೆ ಯಾರನ್ನೋ ಬೆನ್ನು ಬಿಡದೆ ಹಿಂಬಾಲಿಸುತ್ತಿದ್ದರು. ತಮ್ಮ ಶಕ್ತಿಮೀರಿ ಇಬ್ಬರ ಮೇಲೂ ದೃಷ್ಟಿಯನ್ನಿಟ್ಟಿದ್ದರು.

ಒಂದು ಸಂಜೆ ಚಂದ್ರಬಾಬು ಆಫೀಸಿನಿಂದ ಮನೆಗೆ ಬಂದಾಗ ನಿಶಿ ತಾಯಿಯೊಡನೆ ಕುಳಿತು ಚಹ ಕುಡಿಯುತ್ತಿದ್ದಳು. ಚಂದ್ರಬಾಬುರವರು ಅವರ ಹತ್ತಿರವೇ ಕುಳಿತರು. ನಿಶಿ ತಂದೆಗೆ ಚಹಾ ಬೆರಸಿಕೊಟ್ಟಳು. ನಿಶಿ ತಾಯಿ, ಚಂದ್ರಬಾಬು ಅವರಿಗೆ,

"ತಾವು ತಪ್ಪು ತಿಳಿದುಕೊಳ್ಳದಿದ್ದರೆ ಒಂದು ಮಾತು ಹೇಳಲೆ?" ಎಂದು ಕೇಳಿದಳು.

"ಏನು ಮಾತು?"

"ನಿಶಿ ಇವತ್ತು ರಾತ್ರಿ ಪ್ರಕಾಶನ ಮನೆಯಲ್ಲಿ ಇರಲು ಬಯಸುತ್ತಾಳೆ."

"ಏಕೆ?" ಚಂದ್ರಬಾಬು ಕೈ ಹಿಂಭಾಗದಿಂದಲೇ ಚಹದ ಕಪ್ಪನ್ನು ಜೋರಾಗಿ ಹಿಂದಕ್ಕೆ ತಳ್ಳಿ ಎದ್ದು ನಿಂತು, ಸಿಟ್ಟಿನಿಂದ,

"ಸಾಕು! ನಾಟಕ ಕ್ಲೈಮ್ಯಾಕ್ಸಿಗೆ ಬಂದಿತಲ್ಲವೆ? ನಾನು ಹುಚ್ಚನಲ್ಲ. ಕಾಂತಾ! ನನಗೆ ಇಡೀ ಜೀವನದ ಅನುಭವವಿದೆ. ನನ್ನ ಮಾತು ಕೇಳು ಇಲ್ಲವೇ ಮನೆಯ ಮರ್ಯಾದೆಯ ಹೊದಿಕೆಯನ್ನು ಹರಿದು ಚಿಂದಿ ಚಿಂದಿ ಮಾಡಿ ಬಿಸಾಕು."

"ಕೊನೆಗೆ ನನ್ನ ಮಾತನ್ನಾದರೂ ಕೇಳಿ", ಕಾಂತಾ ತಮ್ಮ ಸೀರೆಯ ಮೇಲೆ ಸಿಡಿದ ಚಹವನ್ನು ಪದರಿಕೊಳ್ಳುತ್ತ ಹೇಳಿದರು.

"ಕೊನೆಯ ಮಾತಂತೂ ಒಬ್ಬ ಹುಚ್ಚನಿಗೂ ತಿಳಿಯುತ್ತದೆ. ಹೇಳುವುದಕ್ಕೆ ಇನ್ನೇನು ಉಳಿದಿದೆ?"

"ನೀವು ಒಪ್ಪಿಕೊಳ್ಳಿ, ಬಿಡಿ, ಅದು ನಿಮ್ಮ ಮನಸ್ಸು. ಮೊದಲು ಮಾತನ್ನಂತೂ ಕೇಳಿ."

"ಇದಕ್ಕಿಂತಲೂ ಭಯಾನಕ ಮಾತೇನಾದರೂ ಇದ್ದರೆ ಅದನ್ನೂ ಹೇಳಿಬಿಡು" ಎಂದರು. ಸಿಟ್ಟಿನಿಂದ ಚಂದ್ರಬಾಬುವಿನ ಕೈಗಳು ನಡಗುತ್ತಿದ್ದವು.

"ಮಾತು ಏನು ಅಂದರೆ, ಪ್ರಕಾಶನ ತಾಯಿಯವರ ಫೋನ್ ಬಂದಿತ್ತು. ಇಂದು ಪ್ರಕಾಶನ ಮದುವೆಯ ನಿಶ್ಚಿತಾರ್ಥ. ಅದರ ಪ್ರಯುಕ್ತ ರಾತ್ರಿ ಅವರ ಮನೆಯಲ್ಲಿ ಊಟ, ತಿಂಡಿ, ಸಂಗೀತ ಏರ್ಪಾಡಾಗಿದೆ. ಪ್ರಕಾಶನ ಎಲ್ಲ ಸ್ನೇಹಿತರೂ ಅಲ್ಲಿ ಇರುತ್ತಾರೆ. ಅವರೆಲ್ಲ ನಿಸಿಯು ಆ ಸಂತೋಷಕೂಟದಲ್ಲಿ ಸೇರಲೆಂದು ಬಯಸುತ್ತಿದ್ದಾರೆ. ಸಮಾರಂಭ ಮುಗಿಯಲು ರಾತ್ರಿ ಬಹಳ ಹೊತ್ತು ಆಗಬಹುದು. ಅದಕ್ಕೇ ನಿಸಿ ಅಲ್ಲಿಯೇ ಉಳಿಯುತ್ತಾಳೆ. ನಿಸಿಯು ಹೋಗಬೇಕೆಂದಿದ್ದಾಳೆ. ಸ್ನೇಹವನ್ನು ಉಳಿಸಿಕೊಳ್ಳಲು ಇಷ್ಟಾದರೂ ಮಾಡಲೇಬೇಕು."

ಚಂದ್ರಬಾಬು ಮೇಜನ್ನು ಅಂಗೈಯಿಂದ ಒತ್ತಿ ಹಿಡಿದು ಕಲ್ಲುಮೂರ್ತಿಯಂತೆ ನಿಂತಿದ್ದರು. ಕೆಮಿಸ್ಟ್ರಿ ಪುಸ್ತಕದಲ್ಲಿಟ್ಟಿದ್ದ ಪ್ರೇಮಪತ್ರ ಅವರ ದೃಷ್ಟಿಯಲ್ಲಿ ಹರಡುತ್ತಲೇ ಹೊರಟಿತ್ತು. ಮನುಷ್ಯ ಸಂಬಂಧದ ಈ ಅಂತರ ಎಲ್ಲಿಂದ ಎಲ್ಲಿಯವರೆಗೆ ಹರಡಿದೆ? ಎಂಬುದನ್ನು ಅವರು ತಿಳಿಯದಾಗಿದ್ದರು.

ಅನು : ಮಾಧವರಾವ್ ಮುಧೋಳ್

ನಾಗರಿಕತೆ ಎಂದರೆ ತಾಳ್ಮೆ ಸಹಿಷ್ಣುತೆಗಳ ತವರು. ಹಿಂಸೆ, ಪ್ರತಿಹಿಂಸೆಗಳ ಸಮುದ್ರವಲ್ಲ.

ಗಾಂಧೀಜಿ

ಶ್ರೀಸಾಮಾನ್ಯ ಉವಾಚ—ಸಂಜೆಗಣ್ಣಿನ ಹಿನ್ನೋಟ

ಪ್ರೊ|| ಎ. ಎನ್. ಮೂರ್ತಿರಾವ್

ಮುಂದುವರಿದುದು

ದೇವರಿಲ್ಲ ಎಂಬ ನಂಬಿಕೆ ದೃಢವಾದದ್ದು

'ಇಡಬೇಕೀಶ್ವರನಲ್ಲಿ ಭಕ್ತಿರಸಮಂ.' ಆದರೆ ಅದು ನನಗೆ ಸಾಧ್ಯವಾಗಲಿಲ್ಲ. ನಾನು ದೇವರ ಅಸ್ತಿತ್ವವನ್ನೇ ಅಲ್ಲಗಳೆಯುವ ಘಟ್ಟವನ್ನು ತಲಪಿದ್ದೆ. ಅದನ್ನು ಇಂಗ್ಲಿಷಿನಲ್ಲಿ 'ಬ್ಲಾಸ್‌ಫೆಮಿ' (blasphemy) ಎಂದು ಕರೆಯುತ್ತಾರೆ ಆ ಪಾಪಕ್ಕೆ ಕ್ಷಮೆಯಿಲ್ಲ. ಕಾಲೇಜಿಗೆ ವಿದ್ಯಾರ್ಥಿಯಾಗಿ ಸೇರುವುದಕ್ಕಿಂತ ಮುಂಚೆಯೇ ನಾನು ದೇವರಲ್ಲಿ ನಂಬಿಕೆ ಕಳೆದುಕೊಂಡಿದ್ದೆ. ಆದರೆ ಬಿ.ಎ. ಕ್ಲಾಸುಗಳಲ್ಲಿದ್ದಾಗ ನನ್ನ ನಿಲುವನ್ನು ವಿಮರ್ಶೆಗೆ ಗುರಿಮಾಡುವ ಸಂದರ್ಭ ಬಂತು. ನನ್ನ ಗುರುಗಳಾಗಿದ್ದವರು, ನನ್ನ ಗೌರವಕ್ಕೆ ಪಾತ್ರರಾಗಿದ್ದವರು, ಉದ್ದಾಮ ಪಂಡಿತರು—ಅವರೆಲ್ಲ ದೇವರ ಅಸ್ತಿತ್ವದಲ್ಲಿ ನಂಬಿಕೆಯುಳ್ಳವರು; ಅಥವಾ ಇತರರಿಗೆ ಆ ಭಾವನೆ ಬರುವಂತೆ ಮಾತಾಡುತ್ತಿದ್ದರು. ನನ್ನ ಮೆಚ್ಚಿನ ಗುರುಗಳಾದ ರಾಲೋ ದೇವರಲ್ಲಿ ಅಚಲವಾದ ಭಕ್ತಿ ಇಟ್ಟಿದ್ದರು. ಕ್ರೈಸ್ತಧರ್ಮದಲ್ಲಿ ಅವರಿಗೆ ನಂಬಿಕೆಯಿತ್ತು. ಬಿ ಎಂ. ಶ್ರೀಕಂಠಯ್ಯನವರು ಆಗಾಗ ಸಂಪ್ರದಾಯವನ್ನು ಕಟುವಾಗಿ ಟೀಕಿಸುತ್ತಿದ್ದರಾದರೂ 'ಅರಮನೆ ಗುರುಮನೆ ದೇವರ ಮನೆ' (ಇದು ಅವರು ಆಗಾಗ ಬಳಸುತ್ತಿದ್ದ ಪದಪುಂಜ) ಗಳೆಲ್ಲಕ್ಕೂ ಅವರ ಗೌರವ ಸಂದಿತ್ತು. ರಾಧಾಕೃಷ್ಣನ್‌ರು ದೇವರ ಪರವಾಗಿಯೂ ವಿರೋಧವಾಗಿಯೂ ಹೇಳಬಹುದಾದ್ದೆಲ್ಲವನ್ನೂ ಹೇಳಿ ಕೊನೆಗೆ ಒಂದು ದಿನ "ದೇವರು ಇಲ್ಲದಿದ್ದರೆ ನಾವು ಅವನನ್ನು ಸೃಷ್ಟಿಸಬೇಕಾಗುತ್ತದೆ" ಎಂಬ ವಾಲ್ಟೇರ್‌ನ ವಾಕ್ಯವನ್ನು ಉದಾಹರಿಸಿದರು. ಅದಕ್ಕೆ ಉತ್ತರವಾಗಿ ನಾನು (ಇತ್ತೀಚೆಗೆ) ಅದೇ ವಾಲ್ಟೇರ್ ಬೇರೊಂದು ಸಂದರ್ಭದಲ್ಲಿ ಹೇಳಿದ್ದನ್ನು

ನೆನಪಿಸಿಕೊಂಡಿದ್ದೇನೆ: "I don't see the necessity!" ರಾಧಾಕೃಷ್ಣನ್ ತಮ್ಮ ವಾದವನ್ನು ಮುಂದುವರಿಸಿ "ದೇವರು ಇದ್ದಾನೆಯೋ ಇಲ್ಲವೋ, ಇದ್ದಾನೆಂದು ನಂಬುವುದು ಕ್ಷೇಮ. ನಂಬಿದ್ದರಿಂದ ನಷ್ಟವೇನೂ ಆಗುವುದಿಲ್ಲ; ನಂಬದಿದ್ದರೆ ಕೆಡಕಾಗ ಬಹುದು" ಎಂದು ಹೇಳಿ, ಟೆನಿಸನ್ನನ 'believing where we cannot prove' (ಸಮರ್ಥನೆ ಸಾಧ್ಯವಲ್ಲದ ಸಂದರ್ಭದಲ್ಲಿ ನಂಬಿ....) ಎಂಬ ಮಾತನ್ನು ಉದಾಹರಿಸಿದರು. ಟೆನಿಸನ್ ದೈವಭಕ್ತ. ನನಗೆ ಅವನಿಗಿಂತ ಹೆಚ್ಚು ಪ್ರಿಯನಾದ ಬ್ರೌನಿಂಗನೂ ಭಕ್ತನೇ.

ಇವರೆಲ್ಲ ಘನವಿದ್ವಾಂಸರು, ತತ್ವಜ್ಞಾನಿಗಳು, ಹಲವಾರು ಶಾಸ್ತ್ರಗಳಲ್ಲಿ ಪರಿಣತಿ ಪಡೆದವರು; ಕೇವಲ ಕಂದಾಚಾರದ ವೈದಿಕರಲ್ಲ, ಆಧುನಿಕರು, ಪಾಶ್ಚಾತ್ಯ ಸಂಸ್ಕೃತಿಯ ಸಾರವನ್ನು ಸವಿದವರು, ಸ್ವತಃ ವಿಚಾರಶೀಲರು. ಇಂಥವರು ದೇವರನ್ನು ನಂಬಿರುವಾಗ ನನ್ನ ಅಪನಂಬಿಕೆ ಧಾರ್ಷ್ಟ್ಯವಲ್ಲವೆ? ದೇವರನ್ನು ನಂಬುವುದಕ್ಕೆ ನನಗೆ ಈಗ ತೋರದಿರುವ ಕಾರಣಗಳಿರಬಹುದಲ್ಲವೆ? ಈ ಯೋಚನೆ ಬಂತು. ಅದುವರೆಗೆ ದೃಢವಾಗಿದ್ದ ಅಪನಂಬಿಕೆ ಸ್ವಲ್ಪ ಸಡಿಲವಾದದ್ದು ಚೆನ್ನಾಗಿ ನೆನಪಿದೆ. ಆದರೆ ಹಾಗಾದದ್ದು ಸ್ವಲ್ಪಕಾಲ ಮಾತ್ರ. ಎಂ.ಎ. ಕ್ಲಾಸಿಗೆ ಸೇರುವ ವೇಳೆಗೆ ನಾನು ಮತ್ತೆ ಸಂಪೂರ್ಣವಾಗಿ ನಿರೀಶ್ವರವಾದಿ ಯಾಗಿದ್ದೆ. ಆಗಿನಿಂದ ಇದುವರೆಗೆ ನನ್ನ ನಿಲುವನ್ನು ಬದಲಾಯಿಸಲು ಕಾರಣವೇನೂ ತೋರಿಲ್ಲ. ದೇವರು ಎಂಬ ಕಲ್ಪನೆಯನ್ನು ಕುರಿತು ಚಿಕ್ಕಪುಸ್ತಕವನ್ನು ಬರೆಯಲಾರಂಭಿಸಿ ದ್ದೇನೆ. ಆದ್ದರಿಂದ ಆ ವಿಷಯಕ್ಕೆ ಇಲ್ಲಿ ಹೆಚ್ಚು ಸ್ಥಳ ಕೊಡಬೇಕಾದ್ದಿಲ್ಲ. ಇಷ್ಟು ಮಾತ್ರ ಹೇಳಬಹುದು:

೧ ದೇವರು ಸರ್ವಶಕ್ತ, ಸರ್ವಜ್ಞ, ಸರ್ವವ್ಯಾಪಿ ಎನ್ನುವುದು ಪರಸ್ಪರ ವಿರೋಧ ವಾದ ಮಾತು. ಸರ್ವಜ್ಞನಾದವನು ಸರ್ವಶಕ್ತನೂ ಆಗಿರುವುದು ತಾರ್ಕಿಕವಾಗಿ ಸಾಧ್ಯ ವಲ್ಲ. ಮುಂದೆ ಹೀಗಾಗುತ್ತದೆ ಎಂದು ಈಗಲೇ ತಿಳಿದಿದ್ದರೆ (ಸರ್ವಜ್ಞನಿಗೆ ತಿಳಿದೇ ಇರಬೇಕಷ್ಟೆ) ಅದನ್ನು ಆಗದಂತೆ ತಡೆಯುವುದು ಸಾಧ್ಯವಲ್ಲ; ಸಾಧ್ಯವಾದರೆ ಹಿಂದೆ ತಿಳಿದಿದ್ದದ್ದು ತಪ್ಪಾಗುತ್ತದೆ.

೨ ವಿಕಾಸವಾದಕ್ಕೆ ಬೇಕಾದಷ್ಟು ಆಧಾರ ಸಿಕ್ಕುತ್ತದೆ. ದೇವರಿದ್ದಾನೆ ಎನ್ನುವುದ ಕ್ಕಿರುವ ಆಧಾರ: ಮತಗ್ರಂಥಗಳ ಪ್ರಮಾಣ ಮತ್ತು ಕೆಲವರ ನಂಬಿಕೆ, ಅಷ್ಟೆ. "ಮತ ಗ್ರಂಥಗಳು ದೈವವಾಣಿ; ಅವು ದೇವರಿದ್ದಾನೆ ಎಂದು ಹೇಳುತ್ತವೆ; ಆದ್ದರಿಂದ ನಂಬಬೇಕು" —ಈ ವಾದ ಸಲ್ಲ. ಇದನ್ನು ಇಂಗ್ಲಿಷಿನಲ್ಲಿ ತಾರ್ಕಿಕರು petitio principle ಅಥವಾ begging the question ಎನ್ನುತ್ತಾರೆ. ಅದೊಂದು ದೋಷ. ಯಾವುದನ್ನು 'prove' ಮಾಡಬೇಕೋ ಅದನ್ನೇ ಆಧಾರವಾಗಿಟ್ಟುಕೊಳ್ಳುವುದು ಸರಿಯಲ್ಲ.

೩ ಪ್ರಕೃತಿಯಲ್ಲಿ ಕಾಣುವ ವ್ಯವಸ್ಥೆಯನ್ನು ನೋಡಿದರೆ ಅದನ್ನು ಸೃಷ್ಟಿಸಿದವ ನೊಬ್ಬ—ದೇವರು—ಇದ್ದೇ ಇರಬೇಕು ಎಂದು ವಾದಿಸುವವರುಂಟು. ಪ್ರಕೃತಿಯಲ್ಲಿ

ವ್ಯವಸ್ಥೆಯೇನೋ ಇದೆ. ಆದರ ಜೊತೆಗೆ ನಿರ್ದಯತೆ ಕ್ರೌರ್ಯಗಳೂ ಇವೆ. ದೇವರು ಅವನ್ನೇಕೆ ಇರಗೊಟ್ಟ?

೪ ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ

ಭಗವದ್ಗೀತೆ

(ಸಾಧುಗಳನ್ನು ರಕ್ಷಿಸುವುದಕ್ಕೆ, ದುಷ್ಟರನ್ನು ಶಿಕ್ಷಿಸುವುದಕ್ಕೆ, ಧರ್ಮವನ್ನು ಸ್ಥಾಪಿಸುವುದಕ್ಕೆ, ಯುಗ ಯುಗದಲ್ಲೂ ಅವತಾರ ಮಾಡುತ್ತೇನೆ.) ಶ್ರೀಕೃಷ್ಣ ಈ ಮಾತನ್ನು ಹೇಳಿದ ಮೇಲೆ ಸಾವಿರಾರು ವರ್ಷಗಳು ಆಗಿಹೋಗಿವೆ. ಈಗಲೂ ಸಾಧುಗಳು (ಸಜ್ಜನರು ಎಂಬ ಅರ್ಥದಲ್ಲಿ) ಕಷ್ಟಪಡುತ್ತಿದ್ದಾರೆ; ದುಷ್ಟರು ಇದ್ದೇ ಇದ್ದಾರೆ; ಧರ್ಮಸಂಸ್ಥಾಪನೆಯೇನೂ ಆದಂತಿಲ್ಲ! ಸರ್ವಶಕ್ತನಾದ ದೇವರು ಒಂದೇ ಒಂದು ಪೆಟ್ಟಿನಿಂದ ದುಷ್ಟರ ಕಥೆಯನ್ನು ಮುಗಿಸಬಹುದಾಗಿತ್ತಲ್ಲ? ಹಾಗೆ ಮಾಡಿದ್ದರೆ ಮತ್ತೆ ಮತ್ತೆ, ಯುಗೇಯುಗೇ, ಅವತಾರ ಮಾಡುವ ತೊಂದರೆ ತಪ್ಪುತ್ತಿತ್ತು!

೫ ಕೇಡಿನ ಸಮಸ್ಯೆಗಿಂತ ಹೆಚ್ಚಾಗಿ ನಮ್ಮನ್ನು ಕಾಡುವುದು ನೋವಿನ—ಸಂಕಟದ—ಸಮಸ್ಯೆ. ಸಂಕಟವೆಲ್ಲ ಮಾನವನ ಕರ್ಮದ ಫಲ ಎನ್ನಲಾಗುವುದಿಲ್ಲ. ಭೂಕಂಪದಿಂದ ಸಾವಿರಾರು ಜನ ಸಾಯುತ್ತಾರೆ; ಅದು ಮಾನವನ ಕೆಲಸವಲ್ಲವಷ್ಟೆ.

೬ ಸಂಕಟ ಕರ್ಮದ ಫಲ, ಅನುಭವಿಸಲೇಬೇಕಾದದ್ದು ಎಂಬ ವಾದ ಸಲ್ಲ.

೭ ಮಗ ತಪ್ಪು ಮಾಡಿದರೆ ತಂದೆ ಅವನಿಗೆ ಬುದ್ಧಿ ಹೇಳುತ್ತಾನೆ, ಕ್ಷಮಿಸುತ್ತಾನೆಯೇ ಹೊರತು ಅನುಭವಿಸು ಎನ್ನುವುದಿಲ್ಲ, ಮಾನವರಿಗಿರುವಷ್ಟು ಕರುಣೆಯೂ ಕ್ಷಮಾಶೀಲತೆಯೂ ಇರಬೇಡವೆ, ದೇವರಿಗೆ?

ಉದಾಹರಣೆಗೆ ಇಷ್ಟು ಪಕ್ಷಪ್ರತಿಪಕ್ಷಗಳನ್ನು ಕಾಣಿಸಿದರೆ ಸಾಕು. ನನ್ನ ಆಪ್ತ ಸ್ನೇಹಿತ ಬಿ. ಚಂದ್ರಶೇಖರಯ್ಯ (ಉರುಫ್ ಬಿ. ಸಿ. ಎಸ್. ಶರ್ಮ) ಮತ್ತು ನಾನು ಎಂ. ಎ. ಕ್ಲಾಸಿನಲ್ಲಿದ್ದಾಗ ಒಂದು ಸಾರಿ ಮೈಸೂರಿನಿಂದ ಕಾಲುನಡಗೆಯಲ್ಲಿ ಹೊರಟು ಟಿ. ನರಸೀಪುರ, ಮುಡುಕುತೊರೆ, ತಲಕಾಡು, (ವಾಪಸು ಬರುವಾಗ) ಸೋಸಲೆ, ಸೋಮನಾಥಪುರ, ಶ್ರೀರಂಗಪಟ್ಟಣ ಇವೆಲ್ಲ ಸ್ಥಳಗಳನ್ನೂ ನೋಡಿಕೊಂಡು ಬಂದೆವು. ಮೊದಲ ದಿನ ದಾರಿಯುದ್ದಕ್ಕೂ ಈ ದೇವರ ಸಮಸ್ಯೆಯನ್ನೇ ಚರ್ಚಿಸಿದೆವು. ನಾನು ನಿರೀಶ್ವರವಾದವನ್ನು ಮಂಡಿಸತಕ್ಕದ್ದು, ಅವರು ನನ್ನ ವಾದವನ್ನು ಖಂಡಿಸತಕ್ಕದ್ದು—ಇದು ನಾವು ಮಾಡಿಕೊಂಡ ಏರ್ಪಾಡು. ಚಂದ್ರಶೇಖರಯ್ಯನೂ ನಿರೀಶ್ವರವಾದಿಯೇ. ಆದರೆ ಆ ವಾದಕ್ಕೆ ವಿರುದ್ಧವಾದದ್ದೆಲ್ಲವನ್ನೂ ಪ್ರಾಮಾಣಿಕವಾಗಿ ಗಮನಕ್ಕೆ ತಂದುಕೊಳ್ಳಬೇಕಷ್ಟೆ. ಹಾಗೆ ಮಾಡದಿದ್ದರೆ ನಮ್ಮಲ್ಲಿರುವ ಪೂರ್ವಗ್ರಹಗಳಿಗೆ ಏಕಾಧಿಪತ್ಯ

ಕೊಟ್ಟಂತಾಗುತ್ತದೆ. ಆದ್ದರಿಂದ ನಾವು ಉದ್ದೇಶಪೂರ್ವಕವಾಗಿ ಒಬ್ಬ ನಾಸ್ತಿಕ, ಮತ್ತೊಬ್ಬ ಆಸ್ತಿಕ ಪಾತ್ರಗಳನ್ನು ಪರಿಸಿದೆವು. ಚಂದ್ರಶೇಖರಯ್ಯ ಹೇಳಿದ ಕೊನೆಯ ಮಾತು—ಇದನ್ನು ನಾವೆಲ್ಲ ನೂರು ಸಾರಿ ಕೇಳಿದ್ದೇವೆ—ದೇವರು ಇಡೀ ವಿಶ್ವಕ್ಕೆ ಅನ್ವಯಿಸುವ ವ್ಯವಸ್ಥೆಯೊಂದನ್ನು ಗಮನದಲ್ಲಿಟ್ಟುಕೊಂಡಿದ್ದಾನೆ. ಸಂಕಟ ಎನ್ನುವುದು ಆ ವ್ಯವಸ್ಥೆಯಲ್ಲಿ ಆವಶ್ಯಕವಾದ ಅಂಗ. ಇದನ್ನು ನಾವು ಅರ್ಥಮಾಡಿಕೊಂಡರೆ ಸಂಕಟ ಸಂಕಟವಾಗಿ ಕಾಣುವುದಿಲ್ಲ. ಆದರೆ ನಮ್ಮ ಪರಿಮಿತ ಬುದ್ಧಿಗೆ ವಿಶ್ವವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಲ್ಲ. ಅದಕ್ಕೆ ನನ್ನ ಉತ್ತರ: ೧ ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲವಾದರೆ ಸಂಕಟ ಸಂಕಟವಾಗಿಯೇ ಉಳಿಯುತ್ತದಲ್ಲ? ೨ ಸರ್ವಜ್ಞನೂ ಸರ್ವಶಕ್ತನೂ ಆದ ದೇವರಿಗೆ ಸಂಕಟರಹಿತವಾದ ವ್ಯವಸ್ಥೆಯನ್ನು ಮಾಡಿಕೊಳ್ಳುವುದಕ್ಕಾಗುತ್ತಿರಲಿಲ್ಲವೆ?

ಚಂದ್ರಶೇಖರಯ್ಯ ತಮ್ಮ ವಾದವನ್ನು ಹೂಡಿದಾಗ ಅವರಿಗೇ ನಗು. ದೇವರ ಅಸ್ತಿತ್ವದ ಚರ್ಚೆ ಅಲ್ಲಿಗೆ ಮುಗಿಯಿತು. ಆಮೇಲೆ ಚಂದ್ರಶೇಖರಯ್ಯ "ದೇವರಿರಲಿ ಇಲ್ಲದಿರಲಿ, ಇದ್ದಾನೆ ಎಂದು ನಂಬುವುದು ಕ್ಷೇಮ" ಎಂದು ರಾಧಾಕೃಷ್ಣನ್ ಹೇಳಿದ್ದನ್ನು ಜ್ಞಾಪಿಸಿದರು. ನಾನು "ಇರಬಹುದೇನೊ" ಎಂದು ಸುಮ್ಮನಾದೆ. ರಾಧಾಕೃಷ್ಣನ್ ಆ ಮಾತಾಡಿದಾಗ ಅವರಲ್ಲಿ ಜಾಗೃತವಾಗಿದ್ದದ್ದು ತತ್ತ್ವಾನ್ವೇಷಣೆಯಲ್ಲ, "safety first" ಮನೋವೃತ್ತಿ; ಅನುಕೂಲಸಿಂಧು. ಅವರು ಅದನ್ನು ಹಾಸ್ಯದ ದನಿಯಲ್ಲೇ ಹೇಳಿದರು. ಅವರ ಮಾತಿಗೆ ಆಗ ಹೊಳೆಯದಿದ್ದ ಉತ್ತರ ಈಗ ಹೊಳೆದಿದೆ: ೧ "ನನ್ನನ್ನು ಇವನು ನಂಬಲಿಲ್ಲವಲ್ಲ! ಇರಲಿ, ಇವನಿಗೆ ಗತಿಕಾಣಿಸುತ್ತೇನೆ" ಎನ್ನುವ ಸೇಡುಮಾರಿ ದೇವರು ದೇವರೇ ಅಲ್ಲ. ೨ ದೇವರು ಎಲ್ಲಕ್ಕೂ ಉಗಮಸ್ಥಾನ. ಅಂದ ಮೇಲೆ ನನಗೆ ಅಪನಂಬಿಕೆಕೊಟ್ಟವನೂ ಅವನೇ. ತಾನೇ ಕೊಟ್ಟ ಬುದ್ಧಿಗಾಗಿ ನನ್ನನ್ನು ಶಿಕ್ಷಿಸಿಯಾನೆ? ಕನಕದಾಸರು ತಮ್ಮ ಕೃತಿಯೊಂದರಲ್ಲಿ ಈ ಪ್ರಶ್ನೆಯನ್ನು ಕೇಳಿದ್ದಾರೆ:

> ನಿನ್ನ ಪ್ರೇರಣೆಯಂತೆ ನಡೆದು ನುಡಿದ ಮೇಲೆ
> ನಿನ್ನಿಂದೆ ತಪ್ಪೋ ನನ್ನಿಂದೆ ತಪ್ಪೋ—ಪರಮಾತ್ಮ?

ಪ್ರಮಾಣಗಳು

ಸಂಪ್ರದಾಯ ನಮ್ಮಿಂದ ಬಯಸುವ ಆಚರಣೆ (ರಿಚ್ಯುಯಲ್)ಗಳಿಗೆ ಆಧಾರವೆಂದರೆ ಇವು ಮೂರು: ೧ ದೇವರು (ಧರ್ಮಗ್ರಂಥಗಳ ಮೂಲಕ) ವಿಧಿಸಿರುವ ನಡೆವಳಿಕೆ. ಆ ಗ್ರಂಥಗಳು ದೈವವಾಣಿಯಾದ್ದರಿಂದ ಅವು ಹೇಳಿದಂತೆ ಕೇಳಬೇಕು. (ಭಗವದ್ಗೀತೆಯ ಬೋಧನೆಯಲ್ಲಿ "ಶ್ರೀ ಭಗವಾನ್ ಉವಾಚ"). ೨ 'ಶಾಸ್ತ್ರ'ದಲ್ಲಿ ಹೇಳಿರುವುದು, ಅಥವಾ ಶಾಸ್ತ್ರದಲ್ಲಿದೆ ಎಂದು ಬಲ್ಲವರು (?) ಹೇಳುವುದು. ಇದಕ್ಕೆ ದೈವವಾಣಿಯ ಸ್ಥಾನಮಾನಗಳಿಲ್ಲ. ಆದರೂ ಅದು ಋಷಿಗಳ ಅಥವಾ ಋಷಿಕಲ್ಪರಾದವರ ವಾಣಿ. ಅದನ್ನು ಮೀರಲಾಗದು. 'ಶಾಸ್ತ್ರ' ಅಂದ ಮೇಲೆ ಮುಗಿಯಿತು. ಮಾಡಿಯೇ

ತೀರಬೇಕು., ೩. ಅನೂಚಾನವಾಗಿ ಬಂದ ಪದ್ಧತಿಗಳು. ಅವು ಶತಮಾನಗಳ ಕಾಲದಿಂದ ಚಾಲತಿಯಲ್ಲಿವೆ. ಕಾಲದ ಜರಡಿಗೆ ಸಿಕ್ಕಿದ ಮೇಲೂ ಬಿದ್ದುಹೋಗದೆ ಉಳಿದಿವೆ. ಸಮಾಜ ಕಲ್ಯಾಣಕ್ಕೆ ಅವು ಆವಶ್ಯಕ ಎಂದು ತಾನೆ ಇದರ ಅರ್ಥ? ಆವಶ್ಯಕವಲ್ಲದಿದ್ದರೆ ಕಾಲ ಅವನ್ನು ತಳ್ಳಿಹಾಕುತ್ತಿತ್ತು.

ಈ ಮೂರು ಪ್ರಮಾಣಗಳನ್ನು ಕುರಿತಂತೆ ನನ್ನ ಮನಸ್ಸಿಗೆ ಬಂದ ಯೋಚನೆಗಳಲ್ಲಿ ಕೆಲವನ್ನಾದರೂ ಹಿಂದೆ ಸೂಚಿಸಿದ್ದೇನೆ. ಪುನರುಕ್ತಿಯಾದರೂ ಆಗಲೆಂದು ಅವುಗಳನ್ನು ಇಲ್ಲಿ ಒಟ್ಟಿಗೆ ಕಾಣಿಸುತ್ತೇನೆ.

೧ ಮತಗ್ರಂಥಗಳು ನಿಜವಾಗಿ ದೈವವಾಣಿಯೆ? ನಾವು ಭಗವದ್ಗೀತೆಯನ್ನು ಹೇಗೆ ದೈವವಾಣಿ, ಪವಿತ್ರ ಎಂದು ನಂಬಿದ್ದೇವೋ ಹಾಗೇ ಕ್ರೈಸ್ತರು ಬೈಬಲನ್ನೂ ಮುಸ್ಲಿಮರು ಕೊರಾನನ್ನೂ ನಂಬುತ್ತಾರೆ. ಇವೆಲ್ಲ ಗ್ರಂಥಗಳಲ್ಲೂ ಹೇಳಿರುವುದು ಒಂದೇ ಎನ್ನಲಾಗುವುದಿಲ್ಲ. ಬೇರೆ ಬೇರೆ ಅಭಿಪ್ರಾಯಗಳು ಕಂಡುಬರುತ್ತವೆ. ಇವುಗಳಲ್ಲಿ ದೈವವಾಣಿ ಯಾವುದು, ಅಲ್ಲದ್ದು ಯಾವುದು? ದೈವವನ್ನು ನಂಬದಿರುವವರನ್ನು ಈ ಸಮಸ್ಯೆ ಕಾಡುವುದಿಲ್ಲ. ಅವರು ಎಲ್ಲ ಮತಗಳಲ್ಲೂ ವಿಚಾರಸಮ್ಮತವಾದದ್ದನ್ನು ಸ್ವಾಗತಿಸುತ್ತಾರೆ; ಉಳಿದುದನ್ನು ಬಿಡುತ್ತಾರೆ.

೨ ಶಾಸ್ತ್ರ: ಮತಗ್ರಂಥಗಳೇ ಅಂತಿಮ ಪ್ರಮಾಣವಲ್ಲ ಎಂದ ಮೇಲೆ ಶಾಸ್ತ್ರಗಳು ಹೇಗೆ ಪ್ರಮಾಣವಾದಾವು? ಅವನ್ನು ರಚಿಸಿದವರು ಎಂಥ ಮೇಧಾವಿಗಳೇ ಆಗಲಿ, ಅವರು ತಪ್ಪು ಮಾಡಿರುವುದು ಸಾಧ್ಯ. ಅಥವಾ ಅವರು ಹೇಳಿದ್ದು ಅವರ ಕಾಲಕ್ಕೆ ಸರಿ ಎಂದರೂ ಈಗ ಸರಿಯಲ್ಲವಿರಬಹುದು; ಹಾನಿಕರವೇ ಆಗಬಹುದು.

೩ ಪದ್ಧತಿಗಳು: "ಅನಾವಶ್ಯಕವೂ ಅಸಭ್ಯವೂ ಹಾನಿಕರವೂ ಆದ ಪದ್ಧತಿಗಳು ಕಾಲಕ್ರಮೇಣ ತಾವಾಗಿ ನಾಶವಾಗುತ್ತವೆ; ಉಳಿದ ಪದ್ಧತಿಗಳು ಮಾನವಕಲ್ಯಾಣಕ್ಕೆ ಆವಶ್ಯಕ, ಅವು ಉಳಿದಿರುವುದೇ ಅದಕ್ಕೆ ಸಾಕ್ಷಿ" ಎಂದು ಧೈರ್ಯವಾಗಿ ಹೇಳಲಾಗುವುದಿಲ್ಲ. ನಮ್ಮಲ್ಲಿ ವಿವಾಹ ಮಹೋತ್ಸವಕ್ಕೆ ಸಂಬಂಧಪಟ್ಟಂತೆ ಕಾಶೀಯಾತ್ರೆ, ಬಟ್ಟಲು ಕಡಿಯುವುದು ಮುಂತಾದ ಪದ್ಧತಿಗಳು ಉಳಿದುಕೊಂಡಿವೆಯಲ್ಲ, ಅವುಗಳಿಂದ ನಾವು ಸಾಧಿಸಬಹುದಾದ ಮಾನವ ಕಲ್ಯಾಣವೇನು! ಸ್ವಲ್ಪ ಹೆಚ್ಚು ಸ್ವಲ್ಪ ಕಡಮೆ—ನಾವೆಲ್ಲ ರೂಢಿ ಮೂಢರು. ಅರ್ಥವಿರಲಿ ಇಲ್ಲದಿರಲಿ, ಎಷ್ಟೋ ಪದ್ಧತಿಗಳನ್ನು ಕಣ್ಣು ಮುಚ್ಚಿಕೊಂಡು ಅನುಸರಿಸುತ್ತೇವೆ.

ಶ್ರುತಿ (ಈ ಪದಕ್ಕೆ 'ಎಲ್ಲ ಮತಗ್ರಂಥಗಳು' ಎಂಬ ಅರ್ಥವನ್ನು ಕೊಡೋಣ) ಸ್ಮೃತಿ, ಆಪ್ತವಾಕ್ಯ, ಸಂಪ್ರದಾಯ—ಇವೊಂದೂ ನಿರಪೇಕ್ಷ ಪ್ರಮಾಣವಲ್ಲ. ಎಲ್ಲವನ್ನೂ ವಿಚಾರಶಕ್ತಿಯ ಒರೆಗಲ್ಲಿಗೆ ಹಚ್ಚಿ ನೋಡಬೇಕು. ಮೌಲ್ಯಗಳ ನಿರ್ಣಯ ಮಾಡುವಾಗಲೂ ವಿಚಾರಶಕ್ತಿಯ ನೆರವು ಬೇಕಾಗುತ್ತದೆ. ಅದಕ್ಕೆ ನಿಲುಕದ ವಿಷಯಗಳಿವೆ ಎಂದು ವಾದಿಸುವಾಗಲೂ ನಾವು ವಿಚಾರಶಕ್ತಿಯನ್ನು ಬಳಸಿ ಮಾತಾಡುತ್ತೇವೆ. ಈ

ಪ್ರಪಂಚದಲ್ಲಿ ಯಾವನೊಬ್ಬನೂ, ಯಾವುದೊಂದು ತಲೆಮಾರಿನವರೂ ಪೂರ್ಣ ಸತ್ಯವನ್ನು ಕಂಡವರಲ್ಲ. ಪ್ರತಿ ತಲೆಮಾರಿನವರೂ "ಇದು ಸರಿಯೆ" ಎಂಬ ಪ್ರಶ್ನೆಯನ್ನು ಕೇಳುತ್ತಲೇ ಇರಬೇಕು, ಸ್ವತಂತ್ರವಾಗಿ ಯೋಚನೆ ಮಾಡುತ್ತಲೇ ಇರಬೇಕು—ನನ್ನ ಮನಸ್ಸು ಸಾಗುತ್ತಿದ್ದದ್ದು ಈ ದಾರಿಯಲ್ಲಿ.

ನನ್ನ ಮನೋವೃತ್ತಿಯಲ್ಲಿದ್ದ ದೋಷಗಳು

ನನ್ನ ಆಗಿನ ಮನೋವೃತ್ತಿಯಲ್ಲಿ ಎರಡು ದೋಷಗಳಿದ್ದವು ಎನ್ನಿಸುತ್ತದೆ. ೧. ವಿಚಾರ ಶಕ್ತಿಗೆ ಪ್ರಾಧಾನ್ಯವಿರಬೇಕು ಎನ್ನುವುದೇನೋ ಸರಿ. ಅದಕ್ಕೆ ಸಾಮಗ್ರಿಯನ್ನು ಒದಗಿಸಲು ಆಧುನಿಕ ಶಾಸ್ತ್ರಗಳು (ಅರ್ಥಶಾಸ್ತ್ರ ರಾಜ್ಯಶಾಸ್ತ್ರ ಮುಂತಾದ ಮಾನವಿಕಶಾಸ್ತ್ರಗಳು ಮತ್ತು ಫಿಸಿಕ್ಸ್ ಕೆಮಿಸ್ಟ್ರಿ ಮುಂತಾದ ಭೌತಶಾಸ್ತ್ರಗಳು) ಒದಗಿಸುವ ಸಾಕ್ಷ್ಯ ಬೇಕು; ಫ್ರಾಯ್ಡ್, ರಸಲ್, ಲಾಸ್ಕಿ, ವಿಲಿಯಂ ಜೇಮ್ಸ್, ಹಕ್ಸ್ಲಿ ಮುಂತಾದ ವಿಶ್ವವಿಖ್ಯಾತ ವಿದ್ವಾಂಸರ ವಿಚಾರ ಲಹರಿಯೂ ಸಾಮಗ್ರಿಯಾಗಬೇಕು. ಇದನ್ನು ನನ್ನ ಮನಸ್ಸು ಒಪ್ಪಿತ್ತು. ಅಂಥ ವಿದ್ವಾಂಸರು ಅಜ್ಞರಿಗಾಗಿ ಬರೆದ ಪುಸ್ತಕಗಳನ್ನು ನಾನು (ನನ್ನ ಮಿತಿಯಲ್ಲಿ) ಆಸಕ್ತಿಯಿಂದ ಓದಿದ್ದೆ. ಪಾಶ್ಚಾತ್ಯ ಪುರಾತನರ (ಉದಾ : ಪ್ಲೇಟೊ) ಬರವಣಿಗೆಗೂ—ಮತ್ತೆ ನನ್ನ ಮಿತಿಯಲ್ಲಿ—ಗಮನ ಕೊಟ್ಟಿದ್ದೆ. ಆದರೆ ಭಾರತೀಯರ ಬರೆವಣಿಗೆಯನ್ನು ಲೆಕ್ಕಕ್ಕೇ ತೆಗೆದುಕೊಂಡಿರಲಿಲ್ಲ. ಭಗವದ್ಗೀತೆಯೂ ಉಪನಿಷತ್ತುಗಳೂ ಪಾಶ್ಚಾತ್ಯ ವಿದ್ವಾಂಸರ ಮೆಚ್ಚಿಕೆಯನ್ನು ಗಳಿಸಿದ್ದವೆಂದು ನನಗೆ ತಿಳಿದಿತ್ತು; ಗಯಟೆ 'ಶಾಕುಂತಲ' ವನ್ನು ಮನಸಾರ ಹೊಗಳಿ ಬರೆದಿದ್ದ ಪದ್ಯವನ್ನು ಓದಿದ್ದೆ. ವಿವೇಕಾನಂದರಿಂದಾಗಿ ನಮ್ಮ ಸಂಸ್ಕೃತಿ ಅಮೆರಿಕನ್ನರ ಕುತೂಹಲವನ್ನು ಮಾತ್ರವಲ್ಲ, ಮೆಚ್ಚಿಕೆಯನ್ನೂ ಗಳಿಸಿತ್ತೆಂಬುದೂ ನನಗೆ ತಿಳಿದ ವಿಷಯ. ಇಷ್ಟಾದರೂ ಭಾರತೀಯರ ಬರವಣಿಗೆಯ ವಿಷಯದಲ್ಲಿ ಉದಾಸೀನನಾಗಿದ್ದೆ.

ನನಗೆ ಸಂಸ್ಕೃತ ಬರದು, ನಿಜ. ಆದರೆ ಇಂಗ್ಲಿಷಿನಲ್ಲೇ ದೊರೆಯುತ್ತಿದ್ದ ವಿವೇಕಾನಂದರ ಪುಸ್ತಕಗಳನ್ನು ಓದಬೇಡವೆ? ಭಗವದ್ಗೀತೆ ಇಂಗ್ಲಿಷ್‌ನಲ್ಲಿ ದೊರೆಯುತ್ತಿತ್ತಲ್ಲ? ಓದದಿದ್ದಕ್ಕೆ ಕಾರಣ ಭಾರತ ಸಂಸ್ಕೃತಿಯನ್ನು ಕುರಿತ ತಿರಸ್ಕಾರವೇನೂ ಅಲ್ಲ. ಭಾರತೀಯರು ಬರೆಯುವುದೆಲ್ಲ (ಸೃಜನಶೀಲ ಸಾಹಿತ್ಯ ವಿನಾ) ಮತಧರ್ಮಕ್ಕೆ ಸಂಬಂಧಪಟ್ಟವು ಎಂದು—ಅವನ್ನು ಓದದೆಯೇ—ನಿರ್ಧರಿಸಿಬಿಟ್ಟಿದ್ದೆ. ಮತಧರ್ಮ ನನಗೆ ಅಷ್ಟೇನೂ ಪ್ರಿಯವಾದದ್ದಲ್ಲ. ಆದರೆ ಬೈಬಲ್ ಓದಿದ್ದೆನಲ್ಲ? ಅದನ್ನು ಓದಿದ್ದಕ್ಕೆ ಕಾರಣ: ಅದು ನನಗೆ ಪಠ್ಯ ವಿಷಯವಾಗಿತ್ತೆಂಬುದು, ಅದರ ಮನಮೋಹಕ ಶೈಲಿ, ಮತ್ತು ಯೇಸು ಮಾನವಸೇವೆಗೆ ಕೊಟ್ಟ ಉನ್ನತ ಸ್ಥಾನ. ವಿವೇಕಾನಂದರೂ ಮಾನವಸೇವೆಗೆ ಉನ್ನತ ಸ್ಥಾನವನ್ನು ಕೊಟ್ಟರು. ಆದರೆ ಅವರು ಕೇವಲ ಮತಧರ್ಮ, ಮೋಕ್ಷ, ದೇವರು, ಇತ್ಯಾದಿಗಳನ್ನು ಕುರಿತು ಬರೆಯುತ್ತಾರೆಂದು ಮೊದಲೇ ನಿರ್ಣಯಿಸಿಬಿಟ್ಟಿದ್ದೆನಲ್ಲ, ಈ ಸರ್ವಜ್ಞ !

ಬೈಬಲ್‌ನಲ್ಲಿ ಕಾಣಬರುವ ಪವಾಡಗಳನ್ನು ನಾನು ನಂಬಿರಲಿಲ್ಲ. ಅದರಲ್ಲಿ ನನಗೆ ವಿರೋಧಾಭಾಸಗಳಂತೆ ಕಂಡ, ಈಗಲೂ ಕಾಣುತ್ತಿರುವ, ಅಂಶಗಳನ್ನೂ ಗಮನಿಸಿದ್ದೆ.

ಹೊಸ ಒಡಂಬಡಿಕೆ (the New Testament) ಪ್ರತಿಪಾದಿಸುವ ಮುಖ್ಯ ಥಿಯರಿ ಇದು: ಪ್ರಪಂಚದ ಜನರೆಲ್ಲರ ಪಾಪಗಳಿಗೂ ಪ್ರಾಯಶ್ಚಿತ್ತವಾಗಿ ತಾನು ಶಿಕ್ಷೆಯನ್ನು ಅನುಭವಿಸಿ ಆ ಜನರೆಲ್ಲರಿಗೂ ಕ್ಷಮೆ ದೊರಕಿಸಲಿ ಎಂದು ದೇವರು ತನ್ನ ಮಗನನ್ನು (ಯೇಸುವನ್ನು) ಭೂಮಿಗೆ ಕಳಿಸಿದ; ಯೇಸುವನ್ನು ನಂಬಿದವರಿಗೆ ಸ್ವರ್ಗ ಸಿಕ್ಕುತ್ತದೆ. ಈ ಥಿಯರಿಯನ್ನು ನಾನು ನಂಬಿಲ್ಲ. ನನ್ನನ್ನು ಆಕರ್ಷಿಸಿದ್ದು ಯೇಸುವಿನ ದೈವತ್ವವಲ್ಲ; ಅವನಲ್ಲಿ ಕಾಣುವ ಮಾನವದಯಾಮೃತ, ಕರುಣೆ, ಮಾನವ ಕುಲಕ್ಕೆಲ್ಲ ಸಂದ ಪ್ರೀತಿ, ತಪ್ಪಿದವರ ವಿಷಯದಲ್ಲಿ ಅವನು ತೋರಿಸುವ ಅನುಕಂಪ, ಕ್ಷಮೆ—ಇವಕ್ಕೆ, ನಾನು ಮಾರುಹೋದದ್ದು. ಇವುಗಳಿಗೆ ಸುಂದರವಾಗಿ ಅಭಿವ್ಯಕ್ತಿ ಕೊಡುವ ಭಾಗಗಳು—ದುರ್ನಡತೆಗೆ ಬಿದ್ದ ಮಗನ ಕಥೆ, ಸಮಾರ್ಯದವನ ಸಜ್ಜನಿಕೆಯ ಕಥೆ, ಮಗ್ದಲದ ಮರಿಯಳ ಪ್ರಸಂಗ, ಬೆಟ್ಟದ ಮೇಲೆ ಯೇಸು ಮಾಡಿದ ಉಪದೇಶ (The parables of the Prodigal Son, the Good Samaritan, the Mary Magdalene episode, the Sermon on the Mount) ಇವು ಮತ್ತೆ ಮತ್ತೆ ನೆನಪಿಗೆ ಬರುತ್ತಿರುತ್ತವೆ, ಹೃದಯಕ್ಕೆ ಆರ್ದ್ರತೆಯನ್ನು ತರುತ್ತವೆ. ನನ್ನ ಸ್ನೇಹಿತರೊಬ್ಬರು "ಇವನು ಬೈಬಲ್ ಓದದಿದ್ದರೆ ಚೆನ್ನಾಗಿತ್ತು" ಎಂದರು. ಅದನ್ನು ಓದಿದ್ದಕ್ಕೆ ನಾನು ಪಶ್ಚಾತ್ತಾಪ ಪಡುವುದಿಲ್ಲ. ಆದರೆ ಭಾರತೀಯ ಧರ್ಮ ಗ್ರಂಥಗಳ ಶಾಸ್ತ್ರಗ್ರಂಥಗಳ ವಿಷಯದಲ್ಲಿ ಆಗ ಉದಾಸೀನನಾಗಿದ್ದೆನಲ್ಲ ಎಂದು ಪಶ್ಚಾತ್ತಾಪ ಪಡುತ್ತೇನೆ.

೨. ನನ್ನಲ್ಲಿ ನಾನು ಗುರುತಿಸಿದ ಎರಡನೆಯ ದೋಷ: ನಮ್ಮ ಪುರಾತನ ಮಹರ್ಷಿಗಳೂ ಶಾಸ್ತ್ರಕಾರರೂ ಎಷ್ಟಾಗಲಿ ಮನುಷ್ಯರು, ಪ್ರಶ್ನಾತೀತರಲ್ಲ, ಎಂದುಕೊಂಡೆ ನಷ್ಟೆ. ಆ ದೃಷ್ಟಿ ಆಧುನಿಕ ವಿದ್ವಾಂಸರ, ಶಾಸ್ತ್ರಕಾರರ ವಿಷಯದಲ್ಲೂ ಇರಬೇಕಾದದ್ದು. ಇದು ನನ್ನ ಮನಸ್ಸಿಗೆ ಬಂದಿರಲಿಲ್ಲವೆಂದು ಹೇಳಲಾರೆ. ಬಂದಿತ್ತು, ಆದರೆ ಸಾಕಾದಷ್ಟು ತೀವ್ರವಾಗಿರಲಿಲ್ಲ. ಇದಕ್ಕೆ ಕಾರಣ: ಆಧುನಿಕ ವಿಜ್ಞಾನದ ಪ್ರಗತಿಯ ಪ್ರಭಾವ. ವಿಜ್ಞಾನದ ವಿಷಯದಲ್ಲಿ ನನಗಿರುವ ತಿಳಿವಳಿಕೆ ಎಷ್ಟು ಅಲ್ಪವೋ, ಅಷ್ಟೊ ಅಷ್ಟು ಹೆಚ್ಚು—ಅದನ್ನೂ ವೈಜ್ಞಾನಿಕ ಮನೋವೃತ್ತಿಯನ್ನೂ ಕುರಿತ ಉತ್ಸಾಹ. ವಿಜ್ಞಾನದ ಪರವಾದ ಪೂರ್ವಗ್ರಹ ನನ್ನನ್ನು ಸ್ವಲ್ಪ ಮಟ್ಟಿಗಾದರೂ ಕಾಡುತ್ತಿತ್ತು.

ನನ್ನ ಬದುಕಿನ ಐದನೆಯ ದಶಕದಿಂದೀಚೆಗೆ ನನ್ನಲ್ಲಿ ಮೇಲೆ ಹೇಳಿದ ದೋಷಗಳ ಅರಿವು ತಕ್ಕಮಟ್ಟಿಗೆ ಜಾಗ್ರತವಾಗಿದೆ. 'ಪುರಾಣಮಿತ್ಯೇವ ನ ಸಾಧು ಸರ್ವಂ' (ಹಿಂದಿನದು ಎಂದ ಮಾತ್ರಕ್ಕೆ ಎಲ್ಲ ಒಳ್ಳೆಯದಲ್ಲ) ಎಂಬುದರ ಜೊತೆಗೆ 'ನವೀನ ಮಿತ್ಯೇವ ನ ಸಾಧು ಸರ್ವಂ' (ಹೊಸದು, ಈಚಿನದು ಎಂದ ಮಾತ್ರಕ್ಕೆ ಎಲ್ಲ ಒಳ್ಳೆಯದಲ್ಲ) ಎಂದೂ ಹೇಳಿಕೊಳ್ಳುತ್ತಿರುತ್ತೇನೆ. To be modern is not necessarily to be wise. ಆಧುನಿಕವಾದದ್ದೆಲ್ಲ ಸುಜ್ಞಾನವಾಗಬೇಕಾದ್ದಿಲ್ಲ.

ವಯಸ್ಸಿನ ಮಹಿಮೆಯಿಂದಾಗಿ ಈಗ ನನ್ನ ಮನಸ್ಸು ಪುರಾತನವಾದದ್ದರ ಕಡೆಗೆ ಹೆಚ್ಚು ಒಲಿದಿದೆಯೆ? ಇಲ್ಲ ಎಂದುಕೊಂಡಿದ್ದೇನೆ. ಆದರೆ ನನ್ನ ಮಕ್ಕಳೇ

ಒಬ್ಬ "ನೀವು ಸಂಪ್ರದಾಯಕ್ಕೆ ಕೊಡುವ ಪ್ರಾಮುಖ್ಯ ಸ್ವಲ್ಪ ಹೆಚ್ಚು" ಎಂದದ್ದು ನೆನಪಿದೆ! ನಮ್ಮಿಬ್ಬರಲ್ಲಿ ಯಾರ ಅಭಿಪ್ರಾಯ ಸರಿ? ತೀರ್ಮಾನಿಸಬೇಕಾದವನು ನಾನೂ ಅಲ್ಲ, ಅವನೂ ಅಲ್ಲ!

ಭಾರತೀಯನಾಗಿಯೇ ಉಳಿದಿದ್ದದ್ದು

ಪುರಾತನ ಧರ್ಮಗ್ರಂಥಗಳ ವಿಷಯದಲ್ಲಿ ಉದಾಸೀನನಾಗಿದ್ದೆನಾದರೂ, ಪಾಶ್ಚಾತ್ಯ ಸಾಹಿತ್ಯದ ವ್ಯಾಮೋಹದಲ್ಲಿ ಮುಳುಗಿದ್ದೆನಾದರೂ, ನಾನು ಭಾರತೀಯನಾಗಿಯೇ ಉಳಿದಿದ್ದೆ. ಮಾತ್ರವಲ್ಲ, ಹೈಸ್ಕೂಲಿನಲ್ಲಿದ್ದಾಗ ನನ್ನಲ್ಲಿ ಭಾರತೀಯತೆ ಎಷ್ಟಿತ್ತೋ ಅದಕ್ಕಿಂತ ಹೆಚ್ಚಾಗಿಯೇ ಇತ್ತು ಕಾಲೇಜಿಗೆ ಬಂದ ಮೇಲೆ. ಹಾಗಾದದ್ದಕ್ಕೆ ಕಾರಣ—ಬ್ರಿಟಿಷರು! ಇದು ವಿರೋಧಾಭಾಸದಂತೆ ಕಾಣುವ ವಿಚಿತ್ರ ಸತ್ಯ. ಬ್ರಿಟಿಷರು ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಂಡರೆಂಬ ಭಾವನೆ ನಮ್ಮೆಲ್ಲರಲ್ಲೂ ಇದ್ದೇ ಇತ್ತು. ಅದನ್ನು ತೀವ್ರಗೊಳಿಸುವಂಥ ಘಟನೆಯೊಂದು ೧೯೧೯ರ ಏಪ್ರಿಲ್ ತಿಂಗಳಲ್ಲಿ ನಡೆಯಿತು—ಅಮೃತಸರದ ಜಲಿಯನ್‌ವಾಲಾಬಾಗ್‌ನಲ್ಲಿ ನಡೆದ ಕಗ್ಗೊಲೆ. ಆ ಕಾಲದಲ್ಲಿ ಬದುಕಿದ್ದು ಬುದ್ಧಿ ತಿಳಿಯುವ ವಯಸ್ಸಾಗಿದ್ದವರೆಲ್ಲರಿಗೂ ಅದರ ವಿವರಗಳು ನೆನಪಿನಲ್ಲಿರುತ್ತವೆ. ಬ್ರಿಟಿಷ್ ಸರ್ಕಾರ 'ರೌಲತ್ ಆ್ಯಕ್ಟ್' (Rowlatt Act) ಎಂಬ ಕಾನೂನನ್ನು ಮಾಡಿತು. ಅದರ ಪ್ರಕಾರ ಯಾರನ್ನಾದರೂ ಸರಿಯೆ, ಕೋರ್ಟಿನಲ್ಲಿ ವಿಚಾರಣೆಗೆ ಗುರಿಪಡಿಸದೆ ಬಂಧನದಲ್ಲಿಡಬಹುದಾಗಿತ್ತು. ಭಾರತೀಯರು ಇದನ್ನು ಪ್ರತಿಭಟಿಸಿದರು. ಪಂಜಾಬ್ ಪ್ರಾಂತದಲ್ಲಿ ಆದ ಗಲಭೆಗಳಲ್ಲಿ ಮೂರು ಜನ ಬ್ರಿಟಿಷರು ಸತ್ತರು: ಬೀದಿಯಲ್ಲಿ ಹೋಗುತ್ತಿದ್ದ ಬ್ರಿಟಿಷ್ ಮಹಿಳೆಯೊಬ್ಬಳಿಗೆ ವಿಪರೀತ ಏಟು ಬಿತ್ತು. (ಹಿಂದೂ ಕುಟುಂಬವೊಂದು ಆಕೆಯನ್ನು ಉಪಚರಿಸಿ ಬ್ರಿಟಿಷರ ವಶಕ್ಕೆ ಒಪ್ಪಿಸಿತು.)

ಪಂಜಾಬಿನ ಗವರ್ನರಾಗಿದ್ದ ಸರ್ ಮೈಕಲ್ ಓಡ್ವೈಯರ್ ಗಲಭೆಗಳನ್ನು ಹತ್ತಿಕ್ಕುವ ಕೆಲಸವನ್ನು ಸೈನ್ಯಕ್ಕೆ—ಒಂದು ತಂಡದ ಮುಖ್ಯಾಧಿಕಾರಿಯಾದ ಜನರಲ್ ಡೈಯರ್ (General Dyer) ಎಂಬವನಿಗೆ—ವಹಿಸಿದ. ಅವನು ಎಲ್ಲೂ ಸಭೆ ಸೇರಕೂಡದೆಂದು ನಿಷೇಧಾಜ್ಞೆ ಹೊರಡಿಸಿದ. ಆದರೂ ಜಲಿಯನ್‌ವಾಲಾ ಬಾಗ್‌ನಲ್ಲಿ ಸಭೆಯೊಂದು ಸೇರಿತು—ಅದರಲ್ಲಿದ್ದ ಎಷ್ಟೋ ಜನಕ್ಕೆ ನಿಷೇಧಾಜ್ಞೆಯ ವಿಷಯ ತಿಳಿದಿರಲಿಲ್ಲ. ಡೈಯರ್ ತನ್ನ ತಂಡದೊಡನೆ ಅಲ್ಲಿಗೆ ಬಂದ. "ಸಭೆ ಚದರದಿದ್ದರೆ ಗುಂಡು ಹಾರಿಸುತ್ತೇನೆ" ಎಂದು ಎಚ್ಚರಿಕೆಯೇನನ್ನೂ ಕೊಡಲಿಲ್ಲ. ಬಂದೊಡನೆ 'ಗುಂಡು ಹಾರಿಸಿ' ಎಂದು ಸೈನಿಕರಿಗೆ ಅಪ್ಪಣೆ ಮಾಡಿದ. ಜನರು ಓಡಿಹೋಗುವುದು ಅಸಾಧ್ಯ. ಆ ಬಾಗಿಗೆ ಇದ್ದ ಒಂದೇ ದ್ವಾರದಲ್ಲಿ ಸೈನಿಕರು ನಿಂತಿದ್ದಾರೆ! ಸೈನಿಕರು ತಮ್ಮಲ್ಲಿದ್ದ ಮದ್ದುಗುಂಡು ಮುಗಿಯುವವರೆಗೂ ಒಂದೇ ಸಮನೆ ಗುಂಡಿಕ್ಕಿ ಜನರನ್ನು ಕೊಂದರು. ಸತ್ತವರು ಸುಮಾರು ೧೦೦೦ ಜನ. ಸಾಯದೆ ಗಾಯಗೊಂಡವರಿಗೆ ವೈದ್ಯಸಹಾಯವನ್ನು ದೊರಕಿಸುವ ಯೋಚನೆಯನ್ನೂ ಮಾಡದೆ ಡೈಯರ್ ತನ್ನ ತಂಡದವರೊಡನೆ ಹೊರಟುಹೋದ. ಆ ಕೊಲೆ ಅವನಿಗೆ ತೃಪ್ತಿ ತರಲಿಲ್ಲ—ಬ್ರಿಟಿಷ್ ಮಹಿಳೆಯನ್ನು ಯಾವ ಬೀದಿಯಲ್ಲಿ ಹೊಡೆದರೋ ಅಲ್ಲಿ ಹೋಗುವ ಭಾರತೀಯರೆಲ್ಲರೂ ಬೀದಿಯ

ಧೂಳಿನಲ್ಲಿ ಅಂಬೆಗಾಲಿಟ್ಟು ತೆವಳಿಕೊಂಡೇ ಹೋಗಬೇಕೆಂದು ಕಟ್ಟಾಜ್ಞೆ ಮಾಡಿದ. ನಿರಪರಾಧಿ ಯುವಕರೆಷ್ಟೋ ಜನರಿಗೆ ಛಡಿ ಏಟು ಹೊಡಿಸಿದ.

ಬ್ರಿಟಿಷರ ಹೃದಯಶೂನ್ಯ ವರ್ತನೆ, ಭಾರತಕ್ಕಾದ ಅಪಮಾನ, ಆ ಭೀಕರ ನರಹತ್ಯೆ, ಇವೆಲ್ಲ ಇಡೀ ಭಾರತವನ್ನೇ ರೊಚ್ಚಿಗೆಬ್ಬಿಸಿತು. ರವೀಂದ್ರನಾಥ ಠಾಕೂರರು ತಮಗೆ ಬ್ರಿಟಿಷರು ಕೊಟ್ಟಿದ್ದ ನೈಟ್ (Knight) ಪದವಿಯನ್ನು ಅವರ ಮುಖಕ್ಕೇ ಎಸೆದರು. ಗಾಂಧೀಜಿ ಬ್ರಿಟಿಷರಿಂದ ಪಡೆದಿದ್ದ ಮೆಡಲುಗಳನ್ನು ಹಾಗೆಯೇ ವಾಪಸು ಮಾಡಿದರು. ಬ್ರಿಟಿಷ್ ಸರ್ಕಾರವನ್ನು 'ಸೈತಾನನ ಸರ್ಕಾರ' ಎಂದು ಕರೆದರು. ಭಾರತದ ರೋಷವನ್ನು ಗಮನಿಸಿ ಸರ್ಕಾರ ಡೈಯರನನ್ನು ವಿಚಾರಣೆಗೆ ಗುರಿಮಾಡಿತು. ಡೈಯರ್ ವಿಚಾರಣೆಗಾಗಿ ಏರ್ಪಟ್ಟ ಕಮಿಷನ್ನಿನ ಮುಂದೆ ಸಾಕ್ಷ್ಯ ಕೊಟ್ಟಾಗ ಏನೇನೂ ಪಶ್ಚಾತ್ತಾಪ ವ್ಯಕ್ತಪಡಿಸಲಿಲ್ಲ. ಕಮಿಷನ್ನು ಅವನು ತಪ್ಪಿತಸ್ಥನೆಂದು ತೀರ್ಮಾನಿಸಿತು. ಸರ್ಕಾರ ಅವನನ್ನು ಕೆಲಸದಿಂದ ತೆಗೆಯಿತೇ ಹೊರತು ಶಿಕ್ಷೆಯೇನನ್ನೂ ಮಾಡಲಿಲ್ಲ. ಅವನಿಗೆ ಪೆನ್‌ಷನ್ ಮುಂತಾದ ಸೌಲಭ್ಯಗಳು ದೊರೆತವು.

ಇಂಥ ಸಂದರ್ಭಗಳಲ್ಲಿ ಕೆಲವರು "ಯಾವನೋ ಒಬ್ಬ ಮಾಡಿದ ಅಪರಾಧಕ್ಕಾಗಿ ಇಡೀ ಜನಾಂಗವನ್ನು ದೂಷುವುದು ಸರಿಯಲ್ಲ" ಎಂದು ವಾದಿಸುವುದು ಸಾಧ್ಯ. ಭಾರತದಲ್ಲಿ ಎಲ್ಲರೂ ಜನರಲ್ ಡೈಯರ್‌ನ ವರ್ತನೆಯನ್ನು ಖಂಡಿಸಿದರಾದರೂ "ಅವನು ಬ್ರಿಟಿಷ್ ಜನಾಂಗವನ್ನು ಪ್ರತಿನಿಧಿಸುತ್ತಾನೆಂದು ಭಾವಿಸಲಾಗದು. ಬ್ರಿಟಿಷರ ಹೃದಯ ನ್ಯಾಯವಾಗಿಯೇ ವರ್ತಿಸುತ್ತದೆ (Their heart is in the right place)" ಎಂಬ ವಾದ ಅಲ್ಲಲ್ಲಿ ಕೇಳಿಬಂತು. ಆದರೆ ಅದು ಅನನ್ವಯವಾಯಿತು. ಬ್ರಿಟಿಷ್ ಸಾರ್ವಜನಿಕರನೇಕರು ಡೈಯರ್ ವಿಷಯದಲ್ಲಿ ಸಹಾನುಭೂತಿ ವ್ಯಕ್ತಪಡಿಸಿದರು; ಮಾತ್ರವಲ್ಲ, ಅವನಿಗಾಗಿ ೨೬೦೦೦ ಪೌಂಡಿನ ನಿಧಿಯನ್ನು ಕೂಡಿಸಿ ಕೊಟ್ಟರು. ಆ ನಿಧಿಗೆ ಹಣ ಕೊಟ್ಟವರಲ್ಲಿ ನನ್ನ ಮೆಚ್ಚಿಕೆಗೆ ಪಾತ್ರನಾಗಿದ್ದ ಸಾಹಿತಿ ರಡ್ಯರ್ಡ್ ಕಿಪ್ಲಿಂಗನೂ (Rudyard Kipling) ಒಬ್ಬ. ಅವನು ನಿಧಿಗೆ ಹತ್ತು ಪೌಂಡು ಕೊಟ್ಟ!

ಇದೆಲ್ಲ ನಡೆದ ಮೇಲೂ ನಮ್ಮ ದೇಶದಲ್ಲಿ ಮಂದಗಾಮಿ ಪಕ್ಷ ಇದ್ದೇ ಇತ್ತು. ನನ್ನ ಗುರುಗಳಾಗಿದ್ದ ಬಿ. ಎಂ. ಶ್ರೀಕಂಠಯ್ಯನವರೇ ಗಾಂಧೀಜಿಯನ್ನು 'ಕಲೋಸಲ್ ಹಂಬಗ್' (colossal humbug) ಎಂದು ಕರೆದರು. (ಅವರು ಆ ಮಾತಾಡಿದ ಸಭೆಯಲ್ಲಿ ನಾನಿರಲಿಲ್ಲ; ಆದರೆ ಆಡಿದ್ದುಂಟು ಎಂದು ತೀರ್ಮಾನಿಸುವುದಕ್ಕೆ ಸಾಕಷ್ಟು ಆಧಾರಗಳಿದ್ದವು.) ಆಗ ನಾವೆಲ್ಲ ಅವರನ್ನು 'ದೇಶದ್ರೋಹಿ' ಎಂದು ಕರೆದೆವು. ಅವರ ಆಂಗ್ಲಸಾಹಿತ್ಯ ಪ್ರೇಮ ಮಿತಿ ಮೀರಿ ಆಂಗ್ಲ ಸರ್ಕಾರಕ್ಕೂ ಸಂದಿತ್ತು. ನನಗೆ ಈಗಲೂ ಅವರ ದೃಷ್ಟಿ ಸರಿ ಎನ್ನಿಸುವುದಿಲ್ಲ. ಆದರೆ ಅವರನ್ನು 'ದೇಶದ್ರೋಹಿ' ಎಂದು ಕರೆದದ್ದು ಸಮಸ್ಯೆಯನ್ನು ತೀರ ಸರಳ ಮಾಡಿದಂತಾಯಿತು—ಇದು ಇಂದಿನ ದೃಷ್ಟಿ.

ಆ ಕಾಲದಲ್ಲಿ ಯುವಕರಾಗಿದ್ದವರೆಲ್ಲರಲ್ಲೂ (ನನ್ನಲ್ಲಿ ಮಾತ್ರವಲ್ಲ) ಬ್ರಿಟಿಷರನ್ನು ಕುರಿತ ರೋಷ ಕಾಳ್ಗಿಚ್ಚಿನಂತೆ ಹಬ್ಬಿತು. ಎಲ್ಲರಲ್ಲೂ ಆದ ಪರಿವರ್ತನೆ ನನ್ನಲ್ಲೂ ಆಯಿತು. ನಾನೂ ಪುಸ್ತಕದಿಂದ ಕಣ್ಣೆತ್ತಿ ಪ್ರಪಂಚವನ್ನು ನೋಡುವಂತಾಯಿತು.

ಈಗ—ಈ ಅಧ್ಯಾಯವನ್ನು ಬರೆಯುತ್ತಿರುವಾಗ—ಒಂದು ವಿಚಿತ್ರ ವಿಷಯ ಗಮನಕ್ಕೆ ಬರುತ್ತಿದೆ: ಇದುವರೆಗೆ ಬರೆದಿರುವ ಅಧ್ಯಾಯಗಳಲ್ಲಿ ನನ್ನ ಹಿನ್ನೋಟ ೧೯೧೪-೧೮ರ ಕಾಲದಲ್ಲಿ ನಡೆದ ಪ್ರಪಂಚ ಯುದ್ಧದ ಮೇಲೆ ಬಿದ್ದೇ ಇಲ್ಲ! ಇಡೀ ಪ್ರಪಂಚದ ಮೇಲೆ ಘೋರವಾದ ಪರಿಣಾಮವುಂಟುಮಾಡಿದ, ಮಿಲಿಯಗಟ್ಟಲೆ ಜನರನ್ನು ಬಲಿತೆಗೆದು ಕೊಂಡ, ಆ ಮಹಾಯುದ್ಧ ನನ್ನ ಮೇಲೆ ಅಷ್ಟೇನೂ ಸ್ಫುಟವಾದ ಮುದ್ರೆಯನ್ನು ಒತ್ತಿರಲಿಲ್ಲ! ಆದರಿಂದಲೇ ಆ ಕಾಲದ ನೆನಪುಗಳಲ್ಲಿ ಅದು ಸೇರದೆ ನುಸುಳಿಕೊಂಡು ಹೋಯಿತು. ಸಂಪೂರ್ಣವಾಗಿಯಲ್ಲದಿದ್ದರೂ ಬಹುಮಟ್ಟಿಗೆ ನಾನು ಬದುಕಿಗೆ ಬೆನ್ನು ತಿರುಗಿಸಿದ ಪುಸ್ತಕ ಪಿಶಾಚಿಯಾಗಿದ್ದಿರಬೇಕು. ಮನೆಯ ಜೀವನ, ಸುತ್ತಮುತ್ತಲಿನ ಸಮಾಜ ಜೀವನ (ಸ್ವಲ್ಪ ಮಟ್ಟಿಗೆ), ಸ್ಕೂಲು, ಆಗ ಹೊಸದಾಗಿ ತೆರೆದಿದ್ದ 'ಪಬ್ಲಿಕ್ ಲೈಬ್ರರಿ'—ಇಷ್ಟಕ್ಕೆ ಸೀಮಿತವಾಗಿತ್ತು, ನನ್ನ ಆಸಕ್ತಿ. ಯುದ್ಧ ನಡೆಯುತ್ತಿತ್ತೆಂದು ತಿಳಿದಿದ್ದೆ. ಮನಸ್ಸಿನ ಒಂದು ಮೂಲೆಯಲ್ಲಿ 'ಜರ್ಮನರು ಗೆಲ್ಲಲಿ, ಬ್ರಿಟಿಷರಿಗೆ ಸೋಲಾಗಲಿ' ಎಂಬ ಆಸೆಯೂ ಇತ್ತು. ಜರ್ಮನರು ಗೆದ್ದರೆ ನಮಗೇನೋ ಕಿರೀಟ ಬರುತ್ತದೆ ಎಂಬ ಭಾವನೆಗಿಂತ ಹೆಚ್ಚಾಗಿ ಬ್ರಿಟಿಷರು ಮಣ್ಣುಮುಕ್ಕಲಿ ಎಂಬ ಮನೋಭಾವ. ಅದಕ್ಕೆ ಪ್ರಪಂಚ ಪರಿಜ್ಞಾನದ ಹಿನ್ನೆಲೆ ಏನೂ ಇರಲಿಲ್ಲ. ವೃತ್ತಪತ್ರಿಕೆಗಳನ್ನು ಓದುವ, ಸಮಕಾಲೀನ ಪ್ರಪಂಚದ ವಿದ್ಯಮಾನಗಳನ್ನು ತಿಳಿದುಕೊಳ್ಳುವ, ಪ್ರವೃತ್ತಿ ಆಗ ಬಹಳ ಕಡಿಮೆ. (ಆ ಪ್ರವೃತ್ತಿ ಇಂದಿನ ವಿದ್ಯಾರ್ಥಿಗಳಲ್ಲೇ ಹೆಚ್ಚು.) ಆದರಿಂದಲೇ ಪ್ರಪಂಚ ಯುದ್ಧದ ವಿಷಯ ಹೇಗೆ ಮನಸ್ಸಿಗೆ ತಟ್ಟಿರಲಿಲ್ಲವೋ ಹಾಗೆಯೇ ಭಾರತದಲ್ಲಿ ನಡೆಯುತ್ತಿದ್ದ ವಿದ್ಯಮಾನಗಳೂ ಅಷ್ಟಾಗಿ ತಟ್ಟಿರಲಿಲ್ಲ. ಗಾಂಧಿ, ತಿಲಕ್, ಗೋಖಲೆ, ಸುರೇಂದ್ರನಾಥ ಬ್ಯಾನರ್ಜಿ, 'ಲಾಲ್ ಪಾಲ್ ಬಾಲ್' (ಲಾಲಾ ಲಜಪತ್ ರಾಯ್, ಬಿಪಿನ ಚಂದ್ರ ಪಾಲ್, ಬಾಲಗಂಗಾಧರ ತಿಲಕ್)—ಇಂಥ ಹೆಸರುಗಳು ಕಿವಿಗೆ ಬಿದ್ದಿದ್ದವು, ಅಷ್ಟೆ. ನನ್ನ ದೇಶಪ್ರೇಮಕ್ಕೂ ಆಂಗ್ಲ ದ್ವೇಷಕ್ಕೂ ನಿಜವಾಗಿ ಕಾವು ಬಂದದ್ದು ಜಲಿಯನ್‌ವಾಲಾ ಬಾಗ್ ಪ್ರಸಂಗ ನಡೆದ ಮೇಲೆ.

ನಾನು ಮತ್ತು ಸ್ವಾತಂತ್ರ್ಯದ ಚಳುವಳಿ

ಎಲ್ಲ ಯುವಕರಂತೆ ನಾನೂ ಸರ್ಕಾರದ ವರ್ತನೆಯನ್ನು ಖಂಡಿಸುವ ಸಭೆಗಳಿಗೆ ಹೋಗಲಾರಂಭಿಸಿದೆ. ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಪಟ್ಟಂತೆ ನಮ್ಮ ಯೂನಿಯನ್ನಿನಲ್ಲೂ ಬಿಸಿ ಬಿಸಿ ಚರ್ಚೆಗಳು ನಡೆದವು. ಚರ್ಚೆ ನಡೆಸುವಾಗ ವಿಷಯ ಸಂಗ್ರಹಕ್ಕೂ ನಿಸ್ಪೃಷ್ಟತೆಗೂ ತರ್ಕಬದ್ಧತೆಗೂ ನಾವೆಲ್ಲ ಹೆಚ್ಚು ಗಮನಕೊಟ್ಟೆವೆಂದು ನೆನಪು. ಕಾಲೇಜಿನಿಂದ ಹೊರಗೆ ಸಾರ್ವಜನಿಕ ವೇದಿಕೆಗಳಿಂದ ಕೇಳಿಬಂದ ಭಾಷಣಗಳಲ್ಲಿ ಅರ್ಥಕ್ಕಿಂತ ಹೆಚ್ಚು ಭಾಗ ಆವೇಶದ ಮಾತು; ಹಾಳತವಿಲ್ಲ; ಜನರನ್ನು ಕೆರಳಿಸುವ ಉದ್ದೇಶದಿಂದ ಮಾಡಿದ ಭಾಷಣಗಳು; ಅವರನ್ನು ಎಚ್ಚರಿಸಿ ವಿಚಾರವನ್ನು ಪ್ರಚೋದಿಸುವ ಮಾತಲ್ಲ—ಇದೆಲ್ಲ ಈಗಿನ ವಿಶ್ಲೇಷಣೆ. ಅಂದಿನ ವಾತಾವರಣದಲ್ಲಿ ಆ ಬಗೆಯ ಭಾಷಣವೇ ಸ್ವಾಭಾವಿಕ. ಒಂದು ಸಾರಿ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ರಮಾವಿಲಾಸ ಅಗ್ರಹಾರಕ್ಕೆ ಹೊಂದಿಕೊಂಡಂತೆ ಇರುವ ಸದ್ವಿದ್ಯಾಶಾಲೆಯ ಕಾಂಪೌಂಡಿನಲ್ಲಿ

ಮುದವೀಡುಕರ್ ಕೃಷ್ಣರಾಯರು ಮಾಡಿದ ಭಾಷಣವನ್ನು ಕೇಳಿದೆ. ಯಾವ ವರ್ಷವೋ, ನೆನಪಿಲ್ಲ. ಅವರು ಏನು ಹೇಳಿದರೆಂಬುದೂ ಮರೆತುಹೋಗಿದೆ. ಅಂದಿನ ಶ್ರೋತೃಗಳೆಲ್ಲರಿಗೂ ಬಂದಂತೆ ನನಗೂ ಭಾವಾವೇಶ ಬಂತು. ಆದರೆ ಅಂದಾಗಲಿ ಅನಂತರವಾಗಲಿ ನಾನು ಸ್ವಾತಂತ್ರ್ಯ ಚಳುವಳಿಯಲ್ಲಿ ಹೇಳಿಕೊಳ್ಳಬಹುದಾದ ಪಾತ್ರ ವೇನನ್ನೂ ವಹಿಸಲಿಲ್ಲ. ಕೃಷ್ಣರಾಯರ ಭಾಷಣವಾದ ದಿನವೇ ಅಲ್ಲಿ ವಿದೇಶೀ ಬಟ್ಟೆ ಗಳನ್ನು ಸುಡುವ ಕಾರ್ಯಕ್ರಮ ನಡೆಯಿತು. ನನ್ನಲ್ಲಿ ಸುಡಬಹುದಾದ ಬಟ್ಟೆಗಳೇನೂ ಇರಲಿಲ್ಲ. ನಾನು ಉಟ್ಟಿದ್ದ ದಟ್ಟಿ ಪಂಚೆ ಕೈಮಗ್ಗದ್ದು; ಪರಟೂ ಭಾರತದಲ್ಲೇ ತಯಾರಾದದ್ದು. ಮದುವೆಯ ಸಂದರ್ಭದಲ್ಲಿ ಮಾವನವರು ಕೊಟ್ಟ ವುಲನ್ ಸೂಟು ಒಂದಿತ್ತು. ಅದನ್ನು ಸುಡಲು ಮನಸ್ಸು ಬರಲಿಲ್ಲ. ಅರ್ಧ ನನ್ನ ನಡತೆಯನ್ನು ಸಮರ್ಥಿಸಿ ಕೊಳ್ಳುವುದಕ್ಕೆ, ಇನ್ನರ್ಧ ಪ್ರಾಮಾಣಿಕವಾಗಿ ಒಂದು ವಾದವನ್ನು ತಯಾರು ಮಾಡಿ ಕೊಂಡೆ: "ನಮ್ಮ ಬಡದೇಶದಲ್ಲಿ ಬಟ್ಟೆಗಳನ್ನು ಸುಡುವುದು ಸರಿಯಲ್ಲ; ಇನ್ನು ಮುಂದೆ ವಿದೇಶೀ ಬಟ್ಟೆಗಳನ್ನು ಕೊಳ್ಳಬಾರದೆಂದು ಹೇಳಬಹುದು." ಆಗ ಈ ವಾದವನ್ನು ಮಂಡಿಸಿದ್ದು ಅನುಕೂಲಸಿಂಧು ಎಂದು ಒಪ್ಪಿದರೂ ಅದರಲ್ಲಿ ಸ್ವಲ್ಪ ಹುರುಳಿತ್ತು ಎನ್ನಿಸುತ್ತದೆ. ನಾನು ಖಾದಿ ಬಟ್ಟೆಯನ್ನು ಧರಿಸಲಿಲ್ಲ. ಆದರೆ ಸೂಟುಗಳನ್ನು ಹೊಲಿಸ ಬೇಕಾದ ಕಾಲ ಬಂದಾಗ (ಅಂದರೆ ನಾನು ಕೆಲಸಕ್ಕೆ ಸೇರಿದ ಮೇಲೆ) ನಮ್ಮ ದೇಶದ ಮಿಲ್ ಬಟ್ಟೆಯನ್ನೇ ಕೊಳ್ಳುತ್ತಿದ್ದೆ. ೧೯೮೦ರವರೆಗೆ ನಾನು ಎಂದೂ ವಿದೇಶಿ ಕಂಪೆನಿಯ (ಬಾಟಾ ಕಂಪೆನಿಯ) ಬೂಟುಗಳನ್ನಾಗಲಿ ಚಪ್ಪಲಿಗಳನ್ನಾಗಲಿ ಬಳಸಿರಲಿಲ್ಲ—ಚಮ್ಮಾರ ರಿಗೆ ಹೇಳಿ ಮಾಡಿಸುತ್ತಿದ್ದೆ. ೧೯೮೦ರಲ್ಲಿ ಮಾತ್ರ ಬಾಟಾ ಬೂಟುಗಳನ್ನು ಕೊಂಡೆ, ಅಮೆರಿಕಕ್ಕೆ ಹೊರಡುವ ಆತುರದಲ್ಲಿದ್ದದ್ದರಿಂದ ಹೇಳಿ ಮಾಡಿಸುವುದು ಸಾಧ್ಯವಾಗಲಿಲ್ಲ.

ಮೈಸೂರು ಹಾಸನ ಕಡೂರು ಶಿವಮೊಗ್ಗ ಚಿತ್ರದುರ್ಗ ತುಮಕೂರು ಕೋಲಾರ ಬೆಂಗಳೂರು ಮಂಡ್ಯ—ಈ ಒಂಬತ್ತು ಜಿಲ್ಲೆಗಳಿಗೆ ಸೀಮಿತವಾಗಿದ್ದ ಹಳೆಯ ಮೈಸೂರು ರಾಜ್ಯ ನೇರವಾಗಿ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿರಲಿಲ್ಲವಷ್ಟೆ. ಆದ್ದರಿಂದ ಸ್ವಾತಂತ್ರ್ಯ ಚಳುವಳಿಗಳ ಬಿಸಿ ನಮಗೆ ಅಷ್ಟಾಗಿ ತಟ್ಟಲಿಲ್ಲ. ಅಲ್ಲೊಂದು ಇಲ್ಲೊಂದು ಲಾಠಿ ಛಾರ್ಜು ಪ್ರಸಂಗಗಳು ನಡೆದದ್ದಿಷ್ಟೋ ಅಷ್ಟೆ. ನಾನು ಅಧ್ಯಾಪಕ ವರ್ಗಕ್ಕೆ ಸೇರಿ ಕೆಲವು ವರ್ಷಗಳಾದ ಮೇಲೆ ಒಂದು ಸಾರಿ ಪೊಲೀಸಿನವರು ಗುಂಡು ಹಾರಿಸಿದ ಸಂದರ್ಭ ಬಂದು ರಾಮಸ್ವಾಮಿ ಎಂಬ ಹೆಸರಿನ ಹುಡುಗನೊಬ್ಬ ಸತ್ತುಹೋದ. ಆ ಸ್ಥಳಕ್ಕೆ ಈಗಲೂ ರಾಮಸ್ವಾಮಿ ಸರ್ಕಲ್ ಎಂಬ ಹೆಸರಿದೆ.

ನಾನಿನ್ನೂ ವಿದ್ಯಾರ್ಥಿದೆಸೆಯಲ್ಲೇ ಇದ್ದಾಗ ತಿಲಕರು ಸತ್ತ ಸಂದರ್ಭದಲ್ಲಿ (?) ನಡೆದ ಮೆರವಣಿಗೆಯಲ್ಲಿ ಭಾಗವಹಿಸಿದ್ದೊಂದನ್ನು ಬಿಟ್ಟರೆ ನಾನು ಯಾವ ಪ್ರದರ್ಶನ ದಲ್ಲೂ ಕ್ರಿಯಾತ್ಮಕವಾದ ಭಾಗವಹಿಸಲಿಲ್ಲ. ಬ್ರಿಟಿಷರ ನೇರವಾದ ಆಳಿಕೆಗೆ ಒಳಪಟ್ಟ ಪ್ರಾಂತಗಳಲ್ಲಿದ್ದ ಚಳುವಳಿಯ ಉರುಬು ಮೈಸೂರಿನಲ್ಲೂ ಇದ್ದಿದ್ದರೆ ನಾನು ಅದರಲ್ಲಿ ಭಾಗವಹಿಸುತ್ತಿದ್ದೆನೆ? ಬಹುಶಃ ವಹಿಸುತ್ತಿರಲಿಲ್ಲ. ಅದಕ್ಕೆ ಎರಡು ಕಾರಣ. ೧. ನಾನೇನಾದರೂ ಕಾಲೇಜು ಬಿಟ್ಟು ಅಥವಾ ರಾಜೀನಾಮೆ ಕೊಟ್ಟು ಚಳುವಳಿಗೆ ಇಳಿದಿದ್ದರೆ ನನ್ನ ದೊಡ್ಡ ಸಂಸಾರಕ್ಕೆ ಉಪವಾಸವೇ ಗತಿ. ೨. ನಾನು ಲಾಠಿ ಏಟಿನ

ದೈಹಿಕ ನೋವನ್ನು ತಡೆಯಲಾರದ ಹೇಡಿ. ಇತರರಿಗೆ ಒಪ್ಪಿಗೆಯಾಗಲಿ ಬಿಡಲಿ, ನನ್ನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವುದಕ್ಕೆ ನಾನು ಯಾವಾಗಲೂ ಹೆದರಿಲ್ಲ. ಕೆಲವು ವೇಳೆ ಇತರರ ಮನಸ್ಸನ್ನು ನೋಯಿಸುವವರೆಗೂ ಹೋಗಿದೆ, ನನ್ನ ಮುಚ್ಚು ಮರೆಯಿಲ್ಲದ frank ಮಾತು. ಅದನ್ನು ನೆನೆದು ನನ್ನನ್ನು ನಾನೇ ತಿರಸ್ಕರಿಸಿ ಕೊಂಡಿದ್ದೇನೆ. ಅನಿವಾರ್ಯವಾಗಿ ನೋವು ಬಂದಾಗ (ನನಗೆ ಪ್ರಾಸ್ಟೇಟ್ ಶಸ್ತ್ರಚಿಕಿತ್ಸೆ ಯಾದಾಗ ಅನುಭವಿಸಿದ ನೋವಿನ ನೆನಪಿದೆ) ಅದನ್ನು ಧೈರ್ಯದಿಂದ ಸಹಿಸಿದ್ದೇನೆ. ಆದರೆ ಲಾಠಿ ಪೆಟ್ಟನ್ನು ಧೈರ್ಯದಿಂದ ನಿರೀಕ್ಷಿಸುವ, ಸಹಿಸುವ, ಶಕ್ತಿ ನನಗಿಲ್ಲ.

ಇದನ್ನು ಒಪ್ಪಿಕೊಂಡ ಮಾತ್ರಕ್ಕೆ ನನ್ನ ನಡತೆಯನ್ನು ಸಮರ್ಥಿಸಿದಂತಾಗಲಿಲ್ಲ. ನಾವು ಆಡಿದ್ದು ಮಾಡಿದ್ದು, ಆಡದಿದ್ದದ್ದು ಮಾಡದಿದ್ದದ್ದು, ಯಾವುದೇ ಆಗಲಿ, ಅದು ಸರಿಯೆ ತಪ್ಪೆ ಎಂದು ನಿರ್ಣಯಿಸುವುದು ಹೇಗೆ? ಜರ್ಮನ್ ತತ್ವಜ್ಞಾನಿ ಕ್ಯಾಂಟ್ ಒಂದು ಸೂಚನೆ ಕೊಟ್ಟಿದ್ದಾನೆ; "ಅದನ್ನು ಸಾರ್ವತ್ರೀಕರಿಸಿ (universa-lise it) ನೋಡಿ." ಅಂದರೆ "ವಿಶ್ವಸರ್ವತ್ರ ಎಲ್ಲರೂ ನಾವು ಮಾಡಿದಂತೆಯೇ ಮಾಡಿದರೆ ಅದರ ಪರಿಣಾಮವೇನಾಗುತ್ತದೆ?" ಎಂದು ವಿಚಾರ ಮಾಡಬೇಕು. ಹಾಗೆ ವಿಚಾರಿಸಿ ನೋಡಿದರೆ ನಾನು ಚಳುವಳಿಗೆ ಸೇರದಿದ್ದದ್ದು ತಪ್ಪಾಗಿಯೇ ಕಾಣುತ್ತದೆ. ನನ್ನ ಹಾಗೆಯೇ ಎಲ್ಲರೂ ಒಂದಲ್ಲ ಮತ್ತೊಂದು (ಸಮರ್ಪಕವೇ ಆದ) ಕಾರಣಕೊಟ್ಟು ಅಲಕ್ಕಾಗಿದ್ದು ಬಿಟ್ಟಿದ್ದರೆ ಭಾರತದಲ್ಲಿ ಸತ್ಯಾಗ್ರಹ ನಡೆಯುತ್ತಲೇ ಇರಲಿಲ್ಲ. ಸ್ವಾತಂತ್ರ್ಯವನ್ನು ಪಡೆಯಲು ಬ್ರಿಟಿಷರ ಮೇಲೆ ಒತ್ತಡ ಹಾಕುವುದು ಅಸಾಧ್ಯವಾಗುತ್ತಿತ್ತು. ನನಗಿದ್ದ ತೊಂದರೆಗಳಿಗೇ ಈಡಾಗಿದ್ದ ಎಷ್ಟೋ ಜನ 'ಆದದ್ದಾಗಲಿ, ದೇವರಿದ್ದಾನೆ' ಎಂದುಕೊಂಡು ಚಳುವಳಿಗೆ ಧುಮುಕಿದ್ದಿರಬೇಕು. ಚಳುವಳಿಗೆ ಸೇರದಿದ್ದ ನನ್ನಂಥವರು ಬಹುಶಃ ಇನ್ನೂ ಹೆಚ್ಚು ಜನ. ನಾನು ತಿರಸ್ಕಾರಕ್ಕೆ ಪಾತ್ರನೋ ಅಥವಾ ಅನುಕಂಪಕ್ಕೋ? ಆ ಪ್ರಶ್ನೆಯನ್ನು ಹೊರದೂಡಿ 'ಇದು ನನ್ನ ಮಟ್ಟ' ಎಂದುಕೊಂಡು ಸಮಾಧಾನದಿಂದಿದ್ದೇನೆ. ಸಮತಲದಿಂದ ಕೆಳಕ್ಕೆ ಇಳಿಯಲಿಲ್ಲ ಎಂಪರೂ ಮೇಲಕ್ಕೇರಲಿಲ್ಲ ಎಂದಂತೂ ಒಪ್ಪಲೇಬೇಕು.

ಕೆಳಕ್ಕಿಳಿಯಲಿಲ್ಲ ಎನ್ನುವುದಕ್ಕೆ ಆಧಾರವೇನು? ಈ ಬಿಳಿಯ ಜನರ ಪ್ರಪಂಚ ಪರ್ಯಟನ, ವಿಜ್ಞಾನದಲ್ಲೂ ಯಂತ್ರ ಸೃಷ್ಟಿಯಲ್ಲೂ ಅವರ ಸಾಧನೆ, ಸಾಹಿತ್ಯದಲ್ಲಿ ಕೂಡ ಅವರ ಹೆಚ್ಚಳ, ಇದೆಲ್ಲವನ್ನೂ ಕುರಿತಂತೆ ನನ್ನ ಮೆಚ್ಚಿಕೆ ಶಿಖರಕ್ಕೆ ಏರಿತ್ತು, ನಿಜ. ಆದರೆ ಅವರು ತಮ್ಮ ಏಳಿಗೆಗಾಗಿ ಪ್ರಪಂಚದ ಎಲ್ಲ ಜನಾಂಗದವರನ್ನೂ ಧರ್ಮ ಕರ್ಮದ ಯೋಚನೆಯೇ ಇಲ್ಲದೆ ದುಡಿತಕ್ಕೆ ಹಾಕಿಕೊಂಡರೆಂಬ ಭಾವನೆಯೂ—೨೦ ನೇ ಶತಮಾನದ ಆದಿಭಾಗದಲ್ಲಿ—ಶಿಖರಕ್ಕೆ ಏರಿತು. ಮೆಕ್ಸಿಕೋವಿನಲ್ಲಿ ಕಾರ್ಟೆಸ್, ಪೆರೂವಿನಲ್ಲಿ ಪಿಸಾರೊ (ಇಬ್ಬರೂ ಸ್ಪೆಯಿನ್ನಿನವರು), ಆ ದೇಶಗಳ ರಾಜರನ್ನು ನಂಬಿಸಿ ದ್ರೋಹಮಾಡಿ ಕೊಂದು ರಾಜ್ಯವನ್ನು ವಶಪಡಿಸಿಕೊಂಡದ್ದು; ಆ ದೇಶಗಳ ಸಂಪತ್ತೆಲ್ಲವನ್ನು ದೋಚಿದ್ದು; ಅಮೆರಿಂಡಿಯನ್ನರನ್ನು ಹೆಚ್ಚು ಕಡಮೆ ನಾಮಾವಶೇಷರನ್ನಾಗಿಸಿದ್ದು; ಆಫ್ರಿಕದ ನೀಗ್ರೊ ಜನರನ್ನು ಸೆರೆಹಿಡಿದು ಗುಲಾಮರನ್ನಾಗಿ ಮಾಡಿಕೊಂಡದ್ದು; ಅವರನ್ನು ಪಶುಗಳಿಗಿಂತ ಕೀಳಾಗಿ ಕಂಡು ಚಿತ್ರಹಿಂಸೆ ಕೊಟ್ಟು, ತಪ್ಪಿಸಿಕೊಂಡು ಓಡುವ ಪ್ರಯತ್ನ ಮಾಡಿದಾಗ ಅವರನ್ನು ನಾಯಿಗಳಿಂದ ಬೇಟೆಯಾಡಿಸಿದ್ದು; ಅಮೆರಿಕದ

ಕಮಡೋರ್ ಪೆರಿ (Commodore Perry) ಟೋಕಿಯೊ ಬಂದರಿನ ಎದುರಿನಲ್ಲಿ ತನ್ನ ಹಡಗನ್ನು ನಿಲ್ಲಿಸಿ "ಒಳ್ಳೆಯ ಮಾತಿನಿಂದ ಬಂದರನ್ನು ನಮಗೆ ತೆರೆದುಕೊಡಿ ; ಇಲ್ಲದಿದ್ದರೆ ಗುಂಡಿನ ಮಳೆ ಕರೆಯುತ್ತೇನೆ" ಎಂದು ನಿಷ್ಕಾರಣವಾಗಿ ಬಲಪ್ರದರ್ಶನ ಮಾಡಿದ್ದು (ಅದರಿಂದ ಜಪಾನೀಯರಿಗೆ ಒಳ್ಳೆಯದೇ ಆಯಿತೆಂಬುದು ಬೇರೆ ಮಾತು), ಇವೆಲ್ಲ ಮನಸ್ಸಿನ ಆಳದಿಂದ ಮೇಲುಪದರಕ್ಕೆ ಬಂದವು. ನನ್ನ ಯೂನಿಯನ್ನಿನ ಚರ್ಚೆಯೊಂದರಲ್ಲಿ ಇದನ್ನೆಲ್ಲ ಪಟ್ಟಿಮಾಡಿ ಉದಾಹರಿಸಿ ಉದ್ರೇಕದಿಂದ ಮಾತಾಡಿದ ನೆನಪಿದೆ. ಅಂದಮೇಲೆ ನಾನು ಬಿಳಿಯ ಜನರನ್ನು (ಮುಖ್ಯವಾಗಿ ಬ್ರಿಟಿಷರನ್ನು) ಇಂದ್ರ ಚಂದ್ರ ದೇವೇಂದ್ರ ಎನ್ನುವ ಹೊಗಳುಭಟ್ಟನ ಮಟ್ಟಕ್ಕೆ ಇಳಿಯಲಿಲ್ಲ. ಇದು ಅಲ್ಪತೃಪ್ತಿ ; ಆದರೆ ನಾನು ಅದನ್ನು ಬಿಟ್ಟುಕೊಡುವಷ್ಟು ಶ್ರೀಮಂತನಲ್ಲ!

ಪ್ರಪಂಚದ ಯಾವ ಜನಾಂಗ ಇತರ ಜನಾಂಗಗಳಿಗೆ ತೀರ ಹೆಚ್ಚಿನ ಹಿಂಸೆ ಕೊಟ್ಟಿದೆ, ಹೆಚ್ಚು ಶೋಷಿಸಿದೆ ಎಂಬುದನ್ನು ತೂಗಿ ನೋಡಿದರೆ, ಕ್ರೌರ್ಯಕ್ಕೆ ಹೆಸರಾದ ಹೂಣರನ್ನೂ ಆ್ಯಟಿಲ ತೈಮೂರರನ್ನೂ ಬಿಟ್ಟು ಬಿಳಿಯ ಜನಾಂಗವನ್ನೇ—ಅದರಲ್ಲೂ ಪಶ್ಚಿಮ ಯೂರೋಪಿನವರನ್ನೇ—ಹೆಸರಿಸಬೇಕಾಗುತ್ತದೆ. ಇದು, ಆಗ ನನಗೆ ಬಂದ ಭಾವನೆ. ಅದು ಈಗಲೂ ಉಳಿದಿದೆ—ಅವರ ಬುದ್ಧಿಶಕ್ತಿಯನ್ನೂ ಸೃಷ್ಟಿಶಕ್ತಿಯನ್ನೂ ಕುರಿತ ಮೆಚ್ಚಿಕೆಯೊಡನೆ. ಮೇಲೆ ಪಟ್ಟಿ ಮಾಡಿದ ದಾಸ್ಯ, ದೌರ್ಜನ್ಯಗಳೆಲ್ಲ ಮುಗಿದ ಅಧ್ಯಾಯವಲ್ಲ. ತನ್ನ ಸಾಮ್ರಾಜ್ಯ ವೈಭವವೆಲ್ಲ ಕಳಚಿ ಬಿದ್ದ ಮೇಲೂ ಬ್ರಿಟನ್ ಈಜಿಪ್ಟಿನ ಮೇಲೆ ಧಾಳಿ ನಡೆಸಿತ್ತು, ಎಲ್ಲರಿಂದಲೂ ಛೀಮಾರಿ ಹಾಕಿಸಿಕೊಂಡು ಹಿಮ್ಮೆಟ್ಟಿತು. ಈಗ ಬ್ರಿಟನ್ ಹಲ್ಲು ಬಿದ್ದ ಮುದಿಸಿಂಹ ; ಆದರೂ ಅಮೆರಿಕ ಗರ್ಜಿಸಿದಾಗ ಹಿಮ್ಮೇಳವಾಗಿ ನಿಂತು ತಾನೂ ಗುರುಗುಟ್ಟುತ್ತದೆ. ಅಮೆರಿಕವು ಹಿರೋಷಿಮ ನಾಗಸಾಕಿ ಪಟ್ಟಣಗಳ ಮೇಲೆ ಪರಮಾಣುಬಾಂಬು ಹಾಕಿದ್ದು ಮೊನ್ನೆ ಮೊನ್ನೆ—ಆ ವರ್ಷ ಹುಟ್ಟಿದವರಿಗೆ ಈಗ ಇನ್ನೂ ನಡುವಯಸ್ಸು. ಅಮೆರಿಕ ತನ್ನ ಕೃತ್ಯಕ್ಕೆ ಪಶ್ಚಾತ್ತಾಪ ಪಟ್ಟಿಲ್ಲ—ಪಡಬೇಕಾಗಿಲ್ಲ ಎನ್ನುವವರಿದ್ದಾರೆ, ಆ ದೇಶದಲ್ಲಿ. ಈಗ ಅಮೆರಿಕ ಪ್ರಪಂಚದಲ್ಲಿ ಅತ್ಯಂತ ಶಕ್ತರಾಷ್ಟ್ರ. ತನ್ನ ಬದುಕಿನ ರೀತಿಯನ್ನು (the American way of life ಅನ್ನು) ಉಳಿಸಿಕೊಳ್ಳಲು ಅದು ಎಂಥ ಮಸಲತ್ತು ಬೇಕಾದರೂ ಮಾಡುತ್ತದೆ : ಯಾವ ದೇಶಕ್ಕಾದರೂ ಸರಿಯೆ, ತನ್ನ ಸಿ.ಐ.ಎ. ಜನರನ್ನು ಕಳಿಸಿ ಅಲ್ಲಿಯ ವಾತಾವರಣವನ್ನು ಕದಡುತ್ತದೆ, ದಂಗೆ ಎಬ್ಬಿಸುತ್ತದೆ, ಸರ್ಕಾರವನ್ನು ಉರುಳಿಸುತ್ತದೆ—ಎಲ್ಲ ಸ್ವಾತಂತ್ರ್ಯದ, 'ಡೆಮಾಕ್ರೆಸಿ'ಯ ಹೆಸರಿನಲ್ಲಿ. ಅದು ಸ್ವತಂತ್ರ ಪ್ರಪಂಚದ (the Free World) ನಾಯಕ ; ಆದರೆ ಅದು ನೆರವು ಕೊಡುವುದೆಲ್ಲ ಸರ್ವಾಧಿಕಾರಿಗಳಿಗೆ. ಕರಿಯ ಪ್ರಜೆಗಳನ್ನು ತುಳಿದಿಟ್ಟಿರುವ ದಕ್ಷಿಣ ಆಫ್ರಿಕ ದೇಶವನ್ನು ಹದಕ್ಕೆ ತರುವ ಯೋಜನೆ ಏನು ಬಂದರೂ ಅದನ್ನು ವಿರೋಧಿಸುವವರು ಅಮೆರಿಕ ಮತ್ತು ಬ್ರಿಟನ್.

ಇದೆಲ್ಲ ಸರಿ, ಆದರೆ ಅವರು ಮಾಡಿದ, ಮಾಡುತ್ತಿರುವ, ಪಾಪಕ್ಕೂ 'ಅವರು ಬಿಳಿಯ ಜನಾಂಗ' ಎಂಬುದಕ್ಕೂ ಅನಿವಾರ್ಯವಾದ ಸಂಬಂಧ, ಕಾರ್ಯಕಾರಣ ಸಂಬಂಧ, ಏನಾದರೂ ಇದೆಯೆ? ಈ ಪ್ರಶ್ನೆಗೆ ಬೇರೆ ರೂಪವನ್ನು ಕೊಡೋಣ.

ಧೈರ್ಯ, ಸಾಹಸ, ಸಂಶೋಧನಾ ಪ್ರವೃತ್ತಿ, ಕಲ್ಪನಾಶಕ್ತಿ, ಸೃಷ್ಟಿಶಕ್ತಿ (ಮತ್ತು ಇವೆಲ್ಲದರಿಂದ ಫಲಿತವಾಗುವ ಸಮರಶಕ್ತಿ!), ಇವನ್ನು ಅವರಂತೆಯೇ ಬೆಳಸಿಕೊಂಡಿದ್ದರೆ ನಾವು (ಬಿಳಿಯ ಜನಾಂಗಕ್ಕೆ ಸೇರದಿರುವವರು) ಅವರಂತೆ ಶೋಷಕರಾಗುತ್ತಿದ್ದೆವೋ ಅಥವಾ ಲೋಕಕಲ್ಯಾಣಕ್ಕಾಗಿ ಸೊಂಟ ಕಟ್ಟಿ ನಿಲ್ಲುತ್ತಿದ್ದೆವೊ? ವೈದ್ಯ ಕ್ಷೇತ್ರದಲ್ಲಿ ಪಾಶ್ಚಾತ್ಯರು ಮಾಡಿದ ಶೋಧನೆಗಳಿಂದಾಗಿ, ಅವರು ಕಂಡುಹಿಡಿದ ರೋಗ ನಿವಾರಣಾ ಕ್ರಮಗಳಿಂದಾಗಿ, ಕಾಲರ, ಪ್ಲೇಗು, ಸಿಡುಬು ಮುಂತಾದ ರೋಗಗಳೆಷ್ಟೋ ಹವಕ್ಕೆ ಬಂದಿವೆ, ಕೆಲವು ಅದೃಶ್ಯವಾಗಿವೆ. ನಾವು ಶಕ್ತಿಯನ್ನು ಬೆಳಸಿಕೊಂಡರೆ ಅದನ್ನು ಇಂಥ ಕಾರ್ಯಗಳಿಗಾಗಿ ಬಳಸುತ್ತೇವೊ ಅಥವಾ ಹೊಸ ಹೊಸ ಭಯಂಕರ ಅಸ್ತ್ರಗಳನ್ನು ತಯಾರಿಸಿ ಅವನ್ನು ಸಹ ಮಾನವರ ಮೇಲೆ ಪ್ರಯೋಗಿಸುತ್ತೇವೊ? ಈ ಪ್ರಶ್ನೆಗೆ ಭವಿಷ್ಯ ಉತ್ತರ ಕೊಡಬೇಕು. ನಾನು ಸಿನಿಕನೋ ಏನೊ! "ಬಿಳಿಯ ಜನಕ್ಕಿಂತ ನಾವು ಹೆಚ್ಚು ಹೃದಯಸಂಪನ್ನರು, ಧರ್ಮಿಷ್ಠರು, 'ಸ್ಪಿರಿಚ್ಯುಯಲ್' (spiritual) ಎಂದು ಹೇಳುವ ಸಾಹಸ ಮಾಡಲಾರೆ. ಅಲ್ಪಸಂಖ್ಯೆಯ ಕೆಲವರು ಮಹಾತ್ಮರನ್ನು ವಿನಾಯಿಸಿದರೆ ಉಳಿದಂತೆ ಮಾನವರು—ಬಿಳಿಯ ಜನರಾಗಲಿ ವರ್ಣೀಯರಾಗಲಿ—ಅರ್ಧ ಮಾನವರು, ಅರ್ಧ ಪಶುಗಳು. ಮತ್ಸರ, ಕೋಪ, ಸ್ವಾರ್ಥ, ಅಹಮಿಕೆ ಮುಂತಾದುವು ಹೆಚ್ಚಿದಾಗ ಪಶುಭಾಗ ಮಾನವಭಾಗವನ್ನು ಹಿಂದೂಡುತ್ತದೆ: ಶಕ್ತಿಯ ಮದ ಏರಿದರಂತೂ ಸರಿಯೇ ಸರಿ. "ಅಧಿಕಾರ (ಶಕ್ತಿ) ನಮ್ಮನ್ನು ಕೆಡಿಸುತ್ತದೆ; ಪೂರ್ಣಾಧಿಕಾರ ಪೂರ್ಣವಾಗಿ ಕೆಡಿಸುತ್ತದೆ." (Power corrupts; absolute power corrupts absolutely.) ಈ ಮಾತು ಎಲ್ಲ ಜನಾಂಗಗಳ ವಿಷಯದಲ್ಲೂ ಸತ್ಯ.

ಈ ವೇದಾಂತವೆಲ್ಲ ನಾನು ೮೭ನೆಯ ವಯಸ್ಸಿನಲ್ಲಿ ಹೇಳುತ್ತಿರುವ ಮಾತು ಅದೂ 'ಮಾತು' ಮಾತ್ರ! ಬಿಳಿಯ ಜನಾಂಗದವರನ್ನು ಕುರಿತ ಅಸಹನೆ ನನ್ನಲ್ಲಿಲ್ಲ ವೆಂದು ಈಗಲೂ ಹೇಳಲಾರೆ. ಇದಕ್ಕೆ ಸಂಬಂಧಪಟ್ಟಂತೆ ಒಂದೆರಡು ಸಂದರ್ಭಗಳು ನೆನಪಿಗೆ ಬರುತ್ತಿವೆ. ಒಂದು ೧೯೨೧-೨೨ರ ಸುಮಾರಿನಲ್ಲಿ ನಡೆದದ್ದು. ಅದನ್ನು ನನಗೆ ಹೇಳಿದವರು ಆಗ ಮದರಾಸಿನ ಲಾ ಕಾಲೇಜಿನಲ್ಲಿ ಓದುತ್ತಿದ್ದ ನನ್ನ ಸ್ನೇಹಿತ ಎಂ. ವಿ. ಶ್ರೀನಿವಾಸರಾಯರು. ಮದರಾಸ್ ಸರ್ಕಾರದ ದೊಡ್ಡ ಹುದ್ದೆಯಲ್ಲಿದ್ದ ಆಂಗ್ಲನೊಬ್ಬ ತನ್ನ ಡಾಗ್‌ಕಾರ್ಟನ್ನು (dog-cart) ನಡಸಿಕೊಂಡು ಹೋಗುತ್ತಿದ್ದ. ಪಾದಚಾರಿಯಾಗಿದ್ದ ಯುವಕನೊಬ್ಬ ಗಾಡಿಗೆ ತೀರ ಹತ್ತಿರವಿದ್ದ, ಗಾಡಿ ಬಂದಾಗ ದೂರ ಹೋಗಲಿಲ್ಲ, ಎಂದು ಆಂಗ್ಲನಿಗೆ ತೋರಿತೇನೊ (ತಪ್ಪು ಯಾರದ್ದೋ ಕಾಣೆ), ತನ್ನ ಕೈಯಲ್ಲಿದ್ದ ಚಾವಟಿಯಿಂದ ಯುವಕನಿಗೆ ಒಂದೇಟು ಕೊಟ್ಟ. ಯುವಕ—ಅವನ ಹೆಸರು ನೆನಪಿಲ್ಲ; ಮಂಜೇರಿ (ಅವನ ಊರು) ಅಯ್ಯರ್ ಎಂದು ಕರೆಯೋಣ—ಕಟ್ಟುಮಸ್ತಾದ ಆಳು. ಲಗಾಮನ್ನು ಹಿಡಿದು ಕುದುರೆಯನ್ನು ನಿಲ್ಲಿಸಿದ. ಆಂಗ್ಲನನ್ನು ಕೆಳಕ್ಕೆಳೆದುಕೊಂಡು ತನ್ನ ಕೈ ನೋಯುವವರೆಗೂ ಅವನನ್ನು ಅವನ ಚಾವಟಿಯಿಂದಲೇ ಹೊಡೆದ. ಆಮೇಲೆ ತನ್ನ ವಿಳಾಸ ಕೊಟ್ಟು "ದೂರು ಕೊಟ್ಟುಕೋ, ಹೋಗು" ಎಂದು ತಿರಸ್ಕಾರದ ದನಿಯಲ್ಲಿ ಹೇಳಿ ಹೊರಟುಹೋದ.

ಮುಂದುವರಿಯುವುದು

ಪುಸ್ತಕ ವಿಭಾಗ

ಲಿಯೋ ಟಾಲ್‌ಸ್ಟಾಯ್ ಅವರ ಮಹಾ ಕಾದಂಬರಿ

ಅನ್ನಾ ಕರೆನಿನ

ಪ್ರಥಮ ಕಾಂಡ

ಅನುವಾದ
ದೇಜಗೌ

'ಬರೀ ಮಾತು. ಯಾರಿಗದು ಅರ್ಥವಾದೀತು ?' ಎಂದು ಅಗಫಿಯಾ ಮಿಖಾಯ್ ಲೋವ್ನ ಗೊಣಗುಟ್ಟಿದಳು. 'ನಾಯಿಗೂ ಅರ್ಥವಾಗುತ್ತದೆ. ತನ್ನ ದಣಿ ನಿರುತ್ಸಾಹ ದಿಂದ ಮನೆಗೆ ಮರಳಿದ್ದಾನೆಂದು ಅದಕ್ಕೂ ತಿಳಿಯುತ್ತದೆ.'

'ನಿರುತ್ಸಾಹವೇಕೆ ?'

'ನನಗೆ ಕಣ್ಣಿಲ್ಲವೆಂದು ತಿಳಿದಿರಾ, ಸ್ವಾಮಿ? ನನಗೆ ಈ ಶ್ರೀಮಂತರ ನಡತೆ ತಿಳಿಯದ್ದಲ್ಲ. ತಿಪ್ಪತಿಪ್ಪ ಹೆಜ್ಜೆ ಇಡುತ್ತಿದ್ದಾಗಿನಿಂದ ನಾನವರ ಜತೆಯಲ್ಲಿ ಬೆಳೆದಿದ್ದೇನೆ. ಉದ್ವೇಗಗೊಳ್ಳಬೇಡಿ, ಸ್ವಾಮಿ. ಆರೋಗ್ಯವಿರುವ ತನಕ, ಸ್ಪಷ್ಟವಾದ ಅರಿವಿರುವ ತನಕ ಯೋಚಿಸಬೇಕಾಗಿಲ್ಲ.'

ಲೆವಿನ್ ಅತ್ಯಾಸಕ್ತಿಯಿಂದ ಅವಳನ್ನು ನೋಡಿದನು; ತನ್ನ ಮನಸ್ಸನ್ನವಳು ಅಷ್ಟೊಂದು ಚೆನ್ನಾಗಿ ಅರಿತುಕೊಂಡದ್ದಕ್ಕಾಗಿ ಅವನು ವಿಸ್ಮಯಗೊಂಡನು.

'ಮತ್ತೊಂದು ಲೋಟ ಟೀ ತರಲೆ?' ಎಂದವಳು ಕೇಳಿ, ಅವನ ಲೋಟವನ್ನು ತೆಗೆದುಕೊಂಡು ಹೊರಗೆ ಹೋದಳು.

ಲಾಸ್ಕ ಅವನ ಕೈಯನ್ನಿನ್ನೂ ಮೂಸುತ್ತಿತ್ತು; ಮೂತಿಯಿಂದ ಅರಸುತ್ತಿತ್ತು. ಅವನದರ ತಲೆಯನ್ನು ನೇವರಿಸಿದನು. ಅದು ಕೂಡಲೇ ಅವನ ಕಾಲುಗಳ ಮೇಲೆ ಮುದುರಿಕೊಂಡು, ತನ್ನ ಹಿಂದಿನ ಪಂಜದ ಮೇಲೆ ತಲೆಯನ್ನಿರಿಸಿಕೊಂಡಿತು. ಈಗೆಲ್ಲವೂ ತೃಪ್ತಿಕರವಾಗಿದೆಯೆಂಬುದರ ಗುರುತಿಗಾಗಿ, ಅದು ಬಾಯನ್ನು ತುಸು ಕಿಸಿದು, ತನ್ನ ತೇವದ ತುಟಿಗಳನ್ನು ಚಪ್ಪರಿಸಿ, ತನ್ನ ಮುದಿಹಲ್ಲುಗಳ ಸುತ್ತ ಅವನ್ನು ನೆಲೆಗೊಳಿಸಿ, ಪರಮಾನಂದದ ಶಾಂತಿಯಲ್ಲಿ ತಲ್ಲೀನಗೊಂಡಿತು. ಲೆವಿನ್ ಅದರ ಚಲನವಲನಗಳನ್ನು ಅತ್ಯಂತಾಸಕ್ತಿಯಿಂದ ವೀಕ್ಷಿಸಿದನು.

'ನಾನು ಮಾಡುವುದೇ ಅದು' ಎಂದವನು ತನ್ನಷ್ಟಕ್ಕೆ ತಾನು ಗೊಣಗಿಕೊಂಡನು. 'ನಾನು ಮಾಡುವುದೇ ಅದು! ಉದ್ವೇಗ ಸಲ್ಲದು. ಎಲ್ಲ ಒಳ್ಳೆಯದೆ.'

೨೮

ನೃತ್ಯಗೋಷ್ಠಿ ಮುಗಿದ ಮಾರನೆಯ ದಿನ ಬೆಳಗ್ಗೆ ಮುಂಚಿತವಾಗಿ ಅನ್ನಾ ತನ್ನ ಗಂಡನಿಗೊಂದು ತಂತಿ ಕಳಿಸಿ, ಅಂದೇ ತಾನು ಮಾಸ್ಕೋ ಬಿಡುವುದಾಗಿ ತಿಳಿಸಿದಳು.

'ಹೌದು. ನಾನು ಹೋಗಲೇಬೇಕು, ಹೋಗಲೇಬೇಕು' ಎಂದವಳು ತನ್ನ ಅತ್ತಿಗೆ ಯೊಂದಿಗೆ ಪ್ರಸ್ತಾಪಿಸಿದಳು. ಹತ್ತು ಹಲವು ಕರ್ತವ್ಯ ಭಾರಗಳು ಅದೇತಾನೆ ತನ್ನ ನೆನಪಿಗೆ ಬಂದುವೆಂಬ ಧಾಟಿಯಲ್ಲಿ ತನ್ನ ದಿಢೀರನೆಯ ಮನಃಪರಿವರ್ತನೆಗೆ ಕಾರಣ ಗಳನ್ನು ವಿವರಿಸಿದಳು. 'ಇಂದೇ ಹೋಗುವುದು ಮೇಲು.'

ಅಬ್ಲಾನ್‌ಸ್ಕಿ ಊಟಕ್ಕಾಗಿ ಮನೆಗೆ ಬರಲಿಲ್ಲ. ಏಳು ಗಂಟೆಯ ಹೊತ್ತಿಗೆ ತನ್ನ ತಂಗಿಯನ್ನು ಕಳಿಸಿಕೊಡಲೋಸುಗ ಬರುವುದಾಗಿ ವಾಗ್ದಾನ ಮಾಡಿದನು.

ಕಿಟ್ಟಿ ಸಹ ಬರಲಿಲ್ಲ; ತನಗೆ ತಲೆ ನೋವೆಂದು ಚೀಟಿ ಬರೆದು ಕಳಿಸಿದಳು. ಡಾಲಿ ಮತ್ತು ಅನ್ನಾರು ಮಕ್ಕಳು ಮತ್ತು ಇಂಗ್ಲಿಷ್ ಉಪಾಧ್ಯಾಯಿನಿಯೊಡನೆ ಊಟ ಮುಗಿಸಿದರು. ಅನ್ನಾ ಹಿಂದಿನ ದಿನ ತಾವು ಅಕ್ಕರೆಯಿಂದ ಪ್ರೀತಿಸಿದ್ದ ಅತ್ತೆಯಂತಿರಲಿಲ್ಲ

ವೆಂದೂ, ಅವಳಿಗೆ ತಮ್ಮಲ್ಲಿ ಆಸಕ್ತಿಯಿರಲಿಲ್ಲವೆಂದೂ ಚಂಚಲತೆಯೋ ಅಂತಃಸ್ಫೂರ್ತಿಯೋ ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟಿತ್ತು. ಕಾರಣವೇನೇ ಇರಲಿ, ಮಕ್ಕಳು ಅವಳೊಡನೆಯ ಆಟಪಾಟಗಳನ್ನು ಸಿಲ್ಲಿಸಿದರು, ಅವಳ ಮೇಲಣ ಅವರ ಅಕ್ಕರೆಯೂ ಇಲ್ಲವಾಯಿತು; ಅವಳು ತಮ್ಮಿಂದ ಅಗಲಿಹೋಗುತ್ತಿದ್ದಾಳೆಂಬ ಚಿಂತೆ ಅವರಿಗೆಳ್ಳಷ್ಟೂ ಇರಲಿಲ್ಲ. ತನ್ನ ನಿರ್ಗಮನಕ್ಕೆ ಸಿದ್ಧತೆ ನಡಸುವಲ್ಲಿ ಅನ್ನಾ ಇಡೀ ಪ್ರಾತಃಕಾಲವನ್ನು ಕಳೆದಳು. ಮಾಸ್ಕೊ ನಗರದ ಪರಿಚಯಸ್ಥರಿಗೆ ಚೀಟಿ ಬರೆದಿಟ್ಟಳು, ತನ್ನ ಖರ್ಚು ವೆಚ್ಚಗಳನ್ನು ಪಟ್ಟಿ ಮಾಡಿದಳು, ಗಂಟುಮೂಟೆಗಳನ್ನು ಕಟ್ಟಿದಳು. ಅವಳ ಮನಸ್ಸು ಸಮಾಧಾನಸ್ಥಿತಿಯಲ್ಲಿರಲಿಲ್ಲವೆಂದು, ತನಗೆ ಪರಿಚಿತವಾಗಿದ್ದ ಕಾತರತೆಯ ಸಂಕ್ಷೋಭಸ್ಥಿತಿಯಲ್ಲವಳು ಕುದಿಯುತ್ತಿದ್ದಳೆಂದು, ಅಂಥ ಸ್ಥಿತಿ ಕಾರಣವಿಲ್ಲದೆ ಉದ್ಭವಿಸಲಾರದೆಂದು, ಅದು ಸಾಮಾನ್ಯವಾಗಿ ಅಸಂತೃಪ್ತಿಯನ್ನು ಹೇಗೋ ತನ್ನಲ್ಲಿಯೇ ಮರೆಮಾಡಿಕೊಳ್ಳುತ್ತದೆಂದು ಡಾಲಿ ಯೋಚಿಸಿದಳು. ಊಟದ ತರುವಾಯ ಅನ್ನಾ ಉಡುಗೆ ತೊಡುಗೆಗಾಗಿ ತನ್ನ ಕೋಣೆಗೆ ಹೋದಳು; ಡಾಲಿ ಅವಳನ್ನು ಹಿಂಬಾಲಿಸಿದಳು.

'ಈ ದಿನ ನೀವೇಕೊ ವಿಚಿತ್ರವಾಗಿ ತೋರುತ್ತೀರಿ?' ಎಂದು ಡಾಲಿ ಅವಳನ್ನು ಕೇಳಿದಳು.

'ನಾನೆ? ನಿಮಗೆ ಹಾಗನಿಸುತ್ತದೆಯೆ? ನಾನು ವಿಚಿತ್ರವಾಗಿದ್ದೇನೆಂದು ಹೇಳಲಾರೆ. ಗಾಬರಿಯಾಗಿದೆ, ನಿಜ. ಒಮ್ಮೊಮ್ಮೆ ನನಗೆ ಹೀಗಾಗುತ್ತದೆ. ನನಗೆ ಅತ್ತುಬಿಡಬೇಕೆನಿಸುತ್ತದೆ. ಅದೊಂದು ಅಲ್ಪ ವಿಷಯ. ಅದು ಕ್ರಮೇಣ ಸರಿಹೋಗುತ್ತದೆ' ಎಂದು ಅನ್ನಾ ಅವಸರವಸರವಾಗಿ ನುಡಿದಳು. ತನ್ನ ಇರುಳು ಟೋಪಿ ಮತ್ತು ಕ್ಯಾಂಬ್ರಿಕ್ ಕೈಚೌಕಗಳಿದ್ದ ಚಿಕ್ಕದೊಂದು ಚೀಲದ ಮೇಲೆ ಅವಳ ಕೆಂಪೇರಿದ ಮುಖ ಮಣಿಯಿತು. ಅವಳ ಕಣ್ಣು ಪ್ರಕಾಶಮಾನವಾಗಿದ್ದುವು; ಅಜಸ್ರವಾಗಿ ನೀರಿನಲ್ಲಿ ಮಿಾಯುತ್ತಿದ್ದುವು. 'ಈ ಹಿಂದೆ ಪೀಟರ್ಸ್ ಬರ್ಗ್ ಬಿಡಲು ನನಗಿಷ್ಟವಿರಲಿಲ್ಲ; ಈಗ ಮಾಸ್ಕೊ ಬಿಡಲು ನನಗಿಷ್ಟವಾಗುತ್ತಿಲ್ಲ.'

'ಆದರೆ ನೀವು ಬಂದದ್ದರಿಂದ ಒಳ್ಳೆಯದಾಯಿತು' ಎಂದು ಡಾಲಿ ಅವಳನ್ನು ಸೂಕ್ಷ್ಮವಾಗಿ ವೀಕ್ಷಿಸುತ್ತ ನುಡಿದಳು.

ಅನ್ನಾ ಒದ್ದೆಗಣ್ಣಿಂದ ಅವಳ ಕಡೆಗೆ ನೋಡಿದಳು. 'ಅದನ್ನೆಲ್ಲ ಹೇಳಬೇಡಿ, ಡಾಲಿ. ನಾನು ಮಾಡಿದ್ದಾದರೂ ಏನು? ಏನನ್ನೂ ಮಾಡುವಂತಿರಲಿಲ್ಲ. ನನ್ನನ್ನು ಕೆಡಿಸಲು ಜನ ನನ್ನ ಮೇಲ್ಕೇಕೆ ಸಂಚು ಹೂಡುತ್ತಾರೆಂದು ನಾನು ಮೇಲಿಂದ ಮೇಲೆ ಸೋಜಿಗಗೊಂಡದ್ದುಂಟು. ನಾನೇನು ಮಾಡಿದೆ? ನಾನೇನು ಮಾಡಬಲ್ಲವಳಾಗಿದ್ದೆ? ನಿಮ್ಮ ಹೃದಯದಲ್ಲಿ ಪ್ರೇಮ ತುಂಬಿ ತುಳುಕುತ್ತಿದೆ. ಅದರಿಂದಾಗಿ ನೀವವನನ್ನು ಕ್ಷಮಿಸಿದಿರಿ.'

'ನೀವು ಬರದಿದ್ದರೆ ಈ ಪ್ರಕರಣ ಹೇಗೆ ಕೊನೆಗೊಳ್ಳುತ್ತಿತ್ತೆಂಬುದು ದೇವನೊಬ್ಬನಿಗೆ ಮಾತ್ರ ಗೊತ್ತು. ನೀವೆಂಥ ಅದೃಷ್ಟವಂತೆ ಅನ್ನಾ!' ಎಂದು ಡಾಲಿ ಸೊಲ್ಲಿಸಿದಳು. 'ನಿಮ್ಮ ಹೃದಯ ತುಂಬ ಪರಿಶುದ್ಧವಾಗಿದೆ, ಶುಭಂಕರವಾಗಿದೆ.'

'ಇಂಗ್ಲಿಷ್ ಗಾದೆ ಹೇಳುವಂತೆ ಪ್ರತಿಯೊಬ್ಬನ ಕಪಾಟಿನಲ್ಲಿಯೂ ಒಂದೊಂದು ಎಲುಬುಗೂಡಿರುತ್ತದೆ.'

'ನಿಮ್ಮ ಬಳಿ ಎಂಥ ಎಲುಬುಗೂಡು, ಅಂದರೆ ರಹಸ್ಯವಿರಲು ಸಾಧ್ಯ? ನಿಮ್ಮಲ್ಲಿ ಎಲ್ಲವೂ ಸ್ಫಟಿಕ ಸ್ಪಷ್ಟ.'

'ಆದರೂ ನನ್ನಲ್ಲಿ ರಹಸ್ಯವಿದ್ದೇ ಇದೆ' ಎಂದು ಅನ್ನಾ ಕೂಡಲೇ ನುಡಿದಳು. ಅಶ್ರುಧಾರೆಯ ನಂತರ, ವಿಡಂಬನಾತ್ಮಕವಾದ ಕೃತಕ ಮಂದಹಾಸದಿಂದಾಗಿ ಅವಳ ತುಟಿ ಕೊಂಕಿದ್ದನ್ನು ನೋಡಿದವರೆ ಆಶ್ಚರ್ಯವಾಗುತ್ತಿತ್ತು.

'ನಿಮ್ಮ ಎಲುಬುಗೂಡು ವಿನೋದಾತ್ಮಕವಾಗಿದೆಯೆ ಹೊರತು, ದುಃಖಕರ ವಾಗಿಲ್ಲ' ಎಂದು ಡಾಲಿ ಮುಗುಳುನಗೆ ಬೀರಿದಳು.

'ಇಲ್ಲ, ಇಲ್ಲ, ಅದು ದುಃಖಕಾರಕವಾಗಿದೆ. ನಾಳೆಗೆ ಪ್ರತಿಯಾಗಿ ಇಂದೇ ಇಲ್ಲಿಂದ ಏಕೆ ಹೋಗುತ್ತಿದ್ದೇನೆಂಬುದು ನಿಮಗೆ ಗೊತ್ತಿದೆಯೆ? ನನ್ನ ಹೃದಯವನ್ನೊತ್ತುತ್ತಿರುವ ತಪ್ಪೊಪ್ಪಿಕೆಯ ಭಾರವೊಂದುಂಟು. ನಾನದನ್ನು ನಿಮಗೆ ತಿಳಿಸಬೇಕಾಗಿದೆ' ಎಂದು ಅನ್ನಾ ಡಾಲಿಯ ಕಣ್ಣುಗಳಲ್ಲಿ ಕಣ್ಣಿಟ್ಟು, ದೃಢನಿರ್ಧಾರದಿಂದ ಕುರ್ಚಿಯಲ್ಲಿ ಹಿಂದಕ್ಕೊಗೆದು ಕುಳಿತುಕೊಂಡು ಉಸುರಿದಳು.

ಅನ್ನಾಳ ಮುಖ ಕಿವಿಯ ತನಕ ಕೆಂಪೇರಿತು; ಅವಳ ಕಪ್ಪನೆಯ ಸುರುಳಿಗುರುಳು ಗಳ ಕೊರಳು ಸಹ ರಂಗೇರಿತು ; ಅದನ್ನು ನೋಡಿದ ಡಾಲಿಗೆ ಸೋಜಿಗವಾಯಿತು.

'ಕಿಟ್ಟಿ ಊಟಕ್ಕೇಕೆ ಬರಲಿಲ್ಲವೆಂಬುದು ನಿಮಗೆ ಗೊತ್ತೆ?' ಅನ್ನಾ ಮಾತು ಮುಂದುವರಿಸಿದಳು. 'ಅವಳಿಗೆ ನನ್ನ ಬಗ್ಗೆ ಮಾತ್ಸರ್ಯವಿದೆ. ನಾನು ಕೆಡಿಸಿದೆ. ಹಿಂದಿನ ರಾತ್ರಿಯ ನೃತ್ಯಗೋಷ್ಠಿ ಸಂತೋಷಕ್ಕೆ ಬದಲಾಗಿ ದುಃಖವನ್ನುಂಟುಮಾಡಿದ್ದಕ್ಕೆ ನಾನೇ ಕಾರಣ. ಆದರದು ನನ್ನ ತಪ್ಪಲ್ಲ, ನಿಜಕ್ಕೂ, ನಿಜಕ್ಕೂ ನನ್ನ ತಪ್ಪಲ್ಲ—ಅಥವಾ ಒಂದು ಚೂರಿದ್ದರೂ ಇರಬಹುದು' ಎಂದವಳು ಪದಗಳನ್ನು ಎಳೆದೆಳೆದು ರಾಗವಾಗಿ ನುಡಿದಳು.

'ಓ, ನೀನದನ್ನು ಸ್ಟೀವ್‌ನಂತೆ ಎಷ್ಟು ಚೆನ್ನಾಗಿ ಹೇಳಿದಿರಿ!' ಎಂದು ಡಾಲಿ ನಕ್ಕಳು.

ಅನ್ನಾಳ ಮನಸ್ಸಿಗೆ ನೋವಾಯಿತು. 'ಇಲ್ಲ, ಇಲ್ಲ. ನಾನು ಸ್ಟೀವ್‌ನಂತಲ್ಲ' ಎಂದವಳು ಹುಬ್ಬುಗಂಟಿಕ್ಕಿಕೊಂಡಳು. 'ನನ್ನ ಬಗ್ಗೆ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ಆದ್ದರಿಂದಲೇ ನಾನು ನಿಮಗೆ ಈ ವಿಚಾರ ತಿಳಿಸಿದೆ.'

ಆದರೆ ಆ ಮಾತುಗಳನ್ನುಚ್ಚರಿಸುತ್ತಿರುವಾಗಲೇ ಅವು ಅಸತ್ಯವೆಂದವಳಿಗೆ ಗೊತ್ತಿತ್ತು. ತನ್ನ ಬಗ್ಗೆ ತನಗೆ ಸಂಶಯವಿತ್ತಲ್ಲದೆ, ವ್ರಾನ್ಸ್ಕಿಯ ನೆನಪಿನಿಂದ ಅವಳ ಹೃದಯ ತಳಮಳಿಸುತ್ತಿತ್ತು. ಅವನನ್ನು ಮತ್ತೆ ಸಂಧಿಸಬಾರದೆಂದೇ ಸಂಕಲ್ಪಿಸಿ, ಅವಳು ಉದ್ದೇಶಿಸಿದ್ದಕ್ಕಿಂತ ಮುಂಚಿತವಾಗಿಯೇ ಹೊರಡಲನುವಾಗಿದ್ದಳು.

'ಹೌದು, ನೀವವರೊಡನೆ ಮಜೂರ್ಕ ಕುಣಿದಿರೆಂದು ಸ್ಟೀವ್ ಹೇಳಿದರು. ಅವರು....'

'ಇಡೀ ಪ್ರಕರಣ ಅದೆಷ್ಟು ಅಸಂಬದ್ಧವಾಗಿತ್ತೆಂಬುದನ್ನು ನೀವು ಕಲ್ಪಿಸಿಕೊಳ್ಳ ಲಾರಿರಿ. ನಾನಲ್ಲಿಗೆ ಹೋದದ್ದು ಜೋಡಿಕೂಡಿಸುವ ಸಲುವಾಗಿ, ಅದರ ಪರಿಣಾಮವಿದು!

ಪ್ರಾಯಶಃ ನನ್ನ ಮನಸ್ಸಿಗೆ ವಿರುದ್ಧವಾಗಿ ನಾನು....' ಅವಳ ಮುಖ ಕೆಂಪೇರಿತು, ಮಾತು ನಿಲ್ಲಿಸಿದಳು.

'ಓ, ಗಂಡಸರು ಕೂಡಲೇ ಅದನ್ನು ಗ್ರಹಿಸುತ್ತಾರೆ' ಎಂದು ಡಾಲಿ ಸೊಲ್ಲಿಸಿದಳು.

'ಆದರೆ ಅವರ ಕಡೆಯಿಂದ ಏನಾದರೂ ಕಳವಳಕಾರಿಯಾದ ಸಂಗತಿ ನನ್ನ ಗಮನಕ್ಕೆ ಬಂದಿದ್ದುದಾದರೆ ನನಗೆ ನಿರಾಶೆಯಾಗುತ್ತಿತ್ತು' ಎಂದು ಅನ್ನಾ ನಡುವೆ ಬಾಯಿ ಹಾಕಿದಳು. 'ಇದೆಲ್ಲ ಮರೆತು ಹೋಗುತ್ತದೆಂಬ, ಕಿಟ್ಟಿ ನನ್ನ ದೂಷಣೆ ನಿಲ್ಲಿಸುತ್ತಾಳೆಂಬ ಭರವಸೆ ನನಗಿದೆ.'

'ನಿಜ ಹೇಳುವುದಾದರೆ, ಅನ್ನಾ, ಕಿಟ್ಟಿಗೆ ಈ ಮದುವೆ ಕೈಗೂಡಬಾರದೆಂಬುದು ನನ್ನ ಇಚ್ಛೆಯಾಗಿದೆ. ಒಂದೇ ದಿನದಲ್ಲಿ ವ್ರಾಂಸ್ಕಿ ನಿನ್ನನ್ನು ಪ್ರೀತಿಸುವಂತಾದರಂತು ಈ ಸಂಬಂಧ ಬೇಡವೇ ಬೇಡ.'

'ಅಯ್ಯೋ ದೇವರೆ, ಅದು ನಾಚಿಕೆಗೇಡಿನ ಸಂಗತಿ' ಎಂದು ಅನ್ನಾ ನುಡಿದಳು. ತನ್ನ ಆಲೋಚನೆಗಳನ್ನೆ ವಾಗ್ರೂಪದಲ್ಲಿ ಕೇಳಿಸಿಕೊಂಡದ್ದರಿಂದ ಅವಳ ಮುಖದ ಮೇಲೆ ತೃಪ್ತಿಯ ಪ್ರಗಾಢರಾಗ ವ್ಯಾಪಿಸಿಕೊಂಡಿತು. 'ನಾನು ತುಂಬ ಪ್ರೀತಿಸುತ್ತಿದ್ದ ಕಿಟ್ಟಿಯ ಹಗೆ ಸಂಪಾದಿಸಿಕೊಂಡು ಹೋಗುತ್ತಿದ್ದೇನೆ. ಅವಳೆಷ್ಟು ಮಧುರವಾಗಿದ್ದಾಳೆ. ಆದರೆ ನೀವೆಲ್ಲವನ್ನು ಸರಿಪಡಿಸಿ. ಸರಿಪಡಿಸುತ್ತೀರಷ್ಟೆ, ಡಾಲಿ? ಅದು ನಿಮ್ಮಿಂದ ಸಾಧ್ಯತಾನೆ?'

ಮಂದಹಾಸ ನಿಗ್ರಹ ಡಾಲಿಗೆ ಸಾಧ್ಯವಾಗಲಿಲ್ಲ. ಅವಳು ಅನ್ನಾಳನ್ನು ಪ್ರೀತಿಸುತ್ತಿದ್ದುದು, ನಿಜ. ಆದರೆ ಅವಳು ಸಹ ದೌರ್ಬಲ್ಯ ಮುಕ್ತಳಲ್ಲವೆಂಬುದನ್ನು ಕಂಡು ಡಾಲಿ ಹರ್ಷಾನ್ವಿತೆಯಾದಳು. 'ಹಗೆಯೆ? ಖಂಡಿತ ಸಾಧ್ಯವಿಲ್ಲ.'

'ನಾನು ನಿಮ್ಮನ್ನು ಪ್ರೀತಿಸುತ್ತಿರುವಂತೆಯೇ ನೀವೆಲ್ಲರೂ ನನ್ನನ್ನು ಪ್ರೀತಿಸಬೇಕೆಂಬ ಆಸೆ ನನಗಿದೆ. ನಾನೀಗ ನಿಮ್ಮನ್ನು ಎಂದಿಗಿಂತ ಮಿಗಿಲಾಗಿ ಪ್ರೀತಿಸುತ್ತೇನೆ' ಎಂದವಳು ಅಶ್ರುಲೋಚನೆಯಾದಳು. 'ಪ್ರೀತಿಯ ಅತ್ತಿಗೆ, ಈ ದಿನ ನಾನೆಷ್ಟು ದಡ್ಡತನದಿಂದ ವರ್ತಿಸುತ್ತಿದ್ದೇನೆ.'

ಕೈಚೌಕದಿಂದ ತನ್ನ ಮುಖವನ್ನೊರಸಿಕೊಂಡು, ಅವಳು ಬಟ್ಟೆ ಹಾಕಿಕೊಳ್ಳ ತೊಡಗಿದಳು.

ತಡವಾದರೂ ಆಬ್ಲಾನ್ಸ್ಕಿ ಹೊರಡುವ ಹೊತ್ತಿಗೆ ಬಂದನು. ವೈನು ಸಿಗರೇಟುಗಳ ಪ್ರಭಾವದಿಂದಾಗಿ ಅವನ ಮುಖದಲ್ಲಿ ಕಳೆಸೂಸುತ್ತಿತ್ತು; ಅವನ ಉಸಿರಿನಲ್ಲಿ ವಾಸನೆ ಎರಚುತ್ತಿತ್ತು.

ಅಂತಿಮವಾಗಿ ಅಪ್ಪಿಕೊಂಡು ಪಿಸುನುಡಿಯುವಾಗ ಅನ್ನಾಳ ಭಾವೋದ್ರೇಕ ಡಾಲಿಯ ಹೃದಯವನ್ನು ಮುಟ್ಟಿ ತಟ್ಟಿತು.

'ನಿಮ್ಮ ಉಪಕಾರವನ್ನು ನಾನೆಂದೂ ಮರೆಯುವುದಿಲ್ಲವೆಂಬುದನ್ನು ನೆನಪಿಡಿ, ಅನ್ನಾ. ನಾನು ನಿಮ್ಮನ್ನು ಪ್ರೀತಿಸುತ್ತೇನೆಂಬುದನ್ನು, ನನ್ನ ಅತ್ಯುತ್ತಮ ಸಖಿಯೆಂದು ಸದಾ ನಿಮ್ಮನ್ನು ಪ್ರೀತಿಸುತ್ತೇನೆಂಬುದನ್ನು ಮರೆಯದಿರಿ.'

'ಉಪಕಾರವೆ? ಅದೆಂಥ ಉಪಕಾರ?' ಎಂದು ಅನ್ನಾ ಅವಳನ್ನು ಚುಂಬಿಸುತ್ತಿದ್ದಂತೆ ತನ್ನ ಕಣ್ಣೀರನ್ನದುಮಿಕೊಳ್ಳಲು ಪ್ರಯತ್ನಿಸಿದಳು.

'ನೀವು ನನ್ನನ್ನರ್ಥಮಾಡಿಕೊಂಡಿರಿ. ನೀವೆಲ್ಲವನ್ನು ಅರ್ಥಮಾಡಿಕೊಳ್ಳುತ್ತೀರಿ. ನಮಸ್ಕಾರ, ನನ್ನೊಲವೆ!'

೨೯

'ಭಗವಂತನ ಕೃಪೆಯಿಂದ ಎಲ್ಲ ಸರಿಹೋಯಿತು' ಎಂಬುದೇ ಕೊಟ್ಟಕೊನೆಯ ಸಲ ತನ್ನಣ್ಣನಿಗೆ ನಮಸ್ಕಾರ ಹೇಳುವಾಗ ಅನ್ನಾಳ ಮನಸ್ಸಿನಲ್ಲಿ ತಲೆಯೆತ್ತಿದ ಆಲೋಚನೆ. ಮೂರನೆಯ ಎಚ್ಚರಿಕೆ ಗಂಟೆ ಕೇಳಿಸುವವರೆಗೂ ಅವನು ಗಾಡಿಯ ಬಾಗಿಲಿಗಡ್ಡಲಾಗಿ ನಿಂತಿದ್ದನು. ಅವಳು ತನ್ನ ಸೇವಕಿ ಅನುಷ್ಕಳ ಪಕ್ಕದಲ್ಲಿ ಮೆತ್ತನೆಯ ಪೀಠದ ಮೇಲೆ ಕುಳಿತುಕೊಂಡು, ಮಲಗುಬೋಗಿಯ ಅರೆಬೆಳಕಿನಲ್ಲಿ ಸುತ್ತಲೂ ಕಣ್ಣು ಹಾಯಿಸಿದಳು. 'ದೇವರ ದಯೆಯಿಂದ ನಾನು ನಾಳೆ ಸರ್ಜಿಯನ್ನೂ ಅಲೆಕ್ಸಿ ಅಲೆಕ್ಸಾಂಡ್ರೊವಿಚ್‌ರನ್ನೂ ಕಾಣುತ್ತೇನೆ; ನನ್ನ ಬಾಳು ರೂಢಿಯಂತೆ ಹಳೆಯ ಸನ್ಮಾರ್ಗದಲ್ಲಿ ಮುಂದುವರಿಯುತ್ತದೆ.'

ಇಡೀ ದಿನ ತನ್ನ ಮೈಮನಗಳನ್ನು ತುಂಬಿಕೊಂಡಿದ್ದ ನಿರುತ್ಸಾಹದಲ್ಲಿಯೇ ಅವಳು ಪ್ರಯಾಣಕ್ಕೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಳು. ಎಚ್ಚರಿಕೆಯ ಸಿದ್ಧತೆಯಲ್ಲಿ ಅವಳಿಗೆ ತೃಪ್ತಿಯಿತ್ತು. ತನ್ನ ಸಣ್ಣ ಚುರುಕು ಕೈಗಳಿಂದ ಅವಳು ಕೆಂಪುಚೀಲವನ್ನು ಬಿಚ್ಚಿ, ಸಣ್ಣದೊಂದು ಮೆತ್ತೆಯನ್ನು ಹೊರಗೆ ತೆಗೆದು, ಮೊಣಕಾಲುಗಳ ಮೇಲೆ ಹಾಕಿಕೊಂಡಳು. ತನ್ನ ಕಾಲುಗಳನ್ನು ಪೂರಾ ಮುಚ್ಚಿಕೊಂಡನಂತರ ಅವಳು ಹಾಯಾಗಿ ಹಿಂದಕ್ಕೊರಗಿಕೊಂಡಳು. ಅಸ್ವಸ್ಥಳಾಗಿದ್ದ ಹೆಂಗಸೊಬ್ಬಳು ಮಲಗಲಣಿಯಾಗುತ್ತಿದ್ದಳು. ಬೇರಿಬ್ಬರು ಹೆಂಗಸರು ಅನ್ನಾಳನ್ನು ಮಾತಾಡಿಸಿದರು. ದಢೂತಿ ಮುದುಕಿಯೊಬ್ಬಳು ತನ್ನ ಕಾಲುಗಳನ್ನು ಮಡಿಚಿಕೊಳ್ಳುತ್ತಿದ್ದಂತೆ, ಬೇಗೆಯ ಬಗ್ಗೆ ಗೊಣಗಿಕೊಂಡಳು. ಅನ್ನಾ ಹೆಂಗಸರೊಡನೆ ಕೆಲವೇ ಕೆಲವು ಮಾತುಗಳನ್ನು ವಿನಿಮಯಮಾಡಿಕೊಂಡಳು; ಆದರೆ ಅವರ ಮಾತುಕತೆ ತನಗೆ ಹಿಡಿಸಲಿಲ್ಲವಾಗಿ, ದೀಪವನ್ನು ತರುವಂತೆ ಅನುಷ್ಕಳಿಗೆ ಬೆಸಸಿದಳು. ಕುರ್ಚಿಯ ತೋಳಿಗೆ ಅದನ್ನು ಬಿಗಿದಳು; ಚೀಲದಿಂದ ಕಾಗದಚಾಕನ್ನೂ, ಇಂಗ್ಲಿಷ್ ಕಾದಂಬರಿಯನ್ನೂ ತೆಗೆದುಕೊಂಡಳು. ಮೊದಮೊದಲು ಅವಳದನ್ನು ಓದಲಾಗಲಿಲ್ಲ. ಓಡಾಡುವ ಜನರ ಗದ್ದಲ ಗಲಿಬಿಲಿಗಳಿಂದ ಅವಳ ಏಕಾಗ್ರತೆಗೆ ಅಡಚಣೆಯುಂಟಾಯಿತು; ರೈಲು ಹೊರಟ ನಂತರ ಅದರ ಚಕ್ರಗಳ ಚೀತ್ಕಾರ ಅನಿವಾರ್ಯವಾಗಿ ಅವಳ ಕಿವಿದೆರೆಯನ್ನಪ್ಪಳಿಸುತ್ತಿತ್ತು; ಎಡಗಡೆಯ ಕಿಟಕಿಯ ಮೇಲೆ ಬೀಸಿ, ಗಾಜಿನ ಹಲಗೆಗೆ ಹತ್ತಿಕೊಂಡಿದ್ದ ಮಂಜುಗಾಳಿ, ಪಕ್ಕದಲ್ಲಿ ಹಾದುಹೋಗುತ್ತಿದ್ದ, ಸಂಪೂರ್ಣವಾಗಿ ಮಂಜಿನಲ್ಲದ್ದಿ ಹೋಗಿದ್ದ ಒಂದು ಪಾರ್ಶ್ವದ, ಮೈಗೆಲ್ಲ ಬೆಚ್ಚಗೆ ಬಟ್ಟೆ ಸುತ್ತಿಕೊಂಡಿದ್ದ ಕಾಪಿನಧಿಕಾರಿಯ ದೃಶ್ಯ, ಹೊರಗೆ ಕ್ಷಣಕ್ಷಣಕ್ಕೂ ರೇಗುತ್ತಿದ್ದ ಭಯಂಕರ ಪ್ರಚಂಡ ಹಿಮಮಾರುತವನ್ನು ಕುರಿತ ಮಾತುಕತೆ ಅವಳ ಗಮನವನ್ನು ಸೆಳೆದುವು. ಅದೇ ಪರಿಸ್ಥಿತಿ ಬಹುಹೊತ್ತಿನ ತನಕ ಮುಂದುವರಿಯಿತು: ಚಕ್ರಗಳ ಅಂಥದೇ ಅಲುಗಾಟ ಚೀತ್ಕಾರಗಳು, ಕಿಟಕಿಯ ಮೇಲೆ ಬೀಳುತ್ತಿದ್ದ ಅದೇ ಮಂಜು, ಅವಸರವಸರವಾಗಿ ಬದಲಾಗುತ್ತಿದ್ದ ಅದೇ ಶೀತ ಶಾಖಗಳು, ಅರೆಬೆಳಕಿನಲ್ಲಿ ಮಿನುಗು

ತ್ತಿದ್ದ ಅದೇ ಮುಖಗಳು, ಅದೇ ಧ್ವನಿಗಳು. ಕೊನೆಗೆ ಅನ್ನಾ ಓದು ಪ್ರಾರಂಭಿಸಿದಳು; ಓದಿದ್ದನ್ನು ಅರ್ಥಮಾಡಿಕೊಳ್ಳುತ್ತಿದ್ದಳು. ಅನುಷ್ಕಳಿಗೆ ಜೊಂಪು ಹತ್ತಿತ್ತು. ಮೊಣಕಾಲ ಮೇಲಿದ್ದ ಕೆಂಪು ಚೀಲವನ್ನವಳು ಗವಸುಗಳಿದ್ದ ಅಗಲವಾದ ಕೈಗಳಲ್ಲಿ ಹಿಡಿದುಕೊಂಡಿದ್ದಳು. ಗವಸುಗಳಲ್ಲೊಂದು ಹರಿದುಹೋಗಿತ್ತು. ಅನ್ನಾ ಓದಿ, ಅರ್ಥ ಮಾಡಿಕೊಳ್ಳುತ್ತಿದ್ದಳು, ನಿಜ. ಆದರೆ ಬೇರೆ ಜನರ ಜೀವನಾನುಭವ ಆಲೋಚನೆ ಗಳನ್ನು ಕುರಿತು ಮನನ ಮಾಡುವುದು ಅವಳಿಗೆ ಹಿಡಿಸಲಿಲ್ಲ. ಸ್ವಂತ ಬದುಕನ್ನನುಭವಿ ಸುವ ಹಂಬಲ ಅವಳಿಗಿತ್ತು. ಕಾದಂಬರಿಯ ನಾಯಿಕೆ ರೋಗಿಗಳಿಗೆ ಔಷಧೋಪಚಾರ ನಡಸುತ್ತಿದ್ದುದಾಗಿ ಓದಿದ್ದಾದರೆ, ರೋಗಿಗಳ ಕೋಣೆಯಲ್ಲಿ ತಾನೇ ನೀರವವಾಗಿ ತಿರುಗಾಡಲಾಶಿಸುತ್ತಿದ್ದಳು; ಸಂಸತ್ಸದಸ್ಯನೊಬ್ಬ ಭಾಷಣ ಮಾಡುತ್ತಿದ್ದುದಾಗಿ ಓದಿ ದಾಗ, ತಾನೇ ಭಾಷಣ ಬಿಗಿಯಲವಳು ಅಪೇಕ್ಷಿಸುತ್ತಿದ್ದಳು; ಲೇಡಿ ಮೇರಿ ಬೇಟೆನಾಯಿ ಗಳನ್ನು ಬೆನ್ನಟ್ಟಿಕೊಂಡು ಹೋಗಿ, ತನ್ನ ನಾದಿನಿಯನ್ನು ಗಾಬರಿಗೊಳಿಸಿ, ತನ್ನ ಸಾಹಸ ಕೃತ್ಯದಿಂದ ಇತರರನ್ನು ವಿಸ್ಮಯಗೊಳಿಸಿದ ಸಂಗತಿಯನ್ನು ಓದಿದಾಗ, ತಾನೂ ಅಂಥದೇ ಧೀರಕಾರ್ಯದಲ್ಲಿ ತೊಡಗಬೇಕೆಂದು ಆಶಿಸುತ್ತಿದ್ದಳು. ಆದರೆ ಅಂಥ ಕಾರ್ಯಗಳಲ್ಲಿ ಪಾಲ್ಗೊಳ್ಳುವ ಅವಕಾಶ ಅವಳಿಗಿರಲಿಲ್ಲವಾಗಿ, ಅವಳ ಪುಟ್ಟಕೈಗಳು ನುಣುಪಾದ ಕಾಗದದ ಚಾಕುವಿನೊಡನೆ ಆಟವಾಡುತ್ತಿದ್ದುವು; ಅಷ್ಟೇ ಅಲ್ಲ, ಅನ್ಯಮಾರ್ಗ ಕಾಣದೆ ಅವಳು ಓದಿಗೆ ಶರಣಾಗಬೇಕಾಗಿತ್ತು.

ಕಥಾನಾಯಕ ಇಂಗ್ಲಿಷ್ ರೀತಿಯ ಆದರ್ಶಸುಖವನ್ನು ಸಾಧಿಸುವಷ್ಟರಲ್ಲಿ, ಅಂದರೆ ಬ್ಯಾರನ್ ಪದವಿ ಮತ್ತು ದೊಡ್ಡ ಆಸ್ತಿಗಳನ್ನು ಪಡೆಯುವಷ್ಟರಲ್ಲಿ, ಅವನೊಡನೆ ಅವನ ಜಮಾನಿಗೆ ಅನ್ನಾ ಭೇಟಿಕೊಡಬೇಕೆಂದು ಆಶಿಸುವಷ್ಟರಲ್ಲಿ, ಅವಮಾನಿತನಾದಂತೆ ಅವನು ಭಾವಿಸುವುದಾಗಿಯೂ, ಅದೇ ಕಾರಣಕ್ಕಾಗಿ ತನಗೂ ಅವಮಾನದಂತೆ ಅವಳು ಭಾವಿಸಿದಳು. 'ಆದರೆ ಅವನಿಗೇಕೆ ಅವಮಾನವಾಗಬೇಕು? ಅವಮಾನವಾಗುತ್ತದೆಂದು ನಾನೇಕೆ ಭಾವಿಸಬೇಕು?' ಎಂದವಳು ಕೋಪ ಬೆರೆತ ವಿಸ್ಮಯದಿಂದ ತನ್ನನ್ನು ತಾನೆ ಪ್ರಶ್ನಿಸಿಕೊಂಡಳು. ಅವಳು ಪುಸ್ತಕವನ್ನು ಕೆಳಗಿಟ್ಟು, ಎರಡು ಕೈಗಳಲ್ಲಿಯೂ ಕಾಗದ ಚಾಕು ಹಿಡಿದುಕೊಂಡು ಕುರ್ಚಿಯಲ್ಲಿ ಹಿಂದಕ್ಕೊರಗಿದಳು. ಅವಮಾನಕ್ಕೇನೂ ಕಾರಣವಿರಲಿಲ್ಲ. ಮಾಸ್ಕೊ ನೆನಪುಗಳನ್ನೆಲ್ಲ ಅವಳು ಮೆಲುಕು ಹಾಕಿದಳು. ಎಲ್ಲವೂ ಚೆನ್ನಾಗಿದ್ದುವು, ಸಂತೋಷದಾಯಕವಾಗಿದ್ದುವು. ನೃತ್ಯಗೋಷ್ಠಿಯನ್ನು ಜ್ಞಾಪಿಸಿ ಕೊಂಡಳು; ವ್ರಾನ್ಸ್ಕಿಯನ್ನು ಸ್ಮರಿಸಿಕೊಂಡಳು; ಅವನ ಮುಖದ ಮೇಲೆ ಬರೆದಂತಿದ್ದ ದೈನ್ಯವೃತ್ತಿಯನ್ನು ನೆನೆಸಿಕೊಂಡಳು; ಅವನೊಡನೆ ತಾನು ನಡೆದುಕೊಂಡ ರೀತಿ ಯನ್ನು ನೆನಪಿಗೆ ತಂದುಕೊಂಡಳು. ನಾಚಿಕೆಪಟ್ಟುಕೊಳ್ಳಬೇಕಾದ ತಪ್ಪು ಅದರಲ್ಲೇನೂ ಅವಳಿಗೆ ಕಾಣಿಸಲಿಲ್ಲ. ಅವಳ ಆ ನೆನಪುಗಳ ಆ ಘಟ್ಟದಲ್ಲಿ ನಾಚಿಕೆ ಹೆಚ್ಚಿತು. ವ್ರಾನ್ಸ್ಕಿಯ ಬಗ್ಗೆ ಯೋಚಿಸುತ್ತಿದ್ದಂತೆ 'ಬಿಸಿ, ತುಂಬ ಬಿಸಿ, ಕಾವು' ಎಂಬುದಾಗಿ ಅವಳ ಒಳದನಿ ನುಡಿದಂತಾಯಿತು. 'ಅದರಿಂದಾದ್ದೇನು?' ಎಂದವಳು ದೃಢ ಹಠದಿಂದ ತನ್ನಷ್ಟಕ್ಕೆ ತಾನಂದುಕೊಂಡು, ಕುರ್ಚಿಯಲ್ಲಿ ತನ್ನ ಸ್ಥಾನವನ್ನು ಬದಲಿಸಿದಳು. 'ಆದರರ್ಥವೇನು? ನಾನು ನೇರವಾಗಿ ಮುಖ ನೋಡಲು ಹೆದರುತ್ತೇನೆಯೆ? ನಾನು

ನೋಡುತ್ತಿರುವುದಾದರೂ ಏನು? ಕೇವಲ ಹುಡುಗನಂತಿರುವ ಆ ಅಧಿಕಾರಿಯೊಡನೆಯ ನನ್ನ ಸಂಬಂಧಗಳು ಅನ್ಯಪರಿಚಿತರ ಸಂಬಂಧಗಳಿಗಿಂತ ಉತ್ತಮವಾಗಿವೆಯೆಂದು ಹೇಳಲು ಸಾಧ್ಯವೆ? ತಾತ್ಸಾರದ ಮಂದಹಾಸದಿಂದವಳು ಆ ಭಾವನೆಯನ್ನು ತೊಲಗಿಸಿದಳು; ಮತ್ತೆ ಪುಸ್ತಕವನ್ನು ಕೈಗೆತ್ತಿಕೊಂಡಳು. ಆದರೆ ಈ ಸಲ ತಾನು ಓದುತ್ತಿದ್ದುದೇ ಅರ್ಥ ವಾಗುತ್ತಿರಲಿಲ್ಲ. ಕಿಟಕಿಯ ಗಾಜಿನ ಮೇಲಿದ್ದ ಚಾಕುವನ್ನೆತ್ತಿಕೊಂಡು, ಅದರ ನುಣ್ಣನೆಯ ತಣ್ಣನೆಯ ಅಲಗನ್ನು ತನ್ನ ಕೆನ್ನೆಗೊತ್ತಿಕೊಂಡಳು; ಸುಸ್ಪಷ್ಟವಾದ ಕಾರಣವಿಲ್ಲದೆ ಹಠಾತ್ತನೆ ತನ್ನನ್ನು ನುಂಗಿಬಿಟ್ಟ ಸಂತೋಷ ತರಂಗಗಳಿಂದಾಗಿ ಅವಳು ಗಟ್ಟಿಯಾಗಿ ನಕ್ಕಳು.

ಪಿಟೀಲಿನ ತಂತಿಗಳಂತೆ ನರಗಳು ಭದ್ರವಾಗಿ ಬಿಗಿಗೊಳ್ಳುತ್ತಿದ್ದಂತೆ ಅವಳಿಗೆ ಭಾಸ ವಾಯಿತು. ತನ್ನ ಕಣ್ಣುಗಳು ಅಗಲವಾಗಿ ತೆರೆದುಕೊಳ್ಳುತ್ತಿದ್ದಂತೆ, ಕೈಕಾಲ್ಬೆರಳು ದುರ್ಬಲವಾಗಿ ತಿರುಚಿಕೊಳ್ಳುತ್ತಿದ್ದಂತೆ, ಯಾವುದೋ ಅಡಚಣೆ ಅಂತರಂಗದಲ್ಲಿ ಅವಳ ಉಸಿರನ್ನು ಕಟ್ಟಿಸುತ್ತಿದ್ದಂತೆ, ಉಕ್ಕೇರುತ್ತಿದ್ದ ಅರೆಬೆಳಕಿನಲ್ಲಿ ದೃಶ್ಯ ಧ್ವನಿಗಳು ಸುಸ್ಪಷ್ಟ ವಾಗಿದ್ದಂತೆ ಅವಳು ಭಾವಿಸಿದಳು.

ರೈಲು ಮುಂದಕ್ಕೆ ಚಲಿಸುತ್ತಿತ್ತೆ, ಹಿಂದಕ್ಕೆ ಚಲಿಸುತ್ತಿತ್ತೆ ಅಥವಾ ಸ್ಥಗಿತ ಗೊಂಡಿತ್ತೆ, ತನ್ನ ಬಳಿಯಿದ್ದವಳು ಅನುಷ್ಕಳೇ ಅಥವಾ ತೀರ ಅಪರಿಚಿತ ವ್ಯಕ್ತಿಯೇ ಎಂಬ ಸಂದೇಹ ಅವಳನ್ನು ನಿರಂತರವಾಗಿ ಕಾಡುತ್ತಿತ್ತು. 'ಅಲ್ಲಿ ನೇತಾಡುತ್ತಿರುವು ದೇನು? ನನ್ನ ತುಪ್ಪುಳು ಕೋಟೇ ಅಥವಾ ಪ್ರಾಣಿಯೇ?' ಎಂದವಳು ತನ್ನಷ್ಟಕ್ಕೆ ತಾನಂದುಕೊಂಡಳು. 'ನಾನೇಕೆ ಇಲ್ಲಿದ್ದೇನೆ? ಈ ವ್ಯಕ್ತಿ ನಾನೆಯೋ, ಅಥವಾ ಬೇರೆ ಯಾರಾದರೂ ಇರಬಹುದೋ?' ಅಂಥ ಚಿತ್ತಭ್ರಮೆಗೆ ಶರಣಾಗಲು ಅವಳು ಹೆದರಿದಳು. ಆದರೂ ಯಾವುದೋ ಶಕ್ತಿ ತನ್ನನ್ನಾಕಡೆಗೆ ಎಳೆದೊಯ್ಯುತ್ತಿದ್ದಂತೆ ಅವಳು ಭಾವಿಸಿ ದಳು. ಅದಕ್ಕೆ ಶರಣಾಗಬೇಕು, ಇಲ್ಲವೇ ಅದನ್ನೆದುರಿಸಬೇಕೆಂದವಳು ಆಲೋಚಿಸಿದಳು. ಆತ್ಮರಕ್ಷಣೆಗಾಗಿ ತನ್ನ ಶಕ್ತಿಯನ್ನೆಲ್ಲ ಒಗ್ಗೂಡಿಸಿಕೊಂಡು ಮೇಲೆದ್ದು ಕುಳಿತಳು; ಕಾಲಿನ ಮೇಲಿದ್ದ ರಗ್ಗನ್ನು ಜಾಡಿಸಿ ಒದೆದಳು; ತೋಳಿಲ್ಲದ ಬೆಚ್ಚನೆಯ ಮೇಲಂಗಿ ಯನ್ನು ಪಕ್ಕಕ್ಕೆ ಸರಿಸಿದಳು. ಒಂದು ಕ್ಷಣ ಅವಳ ಅರಿವು ಮರುಕಳಿಸಿತು; ಗುಂಡಿ ಗಳಿಲ್ಲದ ಉದ್ದನೆಯ ಮೇಲಂಗಿಯನ್ನು ಧರಿಸಿಕೊಂಡು ಒಳಗೆ ಬಂದ ತೆಳ್ಳನೆಯ ಮನುಷ್ಯ ಶಾಖದ ಅಗ್ಗಿಷ್ಟಿಕೆಯ ಮೇಲ್ವಿಚಾರಕನೆಂಬುದನ್ನು ಗುರುತಿಸಿದಳು. ಶಾಖಮಾಪಕವನ್ನವನು ಪರಿಶೀಲಿಸುತ್ತಿದ್ದ ಬಗೆಯನ್ನು ಗಮನಿಸಿದಳು; ಬಾಗಿಲು ತೆರೆದಾಗ ಅದರ ಮೂಲಕ ನುಗ್ಗಿ ಬರುತ್ತಿದ್ದ ಹಿಮಗಾಳಿಯನ್ನವಳು ಕಂಡಳು. ತದನಂತರ ಮತ್ತೆ ಎಲ್ಲವೂ ಗೊಂದಲಕ್ರೀಡಾಯಿತು....ಉದ್ದನೆಯ ಸೊಂಟದ ಮನುಷ್ಯ ಗೋಡೆಯ ಮೇಲಿದ್ದ ಎಂಥದೋ ವಸ್ತುವನ್ನು ಹಲ್ಲಿಂದ ಕಚ್ಚುತ್ತಿದ್ದಂತೆ ತೋರಿತು. ಮುದುಕಿ ಜೋಗಿಯ ಉದ್ದ ಕಾಲು ಚಾಚಿದಳು; ಸರ್ವಸ್ವವನ್ನು ನುಂಗಿಕೊಂಡ ಕೃಷ್ಣಮೇಘ ಗೋಚರಿಸಿದಂತಾಯಿತು; ಅನಂತರ ಯಾರನ್ನೋ ಚೂರು ಚೂರಾಗಿ ಹರಿಯುತ್ತಿರಬೇಕೆಂಬ ಶಂಕೆ ಮೂಡುವಂತೆ ಭಯಂಕರವಾದ ಕಿರಿಚು ಮತ್ತು ಅಪ್ಪಳಿಕೆ ಶಬ್ದಗಳು ಕೇಳಿಸುತ್ತಿದ್ದುವು; ಕುರುಡುಗೊಳಿಸುವ ಆರಕ್ತಾಗ್ನಿ ಅವಳ ಕಣ್ಣುಗಳ

ಮುಂದೆ ಗೋಚರಿಸಿತು; ಗೋಡೆಯೊಂದು ಮೇಲಿದ್ದು, ಎಲ್ಲವನ್ನು ಮರೆಸುವಂತೆ ತೋರಿತು. ತಾನು ಕೆಳಗೆ ಕುಸಿಯುತ್ತಿದ್ದಂತೆ ಅನ್ನಾ ಭಾವಿಸಿದಳು; ಅದರಿಂದವಳು ಸಂತಸಗೊಳ್ಳುತ್ತಿದ್ದಳೇ ಹೊರತು, ಭಯಗೊಳ್ಳಲಿಲ್ಲ. ಬಟ್ಟೆಗಳಲ್ಲಿ ಸುತ್ತಿದ್ದ, ಮಂಜು ಕವಿದಿದ್ದ ವ್ಯಕ್ತಿಯ ಧ್ವನಿ ಅವಳ ಕಿವಿಗಳಲ್ಲಿ ಮೊಳಗಿತು. ಅವಳು ಮೇಲೆದ್ದಳು; ತನ್ನ ಬಲವನ್ನೆಲ್ಲ ಒಗ್ಗೂಡಿಸಿಕೊಂಡಳು. ಯಾವುದೋ ನಿಲ್ದಾಣವನ್ನು ತಲುಪಿರಬೇಕೆಂದು, ಆ ಮನುಷ್ಯ ನಿಯಂತ್ರಕನಾಗಿರಬೇಕೆಂದು ಅವಳು ಭಾವಿಸಿದಳು. ಎಸೆದು ಬಿಟ್ಟಿದ್ದ ತನ್ನ ಮೇಲಂಗಿಯನ್ನೂ ಶಾಲನ್ನೂ ಕೊಡುವಂತೆ ಅವಳು ಅನುಷ್ಕಳನ್ನು ಕೇಳಿದಳು. ಅವುಗಳನ್ನವಳು ಹೊದ್ದುಕೊಂಡು, ಬಾಗಿಲ ಕಡೆಗೆ ಸರಿದಳು.

'ಹೊರಗೆ ಹೋಗ್ತೀರಾ, ಅಮ್ಮ?' ಎಂದು ಅನುಷ್ಕ ಪ್ರಶ್ನಿಸಿದಳು.

'ಹೌದು. ನನಗೆ ತಣ್ಣನೆಯ ಹೊಸಗಾಳಿ ಬೇಕಾಗಿದೆ. ಇಲ್ಲಿ ತುಂಬ ಸೆಕೆ.'

ಅವಳು ಬಾಗಿಲು ತೆರೆದಳು. ಹಿಮಗಾಳಿ ಅವಳ ಮೇಲೆ ನುಗ್ಗಿದುವು; ಅವಳು ಹಿಡಿದುಕೊಂಡಿದ್ದ ಬಾಗಿಲನ್ನು ದಬ್ಬಲು ಪ್ರಯತ್ನಿಸಿದುವು. ಹಿಮಗಾಳಿಯೊಡನೆ ನಡಸಿದ ಸೆಣಸಾಟದಿಂದ ಅವಳಿಗೆ ಸಂತೋಷವಾಯಿತು. ಆ ಸೆಣಸಾಟದಲ್ಲಿ ಅವಳು ಗೆದ್ದಳು, ಬಾಗಿಲು ತೆರೆದು ಹೊರಗೆ ಹೋದಳು. ಮಾರುತ ತನಗಾಗಿ ಕಾಯುತ್ತಿದ್ದಂತೆ ಅವಳಿಗೆ ತೋರಿತು; ಅದು ಹಿಗ್ಗಿನಿಂದ ಬೊಬ್ಬೆಯಿಟ್ಟಿತು; ಮೆಟ್ಟಿಲುಗಳ ಕೊರೆಯುವ ಕಬ್ಬಿಣದ ಕಂಬಿಯನ್ನವಳು ಬಿಗಿಯಾಗಿ ಹಿಡಿದುಕೊಳ್ಳದಿದ್ದರೆ, ಅದು ಅವಳನ್ನು ತೂರಾಡಿಸಿ, ಹೊತ್ತೊಯ್ಯುತ್ತಿತ್ತು. ಲಂಗದ ತುದಿಯನ್ನು ಮೇಲೆತ್ತಿಕೊಂಡು, ಜಗಲಿಯ ಮೇಲೆ ಕಾಲಿರಿಸಿ ಅವಳು ವಾಹನದ ಕೊನೆಯ ತನಕ ನಡೆದಳು. ಮೆಟ್ಟಿಲುಗಳ ಮೇಲೆ ಗಾಳಿಯ ಹೊಡೆತ ಭಯಂಕರವಾಗಿತ್ತು; ಆದರೆ ಬೋಗಿಗಳ ಮರೆಯಿಂದಾಗಿ ಜಗಲಿಯ ಮೇಲೆ ಅದರ ಆಟ ನಡೆಯುತ್ತಿರಲಿಲ್ಲ. ವಾಹನದ ಬಳಿ ನಿಂತುಕೊಂಡು, ದೀಪರಂಜಿತ ನಿಲ್ದಾಣದ ಜಗಲಿಯ ಮೇಲೆ ಕಣ್ಣಾಡಿಸುತ್ತಿದ್ದ ಅವಳು ನಿರ್ಮಲ ವಾಯುಸೇವನೆಯ ಆನಂದವನ್ನನುಭವಿಸುತ್ತಿದ್ದಳು.

೩೦

ಚಕ್ರಗಳ ನಡುವೆ ಸಿಳ್ಳೆ ಹಾಕುತ್ತ, ದೀಪಸ್ತಂಭಗಳನ್ನು ನಡುಗಿಸುತ್ತ, ನಿಲ್ದಾಣದ ಮೂಲೆ ಮೂಲೆಗಳಲ್ಲಿ ರಿಂಗಣಗುಣಿಯುತ್ತ ಚಂಡಮಾರುತ ರುದ್ರಭಯಂಕರವಾಗಿ ಅಟ್ಟಹಾಸಗೈಯುತ್ತಿತ್ತು. ಬೋಗಿಗಳ, ಕಂಬಗಳ, ಜನರ, ಕಣ್ಣಿಗೆ ಕಾಣುತ್ತಿದ್ದ ಪ್ರತಿಯೊಂದು ವಸ್ತುವಿನ ಒಮ್ಮಗ್ಗುಲಿಗೆ ಮಂಜು ಕವಿದುಕೊಂಡಿತ್ತು. ಮಂಜು ಒಟ್ಟೊಟ್ಟಾಗಿ, ದಟ್ಟವಾಗಿ ನುಗ್ಗುತ್ತಿತ್ತು. ನಡುನಡುವೆ ಅದು ತುಸುಸಮಯ ಶಾಂತವಾಗುತ್ತಿತ್ತು; ಆದರೆ ಪ್ರತಿಯೊಂದು ಪ್ರಶಾಂತ ಕ್ಷಣದ ಹಿಂದೆಯೇ ಅದು ಯಮ-ಭಯಂಕರವಾಗಿ ಲಗ್ಗೆ ಹಾಕುತ್ತಿತ್ತು. ಆಗದರ ಹೊಡೆತವನ್ನು ತಡೆದುಕೊಳ್ಳುವುದೆ ಕಷ್ಟವಾಗುತ್ತಿತ್ತು. ಏತನ್ಮಧ್ಯೆ ಜನ ಅತ್ತಿಂದಿತ್ತ ಇತ್ತಿಂದತ್ತ ಓಡಾಡುತ್ತಿದ್ದರು; ನಲ್ವಾತುಗಳಲ್ಲಿ ತೊಡಗುತ್ತಿದ್ದರು; ಅವರು ವೇದಿಕೆಯ ಮೇಲೆ ನಡೆಯುವಾಗ ಹಾಸಿದ್ದ ಹಲಗೆಗಳು ಕಿರುಗುಡುತ್ತಿದ್ದುವು; ನಿಲ್ದಾಣದ ಬಾಗಿಲುಗಳನ್ನು ಬಿಡುವಿಲ್ಲದೆ

ತೆರೆದು ಮುಚ್ಚಲಾಗುತ್ತಿತ್ತು. ಮುದುರಿಕೊಂಡಿದ್ದ ಮನುಷ್ಯನ ನೆರಳು ಅವಳ ಕಾಲುಗಳ ಮೇಲೆ ಜಾರಿಕೊಂಡು ಹೋಯಿತು. ಕಬ್ಬಿಣದ ಚಕ್ರಗಳ ಮೇಲೆ ಬೀಳು ತ್ತಿದ್ದ ಸುತ್ತಿಗೆಯ ಏಟು ಕೇಳಿಸುತ್ತಿತ್ತು. ಗಾಡಿಯ ಮತ್ತೊಂದು ಮಗ್ಗುಲಿನ ಚಂಡ ಮಾರುತದ ಅಂಧಕಾರದ ಗರ್ಭದಿಂದ ಕುಪಿತಧ್ವನಿಯೊಂದು 'ಆ ತಂತಿಯನ್ನಿಲ್ಲಿ ತಾ' ಎಂದು ಕೂಗಿತು. 'ಇಲ್ಲಿ, ಈ ಕಡೆ; ೨೮ನೆಯ ನಂಬರು' ಎಂಬುದಾಗಿ ಮತ್ತೊಂದು ಧ್ವನಿ ಅಬ್ಬರಿಸಿತು. ವಸ್ತ್ರಾಚ್ಛಾದಿತವೂ ಹಿಮಾವೃತವೂ ಆದ ಆಕೃತಿಗಳು ಜೋರು ಜೋರಾಗಿ ಓಡುತ್ತಿದ್ದುವು. ಮಿನುಗುಟ್ಟುತ್ತಿದ್ದ ಸಿಗರೇಟುಗಳನ್ನು ಬಾಯಿಗಳಲ್ಲಿ ಕಚ್ಚಿಕೊಂಡಿದ್ದ ಇಬ್ಬರು ವ್ಯಕ್ತಿಗಳು ಅವಳ ಬಳಿ ಹಾದುಹೋದರು. ಮತ್ತೊಮ್ಮೆ ಅವಳು ಹೊಸ ಗಾಳಿಯನ್ನು ನಿಡಿದಾಗಿ ಒಳಗೆಳೆದುಕೊಂಡಳು. ಮೆಟ್ಟಿಲುಗಳ ಕಂಬಿ ಗಳನ್ನು ಹಿಡಿದುಕೊಳ್ಳುವ ಸಲುವಾಗಿ ಅವಳು ತನ್ನ ಕೈಗಳನ್ನು ಗವಸಿನಿಂದ ಹೊರಗೆ ತೆಗೆದಳು; ಅವಳು ಸ್ವಸ್ಥಾನಕ್ಕೆ ಹಿಂದಿರುಗಲು ಯತ್ನಿಸುತ್ತಿರುವಷ್ಟರಲ್ಲಿ, ಸೈನಿಕ ನಿಲುವಂಗಿಯನ್ನು ಧರಿಸಿದ ಮತ್ತೊಬ್ಬ ಮನುಷ್ಯ ಅವಳ ಬಳಿ ಬಂದು, ಅವಳ ಮತ್ತು ಲಾಂದ್ರದ ಮಿನುಗು ಬೆಳಕಿನ ನಡುವೆ ನಿಂತುಕೊಂಡನು. ಕತ್ತೆತ್ತಿ ಅವಳವನನ್ನು ನೋಡಿದಳು; ಕೂಡಲೇ ಅವನಲ್ಲಿ ವ್ರಾನ್ಸ್ಕಿಯನ್ನು ಗುರುತಿಸಿದಳು. ಟೋಪಿಗೈಯ್ಯಾಗಿ ಅವನವಳಿಗೆ ನಮಸ್ಕರಿಸಿದನು; ಅವಳಿಗೇನಾದರೂ ಅಗತ್ಯವಿದೆಯೆ, ಯಾವ ರೀತಿ ಯಲ್ಲಾದರೂ ತಾನವಳಿಗೆ ಕೈಂಕರ್ಯ ಸಲ್ಲಿಸಬಹುದೆ ಎಂದವನು ಕೇಳಿದನು. ತುಸು ಹೊತ್ತು ಮೌನವಾಗಿಯೇ ಅವಳವನನ್ನು ನೋಡುತ್ತಿದ್ದಳು. ಅವನು ನೆರಳಿನಲ್ಲಿ ನಿಂತಿದ್ದರೂ ಅವನ ಮುಖ ಮತ್ತು ಕಣ್ಣುಗಳ ಭಾವವನ್ನವಳು ಗ್ರಹಿಸಿದಳು; ಗ್ರಹಿಸಿ ದಂತೆ ಭಾವಿಸಿಕೊಂಡಳು. ಹಿಂದಿನ ದಿನ ಅವಳ ಮನಸ್ಸನ್ನು ಉನ್ಮಾದಾವಸ್ಥೆಗೊಯ್ದಿದ್ದ ಗೌರವಾತ್ಮಕವಾದ ಹರ್ಷಪರವಶತೆ ಅವನ ಮುಖದ ಮೇಲೆ ಅಚ್ಚೊತ್ತಿದಂತಿತ್ತು. ತನ್ನ ಮಟ್ಟಿಗೆ ತಾನು ಸದಾ ಸಂಧಿಸುತ್ತಿದ್ದ ನೂರಾರು ಮಂದಿ ಏಕಪ್ರಕಾರದ ಯುವಕ ರಲ್ಲಿ ವ್ರಾನ್ಸ್ಕಿ ಒಬ್ಬನೆಂದೂ, ಅವನನ್ನು ಕುರಿತು ಎರಡನೆಯ ಸಲ ಆಲೋಚಿಸಲು ತನ್ನಿಂದ ಸಾಧ್ಯವಿಲ್ಲವೆಂದೂ ಕೆಲವು ದಿನಗಳಿಂದೀಚೆಗೆ ಹಲವು ಸಲ, ಕೇವಲ ಕೆಲವು ಕ್ಷಣಗಳ ಹಿಂದೆ ತಾನೆ ಅವಳು ತನ್ನಷ್ಟಕ್ಕೆ ತಾನು ಹೇಳಿಕೊಂಡಿದ್ದಳು. ಆದರೂ ಈಗ, ಅವನನ್ನು ಭೇಟಿ ಮಾಡಿದ ಮೊದಲ ಕ್ಷಣದಲ್ಲಿಯೇ ಹರ್ಷೋನ್ಮತ್ತತೆಯ ಹೆಮ್ಮೆ ಅವಳ ಮನಸ್ಸನ್ನೆಲ್ಲ ಆಕ್ರಮಿಸಿಕೊಂಡಿತು. ಅವನಲ್ಲಿ ಬಂದದ್ದೇಕೆಂದು ಕೇಳುವ ಅಗತ್ಯ ಅವಳಿ ಗಿರಲಿಲ್ಲ. ಅವಳೆಲ್ಲಿದ್ದರೆ ಅಲ್ಲಿಯೇ ತಾನಿರುವುದಾಗಿ ಅವನವಳಿಗೆ ಸ್ಪಷ್ಟಪಡಿಸಿದ್ದಂತೆ ಅವಳಿಗೆ ಭಾಸವಾಯಿತು.

'ನೀವೂ ಬರುತ್ತೀರೆಂದು ನಾನು ತಿಳಿದಿರಲಿಲ್ಲ. ನಿಮ್ಮ ಪ್ರಯಾಣದ ಉದ್ದೇಶ ವೇನು?' ಎಂದವಳು ಕಂಬಿಯನ್ನು ಹಿಡಿದುಕೊಂಡಿದ್ದ ಕೈಯನ್ನು ಕೆಳಗಿಳಿಸುತ್ತ ಪ್ರಶ್ನಿಸಿದಳು. ಅದಮ್ಯವಾದ ಆನಂದ ಮತ್ತು ಭಾವೋದ್ರೇಕಗಳು ಅವಳ ಮುಖದ ಮೇಲೆ ಮಿಂಚಿದುವು.

'ಏಕೆ?' ಎಂದವನು ಅವಳ ಕಣ್ಣುಗಳಲ್ಲಿ ಕಣ್ಣಿಟ್ಟು ಪುನರುಕ್ತಿಸಿದನು. 'ನೀವಿದ್ದಲ್ಲಿ ನಾನಿರಬೇಕೆಂಬ ಹಂಬಲದಿಂದ ನಾನು ಬರುತ್ತಿದ್ದೇನೆ. ಅನ್ಯೋಪಾಯವೇ ನನಗೆ ತಿಳಿಯದು' ಎಂದವನು ನುಡಿದನು.

ಅಷ್ಟರಲ್ಲಿ ಎಲ್ಲ ಅಡಚಣೆಗಳಿಂದ ಪಾರಾದಂತೆ ಗಾಳಿ ಮುನ್ನುಗ್ಗಿ ಬೋಗಿಗಳ ಮೇಲಣ ಚಾವಣಿಗಳ ಮಂಜನ್ನು ಚೆಲ್ಲಾಪಿಲ್ಲಿಗೊಳಿಸಿತು ; ಸಡಿಲಗೊಂಡಿದ್ದ ಲೋಹದ ಹಾಳೆಯೊಂದನ್ನು ರಟರಟಗೊಳಿಸಿತು ; ಮುಂಭಾಗದಲ್ಲಿದ್ದ ಎಂಜಿನ್ನಿನ ಒರಟು ಗರ್ಜನೆಯಿಂದ ಉಲ್ಲಾಸರಹಿತ ದುಃಖಮಯ ಪ್ರಲಾಪ ಹೊರಹೊಮ್ಮಿತು. ಈ ಭೀಕರ ಚಂಡಮಾರುತ ಎಂದಿಗಿಂತ ವೈಭವಪೂರ್ಣವಾಗಿದ್ದಂತೆ ಅವಳಿಗೆ ತೋರಿತು. ಅವಳ ಹೃದಯದಲ್ಲಿ ಗುಪ್ತವಾಗಿದ್ದ ಆಸೆಗೆ ಅವನು ನಾಲಗೆಯಾಗಿದ್ದನು. ಆದರೂ ಅವಳ ಮನಸ್ಸು ವಿಕಂಪಿಸಿತು. ಅವಳು ಉತ್ತರಿಸಲಿಲ್ಲ. ಆದರೆ ಅವಳ ಅಂತರಂಗದಲ್ಲಿ ನಡೆಯುತ್ತಿದ್ದ ಸಂಘರ್ಷವನ್ನು ಅವಳ ಮುಖಭಾವದಿಂದ ಗ್ರಹಿಸಿದನು.

'ನನ್ನ ಮಾತು ನಿಮಗೆ ಹಿಡಿಸದಿದ್ದರೆ ಮನ್ನಿಸಿ' ಎಂದವನು ದೈನ್ಯದಿಂದ ಕ್ಷಮೆ ಯಾಚಿಸಿದನು.

ಅವನ ಮಾತಿನಲ್ಲಿ ಸೌಜನ್ಯವಿತ್ತು ; ದೃಢಸಂಕಲ್ಪವಿತ್ತು ; ಅವಳು ಕೂಡಲೇ ಉತ್ತರಿಸಲಾಗಲಿಲ್ಲ.

'ನೀವು ಹಾಗೆ ಹೇಳಿದ್ದೇ ತಪ್ಪು. ನೀವು ಸಜ್ಜನರಾದ ಪಕ್ಷದಲ್ಲಿ ನೀವು ಹೇಳಿದ್ದನ್ನೆಲ್ಲ ಮರೆತುಬಿಡಬೇಕೆಂದು ಪ್ರಾರ್ಥಿಸುತ್ತೇನೆ. ನಾನು ಸಹ ಅದನ್ನೆಲ್ಲ ಮರೆತು ಬಿಡುತ್ತೇನೆ' ಎಂದವಳು ಕೊನೆಗೆ ಉಸುರಿದಳು.

'ನೀವು ಹೇಳಿದ ಒಂದೊಂದು ಮಾತನ್ನೂ, ನಿಮ್ಮ ಒಂದೊಂದು ಅಂಗಭಂಗಿಯನ್ನೂ ನಾನು ಮರೆಯಲಾರೆ.'

'ಸಾಕು, ಸಾಕುಮಾಡಿ !' ಎಂದವಳು ಮುಖದಲ್ಲಿ ಕಠೋರಭಾವವನ್ನು ಪ್ರದರ್ಶಿಸಲು ವ್ಯರ್ಥವಾಗಿ ಪ್ರಯತ್ನಿಸುತ್ತ ಕೂಗಿಕೊಂಡಳು. ವ್ರಾನ್ಸ್ಕಿ ಅತ್ಯಂತ ಲೋಭದಿಂದ ಅವಳ ಮುಖವನ್ನೇ ಈಕ್ಷಿಸುತ್ತಿದ್ದನು. ಕೊರೆಯುವ ಕಂಬಿಯನ್ನು ಹಿಡಿದುಕೊಂಡು ಅವಳು ಮೆಟ್ಟಿಲುಗಳನ್ನೇರಿ, ಸರಸರನೆ ಓಣಿಯೊಳಗೆ ನಡೆದಳು. ಆ ಚಿಕ್ಕ ಓಣಿಯಲ್ಲವಳು ನಿಂತುಕೊಂಡು, ಹಿಂದೆ ನಡೆದದ್ದನ್ನೆಲ್ಲ ತನ್ನ ಮನಸ್ಸಿನಲ್ಲಿ ಮೆಲುಕು ಹಾಕುತ್ತಿದ್ದಳು. ತಾನಾಗಲಿ, ಅವನಾಗಲಿ ಆಡಿದ್ದ ಮಾತುಗಳನ್ನು ಜ್ಞಾಪಿಸಿಕೊಳ್ಳದೆಯೆ, ಈ ಸಂಕ್ಷಿಪ್ತ ಸಂಭಾಷಣೆ ತಮ್ಮನ್ನು ಭಯಂಕರ ರೀತಿಯಲ್ಲಿ ಹತ್ತಿರಕ್ಕೆ ತಂದಿತ್ತೆಂದವಳು ಅಂತಃಪ್ರೇರಣೆಯಿಂದ ಭಾವಿಸಿದಳು. ಇದರಿಂದಾಗಿ ಅವಳು ಏಕಕಾಲದಲ್ಲಿ ಭಯಸಂತೋಷಗಳಿಗೊಳಗಾದಳು. ತನ್ನ ಬೋಗಿಯೊಳಗೆ ಹೋಗಿ, ಸ್ವಸ್ಥಾನದಲ್ಲಿ ಕುಳಿತುಕೊಳ್ಳುವ ಮುನ್ನ ಅವಳಲ್ಲಿ ಕೆಲವು ಕ್ಷಣ ನಿಂತಳು. ಇಡೀ ದಿನ ತಾನನುಭವಿಸಿದ ಪ್ರಯಾಸ ಮರುಕೊಳಿಸಿತು, ವೆಗ್ಗಳಿಸಿತು ; ಅದು ವಿಷಮಾವಸ್ಥೆಯನ್ನು ಮುಟ್ಟಿದಾಗ ಅವಳು ಅತೀವ ಉದ್ವೇಗಕ್ಕೊಳಗಾದಳು ; ಆ ಉದ್ವೇಗದಿಂದಾಗಿ ತನ್ನ ದೇಹದೊಳಗೆ ವ್ಯಾಘಾತ ವುಂಟಾಗಬಹುದೆಂದವಳು ಹೆದರಿದಳು. ಇಡೀ ರಾತ್ರಿ ಅವಳು ನಿದ್ರಿಸಲಿಲ್ಲ. ಆದರೆ ಅವಳ ಮನಸ್ಸನ್ನು ತುಂಬಿಕೊಂಡಿದ್ದ ತ್ರಾಸ ಹಾಗೂ ಕಲ್ಪನೆಗಳು ನಿರ್ವಿಣ್ಣವಾಗಿರಲಿಲ್ಲ, ಅಥವಾ ಅಹಿತವಾಗಿರಲಿಲ್ಲ ; ಅದಕ್ಕೆ ಪ್ರತಿಯಾಗಿ, ಅವು ಸಂತೋಷಪ್ರದವಾಗಿದ್ದುವು, ಜ್ವಲಂತವಾಗಿದ್ದುವು ಹಾಗೂ ಉದ್ದೀಪನಕಾರಿಯಾಗಿದ್ದುವು. ಪ್ರಾತಃಕಾಲದ ಹೊತ್ತಿಗೆ ಕುರ್ಚಿಯಲ್ಲೊರಗಿಕೊಂಡಿದ್ದ ಅವಳಿಗೆ ಜೊಂಪು ಹತ್ತಿತು ; ಅವಳು ಎಚ್ಚರಗೊಂಡಾಗ,

ಎಲ್ಲವೂ ಬೆಳ್ಳಂಬೆಳಗಾಗಿತ್ತು, ಉಲ್ಲಾಸಮಯವಾಗಿತ್ತು; ರೈಲು ಸೆಂಟ್ ಪೀಟರ್ಸ್‌ಬರ್ಗ್ ನಗರವನ್ನು ಸಮೀಪಿಸುತ್ತಿತ್ತು. ಅವಳು ಒಡನೆಯೆ ತನ್ನ ಮನೆ, ಗಂಡ ಮತ್ತು ಮಗನ ಚಿಂತೆಯಲ್ಲಿ ಮಗ್ನಳಾದಳು; ಆ ದಿನದ ಮತ್ತು ಮುಂಬರುವ ದಿನಗಳ ಕರ್ತವ್ಯ ಭಾರಗಳ ಕಡೆಗೆ ಅವಳ ಗಮನ ಹರಿಯಿತು.

ಸೆಂಟ್ ಪೀಟರ್ಸ್‌ಬರ್ಗ್‌ನಲ್ಲಿ ರೈಲು ನಿಂತು, ಗಾಡಿಯಿಂದಿಳಿದಾಗ ಅವಳ ದೃಷ್ಟಿಯನ್ನು ಸೆಳೆದ ಮೊದಲ ಮುಖ ಅವಳ ಗಂಡನದು. 'ಓ, ದೇವರೆ! ಇವರ ಕಿವಿಗಳಿಗೇನಾಗಿದೆ?' ಎಂದವಳು ಅವನ ಉತ್ಸಾಹಶೂನ್ಯ ಶಾಂತಸ್ವಭಾವದ ಪ್ರಭಾವಾನ್ವಿತ ಮೂರ್ತಿಯನ್ನು ಕಂಡಾಗ, ಅದರಲ್ಲಿಯೂ ಅವನ ದುಂಡುಟೋಪಿಯ ಅಂಚಿಗೆ ಆಸರೆಯಂತಿದ್ದ ಮೇಲ್ಬದಿಗಳುಳ್ಳ ಕಿವಿಗಳ ಮಾಟ ಅವಳ ಚಿತ್ತವನ್ನಾಕರ್ಷಿಸಿದಾಗ, ನುಡಿದಳು. ಅವಳು ಕಣ್ಣಿಗೆ ಬಿದ್ದ ಕೂಡಲೇ ಅವನವಳ ಕಡೆಗೆ ಸರಿದನು. ಅವನ ತುಟಿಗಳ ಮೇಲೆ ವಾಡಿಕೆಯ ವಿಡಂಬನಾತ್ಮಕ ಮಂದಹಾಸ ಮಿನುಗುತ್ತಿತ್ತು; ಅವನ ಬಳಲಿದ ಹೆಗ್ಗಣ್ಣುಗಳು ಅವಳಲ್ಲಿಯೇ ನಾಟಿದ್ದುವು. ಅವನ ಆಯಾಸದ ನಿಶ್ಚಲನೇತ್ರಗಳನ್ನು ನೋಡುತ್ತಿದ್ದಂತೆ ಅಹಿತಕರವಾದ ಭಾವ ಅವಳ ಹೃದಯವನ್ನಾವರಿಸಿಕೊಂಡಿತು; ಭಿನ್ನ ಭಾವಭಂಗಿಯಲ್ಲಿ ಅವನನ್ನು ನೋಡಲು ನಿರೀಕ್ಷಿಸಿಕೊಂಡಿದ್ದಳೇನೊ ಎನಿಸುತ್ತಿತ್ತು. ಆದರೆ ಅವನನ್ನವಳು ಸಂಧಿಸಿದಾಗ ಅಸಂತೃಪ್ತಿಯ ಭಾವನೆ ಅವಳ ಹೃದಯದಲ್ಲಿ ಹುದುಗಿತ್ತು. ವಂಚನೆಯ ಪ್ರತೀಕವಂತಿದ್ದ, ತೀರ ಹಳೆಯ ಸುಪರಿಚಿತ ಭಾವನೆಯದು. ತನ್ನ ಗಂಡನೊಡನಿದ್ದಾಗಲೆಲ್ಲ ಆ ಭಾವನೆ ಸದಾ ಅವಳಲ್ಲಿ ಜಾಗೃತವಾಗಿರುತ್ತಿತ್ತು; ಆದರೆ ಮೊದಮೊದಲು ಅವಳದನ್ನು ನಿರ್ಲಕ್ಷಿಸಿದ್ದಳು; ಈಗಂತು ಅದರರಿವು ಕಟುವಾಗಿ, ಯಾತನಾಮಯವಾಗಿ ಅವಳಿಗಾಗುತ್ತಿತ್ತು.

'ಇಗೋ ನೋಡು. ನಿನ್ನ ಪ್ರೀತಿಯ ಪತಿ—ವಿವಾಹದ ದಿನವಂದು ಎಷ್ಟು ಪ್ರೀತಿಯಿತ್ತೋ ಅಷ್ಟೇ ಪ್ರೀತಿಯುಳ್ಳ ಈ ನಿನ್ನ ಕಾಂತ—ನಿನ್ನನ್ನು ನೋಡುವ ಕಾತರದಲ್ಲಿದ್ದಾನೆ' ಎಂದವನು ನಿಧಾನವಾಗಿ ಮೆಲ್ದನಿಯಲ್ಲಿ, ತನ್ನ ಮಡದಿಯೊಡನಿದ್ದಾಗ ಸಾಮಾನ್ಯವಾಗಿ ಯಾವಾಗಲೂ ಬಳಸುತ್ತಿದ್ದ ಸ್ವರದಲ್ಲಿ, ಅಂಥ ಸಂಗತಿಗಳನ್ನು ಅತ್ಯುತ್ಸಾಹದಿಂದ ಪ್ರಕಟಪಡಿಸುವ ಜನರನ್ನು ವಿಡಂಬಿಸುವ ಧಾಟಿಯಲ್ಲಿ ನುಡಿದನು.

'ಸರ್ಜ ಚೆನ್ನಾಗಿದ್ದಾನೆಯೆ?' ಎಂದವಳು ಕೇಳಿದಳು.

'ನನ್ನ ಕಟ್ಟಾಸಕ್ತಿಗೆ ನಾನು ಪಡೆಯುವ ಪ್ರತಿಫಲ ಇಷ್ಟೇತಾನೆ?' ಎಂದವನು ಪ್ರಶ್ನಿಸಿದನು. 'ಓ, ಅವನೆ? ಅವನು ಚೆನ್ನಾಗಿದ್ದಾನೆ.'

೩೧

ಆ ರಾತ್ರಿ ವ್ರಾನ್ಸ್ಕಿ ಮಲಗಲು ಸಹ ಪ್ರಯತ್ನಿಸಲಿಲ್ಲ. ಒಮ್ಮೆ ಎದುರು ದಿಕ್ಕಿನಲ್ಲಿ ದುರದುರನೆ ನೋಡುತ್ತ, ಮತ್ತೊಮ್ಮೆ ಹೋಗುವ, ಬರುವ ಜನರ ಕಡೆಗೆ ಕಣ್ಣು ಹಾಯಿಸುತ್ತ ಅವನು ತನ್ನ ತೋಳ್ಕುರ್ಚಿಯಲ್ಲಿ ಕುಳಿತಿದ್ದನು. ಅವನು ಮುಂಚಿನ ಕಾಲದಲ್ಲಿ ತನ್ನ ನಿಸ್ಸಂದಿಗ್ಧವಾದ ಪ್ರಶಾಂತ ಸ್ವಭಾವದಿಂದ ಅಪರಿಚಿತರನ್ನು ವಿಸ್ಮಯಗೊಳಿಸಿ ಕೆರಳಿಸಿದ್ದರೆ, ಈಗ ಎಂದಿಗಿಂತ ಗರ್ವಿಷ್ಠನಾಗಿ ಸಂತುಷ್ಟಚಿತ್ತನಾಗಿ ತೋರು

ತ್ತಿದ್ದನು. ವಸ್ತುಗಳಿರಬಹುದೇನೋ ಎನ್ನುವಂತೆ ಅವನು ಜನರನ್ನು ನೋಡುತ್ತಿದ್ದನು. ಎದುರಿಗೆ ಕುಳಿತಿದ್ದ ಸೂಕ್ಷ್ಮಪ್ರಕೃತಿಯ ಯುವಕ, ಜಿಲ್ಲಾ ಕಚೇರಿಯ ಕರಣಿಕ ಅವನ ಆ ನೋಟದಿಂದಾಗಿ ವ್ರಾನ್‌ಸ್ಕಿಯನ್ನು ದ್ವೇಷಿಸುತ್ತಿದ್ದನು. ತನಗೊಂದಿಷ್ಟು ಬೆಳಕು ಬಿಡುವಂತೆ ಯುವಕ ಅವನನ್ನು ಕೇಳಿದನು; ಅವನೊಡನೆ ಮಾತುಕತೆ ಆರಂಭಿಸಲು ಪ್ರಯತ್ನಿಸಿದನು; ಯುವಕನಾದ ತಾನು ಮನುಷ್ಯನೇ ಹೊರತು ವಸ್ತು ವಲ್ಲವೆಂಬುದನ್ನು ತೋರಿಸುವ ಸಲುವಾಗಿ ಅವನನ್ನು ತಿವಿದನು. ಲಾಂದ್ರದ ಕಡೆಗೆಂತು ನೋಡುತ್ತಿದ್ದನೋ ಅಂತೆಯೇ ವ್ರಾನ್‌ಸ್ಕಿ ಅವನ ಕಡೆಗೂ ನೋಡುತ್ತಿದ್ದನು. ಯುವಕನ ಮುಖ ಸೊಟ್ಟಗಾಯಿತು; ತಾನೊಬ್ಬ ಮನುಷ್ಯಪ್ರಾಣಿಯೆಂದು ಗುರುತಿಸಲಾಗದ ವ್ರಾನ್‌ಸ್ಕಿಯ ಹಟಮಾರಿತನದ ಒತ್ತಡದಿಂದಾಗಿ ಯುವಕನ ಸಂಯಮ ಸಡಿಲಗೊಂಡಿತು.

ವ್ರಾನ್‌ಸ್ಕಿಯ ಕಣ್ಣಿಗೆ ಯಾರೂ ಬೀಳುತ್ತಿರಲಿಲ್ಲ; ಯಾವುದೂ ಕಾಣಿಸುತ್ತಿರಲಿಲ್ಲ. ತಾನೊಬ್ಬ ರಾಜಕುಮಾರನೆಂದವನು ಭಾವಿಸಿಕೊಂಡನು. ಅನ್ನಾಳ ಮೇಲೆ ತಾನು ಪ್ರಭಾವ ಬೀರಿದ್ದೇನೆಂಬ ನಂಬಿಕೆ ಅಂಥ ಭಾವನೆಗೆ ಕಾರಣವಾಗಿರಲಿಲ್ಲ; ಅಂಥ ನಂಬಿಕೆ ಅವನಲ್ಲಿನ್ನೂ ಉದಯಿಸಿರಲಿಲ್ಲ; ಆದರೆ ಅವಳವನ ಮೇಲೆ ಬೀರಿದ್ದ ಪ್ರಭಾವ ಅವನ ಹೆಮ್ಮೆಯನ್ನು ಪುಷ್ಟಿಗೊಳಿಸಿತ್ತಲ್ಲದೆ, ಅವನಲ್ಲಿ ಹರ್ಷಪುಳಕವನ್ನುಂಟುಮಾಡಿತ್ತು.

ಅದರ ಪರಿಣಾಮದ ಅರಿವು ಅವನಿಗಿರಲಿಲ್ಲ; ಅದನ್ನವನು ಮನಸ್ಸಿಗಂಟಿಸಿ ಕೊಂಡಿರಲಿಲ್ಲ. ಆತನಕ ಅನಿಯಂತ್ರಿತವಾಗಿ ಪೋಲಾಗಿದ್ದ ತನ್ನ ಸರ್ವಶಕ್ತಿಗಳು ಒಂದೇ ಕಡೆ ಕೇಂದ್ರೀಕೃತವಾಗಿದ್ದುವೆಂದೂ ಏಕಮಾತ್ರ ದಿವ್ಯಾದರ್ಶದ ಕಡೆಗೆ ಅವು ಅಪಾರ ಸಾಮರ್ಥ್ಯದಿಂದ ವಿನಿಯೋಗಗೊಂಡಿದ್ದುವೆಂದೂ ಅವನು ಅರಿತಿದ್ದನು. ಇದರಿಂದವನಿಗೆ ಹರ್ಷವಾಯಿತು. ತಾನವಳಿಗೆ ಸತ್ಯವನ್ನು ನುಡಿದಿದ್ದ ವಿಷಯ ತಿಳಿದಿತ್ತು. ಅವಳಿದ್ದಲ್ಲಿಯೇ ತಾನಿರಬೇಕೆಂಬ ಉದ್ದೇಶದಿಂದ ಈ ಪ್ರವಾಸವನ್ನು ಕೈಗೊಂಡಿದ್ದನು. ಅವಳ ರೂಪವನ್ನೆ ನೋಡುವುದರಲ್ಲಿ, ಅವಳ ಸೊಲ್ಲನ್ನೆ ಕೇಳುವುದರಲ್ಲಿ ತನ್ನ ಜೀವಾನಂದ ಹಾಗೂ ಅದರ ಪೂರ್ಣಾರ್ಥ ಹುದುಗಿದೆಯೆಂದವನು ತಿಳಿದಿದ್ದನು. ಖನಿಜ ಜಲವನ್ನು ಕುಡಿಯುವ ಸಲುವಾಗಿ ಅವನು ಬೊಲೊಗೋಯೆಯಲ್ಲಿ ರೈಲಿಂದಿಳಿದು, ಅನ್ನಾಳನ್ನು ನೋಡಿದಾಗ, ತನ್ನ ಮನಸ್ಸಿನಲ್ಲಿ ಹುದುಗಿದ್ದ ಸಂಗತಿಯನ್ನು ಮೊದಲೇ ಹೇಳಿಬಿಡ ಬೇಕಾದ್ದು ಅನಿವಾರ್ಯವಾಯಿತು. ಅದನ್ನು ಹೇಳಿಬಿಟ್ಟದ್ದರಿಂದ ಅವನಿಗೆ ಸಂತೋಷ ವಾಯಿತು. ತನ್ನ ಮನಸ್ಸವಳಿಗೆ ಗೊತ್ತಾದದ್ದರಿಂದ, ಅವಳು ಸಹ ಆ ಬಗ್ಗೆ ಯೋಚಿಸುತ್ತಾ ಳೆಂದವನು ಬಗೆದನು. ಇಡೀ ರಾತ್ರಿ ಅವನು ಮಲಗಲಿಲ್ಲ. ತನ್ನ ಬೋಗಿಗೆ ಮರಳಿದಾಗ, ಅವಳು ಹೇಳಿದ್ದನ್ನೆಲ್ಲ, ಅವಳನ್ನು ಸಂಧಿಸಿದ ಸಂದರ್ಭಗಳನ್ನೆಲ್ಲ ಮತ್ತೆ ಮತ್ತೆ ಮೆಲುಕು ಹಾಕುತ್ತಿದ್ದನು; ಸಂಭವನೀಯ ಭವಿಷ್ಯದ ದೃಶ್ಯಗಳೆಲ್ಲ ಅವನ ಕಲ್ಪನೆಯಲ್ಲಿ ಮೊಗದೋರಿದಾಗ ಅವನ ನಾಡಿಯ ಮಿಡಿತ ನಿಂತುಹೋದಂತಾಯಿತು.

ರಾತ್ರಿ ನಿದ್ದೆ ಇರದಿದ್ದರೂ, ಪೀಟರ್ಸ್‌ಬರ್ಗ್‌ನಲ್ಲಿ ರೈಲಿಳಿದಾಗ, ಅದೇತಾನೆ ತಣ್ಣೀರು ಸ್ನಾನ ಮಾಡಿದವನಂತೆ ಚೈತನ್ಯೋಲ್ಲಾಸಗಳು ಅವನ ಮೈಮನಗಳನ್ನೆಲ್ಲ ತುಂಬಿ ಕೊಂಡು ವಿರಾಜಿಸಿದನು. ಅವಳಿಗಾಗಿ ಕಾಯುತ್ತ ತನ್ನ ಬೋಗಿಯ ಪಕ್ಕದಲ್ಲವನು ನಿಂತನು. 'ಅವಳನ್ನು ಮತ್ತೊಮ್ಮೆ ನೋಡುತ್ತೇನೆ' ಎಂದವನು ಅಪ್ರಜ್ಞಾಪೂರ್ವಕ

ವಾಗಿ ಮಂದಹಾಸ ಸೂಸುತ್ತ, ತನ್ನಷ್ಟಕ್ಕೆ ತಾನಂದುಕೊಂಡನು. 'ಅವಳ ಮುಖವನ್ನು ಮತ್ತು ನಡಗೆಯನ್ನು ನೋಡುತ್ತೇನೆ; ಪ್ರಾಯಶಃ ಅವಳೇನಾದರೂ ಹೇಳಬಹುದು; ತಲೆ ತಿರುಗಿಸಿ, ನನ್ನ ಕಡೆಗೆ ಕಣ್ಣು ಮಿಟುಕಿಸಬಹುದು; ಜತೆಗೆ ಮುಗುಳುನಗೆ ಸೂಸಬಹುದು.' ಆದರೆ ಅವಳು ಕಣ್ಣಿಗೆ ಬೀಳುವ ಮುನ್ನ ಅವಳ ಗಂಡ ಅವನ ಕಣ್ಣಿಗೆ ಬಿದ್ದನು. ನಿಲ್ದಾಣದ ಅಧಿಕಾರಿ ಅವಳ ಗಂಡನನ್ನು ಗೌರವಪೂರ್ವಕವಾಗಿ ಜನರ ಗುಂಪಿನಿಂದ ಹೊರಗೆ ಕರೆತರುತ್ತಿದ್ದನು. 'ಅಹ! ಹೌದು! ಅವಳ ಪತಿ ಅಹುದು!' ಅವಳ ಪತಿ ಅವಳಿಗಂಟಿಕೊಂಡಿರುವ ವ್ಯಕ್ತಿಯೆಂಬ ಸಂಗತಿ ವ್ರಾಂಸ್ಕಿಗೀಗ ಮೊತ್ತಮೊದಲ ಬಾರಿಗೆ ಅರಿವಾಯಿತು. ಅವಳಿಗೊಬ್ಬ ಗಂಡನಿದ್ದಾನೆಂಬ ವಿಷಯ ಅವನಿಗೆ ತಿಳಿದಿತ್ತು; ಆದರೆ ಅವನ ಅಸ್ತಿತ್ವದಲ್ಲವನಿಗೆ ನಂಬಿಕೆಯಿರಲಿಲ್ಲ; ಅವನನ್ನು ನೋಡಿದಾಗ ಮಾತ್ರ, ಅವನ ತಲೆ ಭುಜಗಳನ್ನು ಮತ್ತು ಕಪ್ಪು ಷರಾಯಿ ಧರಿಸಿದ ಕಾಲುಗಳನ್ನು ಕಂಡಾಗ ಮಾತ್ರ ವ್ರಾಂಸ್ಕಿಗೆ ನಂಬಿಕೆ ಹುಟ್ಟಿತು; ತನಗೆ ಸೇರಿದ್ದೆಂಬ ಗತ್ತಿನಿಂದ ಈ ಗಂಡ ನಿಸ್ಸಂಕೋಚವಾಗಿ ಅವಳ ತೋಳನ್ನು ಸೆಳೆದುಕೊಂಡದ್ದನ್ನು ನೋಡಿದಾಗ, ಆ ನಂಬಿಕೆ ದೃಢವಾಯಿತು.

ನವೀನ ಪೀಟರ್ಸ್‌ಬರ್ಗ್ ಲಕ್ಷಣದ, ಸ್ಥಿರಚಿತ್ತದ, ಆತ್ಮಪ್ರತ್ಯಯದ, ತುಸು ಬಾಗಿದ, ದುಂಡನೆಯ ಟೋಪಿ ಧರಿಸಿದ ಕರೆನಿನ್‌ನನ್ನು ನೋಡಿದಾಗ ಅವನ ಅಸ್ತಿತ್ವದ ಬಗ್ಗೆ ವ್ರಾಂಸ್ಕಿಗೆ ನಂಬಿಕೆ ಮೂಡಿತು; ದಾಹದಿಂದ ಬೆಂದು ಬಸವಳಿದು, ಕೊನೆಗೊಂದು ಚಿಲುಮೆಯನ್ನು ತಲುಪಿದಾಗ, ತನಗಿಂತ ಮುಂಚೆಯೇ ನಾಯಿಯೊ, ಕುರಿಯೊ ಅಥವಾ ಹಂದಿಯೊ ನೀರನ್ನು ಬಗ್ಗಡಗೊಳಿಸಿದ್ದನ್ನು ಕಂಡ ಮನುಷ್ಯ ಉಮ್ಮಳಗೊಳ್ಳುವಂತೆ ಅವನು ಉದ್ವೇಗಕ್ಕೊಳಗಾದನು. ಕರೆನಿನ್‌ನ ನಡತೆಯ ರೀತಿ, ಹೆಜ್ಜೆ ಹೆಜ್ಜೆಗೂ ಪ್ರದರ್ಶನಗೊಳ್ಳುತ್ತಿದ್ದ ಅವನ ಸೊಂಟದ ತಿರುಚು, ಅವನ ಚಪ್ಪಟೆ ಪಾದಗಳು ವ್ರಾಂಸ್ಕಿಯ ಜಿಗುಪ್ಸೆಗೆ ಕಾರಣವಾಗಿದ್ದುವು. ಅವಳನ್ನು ಪ್ರೀತಿಸಬಹುದಾದ ಪ್ರಶ್ನಾತೀತವಾದ ಹಕ್ಕು ತನಗೊಬ್ಬನಿಗೆ ಮಾತ್ರ ಮೀಸಲೆಂದವನು ಬಗೆದನು. ಅವಳಾದರೊ ಒಂದೇ ತೆರನ ವ್ಯಕ್ತಿಯಾಗಿದ್ದಳು; ಅವಳ ಅವಲೋಕನ ಏಕಪ್ರಕಾರವಾಗಿ ಅವನ ಮೇಲೆ ಅದಮ್ಯ ಪ್ರಭಾವವನ್ನು ಬೀರಿತ್ತು; ಅವನ ಅಂಗಾಂಗಗಳಲ್ಲಿ ನವಚೈತನ್ಯವನ್ನುಕ್ಕಿಸಿತ್ತು; ಅವನನ್ನು ಮರುಳುಗೊಳಿಸಿತ್ತು; ಅವನ ಹೃದಯದ ಬಟ್ಟಲನ್ನು ಆನಂದಾಮೃತದಿಂದ ತುಂಬಿತ್ತು. ಸಾಮಾನುಗಳನ್ನು ತೆಗೆದುಕೊಂಡು ಮನೆಗೆ ಹೋಗುವಂತೆ ಎರಡನೆಯ ದರ್ಜೆಯ ಬೋಗಿಯಿಂದ ಓಡೋಡಿ ಬಂದ ತನ್ನ ಜರ್ಮನ್ ಅಂಗಸೇವಕನಿಗವನು ಆಜ್ಞೆ ಮಾಡಿದನು. ಅವನು ತಾನಾಗಿಯೇ ಅವಳ ಬಳಿಗೆ ಹೋದನು. ಪತಿಪತಿಯರ ಸಮಾಗಮವನ್ನವನು ನೋಡಿದನು; ತುಸು ಸ್ವಾಭಿಮಾನದಿಂದವಳು ಗಂಡನೊಡನೆ ಮಾತಾಡಿದ ಭಂಗಿಯನ್ನವನು ಪ್ರೇಮಿಯ ಅಂತಃಸ್ಫೂರ್ತಿಯಿಂದ ಮನಗಂಡನು. 'ಇಲ್ಲ, ಅವಳವನನ್ನು ಪ್ರೀತಿಸುತ್ತಿಲ್ಲ; ಅವಳವನನ್ನು ಪ್ರೀತಿಸುವ ಸಾಧ್ಯತೆಯೇ ಇಲ್ಲ' ಎಂದವನು ತನ್ನೊಳಗೆ ತಾನಂದುಕೊಂಡನು.

ಹಿಂದಿನಿಂದ ತಾನವಳನ್ನು ಸಮೀಪಿಸುತ್ತಿದ್ದಂತೆ, ತನ್ನ ಸಾನ್ನಿಧ್ಯದ ಪ್ರಜ್ಞೆ ಅವಳಿಗಿತ್ತೆಂದೂ, ಹಿಂದಕ್ಕೊಮ್ಮೆ ತಿರುಗಿ ಹತ್ತಿರ ಬಂದವನು ಅವನೆಯೇ ಎಂದು

ಖಾತರಿಪಡಿಸಿಕೊಂಡು, ತನ್ನ ಗಂಡನ ಕಡೆಗವಳು ಹೊರಳಿದುದನ್ನು ವ್ರಾನ್‌ಸ್ಕಿ ಹರ್ಷ ಪುಲಕಿತನಾಗಿ ಗಮನಿಸಿದನು.

'ರಾತ್ರಿ ಸುಖಕರವಾಗಿತ್ತೆ?' ಎಂದು ವ್ರಾನ್‌ಸ್ಕಿ ಅವಳನ್ನು ಕೇಳುತ್ತ, ಸತಿಪತಿಯರಿಬ್ಬರಿಗೂ ಒಟ್ಟಿಗೆ ನಮಸ್ಕಾರ ಮಾಡಿದನು. ತಾನು ಸಲ್ಲಿಸಿದ ನಮಸ್ಕಾರದ ಸ್ವೀಕಾರ ಅಥವಾ ಅಸ್ವೀಕಾರ, ಹಾಗೂ ತನ್ನನ್ನು ಗುರುತಿಸುವ ಅಥವಾ ಗುರುತಿಸದಿರುವ ವಿಷಯ ಕರೆನಿನ್‌ನ ಇಚ್ಛೆಗೆ ಬಿಟ್ಟದ್ದೆಂದವನು ಯೋಚಿಸಿದನು.

'ತುಂಬ ಹಿತವಾಗಿತ್ತು; ಧನ್ಯವಾದ' ಎಂದವಳು ಉತ್ತರಿಸಿದಳು.

ಅವಳು ಬಳಲಿದಂತೆ ಕಂಡಳು. ಅವಳ ಮಂದಹಾಸದಲ್ಲಾಗಲಿ, ನೇತ್ರಗಳಲ್ಲಾಗಲಿ ಸಾಮಾನ್ಯವಾಗಿ ಇಣುಕುತ್ತಿದ್ದ ಚೈತನ್ಯೋಲ್ಲಾಸ ಅವಳ ಮುಖದಲ್ಲಿ ಕಾಣಲಿಲ್ಲ; ಅವರಿಬ್ಬರ ಕಣ್ಣು ಪರಸ್ಪರ ಸಂಧಿಸಿದಾಗ, ಏನೋ ಒಂದು ಹೊಳಪು ಕ್ಷಣಕಾಲ ಅವನ ಕಣ್ಣುಗಳಲ್ಲಿ ಮಿಂಚಿದಂತಾಯಿತು; ಆ ಮಿಂಚು ತತ್‌ಕ್ಷಣವೆ ನಂದಿಹೋದರೂ, ಅದೊಂದು ಸುಖದೊರತೆಯ ಅಪೂರ್ವಕ್ಷಣವಾಗಿತ್ತು. ತನ್ನ ಗಂಡನಿಗೆ ವ್ರಾನ್‌ಸ್ಕಿಯ ಪರಿಚಯವಿತ್ತೇ ಇಲ್ಲವೇ ಎಂಬುದನ್ನು ತಿಳಿಯುವ ಸಲುವಾಗಿ ಅವಳು ಅವನ ಕಡೆಗೆ ಕುತೂಹಲ ದೃಷ್ಟಿ ಹರಿಸಿದಳು. ಅವನಾರೆಂಬುದನ್ನು ಜ್ಞಾಪಿಸಿಕೊಳ್ಳಲು ಪ್ರಯತ್ನಿಸುತ್ತ ಕರೆನಿನ್ ವ್ರಾನ್‌ಸ್ಕಿಯ ಕಡೆಗೆ ಅಸಮಾಧಾನದಿಂದ ಕಣ್ಣು ಹಾಯಿಸಿದನು. ಅದೇ ಕ್ಷಣದಲ್ಲಿ ವ್ರಾನ್‌ಸ್ಕಿಯ ಚಿತ್ತಸ್ವಾಸ್ಥ್ಯ ಮತ್ತು ಪ್ರತಿಷ್ಠೆಗಳು ಕಲ್ಲನ್ನು ತಗುಲಿದ ಕುಡುಗತ್ತಿಯಂತೆ ಕರೆನಿನ್‌ನ ಔದಾಸೀನ್ಯ ಬೆರೆತ ಸ್ವಾಭಿಮಾನದ ಮೇಲೆರಗಿದುವು.

'ಕೌಂಟ್ ವ್ರಾನ್‌ಸ್ಕಿ' ಎಂದು ಅನ್ನಾ ನುಡಿದಳು.

'ಓ, ಎಂದೋ ನೋಡಿದ ಹಾಗಿದೆ' ಎಂದು ಕರೆನಿನ್ ಕೈಯನ್ನು ಮುಂದೆ ಚಾಚಿ ಔದಾಸೀನ್ಯದಿಂದ ಉಸುರಿದನು. 'ತಾಯಿಯೊಡನೆ ಹೋದೆ; ಮಗನೊಡನೆ ಮರಳಿದೆ' ಎಂದವನು ಪ್ರತಿಯೊಂದು ಪದವೂ ತಾನು ನೀಡುತ್ತಿದ್ದ ಅಪೂರ್ವ ಕಾಣಿಕೆ ಎನ್ನುವಂತೆ, ಬಿಡಿಸಿ ಬಿಡಿಸಿ ಸ್ಪಷ್ಟವಾಗಿ ಉಚ್ಚರಿಸಿದನು. 'ನೀವು ರಜೆ ಮುಗಿಸಿ ಹಿಂದಿರುಗುತ್ತಿರುವಿರೇನು?' ಎಂದವನು ಪ್ರಶ್ನಿಸಿದನು. ಉತ್ತರಕ್ಕೆ ಕಾಯದೆಯೆ, ತನ್ನ ವಾಡಿಕೆಯ ಅಣಕದ ದನಿಯಲ್ಲಿ 'ನೀನು ಮಾಸ್ಕೋ ಬಿಟ್ಟಾಗ ಅಶ್ರುಧಾರೆ ಹರಿದಿರಬೇಕಲ್ಲವೆ?' ಎಂದವನು ಹೆಂಡತಿಯನ್ನು ಕೇಳಿದನು.

ಒಂಟಿಯಾಗಿರಬೇಕೆಂಬ ತನ್ನ ಅಪೇಕ್ಷೆ ವ್ರಾನ್‌ಸ್ಕಿಗೆ ಅರ್ಥವಾಗಲೆಂದು ತನ್ನ ಹೆಂಡತಿಯನ್ನವನು ಆ ಧಾಟಿಯಲ್ಲಿ ಮಾತಾಡಿಸಿದನು. ವ್ರಾನ್‌ಸ್ಕಿಯ ಕಡೆಗೆ ತಿರುಗಿಕೊಂಡು ಅವನು ಆ ಮಾತುಗಳನ್ನೆತ್ತಿ ಉಚ್ಚರಿಸುತ್ತ, ತನ್ನ ಟೋಪಿಯನ್ನು ಸ್ಪರ್ಶಿಸಿದನು. ಆದರೆ ವ್ರಾನ್‌ಸ್ಕಿ 'ನಾನು ನಿಮ್ಮನ್ನು ಮತ್ತೆ ಭೇಟಿ ಮಾಡುವ ಅವಕಾಶವೊದಗುತ್ತದಲ್ಲವೆ?' ಎಂದು ಅನ್ನಾಳ ಕಡೆಗೆ ತಿರುಗಿಕೊಂಡು ಪ್ರಶ್ನಿಸಿದನು.

ಬಳಲ್ಗಣ್ಣುಗಳಿಂದ ಕರೆನಿನ್ ಅವನ ಕಡೆಗೆ ನೋಡಿದನು. 'ನಮಗೂ ಸಂತೋಷವಾಗುತ್ತದೆ; ಪ್ರತಿ ಸೋಮವಾರ ನಾವು ಮನೆಯಲ್ಲಿರುತ್ತೇವೆ' ಎಂದವನು ನಿರುತ್ಸಾಹದಿಂದ ಗೊಣಗುಟ್ಟಿದನು. ತರುವಾಯ ಅವನು ವ್ರಾನ್‌ಸ್ಕಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ 'ನಿನ್ನನ್ನು ಸ್ವಾಗತಿಸಲು ಅರ್ಧಗಂಟೆ ಬಿಡುವು ಸಿಕ್ಕಿದ್ದೇ ನನ್ನ ಪುಣ್ಯ.

ಇದರಿಂದಾಗಿ ನನಗೆ ನಿನ್ನಲ್ಲಿರುವ ನಿಷ್ಠೆಯನ್ನು ದೃಢಪಡಿಸಿದಂತಾಗುತ್ತದೆ' ಎಂದು ಮಡದಿಗೆ ಸೊಲ್ಲಿಸಿದನು. ಅಣಕದ ದನಿಯಲ್ಲಿಯೇ ಈ ಸಣ್ಣ ಉಪನ್ಯಾಸವನ್ನವನು ಬಿಗಿದನು.

'ನಿಮ್ಮ ನಿಷ್ಠೆಯನ್ನು ದೊಡ್ಡದುಮಾಡಿ ಬಣ್ಣಕಟ್ಟಿ ವಿವರಿಸುತ್ತಿದ್ದೀರಿ. ಅದಕ್ಕೊಪ್ಪುವ ರೀತಿಯಲ್ಲಿ ನಾನು ಬೆಲೆ ಕಟ್ಟಲಾರೆ' ಎಂದವಳು ಅದೇ ಅಣಕದ ದನಿಯಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತ, ತಮ್ಮನ್ನು ಹಿಂಬಾಲಿಸುತ್ತಿದ್ದ ವ್ರಾನ್ಸ್ಕಿಯ ಹೆಜ್ಜೆಗಳನ್ನು ಅನೈಚ್ಛಿಕವಾಗಿ ಕೇಳಿಸಿಕೊಳ್ಳುತ್ತಿದ್ದಳು. 'ಆದರೆ ಅದರಿಂದ ನನಗೇನಾಗ ಬೇಕಾಗಿದೆ?' ಎಂದವಳು ಆಲೋಚಿಸುತ್ತ, ಸರ್ಜಿಯ ಬಗೆಗೆ ತನ್ನ ಗಂಡನಿಂದ ವಿವರ ಗಳನ್ನು ಕೇಳಿದಳು. ತಾನಿಲ್ಲದಾಗ ಅವನು ಹೇಗೆ ಕಾಲ ಕಳೆದಿರಬೇಕೆಂದು ವಿಚಾರಿ ಸಿದಳು.

'ಓ, ತುಂಬ ಸೊಗಸಾಗಿದ್ದ! ಅವನು ಒಳ್ಳೆಯ ಹುಡುಗನೆಂದು ಮೇರಿಯತ್ತೆ ಹೇಳುತ್ತಾಳೆ. ನಿಜ ಹೇಳಿದರೆ ನಿನಗೆ ನಿರಾಶೆಯಾಗಬಹುದು; ನಿನ್ನ ಗೈರುಹಾಜರಿಯಿಂದ ಅವನಿಗಸಮಾಧಾನವಾಗಲಿಲ್ಲ, ನಿಜಕ್ಕೂ ವ್ಯಥೆಯಾದದ್ದು ನಿನ್ನ ಗಂಡನಿಗೆ. ಪ್ರಿಯೆ, ಮತ್ತೊಂದು ದಿನ ನಿನ್ನೊಡನಿರುವ ಅವಕಾಶ ಸಿಕ್ಕಿದ್ದೇ ಭಾಗ್ಯ. ನಮ್ಮ ಪ್ರೀತಿಯ 'ಟೀ ಹಂಡೆ'ಗೆ ಸಂತೋಷವಾಗುತ್ತದೆ. (ಪ್ರಖ್ಯಾತ ಕೌಂಟೆಸ್ ಲಿಡಿಯ ಇವಾನೊವ್ನಳನ್ನವನು ಟೀ ಹಂಡೆಯೆಂದೇ ಕರೆಯುತ್ತಿದ್ದನು; ಏಕೆಂದರೆ ಅವಳು ಯಾವಾಗಲೂ ಭಾವೋದ್ರೇಕ ದಿಂದ ಕುದಿಯುತ್ತಿದ್ದಳು.) 'ಅವಳು ಯಾವಾಗಲೂ ನಿನ್ನ ಬಗ್ಗೆ ವಿಚಾರಿಸಿಕೊಳ್ಳುತ್ತಿರು ತ್ತಾಳೆ. ನೀನೇ ನಾನಾಗಿದ್ದರೆ, ಇಂದೇ ನಾನವಳನ್ನು ಭೇಟಿಮಾಡುತ್ತಿದ್ದೆನೆಂದು ನಿನಗೆ ಸಲಹೆ ನೀಡಬಯಸುತ್ತೇನೆ. ಅವಳು ಎಲ್ಲವನ್ನು ಮನಸ್ಸಿಗೆ ಹಚ್ಚಿಕೊಳ್ಳುತ್ತಾಳೆನ್ನುವುದು ನಿನಗೆ ಗೊತ್ತಿದೆ. ಅವಳಿಗೀಗ ಬೇರೆ ಜವಾಬ್ದಾರಿಗಳಿದ್ದರೂ, ಅಬ್ಲಾನ್ಸ್ಕಿಯ ರಾಜಿ ವಿಷಯವನ್ನವಳು ಮನಸ್ಸಿಗೆ ವಿಶೇಷವಾಗಿ ಹಚ್ಚಿಕೊಂಡಿದ್ದಾಳೆ.'

ಕೌಂಟೆಸ್ ಲಿಡಿಯಾ ಇವಾನೊವ್ನ ಕರೆನಿನ್‌ನ ಸನ್ಮಿತ್ರೆ, ಪೀಟರ್ಸ್‌ಬರ್ಗ್ ಗೋಷ್ಠಿಯ ಕೇಂದ್ರವಾಗಿದ್ದವಳು. ತನ್ನ ಪತಿಯ ಮೂಲಕ ಅನ್ನಾ ಆಗೋಷ್ಠಿಗೆ ತೀರ ಹತ್ತಿರವಾಗಿದ್ದಳು.

'ಅವಳಿಗೆ ನಾನು ಪತ್ರ ಬರೆದಿದ್ದೆ.'

'ಹೌದೆ? ವಿವರಗಳನ್ನು ಕೇಳುವ ಕುತೂಹಲ ಅವಳಿಗೆ. ನೀನು ತುಂಬ ದಣಿದಿಲ್ಲ ವಾದರೆ ಅವಳಲ್ಲಿಗೆ ಹೋಗು, ಪ್ರಿಯೆ. ಕೊಂಡ್ರತಿ ನಿನ್ನನ್ನು ಗಾಡಿಯಲ್ಲಿ ಮನೆಗೆ ಕರೆದೊಯ್ಯುತ್ತಾನೆ; ನಾನು ನನ್ನ ಸಭೆಗೆ ಹಿಂದಿರುಗಬೇಕಾಗಿದೆ. ಇನ್ನು ಮೇಲೆ ನಾನು ಒಂಟಿಯಾಗಿ ಊಟ ಮಾಡಬೇಕಾದ ಪ್ರಮೇಯವಿರಲಾರದು' ಎಂದವನು ಹೇಳುವಾಗ ಅವನ ಮಾತಿನಲ್ಲಿ ಅಣಕದ ರಾಗವಿರಲಿಲ್ಲ. 'ನಿನ್ನನ್ನು ನಾನೊಂದು ಕ್ಷಣವಾದರೂ ಬಿಟ್ಟಿರಲಾರೆನೆಂದು ಹೇಳಿದರೆ ನೀನು ಪ್ರಾಯಶಃ ನಂಬಲಾರೆ....' ಸಾವಕಾಶವಾಗಿ ಅವಳ ಕೈಯನ್ನದುಮಿ, ಅರ್ಥಪೂರ್ಣವಾಗಿ ಮಂದಹಾಸವನ್ನು ಸೂಸಿ, ಗಾಡಿಯಲ್ಲವಳನ್ನು ಕೂರಿಸಿದನು.

೩೨

ಮನೆ ತಲುಪಿದಾಗ ಮೊತ್ತಮೊದಲು ಅವಳನ್ನು ಸಂಧಿಸಿದವನು ಅವಳ ಮಗ. ತನ್ನ ಉಪಾಧ್ಯಾಯಿನಿ ಕೂಗಿದರೂ ಲಕ್ಷಿಸದೆ, 'ಅಮ್ಮ, ಅಮ್ಮ' ಎಂದು ಆನಂದೋನ್ಮಾದದಿಂದ ಬೊಬ್ಬೆಯಿಡುತ್ತ, ಕುಪ್ಪಳಿಸುತ್ತ, ಮೆಟ್ಟಿಲಿಳಿದು ಓಡೋಡಿ ಬಂದನು.

'ಬಂದವರು ಅಮ್ಮ ಎಂದು ಹೇಳಿದೆ. ನನಗೆ ಗೊತ್ತಾಯಿತು' ಎಂದವನು ತನ್ನ ಉಪಾಧ್ಯಾಯಿನಿಯನ್ನು ಕೂಗಿ ಹೇಳಿದನು.

ತನ್ನ ಪತಿಯ ದರ್ಶನವೆಂತೊ ಅಂತೆಯೇ ತನ್ನ ಪುತ್ರನ ಪ್ರಪ್ರಥಮ ದರ್ಶನ ಅನ್ನಾಳನ್ನು ನಿರಾಶೆಗೊಳಿಸಿತು. ಅವನು ವಾಸ್ತವಿಕವಾಗಿ ಹೇಗಿದ್ದನೋ ಅದಕ್ಕಿಂತ ಚೆನ್ನಾಗಿರಬೇಕೆಂದವಳು ತನ್ನ ಕಲ್ಪನೆಯನ್ನು ಚಿತ್ರಿಸಿಕೊಂಡಿದ್ದಳು. ಅವನು ನಿಜಸ್ಥಿತಿಯಲ್ಲಿ ಹೇಗೆ ಕಾಣುತ್ತಿದ್ದನೋ ಹಾಗೆಯೇ ಕಂಡು ಆನಂದಿಸಬೇಕೆಂದವಳು ಕಲ್ಪನಾ ಪ್ರಪಂಚದಿಂದ ಭೂಲೋಕಕ್ಕವತರಿಸಿದ್ದಳು. ಆದರವನು ತನ್ನ ಸುಂದರ ಗುಂಗುರು ಗೂದಲಿಂದ, ನೀಲನೇತ್ರಗಳಿಂದ ಹಾಗೂ ಬಿಗಿಯುತ್ತಿದ್ದ ಕೊಳವೆ ಚೀಲಗಳನ್ನು ಧರಿಸಿದ್ದ ದುಂಡುದುಂಡಾದ ನೇರವಾದ ಕಾಲುಗಳಿಂದ ನಿಜಕ್ಕೂ ಮೋಹಕವಾಗಿ ಕಾಣುತ್ತಿದ್ದನು. ಅವನ ಪ್ರೇಮೋತ್ಕರ್ಷದಿಂದಾಗಿ, ಸಾನ್ನಿಧ್ಯ ಸುಖದಿಂದಾಗಿ ಅನ್ನಾ ಭೌತಿಕಾನಂದವನ್ನನುಭವಿಸಿದಳು. ಸರಳತನದ, ದೃಢ ವಿಶ್ವಾಸದ ಮತ್ತು ಪ್ರೀತ್ಯಾತ್ಮಕವಾದ ಅವನ ಈಕ್ಷಣದಿಂದ, ಅವನು ಕೇಳಿದ ಜಾಣತನದ ಪ್ರಶ್ನೆಗಳಿಂದ ಅವಳ ಹೃದಯಕ್ಕೆ ಆಪ್ಯಾಯಮಾನವಾಯಿತು. ಅವನಿಗಾಗಿ ಡಾಲಿಯ ಮಕ್ಕಳು ಕಳಿಸಿದ್ದ ಕಾಣಿಕೆಗಳ ಗಂಟನ್ನವಳು ಬಿಚ್ಚಿದಳು. ಮಾಸ್ಕೋದಲ್ಲಿದ್ದ ಪುಟ್ಟ ತನ್ಯಳ ಆಟಪಾಟಗಳನ್ನು ವಿವರಿಸಿದಳು; ಅವಳೆಷ್ಟು ಚೆನ್ನಾಗಿ ಓದುತ್ತಾಳೆನ್ನುವುದನ್ನೂ ಬೇರೆ ಮಕ್ಕಳಿಗೆ ತಾನು ಓದು ಕಲಿಸಿದ್ದನ್ನೂ ಅವಳು ಕಥಿಸಿದಳು.

'ನಾನು ಅವಳಿಗಿಂತ ಕಡಮೆಯೇನು?' ಎಂದು ಸರ್ಜಿ ಕೇಳಿದನು.

'ಈ ಜಗತ್ತಿನಲ್ಲಿ ನನ್ನ ಮಟ್ಟಿಗೆ ನಿನಗೆಣೆ ಯಾರೂ ಇಲ್ಲ.'

'ನನಗದು ತಿಳಿದಿದೆ' ಎಂದು ಸರ್ಜಿ ನಗುನಗುತ್ತ ನುಡಿದನು.

ಕೌಂಟೆಸ್ ಲಿಡಿಯಾ ಇವಾನೋವ್ನ ಬಂದಾಗ ಅನ್ನಾ ಇನ್ನೂ ಕಾಫಿ ಮುಗಿಸಿರಲಿಲ್ಲ. ಇವಾನೋವ್ನ ಎತ್ತರದ ದಡೂತಿ ಹೆಂಗಸು; ಅನಾರೋಗ್ಯ ಸೂಚಕವಾದ ಹಳದಿಯ ಛಾಯೆ ಅವಳ ಮುಖವನ್ನಾವರಿಸಿಕೊಂಡಿತ್ತು; ಚಿಂತಾಕ್ರಾಂತವಾಗಿದ್ದ ಅವಳ ಕಪ್ಪು ಕಣ್ಣುಗಳು ಸುಂದರವಾಗಿದ್ದುವು. ಅನ್ನಾ ಅವಳನ್ನು ತುಂಬ ಪ್ರೀತಿಸುತ್ತಿದ್ದಳು; ಆದರೆ ಈ ದಿನ ಮೊತ್ತಮೊದಲ ಬಾರಿಗೆ ಇವಾನೋವ್ನಳ ದೌರ್ಬಲ್ಯಗಳು ಎದ್ದು ಕಾಣುತ್ತಿದ್ದಂತೆ ಅವಳಿಗೆ ತೋರಿತು.

'ಪ್ರಿಯಸಖಿ, ನೀನು ಆಲಿವ್‌ಕೊಂಬೆ ತೆಗೆದುಕೊಂಡು ಹೋಗಿದ್ದೆಯೇನು?' ಎಂದು ಕೌಂಟೆಸ್ ಕೋಣೆಯೊಳಗೆ ಪ್ರವೇಶಿಸುತ್ತಿದ್ದಂತೆ ಪ್ರಶ್ನಿಸಿದಳು.

'ಹೌದು, ಅದೆಲ್ಲ ಮುಗಿದಿದೆ. ಆದರದು ನಾವು ಯೋಚಿಸಿದಷ್ಟು ತೀವ್ರವಾಗಿರಲಿಲ್ಲ' ಎಂದು ಅನ್ನಾ ಉತ್ತರಿಸಿದಳು. 'ನನ್ನ ಅತ್ತಿಗೆ ಆತುರದ ಸ್ವಭಾವದವಳು.'

ತನಗೆ ಸಂಬಂಧವಿಲ್ಲದ ಪ್ರತಿಯೊಂದು ಸಂಗತಿಯಲ್ಲಿಯೂ ಆಸಕ್ತಿ ತೋರುತ್ತಿದ್ದ ಇವಾನೋವ್ನ ತನಗೆ ಸಂಬಂಧಿಸಿದ ವಿಷಯಗಳನ್ನು ಕೇಳಿಸಿಕೊಳ್ಳುವ ಅಭ್ಯಾಸಕ್ಕೆ ಎರವಾಗಿದ್ದಳು. 'ಹೌದು, ಜಗತ್ತು ಪಾಪ ದುಃಖಗಳ ನೆಲೆವನೆಯಾಗಿದೆ. ಈ ದಿನ ನನಗೆ ತುಂಬ ರೇಗಿದೆ' ಎಂದವಳು ಅನ್ನಾಳ ಮಾತಿನ ನಡುವೆ ಬಾಯಿ ಹಾಕಿದಳು.

'ಏಕೆ, ಏನಾಗಿದೆ?' ಎಂದು ಅನ್ನಾ ಮುಗುಳುನಗೆಯನ್ನದುಮಿಕೊಳ್ಳಲು ಪ್ರಯತ್ನಿಸುತ್ತ ಪ್ರಶ್ನಿಸಿದಳು.

'ಸತ್ಯದ ಹೆಸರಿನಲ್ಲಿ ಹೋರಾಟ ನಡಸಿ ಸಾಕಾಗಿದೆ. ಆ ಪ್ರಯತ್ನವನ್ನು ತ್ಯಜಿಸ ಬೇಕೆಂದೇ ಕೆಲವೊಮ್ಮೆ ನನಗನಿಸುತ್ತದೆ. "ಸೋದರಿ"ಯರ ಸಂಘ (ಇದೊಂದು ಪರೋಪಕಾರಿ, ದೇಶಾಭಿಮಾನಿ, ಧಾರ್ಮಿಕ ಸಂಸ್ಥೆ) ಸೊಗಸಾಗಿ ಕೆಲಸ ಮಾಡುತ್ತಿತ್ತು. ಆದರೆ ಆ ದೊಡ್ಡ ಮನುಷ್ಯರ ದೆಸೆಯಿಂದಾಗಿ ಏನೊಂದು ಕೆಲಸವನ್ನೂ ಸಾಧಿಸಲಾಗದು.' ಎಂದು ಕೌಂಟೆಸ್ ವಿಧಿಕೃಪೆಗೆ ವ್ಯಂಗ್ಯಾತ್ಮಕವಾಗಿ ಶರಣಾದ ಧಾಟಿಯಲ್ಲಿ ನುಡಿದಳು. 'ಅವರು ಆ ವಿಷಯವನ್ನೆತ್ತಿಕೊಂಡು, ವಿರೂಪಗೊಳಿಸಿದರು; ಅವರ ಅಭಿಪ್ರಾಯಗಳು ತುಂಬ ಕ್ಷುಲ್ಲಕ ಮತ್ತು ನಿಕೃಷ್ಟ! ನಿನ್ನ ಗಂಡನನ್ನೊಳಗೊಂಡಂತೆ ಇಬ್ಬರು ಮೂವರು ಮಾತ್ರ ಈ ಹೊಣೆಗಾರಿಕೆಯ ಗುರುತರವಾದ ಪ್ರಾಮುಖ್ಯವನ್ನರಿತಿದ್ದಾರೆ; ಉಳಿದವರು ಅದನ್ನು ಇಳಿಕೆಗೈಯುತ್ತಾರೆ. ನಿನ್ನೆ ಪ್ರವ್‌ದಿನ್‌ನಿಂದೊಂದು ಕಾಗದ ಬಂತು.'

ಪ್ರವ್‌ದಿನ್ ಸಮಸ್ತ ಸ್ಲಾವ್ ಜನಾಂಗದ ಸಂಘಟನೆಯ ಸುಪ್ರಸಿದ್ಧ ಪುರಸ್ಕರ್ತ; ಅವನು ವಿದೇಶವಾಸಿ; ಕೌಂಟೆಸ್ ಕಾಗದದ ವಿವರಗಳನ್ನು ಹೇಳತೊಡಗಿದಳು.

ತರುವಾಯ ಚರ್ಚುಗಳ ಸಂಘಟನೆಯ ವಿರುದ್ಧವಾಗಿ ನಡೆಯುತ್ತಿದ್ದ ಸಂಚು ಹೊಂಚುಗಳನ್ನವಳು ವಿವರಿಸಿದಳು; ಅದೇ ದಿನ ಯಾವುದೋ ಸಂಘದ ಹಾಗೂ ಸ್ಲಾವ್ ಸಮಿತಿಯ ಸಭೆಗಳಿಗೆ ಹೋಗಬೇಕಾಗಿದ್ದುದರಿಂದ ಅವಳು ಕೂಡಲೇ ಆತುರಾತುರವಾಗಿ ಹೊರಟು ಹೋದಳು.

'ಹಿಂದೆಯೂ ಆಕೆ ಇಂತೆಯೇ ವರ್ತಿಸುತ್ತಿದ್ದಳು. ಆದರೂ ನಾನೇಕೆ ಅದನ್ನಾಗ ಗಮನಿಸಲಿಲ್ಲ?' ಎಂದು ಅನ್ನಾ ತನ್ನನ್ನು ತಾನೇ ಪ್ರಶ್ನಿಸಿಕೊಂಡಳು. 'ಪ್ರಾಯಶಃ ಈ ದಿನ ಅವಳಿಗೆ ತುಂಬ ಅಸಮಾಧಾನವಾಗಿರಬೇಕು.' 'ಆದರಿದು ನಿಜಕ್ಕೂ ಅಸಂಬದ್ಧ; ತಾನು ಕ್ರಿಶ್ಚಿಯನ್ ಎಂದವಳು ಕರೆದುಕೊಳ್ಳುತ್ತಾಳೆ; ಸದಾ ಒಳ್ಳೆಯದನ್ನೆಸಗುವುದೇ ಅವಳ ಉದ್ದೇಶವಾಗಿರಬೇಕು. ಆದರೂ ಅವಳು ಯಾವಾಗಲೂ ಕೋಪ ಕಾರುತ್ತಾಳೆ; ಅವಳು ಯಾವಾಗಲೂ ಕೋಪವಶಿಯಾಗಿರುತ್ತಾಳೆ. ಪ್ರತಿಯೊಬ್ಬರೂ ಅವಳಿಗೆ ಹಗೆಯಾಗಿದ್ದಾರೆ; ಕ್ರಿಶ್ಚಿಯನ್ ಧರ್ಮದ ಹೆಸರಿನಲ್ಲಿ, ಒಳ್ಳೆಯದನ್ನೆಸಗುವ ನೆಪದಲ್ಲಿ ಎಲ್ಲರೂ ಅವಳಿಗೆ ಶತ್ರುಗಳೇ ಆಗಿದ್ದಾರೆ.'

ಕೌಂಟೆಸ್ ಇವಾನೊವ್ನ ಅಲ್ಲಿಂದ ಕಾಲ್ತೆಗೆದನಂತರ, ಇಲಾಖೆಯೊಂದರ ನಿರ್ದೇಶಕ ನಾಗಿದ್ದ ವ್ಯಕ್ತಿಯೊಬ್ಬನ ಹೆಂಡತಿ, ಅನ್ನಾಳ ಗೆಳತಿ ಬಂದು, ಪಟ್ಟಣದ ಸುದ್ದಿಯನ್ನೆಲ್ಲ ಅವಳಿಗೆ ವಿವರಿಸಿದಳು. ರಾತ್ರಿಯೂಟಕ್ಕೆ ಬರುವುದಾಗಿ ತಿಳಿಸಿ, ಅವಳು ಮೂರುಗಂಟೆ ಸಮಯದಲ್ಲಿ ಹೋದಳು. ಕರೆನಿನ್ ಕಚೇರಿಯಲ್ಲಿದ್ದನು. ಏಕಾಕಿಯಾದ ಅನ್ನಾ ತನ್ನ ಮಗನ ಊಟೋಪಚಾರದಲ್ಲಿ ಶ್ರದ್ಧೆ ವಹಿಸುತ್ತ, (ಅವನು ಯಾವಾಗಲೂ ತನ್ನ ತಂದೆ

ತಾಯಿಯರಿಗಿಂತ ಮುಂಚಿತವಾಗಿ ಊಟ ಮುಗಿಸುತ್ತಿದ್ದನು.) ಸಾಮಾನುಗಳನ್ನು ಓರಣಗೊಳಿಸುತ್ತ, ತನ್ನ ಮೇಜಿನ ಮೇಲೆ ಸಂಗ್ರಹಗೊಂಡಿದ್ದ ಕಾಗದ ಪತ್ರಗಳನ್ನೋದುತ್ತ, ಅವುಗಳಿಗೆ ಉತ್ತರ ಬರೆಯುತ್ತ ಕಾಲ ಕಳೆದಳು.

ರೈಲಿನಲ್ಲನುಭವಿಸಿದ್ದ ಶ್ರಮ ಹಾಗೂ ನಿಷ್ಕಾರಣವಾದ ಅವಮಾನಗಳು ಸಂಪೂರ್ಣವಾಗಿ ಮಾಯವಾಗಿದ್ದುವು. ತನ್ನ ಜೀವನದ ಸುಪರಿಚಿತ ಸನ್ನಿವೇಶಗಳಿಗೆ ಹಿಂದಿರುಗಿದಾಗ ಅವಳು ಮತ್ತೆ ದೃಢಚಿತ್ತೆಯಾಗಿ, ತಾನು ದೋಷಮುಕ್ತಳೆಂದು ಭಾವಿಸಿದಳು.

ಹಿಂದಿನ ದಿನದ ತನ್ನ ಮನಃಸ್ಥಿತಿಯನ್ನು ನೆನೆದಾಗ ಅವಳಿಗಚ್ಚರಿಯಾಯಿತು. 'ನಡೆದದ್ದೇನು ? ಏನೂ ಇಲ್ಲ. ವ್ರಾಂಸ್ಕಿ ಹುಚ್ಚುಹುಚ್ಚಾಗಿ ಮಾತಾಡಿದ. ಅದನ್ನು ಮೊಳೆಯಲ್ಲಿಯೇ ಚಿಗುಟಿಹಾಕಿದೆ. ಸರಿಯಾದ ರೀತಿಯಲ್ಲಿಯೇ ನಾನವನಿಗೆ ಉತ್ತರ ನೀಡಿದೆ. ಅದನ್ನೆಲ್ಲ ನನ್ನ ಗಂಡನಿಗೆ ತಿಳಿಸಬೇಕಾಗಿಲ್ಲ. ಹಾಗೆ ತಿಳಿಸುವುದೇ ತಪ್ಪು. ಆ ಬಗ್ಗೆ ಮಾತಾಡುವುದರಿಂದಲೇ ಅದಕ್ಕರ್ಹವಲ್ಲದ ಪ್ರಾಮುಖ್ಯತೆಯನ್ನು ನೀಡಿದಂತಾಗುತ್ತದೆ' ತನ್ನ ಗಂಡನ ಕೈಕೆಳಗೆ ಕೆಲಸಮಾಡುತ್ತಿದ್ದ ಪೀಟರ್ಸ್ ಬರ್ಗ್ ಯುವಕನೊಬ್ಬ ತನ್ನಲ್ಲಿ ಪ್ರೇಮ ಭಿಕ್ಷೆಯನ್ನು ಯಾಚಿಸಿದ್ದ ಸಂಗತಿಯನ್ನೂ, ಅದನ್ನು ತನ್ನ ಗಂಡನಿಗೆ ರಟ್ಟುಗೊಳಿಸಿದ್ದನ್ನೂ ಅವಳು ನೆನೆದಳು. ಸಮಾಜದಲ್ಲಿರುವ ಯಾವ ಹೆಂಗಸೇ ಆಗಲಿ ಅಂಥ ಸನ್ನಿವೇಶವನ್ನೆದುರಿಸಬೇಕಾಗುತ್ತದೆಂದೂ, ಅವಳ ಜಾಣ್ಮೆಯಲ್ಲಿ ತನಗೆ ಪೂರ್ಣ ವಿಶ್ವಾಸವಿದೆಯೆಂದೂ, ಕೇವಲ ಈರ್ಷ್ಯೆಯಿಂದ ತನ್ನ ಅಥವಾ ಅವಳ ಯೋಗ್ಯತೆಗೆ ಕಳಂಕವನ್ನು ತಂದುಕೊಳ್ಳಲಾಗದೆಂದೂ ಕರೆನಿನ್ ಅವಳಿಗೆ ಉತ್ತರ ನೀಡಿದ್ದನು. 'ಆದ್ದರಿಂದ ಈ ವಿಷಯವನ್ನವರಿಗೆ ತಿಳಿಸಬೇಕಾಗಿಲ್ಲ. ದೇವರ ದಯೆಯಿಂದ, ಅವರಿಗೆ ತಿಳಿಸುವಷ್ಟರ ಮಟ್ಟಿಗೆ ಅಚಾತುರ್ಯವೂ ನಡೆದಿಲ್ಲ' ಎಂದವಳು ತನ್ನಷ್ಟಕ್ಕೆ ತಾನೆ ಅಂದುಕೊಂಡಳು.

೩೩

ಅಲೆಕ್ಸಿ ಅಲೆಕ್ಸಾಂಡ್ರೊವಿಚ್ ಕರೆನಿನ್ ಮಂತ್ರಾಲೋಚನಾಸಭೆಯಿಂದ ನಾಲ್ಕು ಗಂಟೆಗೆ ಮನೆಗೆ ಬಂದನು. ಹೊರಗಿನಿಂದ ಬಂದ ಕೂಡಲೇ ಅವಳ ಬಳಿ ಹೋಗಲು ಸಾಮಾನ್ಯವಾಗಿ ಅವನಿಗೆ ಸಮಯವಿರುತ್ತಿರಲಿಲ್ಲ. ಅವನು ನೇರವಾಗಿ ಅಧ್ಯಯನ ಮಂದಿರಕ್ಕೆ ಹೋದನು. ಅಲ್ಲಿ ಕೆಲವು ಜನ ಅರ್ಜಿಗಳೊಡನೆ ಅವನಿಗಾಗಿ ಕಾದುಕೊಂಡಿದ್ದರು. ಕಚೇರಿಯ ನಿರ್ವಾಹಕ ಕಳಿಸಿದ್ದ ಕೆಲವು ಕಾಗದ ಪತ್ರಗಳಿಗೆ ರುಜುಹಾಕಿದನು.

ಯಾವಾಗಲೂ ಕರೆನಿನ್‌ರು ರಾತ್ರಿಯೂಟಕ್ಕೆ ಮೂವರು ಅತಿಥಿಗಳನ್ನಾದರೂ ಆಹ್ವಾನಿಸುತ್ತಿದ್ದರು. ಕರೆನಿನ್‌ನ ದಾಯಾದಿ, ಜ್ಯೇಷ್ಠ ಮಹಿಳೆ, ಇಲಾಖೆಯ ನಿರ್ದೇಶಕ ಹಾಗೂ ಅವನ ಮಡದಿ ಮತ್ತು ಕರೆನಿನ್‌ನ ಇಲಾಖೆಯ ನೌಕರಿಯೊಂದಕ್ಕೆ ಶಿಫಾರಸು ಪಡೆದಿದ್ದ ಯುವಕನೊಬ್ಬ—ಈ ಮೂವರೇ ಊಟಕ್ಕೆ ಹಾಜರಿದ್ದ ಅತಿಥಿಗಳು. ಅತಿಥಿಗಳ ಸ್ವಾಗತಕ್ಕಾಗಿ ಅನ್ನಾ ದಿವಾನಖಾನೆಗೆ ಬಂದಳು. ಐದು ಗಂಟೆಗೆ ಸರಿಯಾಗಿ, ಕಂಚಿನ ಪೀಟರ್ ಪ್ರಭು ಗಡಿಯಾರ ಕೊನೆಯ ಬಡಿತ ಮುಗಿಸುವಷ್ಟರಲ್ಲಿ, ಕರೆನಿನ್ ಸಂಜೆಯುಡುಪಿನಲ್ಲಿ ಕೋಣೆಯನ್ನು ಪ್ರವೇಶಿಸಿದನು. ಅವನು ಬಿಳಿಯ ಕೊರಳಪಟ್ಟಿ ಧರಿಸಿದ್ದನು ; ಅವನ ಕೋಟಿನ ವಕ್ಷಭಾಗದಲ್ಲಿ ಎರಡು ನಕ್ಷತ್ರಗಳು ಹೊಳೆಯುತ್ತಿದ್ದುವು. ಊಟ ಮುಗಿದ

ಕೂಡಲೇ ಅವನಿಗೊಂದು ಔಪಚಾರಿಕ ಕಾರ್ಯಕ್ರಮವಿತ್ತು. ಕರೆನಿನ್ ಜೀವನದ ಪ್ರತಿಯೊಂದು ಕ್ಷಣವೂ ಯಾವುದಾದರೊಂದು ವ್ಯವಹಾರಕ್ಕಾಗಿ ಗೊತ್ತಾಗಿರುತ್ತಿತ್ತು. ಪ್ರತಿನಿತ್ಯವೂ ತನಗೆ ಮೀಸಲಾಗಿದ್ದ ಎಲ್ಲ ಕೆಲಸಗಳನ್ನು ಪೂರೈಸುವ ಸಲುವಾಗಿ ಅವನು ಕಟ್ಟುನಿಟ್ಟಿನ ಕಾರ್ಯಕ್ರಮವೊಂದಕ್ಕೆ ಅಂಟಿಕೊಂಡಿರುತ್ತಿದ್ದನು. 'ಅವಸರ ಕೂಡದು, ಕಾಲಹರಣ ಸಲ್ಲದು'—ಇದು ಅವನ ಧ್ಯೇಯವಾಗಿತ್ತು. ಅವನು ದಿವಾನಖಾನೆಯನ್ನು ಪ್ರವೇಶಿಸಿ, ಪ್ರತಿಯೊಬ್ಬರಿಗೂ ಮಣಿದು, ತನ್ನ ಮಡದಿಯ ಕಡೆಗೆ ಮಂದಹಾಸ ಬೀರಿ, ಬೇಗಬೇಗನೆ ಕುಳಿತುಕೊಂಡನು.

'ಹೌದು, ನನ್ನ ಒಂಟಿತನ ಕೊನೆ ಮುಟ್ಟಿದೆ. ಒಂಟಿಯಾಗಿ ಊಟಮಾಡುವುದೆಂದರೆ ಅದೆಷ್ಟು ಕಿರಿಕಿರಿಯಾಗುತ್ತದೆಂಬುದನ್ನು (ಕಿರಿಕಿರಿ ಎಂಬ ಪದವನ್ನವನು ಒತ್ತಿ ಒತ್ತಿ ಉಚ್ಚರಿಸಿದನು) ನೀವು ನಂಬಲಾರಿರಿ.'

ಭೋಜನ ಸಮಯದಲ್ಲವನು ತನ್ನ ಹೆಂಡತಿಯೊಡನೆ ಮಾಸ್ಕೊ ವ್ಯವಹಾರಗಳನ್ನು ಕುರಿತು ಪ್ರಸ್ತಾಪಿಸಿದನು; ದರ್ಪಬೆರೆತ ಮಂದಹಾಸದಿಂದ ಅಬ್ಲಾನ್ಸ್ಕಿಗೆ ಸಂಬಂಧಿಸಿದಂತೆ ಪ್ರಶ್ನೆ ಹಾಕಿದನು; ಆದರೆ ಮಾತುಕತೆ ಬಹುತೇಕವಾಗಿ ಸರ್ವಸಾಮಾನ್ಯ ವಿಷಯಗಳಿಗೆ ಹಾಗೂ ವ್ಯವಹಾರಗಳಿಗೆ ಸಂಬಂಧಿಸಿದುದಾಗಿತ್ತು—ಅಂದರೆ ಪೀಟರ್ಸ್‌ಬರ್ಗ್ ಸಮಾಜ ಹಾಗೂ ಇಲಾಖಾ ವಿಷಯಗಳಿಗೆ. ಊಟದ ತರುವಾಯ ಅವನು ಅತಿಥಿಗಳೊಂದಿಗೆ ಅರ್ಧಗಂಟೆ ಮಾತುಕತೆಯಲ್ಲಿ ಕಾಲಕಳೆದನು. ಮಂತ್ರಾಲೋಚನಾ ಸಭೆಗೆ ಹೊರಡುವ ಮುನ್ನ ಅವನು ಮತ್ತೆ ಸುಸ್ಮಿತನಾಗಿ ತನ್ನ ಹೆಂಡತಿಯ ಕೈಯನ್ನದುಮಿದನು.

ಅನ್ನಾಳ ಆಗಮನ ವಾರ್ತೆಯನ್ನು ಕೇಳಿ ಬೆಟ್ಸಿ ತ್ವೇರ್‌ಸ್ಕಾಯ ಅವಳನ್ನು ತನ್ನ ಮನೆಗೆ ಆಹ್ವಾನಿಸಿದ್ದರೂ, ಆ ದಿನ ಸಂಜೆ ಅವಳಲ್ಲಿಗೆ ಹೋಗಲಿಲ್ಲ. ಸಾಯಂಕಾಲದ ಪ್ರದರ್ಶನಕ್ಕೆ ಅವಳಿಗೊಂದು ಪ್ರತ್ಯೇಕಪೀಠ ಮುಡಿಪಾಗಿದ್ದರೂ ಅವಳು ರಂಗಮಂದಿರಕ್ಕೆ ಹೋಗಲಿಲ್ಲ. ಅವಳು ಹೋಗದಿದ್ದುದಕ್ಕೆ ತಾನು ಧರಿಸಬೇಕಾಗಿದ್ದ ಮೇಲಂಗಿ ಸಿದ್ಧವಾಗಿಲ್ಲದಿದ್ದುದೇ ಮುಖ್ಯಕಾರಣ. ಅತಿಥಿಗಳನ್ನು ಬೀಳ್ಕೊಟ್ಟನಂತರ, ಬಟ್ಟೆ ಬೀರುವನ್ನವಳು ತನಿಖಿಸಿದಾಗ, ಅವಳ ಮನಸ್ಸಿಗೆ ತುಂಬ ಅಸಮಾಧಾನವಾಯಿತು. ಹೆಚ್ಚು ಹಣವನ್ನು ದುಂದುಮಾಡದೆ, ನೀಟಾಗಿ ವಸ್ತ್ರಾಲಂಕಾರ ಮಾಡಿಕೊಳ್ಳುವ ಜಾಣ್ಮೆ ಅನ್ನಾಳಿಗೆ ರಕ್ತಗತವಾಗಿತ್ತು. ಮಾಸ್ಕೋಗೆ ತೆರಳುವ ಮುನ್ನ ಅವಳು ನವೀಕರಿಸಲೆಂದು ದರ್ಜಿಗೆ ಮೂರು ಮೇಲಂಗಿಗಳನ್ನು ಕೊಟ್ಟಿದ್ದಳು. ಗುರುತು ಸಿಗದಂತೆ ಅವನ್ನು ಪುನರ್ರೂಪಿಸತಕ್ಕದ್ದೆಂದೂ, ಪುನರಾಗಮನಕ್ಕೆ ಮೂರು ದಿನ ಮುಂಚೆ ಅವನ್ನು ಸಿದ್ಧಗೊಳಿಸತಕ್ಕದ್ದೆಂದೂ ಅವನಿಗೆ ಸ್ಪಷ್ಟಪಡಿಸಲಾಗಿತ್ತು. ಎರಡಂತು ಕೊಟ್ಟಾಗ ಹೇಗಿದ್ದುವೋ ಹಾಗೆಯೇ ಇದ್ದುವು; ಅನ್ನಾಳ ಇಷ್ಟಕ್ಕೆ ತಕ್ಕಂತೆ ಮೂರನೆಯದನ್ನು ಸಿದ್ಧಗೊಳಿಸಿರಲಿಲ್ಲ. ದರ್ಜಿ ಬಂದು, ತಾನು ಮಾಡಿದ್ದೇ ಸರಿ ಎಂದು ಒತ್ತಾಯಪಡಿಸಿದನು; ಅನ್ನಾ ಶಾಂತಿ ಕಳೆದುಕೊಂಡು ಅವನ ಮೇಲೆ ರೇಗಾಡಿದಳು; ಕೂಡಲೇ ತನ್ನ ವರ್ತನೆಯ ಬಗ್ಗೆ ಅವಳು ನಾಚಿಕೆಗೀಡಾದಳು. ಚಿತ್ತ ಸಮಾಧಾನಕ್ಕಾಗಿ ಅವಳು ಶಿಶುಮಂದಿರಕ್ಕೆ ಹೋಗಿ, ಇಡೀ ಸಂಜೆಯನ್ನು ತನ್ನ ಮಗನೊಡನೆ ಕಳೆದಳು. ಅವಳವನನ್ನು ಹಾಸುಗೆಯಲ್ಲಿ ಮಲಗಿಸಿ, ಅವನ ಮೇಲೆ ಕ್ರೂಸೆಯ ಭಂಗಿಯಲ್ಲಿ ಕೈಯಾಡಿಸಿ, ಕಂಬಳಿಯನ್ನು ಹೊದ್ದಿಸಿದಳು. ತಾನೆಲ್ಲಿಯೂ

ಹೊರಗೆ ಹೋಗದೆ, ಮನೆಯಲ್ಲಿಯೇ ಸಂಜೆಯನ್ನು ಸೊಗಸಾಗಿ ಕಳೆದದ್ದಕ್ಕಾಗಿ ಹರ್ಷಾನ್ವಿತೆಯಾದಳು. ಅವಳ ಮನಸ್ಸು ಹಗುರವಾಗಿತ್ತು, ಸಮಾಧಾನ ಸ್ಥಿತಿಯಲ್ಲಿತ್ತು. ರೈಲು ಪ್ರಯಾಣದಲ್ಲಿ ಅತ್ಯಂತ ಪ್ರಮುಖವಾಗಿ ಕಂಡಿದ್ದ ಸಂಗತಿಗಳೆಲ್ಲ ಲೋಕಿಜೀವನದ ಸರ್ವೇಸಾಧಾರಣವಾದ ಕ್ಷುದ್ರ ಘಟನೆಗಳೆಂಬುದು ಅವಳಿಗೆ ಸುಸ್ಪಷ್ಟವಾಗಿ ಕಂಡಿತು. ಆದ್ದರಿಂದ ಪರರ ಮುಂದೆಯಾಗಲಿ, ತನ್ನೊಳಗಾಗಲಿ ನಾಚಿಕೊಳ್ಳಬೇಕಾದ ಪ್ರಮೇಯ ವಿಲ್ಲವೆಂದವಳು ಬಗೆದಳು. ಇಂಗ್ಲಿಷ್ ಕಾದಂಬರಿಯೊಂದನ್ನು ಹಿಡಿದುಕೊಂಡು, ಅವಳು ಅಗ್ಗಿಷ್ಟಿಕೆಯ ಮುಂದೆ ಗಂಡನ ನಿರೀಕ್ಷೆಯಲ್ಲಿ ಕುಳಿತುಕೊಂಡಳು.

ಒಂಬತ್ತೂವರೆಗಂಟೆಗೆ ಸರಿಯಾಗಿ ಅವನು ಬಾರಿಸಿದ ಗಂಟೆಯ ದನಿ ಕೇಳಿಸಿತು; ಕೂಡಲೇ ಅವನು ಕೋಣೆಯನ್ನು ಪ್ರವೇಶಿಸಿದನು.

'ಕೊನೆಗೂ ಬಂದಿರಲ್ಲ' ಎಂದವಳು ತನ್ನ ಕೈಯನ್ನು ಮುಂದೆ ಚಾಚಿದಳು.

ಅವನವಳ ಕೈಯನ್ನು ಚುಂಬಿಸಿ, ಅವಳ ಪಕ್ಕದಲ್ಲಿ ಕುಳಿತುಕೊಂಡನು.

'ನಿನ್ನ ಪ್ರವಾಸ ಯಶಸ್ವಿಯಾಯಿತೆಂದು ನನಗನಿಸಿದೆ' ಎಂದವನು ಅವಳೊಡನೆ ಹೇಳಿದನು.

'ಓ, ಪೂರಾ' ಎಂದವಳು ನುಡಿದು, ಮೊದಲಿಂದ ಎಲ್ಲ ವೃತ್ತಾಂತವನ್ನು ವಿವರಿಸ ತೊಡಗಿದಳು: ವ್ರಾನ್ಸ್ಕಿ ತಾಯಿಯ ಸಂಗಡದಲ್ಲಿ ತನ್ನ ಪ್ರಯಾಣ, ಅವರ ತಲುಪಣೆ, ರೈಲು ನಿಲ್ದಾಣದ ಅಪಘಾತ. ಮೊದಮೊದಲು ತನ್ನಣ್ಣನ ಬಗ್ಗೆ, ತರುವಾಯ ಡಾಲಿಯ ಬಗ್ಗೆ ತನ್ನ ಮನಸ್ಸಿನಲ್ಲಿ ಮೂಡಿದ ವ್ಯಾಕುಲವನ್ನವಳು ತೋಡಿಕೊಂಡಳು.

'ಅವನು ನಿನ್ನಣ್ಣನಾದರೂ, ಅಂಥವನನ್ನು ನಾನು ಕ್ಷಮಿಸಿಲಾರೆ' ಎಂದು ಕರೆನಿನ್ ಕಠಿನವಾಗಿ ನುಡಿದನು.

ಅನ್ನಾ ಮುಗುಳುನಗೆ ಬೀರಿದಳು. ತನ್ನ ಪ್ರಾಮಾಣಿಕ ಅಭಿಪ್ರಾಯವನ್ನು ವ್ಯಕ್ತ ಪಡಿಸುವಾಗ ಎಂಥ ಬಂಧುತ್ವವೂ ಅಡ್ಡಿಯಾಗಲಾರದೆಂಬುದನ್ನು ತೋರಿಸಲು ಅವನು ಆ ರೀತಿ ನುಡಿದಿದ್ದನೆಂಬುದವಳಿಗೆ ಗೊತ್ತಿತ್ತು. ಅವನ ಈ ಮನೋಧರ್ಮವನ್ನವಳು ಬಲ್ಲಳು; ಅಷ್ಟೇ ಅಲ್ಲ, ಅದನ್ನು ಮೆಚ್ಚಿಕೊಂಡಿದ್ದಳು.

'ಎಲ್ಲವೂ ಶುಭದಲ್ಲಿ ಮುಕ್ತಾಯಗೊಂಡು, ನೀನು ಹಿಂದಿರುಗಿ ಬಂದದ್ದರಿಂದ ನನಗೆ ಸಂತೋಷವಾಗಿದೆ ಎಂದವನು ಮಾತು ಮುಂದುವರಿಸಿದನು. 'ಮಂತ್ರಾಲೋಚನಾ ಸಭೆಯಲ್ಲಿ ನಾನು ಮಂಡಿಸಿ, ಅಂಗೀಕೃತವಾಗಿರುವ ಕಾನೂನಿನ ಬಗ್ಗೆ ಮಾಸ್ಕೋ ಜನ ಏನು ಹೇಳುತ್ತಾರೆ?'

ಆ ಶಾಸನದ ವಿಷಯವೇನೂ ಅನ್ನಾಳಿಗೆ ಗೊತ್ತಿರಲಿಲ್ಲ. ಅವನಿಗಷ್ಟು ಪ್ರಮುಖ ವೆಂದು ತೋರಿದ್ದ ಕಾನೂನಿನ ವಿಷಯವನ್ನು ಸಂಪೂರ್ಣವಾಗಿ ಮರೆತದ್ದರಿಂದ ಅವಳ ಮನಸ್ಸಿಗೆ ತುಂಬ ನೋವಾಯಿತು.

'ಇಲ್ಲದು ಬಹುಪ್ರಮಾಣದ ಟೀಕೆ ವ್ಯಾಖ್ಯಾನಗಳಿಗೆ ಗುರಿಯಾಗಿದೆ' ಎಂದವನು ಆತ್ಮತೃಪ್ತಿಯ ಮಂದಹಾಸದಿಂದ ನುಡಿದನು.

ತನಗಿಷ್ಟವಾಗಿದ್ದ ಸಂಗತಿಯ ಬಗ್ಗೆ ಏನನ್ನೋ ಹೇಳಬೇಕೆಂದು ಅವನು ಇಚ್ಛಿಸಿದ್ದು ದಾಗಿ ಅನ್ನಾ ಊಹಿಸಿಕೊಂಡಳು. ಆದ್ದರಿಂದ ಅವನು ಆ ವಿಷಯವನ್ನು ವಿವರಿಸಲೆಂದು

ಅನ್ನಾ ಪ್ರಶ್ನೆಗಳ ಮೇಲೆ ಪ್ರಶ್ನೆ ಹಾಕಿದಳು. ಅದೇ ಆತ್ಮತೃಪ್ತಿಯ ಮಂದಹಾಸದಿಂದ, ಆ ಕಾನೂನು ಅಂಗೀಕೃತಗೊಂಡಾಗ ತನಗೆ ದೊರೆತ ಜಯಘೋಷವನ್ನು ವಿವರಿಸಿದನು.

'ನನಗೆ ತುಂಬ ತೃಪ್ತಿಯಾಯಿತು ; ನಿಜಕ್ಕೂ ಸಂತೋಷವಾಯಿತು. ಕೊನೆಗೂ ಈ ವಿಷಯದಲ್ಲಿ ದೃಢವಾದ ಹಾಗೂ ವಿವೇಕಯುತವಾದ ನಿಲವನ್ನು ತಾಳಲು ಪ್ರಾರಂಭಿಸಿದ್ದೇವೆಂಬುದನ್ನು ಇದು ತೋರಿಸುತ್ತದೆ.'

ಎರಡನೆಯ ಕಪ್ಪು ಟೀಯನ್ನೂ, ಕೆನೆಯನ್ನೂ ರೊಟ್ಟಿಯ ಹಲ್ಲೆಯನ್ನೂ ಮುಗಿಸಿದ ನಂತರ ಅವನು ಮೇಲೆದ್ದು, ತನ್ನ ಅಧ್ಯಯನ ಮಂದಿರಕ್ಕೆ ಹೋದನು.

'ನೀನೆಲ್ಲಿಯೂ ಹೋಗಲಿಲ್ಲವೇನು ? ಸಂಜೆ ನಿನಗೆ ತುಂಬ ಬೇಸರವಾಗಿರಬೇಕು' ಎಂದವನು ಕೇಳಿದನು.

'ಇಲ್ಲ, ಇಲ್ಲ' ಎಂದವಳು ಮೇಲೆದ್ದು, ಅವನ ಅಧ್ಯಯನ ಮಂದಿರದ ಕಡೆಗೆ ಹೋಗುವ ಹಜಾರದ ಮೂಲಕ ಅವನೊಡನೆ ಹೋಗುತ್ತ ನುಡಿದಳು. 'ಈಗ ನೀವೇನು ಓದುತ್ತಿದ್ದೀರಿ' ಎಂದವಳು ಪ್ರಶ್ನಿಸಿದಳು.

'ಸದ್ಯದಲ್ಲಿ ನಾನು ಡಕ್‌ದ ಲಿಲೆಯ "ನರಕ ಕಾವ್ಯ"ವನ್ನೋದುತ್ತಿದ್ದೇನೆ. ಸೊಗಸಾದ ಪುಸ್ತಕ' ಎಂದವನು ಉತ್ತರಿಸಿದನು.

ಪ್ರೇಮಿಯ ನ್ಯೂನತೆಯನ್ನು ಕಂಡು ನಗುವ ವ್ಯಕ್ತಿಯಂತೆ ಅನ್ನಾ ಮುಗುಳುನಗೆ ಸೂಸಿದಳು ; ಅವನ ತೋಳು ಹಿಡಿದುಕೊಂಡು, ಅವನ ಅಧ್ಯಯನ ಮಂದಿರದ ಬಾಗಿಲ ತನಕ ಅವಳು ಹೋದಳು. ಸಂಜೆ ಓದುವ ಅವನ ಚಾಳಿ ಈಗ ಅಗತ್ಯವಾಗಿತ್ತೆಂಬುದನ್ನವಳು ಬಲ್ಲವಳಾಗಿದ್ದಳು. ನೌಕರಿಗೆ ಸಂಬಂಧಿಸಿದ ವ್ಯವಹಾರಗಳಲ್ಲಿ ಅವನ ಬಹು ವೇಳೆ ವ್ಯಯವಾಗುತ್ತಿದ್ದರೂ, ಬೌದ್ಧಿಕ ಕ್ಷೇತ್ರದಲ್ಲಿ ನಡೆಯುತ್ತಿದ್ದ ಪ್ರತಿಯೊಂದು ಚಟುವಟಿಕೆಯನ್ನು ತಿಳಿದುಕೊಳ್ಳಬೇಕಾದ್ದು ತನ್ನ ಕರ್ತವ್ಯವೆಂದವನು ನಿರ್ಣಯಿಸಿಕೊಂಡಿದ್ದ ವಿಷಯ ಅವಳಿಗೆ ಗೊತ್ತಿತ್ತು. ರಾಜಕಾರಣದಲ್ಲಿ, ತತ್ವಶಾಸ್ತ್ರದಲ್ಲಿ ಹಾಗೂ ದೇವತಾಶಾಸ್ತ್ರದಲ್ಲಿ ಅವನ ಆಸಕ್ತಿ ನೆಲೆಗೊಂಡಿದ್ದರೂ, ಸಹಜವಾಗಿಯೇ ಕಲೆ ಅವನಿಗೆ ವಿದೇಶೀಯವಾಗಿ ತೋರಿದರೂ, ಅದರ ಪರಿಣಾಮವಾಗಿಯೋ ಎನ್ನುವಂತೆ ಈ ಕ್ಷೇತ್ರದಲ್ಲಿ ಆಂದೋಳನವನ್ನುಂಟುಮಾಡಿದ ಸಂಗತಿ ತನ್ನ ಲಕ್ಷ್ಯದಿಂದ ತಪ್ಪಿಸಿಕೊಳ್ಳದಂತೆ ಜಾಗರೂಕನಾಗಿದ್ದನೆಂಬ, ಆದ್ದರಿಂದ ಎಲ್ಲವನ್ನು ಓದಿ ಮುಗಿಸಬೇಕಾದ್ದು ತನ್ನ ಕರ್ತವ್ಯವೆಂದು ಭಾವಿಸಿಕೊಂಡಿದ್ದನೆಂಬ ವಿಷಯವೂ ಅವಳಿಗೆ ಮನವರಿಕೆಯಾಗಿತ್ತು. ರಾಜಕೀಯಶಾಸ್ತ್ರ, ತತ್ತ್ವಶಾಸ್ತ್ರ ಮತ್ತು ದೇವತಾಶಾಸ್ತ್ರಗಳಲ್ಲವನು ಶೋಧನೆ ಮಾಡಬಲ್ಲವನಾಗಿದ್ದರೂ, ವಾದ ವಿವಾದಗಳಲ್ಲಿ ತೊಡಗುತ್ತಿದ್ದರೂ, ಕಲೆ ಮತ್ತು ಕಾವ್ಯಗಳ ಬಗ್ಗೆ, ಅದರಲ್ಲಿಯೂ ಸಂಗೀತದ ವಿಷಯದಲ್ಲಿ ಅವನಿಗೆ ಎಳ್ಳನಿತೂ ತಿಳಿವಳಿಕೆ ಇರಲಿಲ್ಲವೆಂದೂ, ಅವುಗಳ ಬಗ್ಗೆ ಅವನು ಖಂಡಿತವೂ ಅಪ್ರತಿಹತವೂ ಆದ ಅಭಿಪ್ರಾಯಗಳನ್ನು ಹೊಂದಿದ್ದನೆಂದೂ ಅವಳು ತಿಳಿದಿದ್ದಳು. ಶೇಕ್ಸ್‌ಪಿಯರ್, ರಾಫೆಲ್ ಮತ್ತು ಬೀತೋವನ್‌ರ ಬಗ್ಗೆ, ಕಾವ್ಯ ಸಂಗೀತಗಳ ನೂತನ ಸಂಪ್ರದಾಯಗಳ ಪ್ರಾಮುಖ್ಯದ ಬಗ್ಗೆ ಮಾತಾಡುವಲ್ಲಿ ಅವನು ಆನಂದವನ್ನನುಭವಿಸುತ್ತಿದ್ದನು. ಆ ನೂತನ ಸಂಪ್ರದಾಯ

ಗಳೆಲ್ಲವೂ ಅವನವುಟ್ಟಿಗೆ ಅತ್ಯಂತ ಅನನ್ಯಕ್ರಮದಲ್ಲಿ ವರ್ಗಗೊಂಡಿದ್ದಂತೆ ತೋರು ತ್ತಿದ್ದುವು.

'ಸರಿಯಾಗ. ನಿಮ್ಮ ಹವ್ಯಾಸಕ್ಕೆ ನಾನು ಅಡ್ಡಿ ಬರುವುದಿಲ್ಲ' ಎಂದವಳು ಅವನ ಅಧ್ಯಯನ ಮಂದಿರವನ್ನು ತಲುಪಿದಾಗ ನುಡಿದಳು. ಅವನ ಅಂಗಸೇವಕ ಮೋಂಬತ್ತಿಯ ಮೇಲೆ ಮರೆಯಿರಿಸಿ,, ಕುರ್ಚಿಯ ಪಕ್ಕದಲ್ಲಿ ನೀರಿನ ಸೀಸೆಯಿಟ್ಟು, ಅವನ ಆಗಮನ ನಿರೀಕ್ಷೆಯಲ್ಲಿ ಎಲ್ಲವನ್ನು ಸಿದ್ಧಗೊಳಿಸಿದ್ದನು. 'ನಾನು ಹೋಗುತ್ತೇನೆ. ಮಾಸ್ಕೋಗೆ ಕಾಗದಗಳನ್ನು ಬರೆಯುತ್ತೇನೆ.'

ಅವನವಳ ಕೈಯದುಮಿ, ಚುಂಬಿಸಿದನು.

'ಏನಿದ್ದರೂ, ಇವರೊಬ್ಬರು ಸಭ್ಯವ್ಯಕ್ತಿ; ಸತ್ಯವಂತರು, ದಯಾಳು; ತಮ್ಮ ಕ್ಷೇತ್ರದಲ್ಲಿ ಸುಪ್ರಸಿದ್ಧರು' ಎಂದು ಅನ್ನಾ ತನ್ನ ಕೋಣೆಯನ್ನು ಪ್ರವೇಶಿಸುವಾಗ, ಅವನನ್ನು ಸುಲಭವಾಗಿ ಪ್ರೀತಿಸಲಾಗದೆಂದು ಯಾರೋ ಹೇಳಿಕೊಳ್ಳುತ್ತಿದ್ದುದನ್ನು ವಿರೋಧಿಸುತ್ತಿದ್ದಳೆಂಬಂತೆ, ತನ್ನಷ್ಟಕ್ಕೆ ತಾನು ಗೊಣಗಿಕೊಂಡಳು. 'ಆದರೆ ಅವರ ಕಿವಿಗಳೇಕೆ ವಿಚಿತ್ರವಾಗಿ ಹೊರಗೆ ಚಾಚಿಕೊಂಡಿವೆ? ಅದಕ್ಕೆ ಅವನ ಕೂದಲು ಕತ್ತರಣೆ ಕಾರಣವಾಗಿರಬಹುದೆ?'

ಹನ್ನೆರಡು ಗಂಟೆಗೆ ಸರಿಯಾಗಿ, ಅನ್ನಾ ಮೇಜಿನ ಮುಂದೆ ಕುಳಿತು ಡಾಲಿಗೆ ಬರೆಯುತ್ತಿದ್ದ ಪತ್ರವನ್ನು ಮುಗಿಸುವಷ್ಟರಲ್ಲಿ, ಮನೆ ಚಪ್ಪಲಿಯನ್ನು ಮೆಟ್ಟಿಕೊಂಡು ಅವನು ತನ್ನ ಕಡೆಗೆ ಬರುತ್ತಿದ್ದಂತೆ ಕೇಳಿಸಿತು. ಮರುಕ್ಷಣವೆ ಅವನು ಕೈಕಾಲು ಮುಖ ತೊಳೆದುಕೊಂಡು, ತಲೆ ಬಾಚಿಕೊಂಡು, ಪುಸ್ತಕವೊಂದನ್ನು ಕಂಕುಳಲ್ಲಿರುಕಿಕೊಂಡು ಅವಳ ಪಕ್ಕದಲ್ಲಿದ್ದನು.

'ಹೊತ್ತಾಯಿತು, ಹೊತ್ತಾಯಿತು' ಎಂದವನು ವಿಲಕ್ಷಣ ಮಂದಹಾಸದೊಡನೆ ನುಡಿಯುತ್ತ, ಶಯನ ಮಂದಿರಕ್ಕೆ ಹೋದನು.

'ಆ ರೀತಿ ಇವರ ಕಡೆಗೆ ನೋಡಲು ಅವನಿಗೆ ಅಧಿಕಾರ ಕೊಟ್ಟವರಾರು?' ಎಂದು ಅನ್ನಾ ಕರೆನಿನ್‌ನನ್ನು ವ್ರಾನ್ಸ್ಕಿ ನೋಡುತ್ತಿದ್ದ ಪರಿಯನ್ನು ನೆನೆದು, ಆಲೋಚಿಸಿದಳು.

ಉಡುಪು ಬದಲಾಯಿಸಿಕೊಂಡು ಅವಳು ಶಯನ ಗೃಹವನ್ನು ಪ್ರವೇಶಿಸಿದಳು. ಮಾಸ್ಕೋದಲ್ಲಿದ್ದಾಗ, ಅವಳ ಕಣ್ಣು ನಗುಗಳಲ್ಲಿ ತುಂಬಿ ತುಳುಕುತ್ತಿದ್ದ ಹುರುಪು ಹುಮ್ಮಸುಗಳು ಅವಳ ಮುಖದಲ್ಲಿ ಕಾಣಲಿಲ್ಲ; ಅವಳ ಚೈತನ್ಯವೆಲ್ಲ ಉಡುಗಿ ಹೋದಂತೆ, ಅಥವಾ ಯಾವುದೋ ದೂರದ ಮೂಲೆಯಲ್ಲಿ ಮುದುಡಿಕೊಂಡಿದ್ದಂತೆ ಕಂಡಳು.

೩೪

ಪೀಟರ್ಸ್‌ಬರ್ಗ್ ಬಿಡುವಾಗ ವ್ರಾನ್ಸ್ಕಿ ಮರ್‌ಸ್ಕಾಯ ರಸ್ತೆಯಲ್ಲಿದ್ದ ತನ್ನ ವಠಾರದ ದೊಡ್ಡ ಮನೆಯನ್ನು ತನ್ನ ಅಚ್ಚುಮೆಚ್ಚಿನ ಗೆಳೆಯ ಪೆತ್ರಿಲ್‌ಸ್ಕಿಗೆ ಬಿಟ್ಟು ಕೊಟ್ಟಿದ್ದನು.

ಪೆತ್‌ರೀತ್‌ಸ್ಕಿಯೊಬ್ಬ ಯುವ ಲೆಫ್ಟಿನೆಂಟ್; ಅಂಥಾದ್ದೇನೂ ದೊಡ್ಡ ಹೆಸರು ಮಾಡಿರಲಿಲ್ಲ; ಅವನ ಕೈಯಲ್ಲಿ ಕಾಸಿರಲಿಲ್ಲ; ಜತೆಗೆ ಭಾರಿ ಸಾಲಗಾರನಾಗಿದ್ದನು. ಸಾಯಂಕಾಲದ ಹೊತ್ತಿಗೆ ಅವನು ಯಾವಾಗಲೂ ಕುಡಿದು ಅಮಲೇರಿರುತ್ತಿದ್ದನು. ತನ್ನ ವಿವಿಧ ವಿಲಕ್ಷಣ, ಅಸಹ್ಯ ಸ್ವೇಚ್ಛಾವರ್ತನೆಗಳಿಗಾಗಿ ಅವನು ಹಲವು ಸಲ ಬಂದಿಖಾನೆಯಲ್ಲಿರುತ್ತಿದ್ದನು. ಆದರೆ ಮೇಲಧಿಕಾರಿಗಳಿಗೆ ಮತ್ತು ಸಂಗಾತಿಗಳಿಗೆ ಅವನು ಬೇಕಾದವನಾಗಿದ್ದನು.

ಮಧ್ಯಾಹ್ನದ ಸಮಯದಲ್ಲಿ ವ್ರಾನ್ಸ್ಕಿ ರೈಲುನಿಲ್ದಾಣದಿಂದ ನೇರವಾಗಿ ಬಂದು ತನ್ನ ಮನೆಯ ಮುಂಭಾಗದಲ್ಲಿ ನಿಂತಾಗ, ಪರಿಚಿತವಾದ ಬಾಡಿಗೆ ಗಾಡಿಯೊಂದು ಅವನ ಕಣ್ಣಿಗೆ ಬಿತ್ತು. ಅವನು ಗಂಟೆಗುಂಡಿಯನ್ನೊತ್ತಿದಾಗ, ಗಂಡಸರ ಅಟ್ಟಹಾಸಗಳೂ ಹೆಂಗಸರ ಹರಟೆಗಳೂ, ರಕ್ಕರನ್ನು ಒಳಗೆ ಬಿಡಬೇಡವೆಂಬ ಪೆತ್ರೀತ್‌ಸ್ಕಿಯ ಬೊಬ್ಬೆಯೂ ಕೇಳಿಸಿದುವು. ತಾನು ಬಂದ ಸುದ್ದಿಯನ್ನು ಅಲ್ಲಿದ್ದವರಿಗೆ ತಿಳಿಸಲು ಸೇವಕರಿಗ ಅವಕಾಶ ಕೊಡದೆ, ವ್ರಾನ್ಸ್ಕಿ ಮುಂಗೋಣೆಗೆ ನಡೆದನು. ಶಾಂತಿಯುತವಾದ ಗುಲಾಬಿವರ್ಣದ ಮುಖದ, ಧೂಮ್ರವರ್ಣದ ಸ್ಯಾಟಿನ್ ಮೇಲಂಗಿಯನ್ನು ಹೊದ್ದ, ಬ್ಯಾರನೆಸ್‌ಷಿಲ್ಟಿನ್ ಕಾಫಿ ಮಾಡುತ್ತ ದುಂಡುಮೇಜಿನ ಬಳಿ ಕುಳಿತಿದ್ದಳು; ಪ್ಯಾರಿಸ್ ರೀತಿಯ ಉಚ್ಚಾರಣೆಯಲ್ಲಿ ಕನೇರಿ ಹಕ್ಕಿಯಂತೆ ಅವಳು ಹರಟುತ್ತಿದ್ದಳು. ಅವಳು ಪೆತ್ರೀತ್‌ಸ್ಕಿಯ ಗೆಳತಿ. ಮೇಲಂಗಿಯನ್ನು ಧರಿಸಿದ್ದ ಪೆತ್ರೀತ್‌ಸ್ಕಿ ಅವಳೊಂದು ಪಕ್ಕದಲ್ಲಿ, ಅದೆ ತಾನೆ ಕಚೇರಿಯಿಂದ ನೇರವಾಗಿ ಬಂದಿದ್ದಂತಿದ್ದ ಸಮವಸ್ತ್ರಧರಿಸಿದ್ದ ಕ್ಯಾಮರೊವ್‌ಸ್ಕಿ ಮತ್ತೊಂದು ಪಕ್ಕದಲ್ಲಿ, ಕುಳಿತಿದ್ದರು.

'ಭಲೆ, ವ್ರಾನ್ಸ್ಕಿ!' ಎಂದು ಪೆತ್ರೀತ್‌ಸ್ಕಿ ಮೇಲ್ನೆಗೆದು ಅಬ್ಬರಿಸಿದನು. 'ಇವರೇ ನಮ್ಮ ಆತಿಥೇಯರು. ಬ್ಯಾರೊನೆಸ್, ಹೊಸ ಪಾತ್ರೆಯಲ್ಲಿರುವ ಕಾಫಿಯನ್ನವರಿಗೆ ಕೊಡಿ. ಓ, ಎಂಥ ಅಚ್ಚರಿ! ನಿನ್ನ ಅಧ್ಯಯನಕ್ಕೊದಗಿರುವ ಈ ಆಭರಣದಿಂದ ನಿನಗೆ ತೃಪ್ತಿಯಾಗಿದೆಯೆಂದು ನಂಬಿದ್ದೇನೆ' ಎಂದವನು ಬ್ಯಾರನೆಸ್‌ಕಡೆಗೆ ಕೈತೋರುತ್ತ ನುಡಿದನು. 'ನಿನಗಿವರ ಪರಿಚಯವಿರಬೇಕಲ್ಲವೆ?'

'ಇಲ್ಲದೆ ಏನು?' ಎಂದು ವ್ರಾನ್ಸ್ಕಿ ಬ್ಯಾರನೆಸ್‌ಳ ಕೈಯನ್ನದುಮುತ್ತ, ಸಂತೃಪ್ತಿಯ ಮಂದಹಾಸ ಬೀರಿದನು. 'ಇವರೂ ನಾನೂ ಹಳೆಯ ದೋಸ್ತಿಗಳು.'

'ನೀವು ಇದೆ ತಾನೆ ಪ್ರಯಾಣ ಮಾಡಿ ಬಂದಿದ್ದೀರಿ. ನಾನು ಹೋಗುತ್ತೇನೆ. ನಿಮಗೆ ನಾನು ಅಡ್ಡವೆನ್ನುವುದಾದರೆ, ಈ ಕ್ಷಣವೇ ಮನೆಗೆ ಹೋಗುತ್ತೇನೆ' ಎಂದು ಬ್ಯಾರನೆಸ್ ನುಡಿದಳು.

'ನೀವೆಲ್ಲಿದ್ದರೆ ಅದೇ ನಿಮ್ಮ ಮನೆ, ಬ್ಯಾರನೆಸ್' ಎಂದು ವ್ರಾನ್ಸ್ಕಿ ನಗೆಯಾಡಿದನು. ಉದಾಸೀನವಾಗಿ ಕಮೆರೊವ್‌ಸ್ಕಿಯ ಕೈ ಹಿಡಿದುಕೊಂಡು 'ನಿಮಗೆ ಶುಭಾಶಯಗಳು, ಕಮೆರೊವ್‌ಸ್ಕಿ' ಎಂದವನು ನುಡಿದನು.

'ಅಷ್ಟು ಸೊಗಸಾಗಿ ನೀವು ಮಾತಾಡಲಾರಿರಿ' ಎಂದು ಬ್ಯಾರನೆಸ್ ಪೆತ್ರೀತ್‌ಸ್ಕಿಯೊಡನೆ ಹೇಳಿದಳು.

'ಓ, ನನ್ನಿಂದ ಸಾಧ್ಯವಾಗದೇನು? ಊಟವಾದ ಮೇಲೆ ಅಷ್ಟೇ ಚೆನ್ನಾಗಿ ಮಾತಾಡುತ್ತೇನೆ.'

'ಊಟದ ತರುವಾಯ ಮಾತಿಗೆ ಮನ್ನಣೆ ದೊರಕದು! ಅದಿರಲಿ, ನಿಮಗೆ ಕಾಫಿ ಅಣಿಮಾಡುತ್ತೇನೆ. ಮಾರ್ಜನಾದಿ ಕರ್ಮಗಳನ್ನು ಮುಗಿಸಿ, ಸಿದ್ಧರಾಗಿ' ಎಂದು ಬ್ಯಾರನೆಸ್ ಮತ್ತೆ ಕುಳಿತುಕೊಂಡು, ಹೊಸ ಕಾಫಿ ಪಾತ್ರೆಯ ತಿರುಪನ್ನು ತಿರುಗಿಸುತ್ತ ನುಡಿದಳು. 'ನನಗೆ ಮತ್ತಷ್ಟು ಕಾಫಿ ಕೊಡಿ, ಪಿಯರಿ' ಎಂದವಳು ಪೆತ್ರೀತ್‌ಸ್ಕಿಯನ್ನು ಕೇಳಿದಳು. ಅವನ ಕೊನೆಯ ಹೆಸರಿನಲ್ಲಿ ಪೀಟರ್ ಎಂಬ ಧ್ವನಿ ಕೇಳಿಸುತ್ತಿದ್ದುದರಿಂದ ಅವಳವನನ್ನು ಪೀಟರ್ ಎಂದೇ ಕರೆಯುತ್ತಿದ್ದಳು. ಅವನೊಡನೆಯ ಸಂಬಂಧಗಳನ್ನು ಮರೆಮಾಚಲು ಅವನು ಪ್ರಯತ್ನಿಸಲಿಲ್ಲ. 'ನಾನೂ ಒಂದಿಷ್ಟು ಅದರೊಳಗೆ ಸೇರಿಸುತ್ತೇನೆ.'

'ನೀವದನ್ನು ಕೆಡಿಸುತ್ತೀರಿ.'

'ಇಲ್ಲ, ನಾನಂಥ ಕೆಲಸಮಾಡುವುದಿಲ್ಲ. ಸರಿ, ನಿಮ್ಮ ಮಡದಿ ಎಲ್ಲಿ?' ಎಂದು ಬ್ಯಾರನೆಸ್ ತನ್ನ ಮಿತ್ರನೊಡನೆ ವ್ರಾಂಸ್ಕಿ ನಡಸುತ್ತಿದ್ದ ಸಂಭಾಷಣೆಯನ್ನು ಅರೆಗಡಿದು, ಅನಿರೀಕ್ಷಿತವಾಗಿ ಕೇಳಿದಳು. 'ನೀವಿಲ್ಲಿ ಇಲ್ಲದಾಗ ನಿಮ್ಮ ಮದುವೆಯ ವಿಷಯವನ್ನೆ ಕುರಿತು ಪ್ರಸ್ತಾಪಿಸುತ್ತಿದ್ದೆವು. ನಿಮ್ಮ ಮಡದಿಯನ್ನು ಕರೆತಂದಿದ್ದೀರೇನು?'

'ಇಲ್ಲ, ಬ್ಯಾರನೆಸ್ ನಾನೊಬ್ಬ ಸ್ವೇಚ್ಛಾಚಾರಿ ಜಿಪ್ಸಿ. ಹುಟ್ಟಿದ್ದು ಜಿಪ್ಸಿಯಾಗಿ; ಸಾಯುವುದೂ ಜಿಪ್ಸಿಯಾಗಿಯೇ.'

'ಅದೇ ಸರಿ! ಎಲ್ಲಿ, ನಿಮ್ಮ ಕೈ ಕೊಡಿ.'

ಅವಳು ವ್ರಾಂಸ್ಕಿಯ ಕೈಹಿಡಿದುಕೊಂಡು, ಅನೇಕ ತಮಾಷೆಗಳನ್ನೊಳಗೊಂಡ ಕತೆಗಳನ್ನು ವಿವರಿಸಿದಳು; ತನ್ನ ಜೀವನ ವಿಧಾನದ ಬಗೆಗಿನ ಇತ್ತೀಚಿನ ಯೋಜನೆಗಳನ್ನು ನಿರೂಪಿಸಿದಳು; ಆ ಬಗ್ಗೆ ಅವನ ಸಲಹೆಗಳನ್ನು ತಿಳಿದುಕೊಳ್ಳಲಪೇಕ್ಷಿಸಿದಳು.

'ಅವರಿನ್ನೂ (ಅವರೆಂದರೆ ಅವಳ ಗಂಡ) ವಿವಾಹವಿಚ್ಛೇದನಕ್ಕೊಡ್ಡಿಯಾಗಿದ್ದಾರೆ. ಈಗ ನಾನು ಮಾಡುವುದಾದರೂ ಏನು? ಅವರ ಮೇಲೆ ಕಟ್ಟಳೆ ಜರುಗಿಸೋಣವೆಂದು ಕೊಂಡಿದ್ದೇನೆ. ಈ ಕ್ರಮವನ್ನು ನೀವು ಅನುಮೋದಿಸುವಿರಾ? ಕಮೆರೊವ್‌ಸ್ಕಿ, ಕಾಫಿಯ ಮೇಲೆ ನಿಮ್ಮ ಕಣ್ಣಿರಲಿ. ಅಯ್ಯೋ, ಅದು ಉಕ್ಕಿ ಹೋದೀತು! ನಾನು ಅನ್ಯಾಸಕ್ತಳಾಗಿದ್ದೇನೆನ್ನುವುದು ನಿಮಗೆ ಕಾಣಿಸದೆ? ನಾನು ಕಟ್ಟಳೆ ಜರುಗಿಸಬೇಕೆಂದು ಯೋಚಿಸುತ್ತಿದ್ದೇನೆ. ಏಕೆಂದರೆ, ನಾನು ನಿಜಕ್ಕೂ ನನ್ನ ಆಸ್ತಿಯನ್ನು ಬಿಟ್ಟುಕೊಡಲಾರೆ. ನಾನವರ ನಂಬಿಕೆಗೆ ಪಾತ್ರಳಾಗಿಲ್ಲವೆಂಬುದೇ ಅವರ ಆಪಾದನೆ. ಅದಕ್ಕಿಂತ ಅಸಹ್ಯವಾದ ಮೂರ್ಖತನವನ್ನು ನೀವು ಊಹಿಸಿಕೊಳ್ಳಬಲ್ಲಿರಾ?' ಎಂದವಳು ತಾತ್ಸಾರವಾಗಿ ನುಡಿದಳು. 'ಆ ಕಾರಣಕ್ಕಾಗಿ ಅವರು ನನ್ನ ಆಸ್ತಿಯ ಆದಾಯವನ್ನು ಲಪಟಾಯಿಸಿ ಕೊಳ್ಳಬೇಕೆಂದಿದ್ದಾರೆ.'

ಈ ಸುಂದರ ಯುವತಿಯ ಉಲ್ಲಾಸದಾಯಕ ಜಲ್ಪವನ್ನು ವ್ರಾಂಸ್ಕಿ ಸಹರ್ಷನಾಗಿ ಆಲಿಸಿದನು ಅವಳಲ್ಲವನಿಗೆ ಸಹಾನುಭೂತಿಯಿತ್ತು. ಅಂಥ ಲಾವಣ್ಯವತಿಯ ರೊಡನೆ ಸಾಮಾನ್ಯವಾಗಿ ವ್ಯವಹರಿಸುತ್ತಿದ್ದ ಧ್ವನಿಯಲ್ಲಿ, ತುಸು ಗಂಭೀರವಾಗಿಯೇ ಅವನು ಸಲಹೆ ನೀಡಿದನು. ಪೀಟರ್ಸ್‌ಬರ್ಗ್ ಜಗತ್ತಿನಲ್ಲವನು ಎರಡು ತೆರನ ಜನರನ್ನು ಕಂಡಿದ್ದನು. ಕೆಳಗಿನ ದರ್ಜೆಯ ಜನ ಬೆಪ್ಪರು, ನಾಡಾಡಿಗಳು, ಹಾಸ್ಯಾಸ್ಪದರು. ವಿಧ್ಯುಕ್ತವಾಗಿ ಮದುವೆಯಾದ ಏಕೈಕ ಪತ್ನಿಯೊಡನೆ ಒಬ್ಬ ಗಂಡ ವಾಸಿಸತಕ್ಕದ್ದೆಂದೂ,

ಯುವತಿಯರು ಪರಿಶುದ್ಧರಾಗಿರಬೇಕೆಂದೂ, ವಿವಾಹಿತ ಸ್ತ್ರೀಯರು ಶೀಲವಂತೆಯರಾಗಿರಬೇಕೆಂದೂ, ಗಂಡಸರು ಪೌರುಷಯುಕ್ತರಾಗಿ, ಜಿತೇಂದ್ರಿಯರಾಗಿ, ದೃಢಸಂಕಲ್ಪವುಳ್ಳವರಾಗಿರಬೇಕೆಂದೂ, ಅವರು ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಬೇಕೆಂದೂ, ದಿನನಿತ್ಯದ ಹೊಟ್ಟೆಬಟ್ಟೆಗಳಿಗಾಗಿ ಸಂಪಾದನೆ ಮಾಡಬೇಕೆಂದೂ, ಸಾಲಗಳನ್ನು ತೀರಿಸಬೇಕೆಂದೂ, ಅಂಥದೇ ಅಸಂಬದ್ಧವಾದ ವ್ಯವಹಾರಗಳಿಂದ ಮುಕ್ತರಾಗಬೇಕೆಂದೂ ಅವರು ನಂಬಿಕೊಂಡಿದ್ದರು. ಈ ಬಗೆಯ ಜನ ಓಬಿರಾಯನ ಕಾಲದವರು, ನಾಚಿಕೆಗೇಡಿನವರು. ತನ್ನನ್ನು ಒಳಗೊಂಡಂತೆ ಮತ್ತೊಂದು ಬಗೆಯ ಸಾಚಾ ಜನರಿದ್ದರು. ಎಲ್ಲರಿಗಿಂತ ಮಿಗಿಲಾಗಿ, ಇವರು ಸುಂದರರು, ರಸಿಕರು, ಉಲ್ಲಾಸಶೀಲರು, ಎದೆಗಾರಿಕೆಯುಳ್ಳವರು, ಉದಾರಚಿತ್ತರು. ಅವರು ನಿಸ್ಸಂಕೋಚವಾಗಿ ಭಾವೋದ್ರೇಕಕ್ಕೆ ವಶರಾದವರು ; ಉಳಿದದ್ದೇನೇ ಆಗಲಿ, ನಗೆಯಾಡುತ್ತಿದ್ದವರು.

ಮಾಸ್ಕೋ ನಗರದ ಭಿನ್ನ ಜಗತ್ತಿನ ಪ್ರಭಾವದಿಂದಿನ್ನೂ ಪಾರಾಗದಿದ್ದ ವ್ರಾನ್ಸ್ಕಿ ಪ್ರತ್ಯಾಗಮನದ ಪ್ರಪ್ರಥಮ ಕ್ಷಣಗಳಲ್ಲಿ ಎಂಥದೋ ಆಘಾತಕ್ಕೊಳಗಾದಂತೆ ಭಾವಿಸಿದನು. ತನ್ನ ಹಳೆಯ ಬೂಟುಗಳಿಗೆ ಪಾದಗಳನ್ನು ನುಗ್ಗಿಸುವ ಸುಲಭತೆಯಿಂದ ಅವನು ಬಹುಬೇಗನೆ ತನ್ನ ಹಿಂದಿನ ಉಲ್ಲಾಸದಾಯಕವೂ ಸಂತೋಷಕರವೂ ಆದ ಜಗತ್ತಿಗೆ ಮತ್ತೆ ಜಾರಿದನು.

ಕೊನೆಗೂ ಕಾಫಿ ಸಿದ್ಧವಾಗಲಿಲ್ಲ. ಅದು ಕುದಿದು, ಸುತ್ತಮುತ್ತ ಸಿಡಿಯಿತು ; ಬೆಲೆಯ ಜಮಖಾನದ ಹಾಗೂ ಬ್ಯಾರನೆಸ್‌ಳ ಮೇಲಂಗಿಯ ಮೇಲೆ ಕಲೆಗಳನ್ನು ಮುದ್ರಿಸಿತು ; ಅವರ ಅಪೇಕ್ಷೆಯನ್ನದು ಈಡೇರಿಸಿತು : ಗದ್ದಲ ಮತ್ತು ಬೊಬ್ಬೆ ನಗುಗಳಿಗೆ ಅದು ಅವಕಾಶ ಕಲ್ಪಿಸಿತು.

'ನಿಮಗೆ ಶುಭವಾಗಲಿ. ಈ ಮಾಲಿನ್ಯದ ಶುದ್ಧೀಕರಣ ನಿಮ್ಮಿಂದ ಎಂದಿಗೂ ಸಾಧ್ಯವಾಗಲಾರದು. ಗೌರವಾನ್ವಿತ ವ್ಯಕ್ತಿ ಎಸಗಬಹುದಾದ ಮಹಾಪರಾಧವನ್ನು ನೀವು ನಿರ್ವಹಿಸಿದ್ದಾದರೆ, ಅದರ ಜವಾಬ್ದಾರಿಯನ್ನು ನಾನು ಹೊರಬೇಕಾಗುತ್ತದೆ. ಅವರ ಕೊರಳಿಗೆ ಚಾಕು ಹಿಡಿಯಬೇಕೆಂಬುದು ನಿಮ್ಮ ಸಲಹೆಯೇನು ?'

'ಹಾಗಾದರೆ, ನಿಜಕ್ಕೂ ನಿಮ್ಮ ಕೈ ಅವರ ತುಟಿಗಳನ್ನು ಸ್ಪರ್ಶಿಸುವಷ್ಟು ಹತ್ತಿರದಲ್ಲಿರಲಿ. ಅವರು ನಿಮ್ಮ ಕೈಯನ್ನು ಚುಂಬಿಸುತ್ತಾರೆ. ಎಲ್ಲವೂ ತೃಪ್ತಿಕರವಾಗಿ ಕೊನೆಗಾಣುತ್ತದೆ' ಎಂದು ವ್ರಾನ್ಸ್ಕಿ ಉತ್ತರಿಸಿದನು.

'ಸರಿ, ಹಾಗಾದರೆ, ಸಂಜೆಯ ತನಕ ನನ್ನ ಶುಭಾಶಯಗಳು. ಫ್ರೆಂಚ್ ರಂಗ ಮಂದಿರದಲ್ಲಿ ಭೇಟಿಯಾಗೋಣ' ಎಂದವಳು ಮರೆಯಾಗುವಾಗ, ಅವಳ ರೇಷ್ಮೆಯ ಮುರಮುರ ಶಬ್ದ ಕೇಳಿಸುತ್ತಿತ್ತು.

ಕಮೆರೊವ್‌ಸ್ಕಿ ಸಹ ಮೇಲೆದ್ದನು. ಅವನ ನಿರ್ಗಮನಕ್ಕೆ ಕಾಯದೆ ವ್ರಾನ್ಸ್ಕಿ ಅವನ ಕಡೆಗೆ ತನ್ನ ಕೈ ಚಾಚಿದನು. ತದನಂತರ ಅವನು ಶೌಚಗೃಹಕ್ಕೆ ಸರಿದನು. ಅವನು ಸಮ್ಮಾರ್ಜನ ಕಾರ್ಯದಲ್ಲಿ ನಿರತನಾಗಿದ್ದಾಗ, ಅವನ ಸೈರು ಹಾಜರಿಯಲ್ಲಿ ತನ್ನ ಸ್ಥಿತಿ ಹೇಗೆ ಬದಲಾವಣೆಗೊಂಡಿತ್ತೆಂಬುದನ್ನು ಪೆತ್ರೀತ್‌ಸ್ಕಿ ಸಂಕ್ಷೇಪವಾಗಿ ತಿಳಿಸಿದನು. ಅವನ ಕೈಯಲ್ಲಿ ಒಂದು ಚಿಕ್ಕಾಸೂ ಇರಲಿಲ್ಲ. ಒಂದು ಪೈಸೆಯನ್ನಾದರೂ ಅವನಿಗೆ

ಕೊಡುವುದಿಲ್ಲವೆಂದೂ, ಅವನ ಸಾಲಗಳನ್ನು ತೀರಿಸುವುದಿಲ್ಲವೆಂದೂ ಅವನ ತಂದೆ ಸ್ಪಷ್ಟಪಡಿಸಿದ್ದನು. ಅವನ ಮೇಲೆ ಕಟ್ಟಳೆ ಹೂಡುವುದಾಗಿ ಅವನ ದರ್ಜಿ ಅವನಿಗೆ ಬೆದರಿಕೆ ಹಾಕಿದ್ದನು. ಇತರ ಸಾಲಗಾರರು ಸಹ ಅವನನ್ನನುಸರಿಸಿದ್ದರು. ತನ್ನ ಸ್ವೇಚ್ಛಾಚಾರದ ಹುಚ್ಚು ಸಾಹಸಗಳಿಗೆ ಇತಿಶ್ರೀ ಹಾಡದಿದ್ದರೆ, ಅವನು ರಾಜೀನಾಮೆ ನೀಡಬೇಕಾಗುತ್ತದೆಂದು, ಅವನ ದಳನಾಯಕ ಸ್ಪಷ್ಟಪಡಿಸಿದ್ದನು. ತನಗೆ ಸಾಲಕೊಡುವುದಾಗಿ ಬ್ಯಾರನೆಸ್ ಮತ್ತೆಮತ್ತೆ ಅವನ ಮೇಲೆ ಒತ್ತಾಯ ಹಾಕುತ್ತಿದ್ದುದರಿಂದ, ಅವಳ ವಿಚಾರದಲ್ಲವನು ರೋಸಿಹೋಗಿದ್ದನು. ಆದರೆ ಅವನಿಗೊಂದು ಪ್ರಾಣಿ ಗೊತ್ತಿತ್ತು, ಅವಳೊಬ್ಬಳು ಅಪೂರ್ವ ಸುಂದರಿ, ಲಾವಣ್ಯವತಿ, ಪೌರ್ವಾತ್ಯ ಶೈಲಿಯ ಮಹಾರೂಪವತಿ, 'ರೆಬೆಕಬುಡಕಟ್ಟಿಗೆ ಸೇರಿದ ಆ ಹೆಣ್ಣು ನಿಮಗೆ ಗೊತ್ತೇನು ?' ಎಂದವನು ಅವಳನ್ನು ವ್ರಾಂಸ್ಕಿಗೆ ತೋರಿಸಲಣಿಯಾದನು. ಅವನು ಮತ್ತು ಬರ್ಕೊಪೆವ್ ಹಿಂದಿನ ರಾತ್ರಿ ಜಗಳವಾಡಿದ್ದರು; ದ್ವಂದ್ವ ಯುದ್ಧದ ಸಹಾಯಕನನ್ನು ಕಳಿಸುವುದಾಗಿ ಬರ್ಕೊಪೆವ್ ಹೇಳಿದ್ದನು; ಆದರೆ ಅದಾವುದೂ ಸಂಭವಿಸಲಿಲ್ಲ. ಒಟ್ಟಿನ ಮೇಲೆ ಎಲ್ಲವೂ ಠೀಕಾಗಿತ್ತು, ಆನಂದದಾಯಕವಾಗಿತ್ತು. ವಿವರಗಳನ್ನು ಬೆದಕಲು ತನ್ನ ಮಿತ್ರನಿಗವಕಾಶಕೊಡದೆ, ಪೆತ್ರೀತ್‌ಸ್ಕಿ ಸಾಮಾನ್ಯಾಸಕ್ತಿಯ ಸುದ್ದಿಗಳನ್ನು ಕಥಿಸಿದನು. ಮೂರು ವರ್ಷಗಳ ಕಾಲ ವಾಸಿಸುತ್ತಿದ್ದ ಕೋಣೆಗಳ ಪರಿಚಿತ ವಾತಾವರಣದಲ್ಲಿ ಪರಿಚಿತ ಕಥೆಗಳನ್ನು ಆಲಿಸುತ್ತಿದ್ದಂತೆ, ವ್ರಾಂಸ್ಕಿ ಹಿಂದಿನ ಪೀಟರ್ಸ್‌ಬರ್ಗ್‌ನ ಸ್ವಚ್ಛಂದ ಜೀವನದಲ್ಲಿ ಮತ್ತೆ ಒಂದಾದಂತೆ ಸುಖಸಂತೋಷವನ್ನನುಭವಿಸುತ್ತಿದ್ದನು.

'ಓ, ಬನ್ನಿ, ಅದು ಸಾಧ್ಯವಿರಲಾರದು' ಎಂದವನು ಗಟ್ಟಿಮುಟ್ಟಾದ ಕೆಂಪನೆಯ ತನ್ನ ಕೊರಳನ್ನು ತೊಳೆಯುತ್ತಿದ್ದ ತೊಟ್ಟಿಯ ಮೆಟ್ಟಿಲು ಸನ್ನೆಯಿಂದ ಕಾಲನ್ನು ಹಿಂದಕ್ಕೆಳೆದುಕೊಳ್ಳುತ್ತ ಅಬ್ಬರಿಸಿದನು. 'ಅದು ಸಾಧ್ಯವಿರಲಾರದು' ಎಂದವನು ಲೋರ ಫಾರ್ಟಿಸ್ ಹಾಫ್‌ನನ್ನು ತೊರೆದು, ಮಿಲೆಯೆವ್‌ನೊಡನೆ ನಲಿಯುತ್ತಿದ್ದಳೆಂಬ ಸುದ್ದಿಯನ್ನು ಕೇಳಿದಾಗ ಕೂಗಿಕೊಂಡನು. 'ಅವನು ಹಿಂದಿನಂತೆ ಸಂತೃಪ್ತ ಚಿತ್ತದ ಬೆಪ್ಪುತಕ್ಕಡಿಯಾಗಿದ್ದಾನೇನು ? ಬುಜುಲುಕೋವ್‌ನ ಸಮಾಚಾರವೇನು ?'

'ಓ, ನಿಮಗೊಂದು ಕಥೆ ಹೇಳುತ್ತೇನೆ! ಭರ್ಜರಿ ಕಥೆ!' ಎಂದು ಪೆತ್ರೀತ್‌ಸ್ಕಿ ಚೀರಿದನು. 'ನೃತ್ಯಗೋಷ್ಠಿಗಳೆಂದರೆ ಬುಜುಲುಕೋವ್ ಹುಚ್ಚನಾಗುತ್ತಾನೆಂಬ ವಿಷಯ ನಿಮಗೆ ಗೊತ್ತಿದ್ದದ್ದೇ. ಅವನೆಂದೂ ಆಸ್ಥಾನದ ನೃತ್ಯಗೋಷ್ಠಿಗಳನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಅವನೊಮ್ಮೆ ಇಂಥ ನೃತ್ಯಗೋಷ್ಠಿಯೊಂದರಲ್ಲಿ ಹೊಸ ಟೊಪ್ಪಿಗೆ ಧರಿಸಿ, ಹಾಜರಾದನು. ನೀವು ಹೊಸ ಟೊಪ್ಪಿಗೆಗಳನ್ನು ನೋಡಿದ್ದೀರಾ ? ತುಂಬ ಸೊಗಸಾಗಿವೆ, ಹಗುರವಾಗಿವೆ. ಅವನಲ್ಲಿ ನಿಂತಿದ್ದ....ಓ, ನಾನು ಹೇಳುವುದನ್ನು ಕೇಳಿಸಿಕೊಳ್ಳುತ್ತಿದ್ದೀರೇನು ?'

'ಕೇಳಿಸಿಕೊಳ್ಳುತ್ತಿದ್ದೇನೆ' ಎಂದು ವ್ರಾಂಸ್ಕಿ ಟರ್ಕಿಟವೆಲ್‌ನಿಂದ ಕೈಕಾಲು ಮುಖ ಒರಸಿಕೊಳ್ಳುತ್ತ, ಉತ್ತರಿಸಿದನು.

'ರಾಯಭಾರಿಯೊಬ್ಬನೊಡನೆ ಮಹಾರಾಣಿ ಬರುತ್ತಾರೆ. ದುರದೃಷ್ಟವಶಾತ್ ಅವರು ಹೊಸ ಟೊಪ್ಪಿಗೆಗಳ ಬಗ್ಗೆ ಮಾತಾಡುತ್ತಾರೆ. ರಾಯಭಾರಿಗೋರನ್ನು ಹೊಸ

ಬೇಕೆಂದು ಮಹಾರಾಣಿ ಇಚ್ಛಿಸುತ್ತಾರೆ. ದೂರದಲ್ಲಿ ನಿಂತಿದ್ದ ನಮ್ಮ ಪ್ರಿಯಮಿತ್ರ ಇದ್ದಕ್ಕಿದ್ದಂತೆ ಅವರ ಕಣ್ಣಿಗೆ ಬೀಳುತ್ತಾನೆ ...' (ತನ್ನ ಟೊಪ್ಪಿಗೆಯನ್ನು ಹಿಡಿದುಕೊಂಡು ಅಲ್ಲಿನಿಂತಿದ್ದ ಆ ಮಿತ್ರನ ಭಂಗಿಯನ್ನು ಪೆತ್ರೀತ್‌ಸ್ಕಿ ಪ್ರದರ್ಶಿಸಿದನು.) '....ಆ ಟೊಪ್ಪಿಗೆಯನ್ನು ಕೊಡುವಂತೆ ಮಹಾರಾಣಿ ಅವನನ್ನು ಕೇಳುತ್ತಾಳೆ. ಏನೊಂದೂ ಪ್ರತಿಕ್ರಿಯೆ ಇಲ್ಲ. ಟೊಪ್ಪಿಗೆಯನ್ನು ಕೊಡುವುದೂ ಇಲ್ಲ. ಜನ ಅವನ ಕಡೆಗೆ ಕಣ್ಣು ಮಿಟುಕಿಸುತ್ತಾರೆ, ತಲೆಯಲ್ಲಾಡಿಸುತ್ತಾರೆ, ಹುಬ್ಬುಗಂಟಿಕ್ಕುತ್ತಾರೆ. ಅದನ್ನವರಿಗೆ ಕೊಡು! ಮತ್ತೆ ಏನೇನೂ ಪ್ರತಿಕ್ರಿಯೆಯಿಲ್ಲ. ಅದನ್ನವರಿಗೆ ಕೊಡುವುದಿಲ್ಲ. ಕಬ್ಬಿಣದ ಸರಳಿನಂತವನು ಸೆಡೆತುಕೊಂಡು ನಿಂತಿದ್ದಾನೆ. ಆ ದೃಶ್ಯವನ್ನು ಚಿತ್ರಿಸಿಕೊಳ್ಳಿ. ತರುವಾಯ ಅವನು.... ಅವನ ಹೆಸರೇನು? ಅವನ ಹೆಸರು ಯಾವುದೇ ಇರಲಿ....ಅವನು ಟೊಪ್ಪಿಗೆಯನ್ನು ಅವನಿಂದ ಕಸಿದುಕೊಳ್ಳಲು ಪ್ರಯತ್ನಿಸುತ್ತಾನೆ....ಅವನು ಕೊಡುವುದಿಲ್ಲ....ಅದನ್ನವನಿಂದ ಕಿತ್ತುಕೊಂಡು, ಮಹಾರಾಣಿಯ ಕೈಗೆ ಕೊಡುತ್ತಾನೆ. "ನೋಡಿದಿರಾ? ಇದೇ ಹೊಸ ಟೊಪ್ಪಿಗೆ" ಎಂದವನು ನುಡಿಯುತ್ತಾನೆ. ಅವಳದನ್ನು ತಲೆಕೆಳಗಾಗಿ ತಿರುಗಿಸುತ್ತಾಳೆ. ಆ ದೃಶ್ಯವನ್ನು ಚಿತ್ರಿಸಿಕೊಳ್ಳಿ! ಅಯ್ಯೋ ದೇವರೆ, ಪೇರು ಹಣ್ಣು, ಸಕ್ಕರೆ ಮಿಠಾಯಿ ಮತ್ತು ಎರಡು ಪೌಂಡು ಚಾಕೊಲೇಟ್‌ಗಳು ಹೊರಗೆ ಬೀಳಬೇಕೆ?....ನಮ್ಮ ಪ್ರಿಯ ಮಿತ್ರ ಅವನ್ನೆಲ್ಲ ಕದ್ದೊಯ್ಯುತ್ತಿದ್ದ.'

ವ್ರಾನ್ಸ್ಕಿಯ ಮುಖದಿಂದ ಅಬ್ಬರನಗುವಿನ ಗರ್ಜನೆ ಹೊರಹೊಮ್ಮಿತು. ಆ ತರುವಾಯ ಸ್ವಲ್ಪ ಹೊತ್ತಿನ ತನಕ, ಸಂಭಾಷಣೆಯ ಮಧ್ಯದಲ್ಲಿಯೂ, ಅದರ ಸ್ಮೃತಿ ಮರುಕೊಳಿಸಿದಾಗಲೆಲ್ಲ ಬಿಳಿ ಹಲ್ಲುಗಳನ್ನು ಪ್ರದರ್ಶಿಸುತ್ತ, ಅವನ ಅಟ್ಟಹಾಸ ಗುಡುಗುತ್ತಿತ್ತು.

ಸಮಾಚಾರವನ್ನೆಲ್ಲ ಕೇಳಿ ತಿಳಿದುಕೊಂಡ ತರುವಾಯ ವ್ರಾನ್ಸ್ಕಿ ತನ್ನ ಅಂಗ ಸೇವಕನ ಸಹಾಯದಿಂದ ಸಮವಸ್ತ್ರವನ್ನು ಬದಲಾಯಿಸಿಕೊಂಡು ಕಾರ್ಯ ಕೇಂದ್ರದಲ್ಲಿ ಹಾಜರಾದನು. ಕರೆನಿನಳನ್ನು ಭೇಟಿಮಾಡಬಹುದಾದ ವೃತ್ತಗಳಲ್ಲಿ ಮುಖ ತೋರಿಸುವ ಸಲುವಾಗಿ, ಆ ಉದ್ದೇಶದಿಂದ ತನ್ನ ಸೋದರ ಬೆತ್ಸಿ ಮತ್ತು ಇತರ ಕೆಲವರ ಸಹಾಯವನ್ನು ಪಡೆಯಲೆಂದು ಅವನು ತನ್ನ ಕಾರ್ಯಾಲಯದಿಂದಲೇ ಪ್ರಯತ್ನ ನಡಸಿದನು. ಪೀಟರ್ಸ್ ವಾಡಿಕೆಯಂತೆ, ರಾತ್ರಿ ಬಹುಹೊತ್ತಿನ ತನಕ ಹಿಂದಿರುಗುವ ನಿರೀಕ್ಷೆಯಿಲ್ಲದೆ ಅವನು ಮನೆಯಿಂದ ಹೊರಬಿದ್ದನು.

ಕಾಂಡ ಎರಡು

೧

ಕಿಟ್ಟಿಯ ಆರೋಗ್ಯ ಸ್ಥಿತಿಯನ್ನು ನಿಖರವಾಗಿ ನಿರ್ಣಯಿಸುವ ಹಾಗೂ ಕ್ಷಯಿಸುತ್ತಿದ್ದ ಅವಳ ಶಕ್ತಿಯನ್ನು ಹಿಂದಿನ ಸ್ಥಿತಿಗೆ ತರುವ ವಿಧಾನಗಳನ್ನು ರೂಪಿಸುವ ಸಲುವಾಗಿ ಚಳಿಗಾಲದ ಕೊನೆಯಲ್ಲಿ, ಶರ್‌ಬತ್‌ಸ್ಕಿಯರ ಮನೆಯಲ್ಲಿ ವೈದ್ಯರು ಸಮಾಲೋಚನೆ ನಡಸಿದರು. ವಸಂತಕಾಲ ಸನ್ನಿಹಿತವಾಗುತ್ತಿದ್ದಂತೆ ಅವಳ ಆರೋಗ್ಯ ತುಂಬ ಹದಗೆಟ್ಟಿತು. ಗೃಹವೈದ್ಯ ಮೊದಲು ಕಾಡ್ ಮೀನಿನ ಎಣ್ಣೆಯನ್ನೂ, ಅನಂತರ ಕಬ್ಬಿಣದಮದ್ದನ್ನೂ, ತದನಂತರ ಸಿಲ್ವರ್ ನೈಟ್ರೇಟ್ ಅನ್ನೂ ನಿಯಮಿಸಿದನು. ಇವುಗಳಲ್ಲಿ ಯಾವೊಂದು ಮದ್ದೂ ಪ್ರಯೋಜನವಾಗಲಿಲ್ಲವಾಗಿ, ಬೇರೆಯವರಿಂದ ಚಿಕಿತ್ಸೆಮಾಡಿಸುವಂತೆ ಅವನು ಸಲಹೆಮಾಡಲಾಗಿ, ಸುಪ್ರಸಿದ್ಧ ವೈದ್ಯನೊಡನೆ ಸಮಾಲೋಚನೆ ನಡಸಲಾಯಿತು. ಇನ್ನೂ ಹರೆಯದಲ್ಲಿದ್ದ ಆ ಸುಂದರ ಪ್ರಖ್ಯಾತ ವೈದ್ಯ ಹುಡುಗಿಯ ಪರೀಕ್ಷೆಗೆ ಅವಕಾಶ ನೀಡಬೇಕೆಂದು ಕೇಳಿದನು. ಯುವತಿಯ ಸಂಕೋಚ ಪ್ರಕೃತಿ ಪೂರ್ವಪಿತೃಸಂಪ್ರದಾಯದ ರೋಗವೆಂದೂ, ಬರ್ಬರ ಸಂಸ್ಕೃತಿಯ ಅವಶೇಷವೆಂದೂ, ತನ್ನಂಥ ಹರೆಯದ ವ್ಯಕ್ತಿ ಬೆತ್ತಲೆ ತರುಣಿಯ ಮೈಯನ್ನೆಲ್ಲ ಮುಟ್ಟಿ ನೋಡುವುದು ಸ್ವಾಭಾವಿಕವಾದದ್ದೆಂದೂ ಒತ್ತಿ ಹೇಳುವಲ್ಲಿ ಆನಂದವನ್ನನುಭವಿಸುತ್ತಿದ್ದಂತೆ ಅವನು ತೋರಿದನು. ತನ್ನ ಬದುಕಿನ ಪ್ರತಿಯೊಂದು ದಿನದಲ್ಲಿಯೂ ಅದೇ ರೀತಿ ವರ್ತಿಸುತ್ತಿದ್ದ ಕಾರಣದಿಂದ, ಅದರಲ್ಲಿ ಯಾವ ವಿಧವಾದ ಆಕ್ಷೇಪವೂ ಕಾಣೆಯಾಗಿದ್ದುದರಿಂದ, ಅದು ಅವನಿಗೆ ಸಹಜವಾಗಿ ತೋರಿತು. ಅದರಿಂದಾಗಿಯೇ ಯುವತಿಯ ಸಂಕೋಚಪ್ರವೃತ್ತಿಯೊಂದು ಮೌಢ್ಯ ರೋಗಮಾತ್ರವಲ್ಲ, ವೈಯಕ್ತಿಕ ಅವಮಾನವೆಂದು ಸಹ ಅವನು ತಿಳಿದಿದ್ದನು.

ಒಂದೇ ಶಾಲೆಯಲ್ಲಿ ಏಕರೂಪದ ಪುಸ್ತಕಗಳಿಂದ ಎಲ್ಲ ವೈದ್ಯರು ಕಲಿತಿದ್ದರೂ, ಏಕ ರೀತಿಯ ವಿಜ್ಞಾನದಲ್ಲಿ ಅವರು ಪ್ರಾವೀಣ್ಯ ಪಡೆದಿದ್ದರೂ, ಸುಪ್ರಸಿದ್ಧ ವೈದ್ಯ ಕೆಟ್ಟವನೆಂದು ಕೆಲವು ಜನ ಹೇಳಿದರೂ, ಯಾವುದೋ ಕಾರಣಕ್ಕಾಗಿ ರಾಜಕುಮಾರಿಯ ಕುಟುಂಬ ಅವನಿಗೆ ಶರಣಾಗಬೇಕಾಯಿತು, ಯಾವುದೋ ರಹಸ್ಯ ಜ್ಞಾನ ಆ ಸುಪ್ರಸಿದ್ಧ ವೈದ್ಯನಿಗೆ ಮಾತ್ರಗೊತ್ತೆಂದು; ಅವನು ಮಾತ್ರ ಕಿಟ್ಟಿಯನ್ನು ರಕ್ಷಿಸಬಹುದೆಂದು ಅವರ ನೆಂಟರಿಷ್ಟರ ಸಮುದಾಯ ಅವನನ್ನೇ ಸ್ವೀಕರಿಸಿತು. ಗಾಬರಿಯಿಂದ ಕುಸಿದ, ಕಕ್ಕಾಬಿಕ್ಕಿಯಾಗಿ ನೋಡುತ್ತಿದ್ದ ರೋಗಿಯ ಮೈಯನ್ನು ಮುಟ್ಟಿ ಜಾಗರೂಕತೆಯಿಂದ ಪರೀಕ್ಷಿಸಿದ ನಂತರ, ಶ್ರದ್ಧೆಯಿಂದ ತನ್ನ ಕೈಗಳನ್ನು ತೊಳೆದುಕೊಂಡ ತರುವಾಯ, ಅವನು ದಿವಾನಖಾನೆಯಲ್ಲಿ ರಾಜಕುಮಾರನೊಡನೆ ಮಾತಾಡುತ್ತ ನಿಂತನು. ರಾಜಕುಮಾರನ ಹುಬ್ಬು ಗಂಟಿಕ್ಕಿತು; ವೈದ್ಯನ ಮಾತನ್ನಾಲಿಸುತ್ತಿದ್ದಂತೆ ತನ್ನ ಗಂಟಲನ್ನು ಸರಿಪಡಿಸಿಕೊಳ್ಳುತ್ತಿದ್ದನು. ಅಪಾರ ಲೋಕಾನುಭವವುಳ್ಳ, ಬೆಪ್ಪನೂ ರೋಗಿಯೂ ಅಲ್ಲದ ಅವನಿಗೆ ಔಷಧಿಯಲ್ಲಿ ನಂಬಿಕೆಯಿರಲಿಲ್ಲ. ಕಿಟ್ಟಿಯ ಖಾಯಿಲೆಯ ಕಾರಣ ಅವನೊಬ್ಬನಿಗೆ ಮಾತ್ರ ಸಂಪೂರ್ಣವಾಗಿ ಗೊತ್ತಿತ್ತು. ಅದರಿಂದಾಗಿ ಆ ವೈದ್ಯನ ಪ್ರಹಸನ ಅವನ ರೋಷವನ್ನು ಕೆರಳಿಸಿತ್ತು. ತನ್ನ ಮಗಳ ರೋಗಲಕ್ಷಣಗಳ ಬಗ್ಗೆ ಬಡಬಡನೆ ಗಳಹುತ್ತಿದ್ದ ಸುಪ್ರಸಿದ್ಧ

ವೈದ್ಯನ ಮಾತನ್ನಾಲಿಸುವಾಗ 'ಇವನೊಬ್ಬ ಬಾರುಡೆ ಆಸಾಮಿ' ಎಂದವನು ತನ್ನಷ್ಟಕ್ಕೆ ತಾನು ಹೇಳಿಕೊಳ್ಳುತ್ತಿದ್ದನು. ಈ ಮುದಿ ಶ್ರೀಮಂತನ ಬಗೆಗಿದ್ದ ತಾತ್ಸಾರವನ್ನು ಸಂಯಮಿಸಿಕೊಳ್ಳಲು ವೈದ್ಯನಿಗೆ ಸಾಧ್ಯವಾಗುತ್ತಿರಲಿಲ್ಲ; ಕಷ್ಟದಿಂದ ಅವನ ತಿಳಿವಳಿಕೆಯ ಕೆಳಮಟ್ಟಕ್ಕಿಳಿಯುತ್ತಿದ್ದನು. ಮುದಿಯನೊಡನೆ ಮಾತಾಡಿ ಪ್ರಯೋಜನವಿಲ್ಲವೆಂದೂ, ಈ ಮನೆಯಲ್ಲಿ ನಿರ್ಣಯ ತೆಗೆದುಕೊಳ್ಳುವವಳು ತಾಯಿಯೆಂದೂ ಅವನು ತಿಳಿದಿದ್ದನು. ತನ್ನ ಮುತ್ತುಗಳನ್ನು ಅವಳ ಮುಂದೆ ಚೆಲ್ಲುವುದೆ ಸಮನೆಂದು ಅವನು ನಿರ್ಧರಿಸಿದನು.

ಅಷ್ಟರಲ್ಲಿ ರಾಜಕುಮಾರಿ ಗೃಹವೈದ್ಯನೊಡನೆ ದಿವಾನಖಾನೆಯನ್ನು ಪ್ರವೇಶಿಸಿದಳು. ತನ್ನ ಮನಸ್ಸಿನಲ್ಲಿ ಹುದುಗಿದ್ದ ಈ ಪ್ರಹಸನದ ಅಸಂಬದ್ಧತೆ ಅವರಿಗೆ ಗೊತ್ತಾಗದಿರಲೆಂದು ರಾಜಕುಮಾರ ಹೊರಗೆ ಹೋದನು. ರಾಜಕುಮಾರಿಯ ಮನಸ್ಸು ಕಳವಳಕ್ಕೀಡಾಯಿತು. ಮುಂದೇನು ಮಾಡಬೇಕೋ ಅವಳಿಗೆ ತಿಳಿಯದಾಯಿತು. ಕಿಟ್ಟಿಯ ಕಾಯಿಲೆಗೆ ತಾನೇ ಕಾರಣಳೆಂದು ಭಾವಿಸಿದಳು.

'ಹಾ, ಡಾಕ್ಟರೆ, ನಮ್ಮ ಅದೃಷ್ಟವನ್ನು ನಿರ್ಧರಿಸಿಬಿಡಿ' ಎಂದು ರಾಜಕುಮಾರಿ ನುಡಿದಳು. 'ನನಗೆಲ್ಲವನ್ನು ಹೇಳಿಬಿಡಿ, ಭರವಸೆಗೆ ಅವಕಾಶವುಂಟೆ?' ಎಂದವಳು ಕೇಳಲಪೇಕ್ಷಿಸಿದಳು. ಆದರೆ ಅವಳ ತುಟಿ ಕಂಪಿಸಿದುವು. ಆ ಪ್ರಶ್ನೆಯನ್ನು ಕೇಳಲು ಅವಳಿಗೆ ಬಾಯಿ ಬರಲಿಲ್ಲ. 'ಏನಾಗಿದೆ? ಡಾಕ್ಟರೆ.'

'ಒಂದೇ ಒಂದು ಕ್ಷಣ ತಾಳಿಕೊಳ್ಳಿ, ರಾಜಕುಮಾರಿಯವರೆ. ನನ್ನ ಸಹೋದ್ಯೋಗಿಯೊಡನೆ ಮಾತಾಡುತ್ತೇನೆ. ತರುವಾಯ ನನ್ನ ಅಭಿಪ್ರಾಯವನ್ನು ನಿಮಗೆ ತಿಳಿಸುತ್ತೇನೆ.'

'ನಿಮ್ಮಿಬ್ಬರನ್ನೇ ಬಿಟ್ಟು ನಾವು ಹೋಗುವುದೊಳ್ಳೆಯದಲ್ಲವೆ?'

'ನಿಮ್ಮಿಷ್ಟ'

ರಾಜಕುಮಾರಿ ನಿಡುಸುಯ್ದು ಹೊರಗೆ ಹೋದಳು.

ಇಬ್ಬರು ವೈದ್ಯರೇ ಏಕಾಂತದಲ್ಲಿದ್ದಾಗ, ಕ್ಷಯರೋಗದ ಪ್ರಾರಂಭದ ಲಕ್ಷಣಗಳು ಪತ್ತೆಯಾಗಿದ್ದುವೆಂದು ಗೃಹವೈದ್ಯ ತನ್ನ ಅಭಿಪ್ರಾಯವನ್ನು ನಿರಾಡಂಬರ ರೀತಿಯಲ್ಲಿ ವ್ಯಕ್ತಪಡಿಸಿದನು. ಆದರೆ....ಸುಪ್ರಸಿದ್ಧ ವೈದ್ಯ ಮನಸ್ಸಿಲ್ಲದ ಮನಸ್ಸಿನಿಂದ ಅವನ ಮಾತುಗಳನ್ನಾಲಿಸಿದನು; ಮಾತಿನ ನಡುವೆ ತನ್ನ ದೊಡ್ಡ ಚಿನ್ನದ ಗಡಿಯಾರವನ್ನು ನೋಡಿಕೊಂಡನು. 'ಅದೆಲ್ಲ ಸರಿ. ಆದರೆ....' ಎಂದವನು ನುಡಿದನು.

ಸಂಭಾಷಣೆಯ ಮಧ್ಯದಲ್ಲಿ ಗೃಹವೈದ್ಯ ಗೌರವಪೂರ್ವಕವಾಗಿ ಮಾತು ನಿಲ್ಲಿಸಿದನು.

ನಿಮಗೆ ತಿಳಿದಿರುವಂತೆ, 'ಕ್ಷಯರೋಗದ ಪ್ರಾರಂಭದಲ್ಲಿ ಅದನ್ನು ನಿಷ್ಕರ್ಷೆ ಮಾಡುವ ಸಾಧನಗಳಿಲ್ಲ, ಕುಳಿಕಾಣಿಸಿಕೊಳ್ಳುವ ತನಕ ಯಾವುದೂ ಖಚಿತವೆನ್ನಲಾಗದು. ಆದರೆ ಅದರ ಬಗ್ಗೆ ನಾವು ಅನುಮಾನ ತಳೆಯಬಹುದು. ಈ ರೋಗಿಯ ಮಟ್ಟಿಗೆ ಚಿಹ್ನೆಗಳೇನೋ ಇವೆ: ಜೀರ್ಣಶಕ್ತಿಯ ಅಭಾವ, ನರಗಳ ಉದ್ರೇಕ, ಇತ್ಯಾದಿ. ಕ್ಷಯವೆಂದು ನಾವು ಅನುಮಾನಿಸಿರುವಾಗ, ಪುಷ್ಟಿಯನ್ನು ಹೆಚ್ಚಿಸಲು ಏನು ಮಾಡಬೇಕೆಂಬುದೇ ನಮ್ಮ ಮುಂದಿರುವ ಸಮಸ್ಯೆ.'

'ಹೌದು, ನಿಮಗೆ ಗೊತ್ತಿದೆ, ಯಾವುದೋ ನೈತಿಕ ಭಾವಾತ್ಮಕ ಕಾರಣ ಯಾವಾಗಲೂ ಅದರ ಮೂಲದಲ್ಲಿರುತ್ತದೆಂಬುದು' ಎಂದು ಗೃಹವೈದ್ಯ ಸೂಕ್ಷ್ಮಜ್ಞಾನ ಗ್ರಹಿಕೆಯ ಮಂದಹಾಸದೊಡನೆ ನಡುವೆ ಬಾಯಿ ಹಾಕಿದನು.

'ಹೌದ್ದೌದು, ಅದು ಗೊತ್ತಿರುವ ಸಂಗತಿ. ಅದರ ವಿವರಣೆ ಅನಗತ್ಯ' ಎಂದು ಸುಪ್ರಸಿದ್ಧ ವೈದ್ಯ ಮತ್ತೆ ಗಡಿಯಾರವನ್ನು ನೋಡಿಕೊಳ್ಳುತ್ತ ಉತ್ತರಿಸಿದನು. 'ಕ್ಷಮಿಸಿ, ಯೌಜ ಸೇತುವೆಯನ್ನು ಉದ್ಘಾಟಿಸಲಾಗಿದೆಯೆ? ಅಥವಾ ನಾವಿನ್ನೂ ಬಳಸಿಕೊಂಡು ಹೋಗಬೇಕೊ?' ಎಂದವನು ಪ್ರಶ್ನಿಸಿದನು. 'ಛೇಷ್. ಅದು ಸಂಚಾರಕ್ಕೆ ಸಿದ್ಧವಾಗಿದೆ ಯಷ್ಟೆ. ಹಾಗಾದರೆ ಇಪ್ಪತ್ತು ನಿಮಿಷಗಳಲ್ಲಿ ನಾನಲ್ಲಿಗೆ ಹೋಗಬಲ್ಲೆ. ನಾವು ಈ ಮೊದಲೇ ಮಾತಾಡಿಕೊಂಡಂತೆ, ಈಗಿನ ಪರಿಸ್ಥಿತಿ ಇಷ್ಟು: ಪುಷ್ಟಿಕಾರ್ಯ ಹೆಚ್ಚಬೇಕು. ಅವಳ ನರಗಳಿಗೆ ಚಿಕಿತ್ಸೆ ನಡೆಯಬೇಕು. ಎರಡಕ್ಕೂ ಸಂಬಂಧವಿದೆ. ಎರಡು ಕಡೆ ಗಳಲ್ಲಿಯೂ ನಮ್ಮ ಕೆಲಸ ಮುಂದುವರಿಸಬೇಕಾಗಿದೆ.'

'ಅವಳನ್ನು ಹೊರಗಡೆಗೆಲ್ಲಿಯಾದರೂ ಕರೆದೊಯ್ಯಬಾರದೇಕೆ?' ಎಂದು ಗೃಹ ವೈದ್ಯ ಕೇಳಿದನು.

'ನಾನು ದೂರದೇಶದ ಪ್ರವಾಸಗಳಿಗೆ ವಿರೋಧಿ. ನಿಜಕ್ಕೂ ಕ್ಷಯರೋಗ ಈಗಾ ಗಲೇ ತಲೆಹಾಕಿದ್ದರೆ—ಅದನ್ನು ತಿಳಿಯುವ ಮಾರ್ಗ ನಮಗೆ ಗೊತ್ತಿಲ್ಲ—ದೂರದೇಶದ ಪ್ರವಾಸದಿಂದ ಅವಳಿಗನುಕೂಲವಾಗದು. ಅವಳಿಗಪಾಯವೊದಗದಂತೆ ಅವಳ ಪೋಷಣೆ ಯನ್ನು ಹೆಚ್ಚಿಸುವ ಉಪಾಯವನ್ನು ಕಂಡುಹಿಡಿಯಬೇಕು.'

ಸೋಡೆನ್ ನೀರಿನ ಚಿಕಿತ್ಸಾವಿಧಾನವನ್ನು ಸುಪ್ರಸಿದ್ಧ ವೈದ್ಯ ವಿವರಿಸಿದನು; ಅದರಿಂದವಳಿಗೆ ಏನೂ ತೊಂದರೆಯಾಗದೆಂಬುದೇ ಅವನ ಶಿಫಾರಸಿಗೆ ಪ್ರಧಾನ ಕಾರಣ ವಾಗಿತ್ತು.

ಗೃಹವೈದ್ಯ ಶ್ರದ್ಧಾಗೌರವಗಳಿಂದ ಅವನ ಮಾತನ್ನಾಲಿಸಿದನು. 'ನಾನು ದೂರ ದೇಶದ ಪ್ರವಾಸದ ಪರವಾಗಿದ್ದೇನೆ. ಸ್ಥಳ ಬದಲಾವಣೆಯ ಲಾಭಕರ ಪರಿಣಾಮದ ಬಗ್ಗೆ ನನಗನುಮಾನವಿಲ್ಲ. ಯಾತನಾಮಯವಾದ ಸ್ಮೃತಿಗಳನ್ನು ಕೆರಳಿಸುವ ಸನ್ನಿವೇಶಗಳಿಂದ ಅವಳನ್ನು ದೂರವಿರಿಸುವುದಾದರೆ ಅವಳಿಗನುಕೂಲವಾಗಬಹುದು. ಮೇಲಾಗಿ ಅವಳ ತಾಯಿಗೆ ಹೊರಗಡೆ ಹೋಗುವ ಇಚ್ಛೆಯಿದೆ.'

'ಓ, ಹಾಗಾದರೆ ಅವರು ಹೋಗಲಿ. ಜರ್ಮನಿಯ ಬೂಟಾಟಿಗರು ಅವಳಿಗೆ ತೊಂದರೆಯುಂಟುಮಾಡುವ ಸಂಭವವಿದೆ. ಅವರು ನಮ್ಮ ಸಲಹೆಗಳನ್ನೊಪ್ಪಿಕೊಳ್ಳು ವಂತೆ ಏರ್ಪಾಡುಮಾಡಬೇಕು. ಸರಿ, ಅವರು ಹೋಗಲಿ.'

ಮತ್ತೊಮ್ಮೆ ಅವನು ತನ್ನ ಗಡಿಯಾರವನ್ನು ನೋಡಿಕೊಂಡನು.

'ಓ, ತುಂಬ ತಡವಾಯಿತು' ಎಂದವನು ಬಾಗಿಲ ಬಳಿಗೆ ಸರಿದನು.

ತನ್ನ ರೋಗಿಯನ್ನು ಮತ್ತೊಮ್ಮೆ ನೋಡಬೇಕೆಂದು ಕರ್ತವ್ಯಪರತೆ ಅವನಿಂದ ಆ ಮಾತು ಆಡಿಸಿತು. ಪ್ರಸಿದ್ಧ ವೈದ್ಯ ರಾಜಕುಮಾರಿಗರುಹಿದನು.

'ಏನು? ಮತ್ತೊಂದು ಪರೀಕ್ಷೆಯೆ?' ಎಂದು ತಾಯಿ ಭಯಚಕಿತೆಯಾಗಿ ಉದ್ಗಾರ ತೆಗೆದಳು.

'ಇಲ್ಲ, ಇಲ್ಲ. ಕೆಲವು ವಿಷಯಗಳನ್ನು ದೃಢಪಡಿಸಿಕೊಳ್ಳಬೇಕಾಗಿದೆ.'

'ಒಳ್ಳೆಯದು.'

ತಾಯಿ ವೈದ್ಯನೊಡನೆ ದಿವಾನಖಾನೆಯಲ್ಲಿದ್ದ ಕಿಟ್ಟಿಯ ಬಳಿಗೆ ಹೋದಳು. ಕೆಂಪು ಕೆನ್ನೆಯ, ತೆಳ್ಳನೆಯ ಕಿಟ್ಟಿ ಕೋಣೆಯ ನಡುವೆ ನಿಂತಿದ್ದಳು. ಅದೆ ತಾನೆ ಉಪೇಕ್ಷೆ

ಅವಮಾನಗಳಿಗೆ ಗುರಿಯಾಗಿದ್ದುದರಿಂದ ಅವಳ ಕಣ್ಣು ರಗರಗಿಸುತ್ತಿದ್ದುವು. ವೈದ್ಯ ಒಳಗೆ ಬರುತ್ತಿದ್ದಂತೆ ಅವಳ ಮುಖ ಕೆಂಪೇರಿತು; ಕಣ್ಣುಗಳಲ್ಲಿ ನೀರು ತುಳುಕಿತು. ತನ್ನ ಖಾಯಿಲೆಯ ಸಂಗತಿಯಾಗಲಿ, ಅದರ ಚಿಕಿತ್ಸೆಯ ವ್ಯವಸ್ಥೆಯಾಗಲಿ ವಿವೇಕ ಶೂನ್ಯ ವಾದದ್ದೆಂದವಳು ಗ್ರಹಿಸಿದಳು. ಮುರಿದುಹೋದ ಕಲಶದ ಚೂರುಗಳನ್ನು ಒಟ್ಟಿಗೆ ಸೇರಿಸುವ ಪ್ರಯತ್ನದಷ್ಟೇ ಚಿಕಿತ್ಸೆಯೂ ಅಸಂಬದ್ಧವೆಂದವಳು ಬಗೆದಳು. ಅವಳ ಹೃದಯ ಜರ್ಝರಿತವಾಗಿತ್ತು. ಗುಳಿಗೆ ಪುಡಿಗಳಿಂದ ಅದನ್ನು ಸರಿಪಡಿಸಬಹುದೆಂದವರು ಯೋಚಿಸಿರುವರೆ? ಅಷ್ಟಕ್ಕೆಲ್ಲ ತಾನೇ ಕಾರಣಳೆಂದು ತಾಯಿ ಬಗೆದಿದ್ದುದರಿಂದ ಅವಳನ್ನು ನೋಯಿಸಲು ಕಿಟ್ಟಿಗಿಷ್ಟವಿರಲಿಲ್ಲ.

'ದಯಿಯಿಟ್ಟು ಕೆಳಗೆ ಕುಳಿತುಕೊಳ್ಳಿ, ರಾಜಕುಮಾರಿಯವರೆ' ಎಂದು ಪ್ರಸಿದ್ಧ ವೈದ್ಯ ವಿನಂತಿಸಿಕೊಂಡನು.

ಅವನು ಮುಗುಳು ನಗೆ ಸೂಸಿದನು. ಅವಳೆದುರಿಗೆ ಕುಳಿತುಕೊಂಡನು. ಅವಳ ನಾಡಿ ಹಿಡಿದು ನೋಡಿದನು. ಮತ್ತೆ ಕ್ಲೇಶಕರವಾದ ಪ್ರಶ್ನೆಗಳನ್ನು ಕೇಳಿದನು. ಅವುಗಳಿಗೆ ಉತ್ತರ ನೀಡುತ್ತಿದ್ದಂತೆ, ಹಠಾತ್ತನೆ ಉದ್ರೇಕವಶಳಾಗಿ ಅವಳು ಮೇಲೆದ್ದಳು.

'ಕ್ಷಮಿಸಿ, ಡಾಕ್ಟರೆ. ಇದರಿಂದೇನೂ ಪ್ರಯೋಜನವಾಗದು. ಒಂದೇ ಪ್ರಶ್ನೆಯನ್ನು ಮೂರು ಸಾರಿ ಕೇಳಿದಿರಿ.'

ಅವಳ ಮಾತಿನಿಂದ ಪ್ರಸಿದ್ಧ ವೈದ್ಯನಿಗೆ ಸಿಟ್ಟಾಗಲಿಲ್ಲ. 'ಇದೆಲ್ಲ ಅನಾರೋಗ್ಯದಿಂದ, ನರದೌರ್ಬಲ್ಯದಿಂದ ಸಂಭವಿಸುವ ಕೆರಳಿಕೆ' ಎಂದವನು ಕಿಟ್ಟಿ ಹೊರಗೆ ಹೋದನಂತರ ಅವಳ ತಾಯಿಗೆ ವಿವರಿಸಿದನು. 'ಆದರೆ ನನ್ನ ಕೆಲಸ ಮುಗಿಯಿತು.'

ಅಸಾಧಾರಣ ಬುದ್ಧಿವಂತೆಯು ಮುಂದೆ ವಿವರಿಸುವಂತೆ, ಅವನು ಮಗಳ ದೇಹ ಸ್ಥಿತಿಯ ಬಗೆಗಿನ ವೈಜ್ಞಾನಿಕ ವಿವರಣೆಯನ್ನು ರಾಜಕುಮಾರಿಗೆ ನೀಡಿದನು; ನಿರಪಾಯ ಕಾರಿಯಾದ ಸೋಡೆನ್ ನೀರನ್ನು ಹೇಗೆ ಬಳಸಬೇಕೆಂಬುದರ ಬಗ್ಗೆ ತಿಳಿವಳಿಕೆ ಕೊಟ್ಟನು. ತಾವು ಹೊರಗಡೆಯ ಪ್ರವಾಸಕ್ಕೆ ಹೋಗಬಹುದೇ ಬೇಡವೇ ಎಂದವಳು ಕೇಳಿದಾಗ, ಗಹನವಾದ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವವನಂತೆ ಅವನು ಗಂಭೀರ ಚಿಂತನೆಗೊಳಗಾದನು. ಕೊನೆಗೆ ಅವನಿಗೊಂದು ಉತ್ತರ ಸಿಕ್ಕಿತು: ಅವರು ಹೊರಗಡೆ ಹೋಗಬಹುದು; ಆದರೆ ವಿದೇಶೀಯ ಅಳಲೆಕಾಯಿ ಪಂಡಿತರ ಮಾತು ಕೇಳಬಾರದು; ಅವರು ತನ್ನ ಸಲಹೆಯಂತೆ ಮಾತ್ರ ನಡೆದುಕೊಳ್ಳಬೇಕು.

ವೈದ್ಯರು ಅಗಲಿದ ನಂತರ, ಸಂತೋಷಕರವಾದ ಘಟನೆಯೊಂದು ಸಂಭವಿಸಿದಂತೆ ಅವರಿಗೆ ಭಾಸವಾಯಿತು. ತಾಯಿ ಹೊಸ ಹುರುಪಿನಿಂದ ತನ್ನ ಮಗಳ ಸನಿಹಕ್ಕೆ ಬಂದಳು; ಕಿಟ್ಟಿ ಸಹ ನವ ಚೈತನ್ಯ ವೈಗೂಡಿಕೊಂಡಂತೆ ವರ್ತಿಸಿದಳು. ಅವಳು ಆಗಿಂದಾಗ್ಗೆ, ಇತ್ತೀಚೆಗೆ ಯಾವಾಗಲೂ, ಸೋಗು ಹಾಕುತ್ತಿದ್ದಳು.

'ನಿಜಕ್ಕೂ ನಾನು ಚೆನ್ನಾಗಿದ್ದೇನಮ್ಮ. ನಿಮಗೆ ಹೊರಗೆ ಹೋಗುವ ಆಸೆಯಿದ್ದರೆ, ಹೋಗೋಣ' ಎಂದವಳು ನುಡಿದಳು. ಉದ್ದೇಶಿಸಿದ ಪ್ರವಾಸದಲ್ಲಿ ತನಗೂ ಆಸಕ್ತಿಯಿದೆಯೆಂದು ತೋರಿಸಿಕೊಳ್ಳುವ ಪ್ರಯತ್ನದಲ್ಲಿ ಅವಳು ಪ್ರಯಾಣ ಸಿದ್ಧತೆಯ ಬಗ್ಗೆ ಹೆಚ್ಚು ಹೆಚ್ಚು ಮಾತಾಡತೊಡಗಿದಳು.

೨

ವೈದ್ಯರು ಅಲ್ಲಿಂದ ಕಾಲ್ತೆಗೆದನಂತರ, ಡಾಲಿ ಕಿಟ್ಟಿಯನ್ನು ನೋಡುವ ಸಲುವಾಗಿ ಬಂದಳು. ಆ ದಿನ ವೈದ್ಯರೊಡನೆ ಸಮಾಲೋಚನೆ ನಡೆಯುತ್ತಿತ್ತೆಂಬ ಸಂಗತಿ ಅವಳಿಗೆ ತಿಳಿದಿತ್ತು. ಇತ್ತೀಚೆಗೆ ಅವಳಿಗೆ ಹೆರಿಗೆಯಾಗಿದ್ದರೂ, (ಚಳಿಗಾಲದ ಕೊನೆಯಲ್ಲಿ ಹೆಣ್ಣು ಮಗುವೊಂದನ್ನವಳು ಹೆತ್ತಿದ್ದಳು) ಮನೆಯಲ್ಲಿ ಸಾಕಷ್ಟು ತೊಂದರೆಗಳಿದ್ದರೂ, ಅವಳು ಹಸುಗೂಸನ್ನೂ, ಕಾಯಿಲೆಯ ಸಣ್ಣ ಹುಡುಗಿಯನ್ನೂ ಬಿಟ್ಟು, ಕಿಟ್ಟಿಯ ಪರಿಸ್ಥಿತಿಯನ್ನು ವಿಚಾರಿಸುವ ಸಲುವಾಗಿ ಬಂದಿದ್ದಳು.

'ಚೆನ್ನಾಗಿದ್ದೀರಾ?' ಎಂದವಳು ಟೋಪಿಯನ್ನು ತೆಗೆಯದೆಯೆ ದಿವಾನಖಾನೆಯನ್ನು ಪ್ರವೇಶಿಸುತ್ತಿದ್ದಂತೆ ಪ್ರಶ್ನಿಸಿದಳು. 'ನೀವೆಲ್ಲರೂ ಗೆಲವಾಗಿದ್ದೀರಿ. ಎಲ್ಲವೂ ಸರಿಯಾಗಿದೆ ತಾನೆ?'

ವೈದ್ಯರು ಹೇಳಿದ್ದನ್ನೆಲ್ಲ ಅವಳಿಗೆ ವಿವರಿಸಿ ಹೇಳಲು ಅವರು ಪ್ರಯತ್ನಿಸಿದರು. ಆದರೆ ಅವನ ಭಾಷಣಗಳ ವಾಕ್ಪ್ರವಾಹ ಹಾಗೂ ದೀರ್ಘತೆಗಳಿಂದಾಗಿ ಅವನು ಹೇಳಿದ್ದನ್ನೆಲ್ಲ ತಿಳಿಸುವುದು ಕಷ್ಟವಾಯಿತು. ಹೊರಗಡೆ ಪ್ರವಾಸ ಮಾಡಬಹುದೆಂಬ ತೀರ್ಮಾನವೊಂದೇ ಆಸಕ್ತಿ ಹುಟ್ಟಿಸುವ ವಿಷಯವಾಗಿತ್ತು.

ಡಾಲಿ ಅನೈಚ್ಛಿಕವಾಗಿ ನಿಡುಸುಯ್ದಳು. ಅವಳ ತಂಗಿ, ಅವಳ ಸನ್ಮಿತ್ರೆ ದೂರ ಹೋಗುವುದರಲ್ಲಿದ್ದಳು. ಅವಳ ಸ್ವಂತ ಬದುಕು ಸಹ ಲವಲವಿಕೆಯಿಂದಿರಲಿಲ್ಲ. ರಾಜಿಯ ನಂತರ ಆಬ್ಲಾನ್‌ಸ್ಕಿಯೊಡನೆಯ ಅವಳ ಸಂಬಂಧಗಳು ಅವಳ ಘನತೆಗೆ ಕುಂದು ತರುವಂತಿದ್ದುವು. ಅನ್ನಾ ಅವರಿಬ್ಬರನ್ನೂ ಮತ್ತೆ ಒಂದುಗೂಡಿಸಿದ್ದಳು; ಅದು ಕೇವಲ ತಾತ್ಕಾಲಿಕವಾಗಿ ಮಾತ್ರ; ಮತ್ತೊಮ್ಮೆ ಅವರ ದಾಂಪತ್ಯ ಸಾಮರಸ್ಯ ಅದೇ ಜಾಗದಲ್ಲಿ ಮುರಿದುಬಿದ್ದಿತ್ತು. ಏನೊಂದೂ ನಿರ್ದಿಷ್ಟ ಘಟನೆ ಸಂಭವಿಸಿರಲಿಲ್ಲ; ಆದರೆ ಆಬ್ಲಾನ್‌ಸ್ಕಿ ಹೆಚ್ಚಾಗಿ ಮನೆ ಸೇರುತ್ತಿರಲಿಲ್ಲ; ಹಣದ ಕೊರತೆಯಂತು ಇದ್ದೇ ಇರುತ್ತಿತ್ತು. ಅವನ ವಿಶ್ವಾಸ ದ್ರೋಹಕ್ಕೆ ಸಂಬಂಧಿಸಿದ ಸಂಶಯಗಳು ಅವಳನ್ನು ಕ್ರೂರವಾಗಿ ಘಾತಿಸುತ್ತಿದ್ದುವು. ಇತ್ತೀಚೆಗೆ ತಾನೆ ತೊಂದರೆಯನ್ನನುಭವಿಸಿದ ಕಾರಣಕ್ಕಾಗಿ, ನೂತನ ಮಾತ್ಸರ್ಯಾಘಾತದ ಭಯದಿಂದ ಆ ಸಂಶಯವನ್ನು ಮನಸ್ಸಿನಿಂದಾಚೆಗಟ್ಟುತ್ತಿದ್ದಳು. ಆದರೆ ಒಮ್ಮೆ ಅನುಭವಿಸಿದ ಆಘಾತಕ್ಕೆ ಹೊಂದಿಕೊಂಡದ್ದರಿಂದಲೋ ಏನೋ ಅವಳಿಗದು ಮೊದಲಿನಂತೆ ಕ್ರೂರವಾಗಿ ಪರಿಣಮಿಸಲಿಲ್ಲ. ವಿಶ್ವಾಸ ದ್ರೋಹದ ಸಂಗತಿ ಅವಳ ಗಮನಕ್ಕೀಗ ಬಂದರು ಸಹ, ಅದರಿಂದ ಅವಳ ವೈವಾಹಿಕ ಸಂಬಂಧಗಳಿಗೆ ವಿರಾಮವೊದಗುವ ಸಂಭವವಿರುತ್ತಿತ್ತು. ಅಂಥ ವಂಚನೆಗವಳು ಸಿದ್ಧವಾಗಿದ್ದಳು. ಅವನ ಬಗ್ಗೆ ಅವಳಿಗೆ ತಾತ್ಸಾರವಿರುತ್ತಿತ್ತು. ಅಷ್ಟೇ ಅಲ್ಲ, ಅದಕ್ಕಿಂತ ಮಿಗಿಲಾಗಿ ತನ್ನ ದೌರ್ಬಲ್ಯದ ಬಗ್ಗೆಯೂ ಅವಳಿಗೆ ಧಿಕ್ಕಾರವಿರುತ್ತಿತ್ತು. ಜತೆಗೆ, ದೊಡ್ಡ ಕುಟುಂಬದ ರಕ್ಷಣೆಯ ಹೊಣೆಗಾರಿಕೆಯಿಂದ ಅವಳು ಬೆಂದು ಬೆಂಡಾಗಿದ್ದಳು. ಹಸುಗೂಸಿನ ಶುಶ್ರೂಷೆ ಅವಳಿಗೊಂದು ಹೊರೆಯಾಗಿತ್ತು; ಇಲ್ಲವೆ, ದಾದಿ ಹೇಳದೆ ಕೇಳದೆ ಓಡಿಹೋಗುತ್ತಿದ್ದಳು; ಅದೂ ಇಲ್ಲ, ಒಂದಲ್ಲೊಂದು ಮಗು ರೋಗಗ್ರಸ್ತವಾಗಿರುತ್ತಿತ್ತು.

ಮುಂದುವರಿಯುವುದು

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

1. ಪ್ರೊ॥ ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
ವಿಶ್ವಚೇತನ-ಕಲಾನಿಲಯ
ಕಾಳಿದಾಸ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨

2. ಎ. ಆರ್. ನಾಗಭೂಷಣ, ಇಂಗ್ಲಿಷ್ ಉಪನ್ಯಾಸಕ
1235, ಕೆ. ಎಂ. ಪುರಂ, ಮೈಸೂರು–೫೭೦ ೦೦೪

3. ಎಚ್. ಸಂಜೀವಯ್ಯ
ಭೌತಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

4. ಲಕ್ಷ್ಮೀನಾರಾಯಣ ಅರೋರಾ
ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

5. ಡಾ॥ ಹೆಚ್. ಎಸ್. ನಾಗಭೂಷಣಯ್ಯ
ಪ್ರೊಫೆಸರ್, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್
ಮೈಸೂರು–೫೭೦ ೦೦೮

6. ಶ್ರೀಮತಿ ಎಂ. ಎಸ್. ಸುಮಿತ್ರಾ
1096, ಚಾಮರಾಜಪುರಂ, ಮೈಸೂರು–೫೦೦ ೦೦೧

7. ಮಾಧವರಾವ್ ಮುಧೋಳ್
ನಂ. 1474, 7ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು–೫೭೦ ೦೦೪

8. ಪ್ರೊ॥ ಎ. ಎನ್. ಮೂರ್ತಿರಾವ್
185, ಎಚ್. ಎ. ಎಲ್. ಲೇ ಔಟ್, 2ನೇ ಹಂತ, ಸಂಜಯನಗರ
ಬೆಂಗಳೂರು–೫೬೦ ೦೨೪

ಅಂಗವಿಕಲ ಮಗುವಿಗೆ ವಿಶೇಷ ಆರೈಕೆ ಅಗತ್ಯ

ನಿಮ್ಮ ಮಗು ಅಂಗವಿಕಲವಾಗಿದ್ದರೆ ನಿರಾಶರಾಗದಿರಿ.

ನಿಮ್ಮ ಮಗುವಿಗೆ ಸಾಧ್ಯವಿರುವ ಎಲ್ಲಾ ಕಾರ್ಯಗಳ ಬಗ್ಗೆ ಚಿಂತಿಸಿರಿ.

ಅಂಗವಿಕಲ ಮಗು ನಿಮ್ಮ ಪ್ರೋತ್ಸಾಹದಿಂದ ಹೆಚ್ಚು ಕಡಿಮೆ ಸ್ವಾಭಾವಿಕ ಜೀವನ ನಡೆಸಲು ಮತ್ತು ಅಂಗವಿಕಲರಿಗೆ ಹೊಂದಿಕೊಳ್ಳಲು ಸಾಧ್ಯವಿದೆ.

ಮನೋದೌರ್ಬಲ್ಯದ ಮಗುವಿನೊಂದಿಗೆ ತಾಳ್ಮೆಯಿಂದ ವರ್ತಿಸಿ. ಆ ಮಗು ತನ್ನ ಮನೋವಿಕಲತೆಯ ಜೀವನಕ್ಕೆ ಹೊಂದಿಕೊಳ್ಳಲು ಸಹಕರಿಸಿ.

ನೆನಪಿಡಿ : ಅಂಗವಿಕಲತೆ ಮಗುವಿನ ತಪ್ಪಲ್ಲ. ಎಷ್ಟಾದರೂ ಅದು ನಿಮ್ಮ ಮಗು ಅಲ್ಲವೇ ?

ನೆನಪಿಡಿ : ಪ್ರತಿಯೊಂದು ಮಗುವಿನಲ್ಲೂ ವಿಶೇಷ ಚೈತನ್ಯವಿದೆ.

ಅದಕ್ಕೆ ನಿಮ್ಮ ಪ್ರೀತಿಯು ಅಗತ್ಯವಿದೆ.

ಹೆಚ್ಚಿನ ವಿವರಗಳಿಗೆ:

ನಿರ್ದೇಶಕರು
ಸಮಾಜ ಕಲ್ಯಾಣ ಇಲಾಖೆ
ಕರ್ನಾಟಕ ಸರ್ಕಾರ
ಬೆಂಗಳೂರು—ಇವರನ್ನು ಸಂಪರ್ಕಿಸಿರಿ.

ಕರ್ನಾಟಕ ವಾರ್ತೆ

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು....

ಜನಪ್ರಿಯ ವಾಲ್ಮೀಕಿ ರಾಮಾಯಣ

ನಾಗರಿಕತೆಯ ಇತಿಹಾಸ

ಕಥಾಸಂಕಲನ

ಕನ್ನಡ ಪ್ರತಿಭೆ

ಕನ್ನಡ ಪರಂಪರೆ

ನನ್ನೂರು

ನಳಚರಿತ್ರೆ ಸಂಗ್ರಹ

ವಿದ್ಯಾಪೀಠಗಳು

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

~ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮುದ್ರಣಾಲಯ, ಮೈಸೂರು.